ಪ್ರಬುದ್ಧ ಕರ್ಣಾಟಕ

ಸಂಪುಟ ೩೩—ಸಂಚಿಕೆ ೩

೧೨೯

ಖರ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೧

ವಿಷ... ಪುಟ

ಪ್ರಬುದ್ಧ ಕರ್ಣಾಟಕ

ಖರ ಸಂವತ್ಸರ	೧೨೯	ಆಶ್ವಯುಜ ಸಂಚಿಕೆ

ಶ್ರೀ ಗೋಮಟ ಮಹಾಮಸ್ತಕಾಭಿಷೇಕ ಪ್ರಗಾಥಂ

೧

ಓ ಕರೆಯುತಿದೆ ನಿನ್ನನೀ ನಮ್ಮ ತಪ್ತ ಭೂಮಿ;
ಓ ಏಳು, ಶ್ರೀ ಗೋಮಟಸ್ವಾಮಿ!
ಏಳು, ಓ ಏಳು, ಕಡೆದು ಜಡತಾ ಅಚಿನ್ನಿದ್ರೆಯಂ;
ಏಳು, ಓ ಏಳು, ಒಡೆದು ಶತಶತಮಾನ ಮೌನದ ಶಿಲಾಮುದ್ರೆಯಂ!
ಕರುಣೆಯಿಂದೆಮಗಾಗಿ ಏಳಯ್ಯ ನಿರ್ವಾಣ ಸುಪ್ತಿಯಿಂ,
ನಿಸ್ಸೊಂದು ಪರಿಪೂರ್ಣತಾ ದಿವ್ಯ ತೃಪ್ತಿಯಿಂ!
ನಮ್ಮ ಹೃದಯದ ಬೃಹಚ್ಚೇತನದ ಮೂರ್ತಿಯಾಗೇಳು ಬಾ;
ಜನ್ಮಜನ್ಮಾಂತರದ ಸಂಸ್ಕಾರ ಸರ್ವಸ್ವ ಸ್ಪರ್ಶಮಣಿಯಾಗೇಳು ಬಾ!
ಹಿಂದಣಾಲಸ್ಯದ ತಮಿಸ್ರಕ್ಕೆ ರವಿದೇವನಾಗಿ ಓ ಮೂಡಿ ಬಾ;
ಮುಂದಣ ಅಭೀಪ್ಸೆಯಾ ಕೈರವಕೆ ಕುಮುದೇಂದುವೋಲುದಿಸಿ ಬಾ!
ಅನುಗ್ರಹಿಸು ಬಾ;
ಉದ್ಧರಿಸು ಬಾ;
ನಿನ್ನ ಜೀರ್ಣೋದ್ಧಾರವೆಮ್ಮ ಜೀರ್ಣೋದ್ಧಾರವಾಗೆ ಆಶೀರ್ವದಿಸು ಬಾ!

೨

ನಿನ್ನ ಜೀರ್ಣೋದ್ಧಾರಮಂ ?
ನಗದಿರು, ಮಹಾಗುರುವೆ ; ನಮ್ಮದಿದು ಮರ್ತ್ಯಾವಿವೇಕಂ !
ನಿತ್ಯನೂತನನಪ್ಪ ನೀಂ ಜೀರ್ಣನೆಂತಪ್ಪೆಯಯ್ ?
ಸರ್ವಪರಿಪೂರ್ಣನಿಗೆ ನಿನಗೆ ಉದ್ಧಾರವೆಂದರರ್ಥವೇನಯ್ ?
ಅಲ್ತಲ್ತು ;
ನಿನ್ನ ಜೀರ್ಣೋದ್ಧಾರಮಲ್ತು :
ಹಾಳಾದುದೆಮ್ಮ ಬಾಳಿಂದು ತಾಂ ಮರಳಿ ಪಡೆಯುತಿದೆ ತನ್ನುದ್ಧಾರಮಂ !
ಕೊಳೆ ತಳ್ತುದೆಮ್ಮ ಬಾಳ್ಗಿಂದಾಗುತಿದೆ ಮೀಹದೊಲ್ ಮಸ್ತಕಾಭಿಷೇಕಂ :
ಜ್ಞಾನ ಮೇಣ್ ಭಕ್ತಿ ಮೇಣ್ ವೈರಾಗ್ಯ ಸಂಕೇತದಾ
ಅಮೃತ ಘೃತ ದಧ್ಯಾದಿ ಪುಣ್ಯಾಭಿಷೇಕಂ !

೩

ಕನ್ನಡದಾದಿಯ ಕಬ್ಬಿಗನಾ ಪಂಪಂ
ತನ್ನಾದಿಪುರಾಣದೊಳೊರೆದನು ನಿನ್ನಧ್ಯಾತ್ಮದ ಪೆಂಪಂ,
ಧೈರ್ಯದ ಔದಾರ್ಯದ ಮೈತ್ರಿಯ ಮೇಣ್ ತ್ಯಾಗದ ಗುಣ್ಪಂ.
ಅದನಾಲಿಸಿದಾ ಕವಿಕಲಿ ಚಾವುಂಡೇಶಂ
ಆ ಭವ್ಯತೆಗೊರ್ ಪ್ರತಿಮೆಯನಾಶಿಸಿ ಪುಡುಕುತ್ತಿರೆ,
ಅನುಭವ ಭೂಮತೆಗಾಕಾರವ ಕೋರುತ್ತಿರೆಯಿರೆ
ಕಳದುಜ್ಜುಗದಿಂ ಸಂಜೆಯ ಪಾಳೆಯಕೊರ್ ದಿನನೈತರುತಿರೆ,
ಕಂಡನ್ ಕಲ್ವೆಟ್ಟಿನ ಕೋಡಂ.
ಬಯ್ಗಿನ ಬಾನ್ಗಿದಿರೆದ್ದುದು ಆ ಶ್ರವಣನ ಗಿರಿಚೂಡಂ,
ಭೀಮಂ, ರುಂದ್ರಂ, ಆಕಾಶೋನ್ನತ ಗೂಢಂ !
ನಿಂದನ್ ನಟ್ಟಾ ಎಡೆಯೊಳೆ ರಸಯೋಗಪ್ರತಿಭಾರೂಢಂ :
ಕಂಡನ್ ; ಕಂಡನ್ ; ಕಂಡನ್ ; ಕಂಡನ್ ;
ಕೊರೆಯುವವೋಲ್ ಕರೆಯುವವೋಲ್ ನೋಡಿದನಾ ಕಲ್‌ಗುಂಡನ್.
ಕಾಣ್ಕೆಯೆ ಕಂಡರಿಸಿದವೋಲ್ ಮೂಡಿದನಾ ಗೊಮಟೇಶಂ,
ತುಂಬಿದ ಶ್ರೀಗಾತ್ರಕೆ ಕುನಿಯಿತೊ ಎನೆ ದಿಗ್‌ದೇಶಂ,
ಸಾರ್ಥಕಮಾಗಲ್ ಚಾವುಂಡೇಶ್ವರ ಭೂಮಾವೇಶಂ !

ಆ ಕಂಡುವನೆಯೆ ಕಂಡರಿಸಿದನ್ನೈಸಲೆ ಶಿಲ್ಪಿ,
ಕನ್ನಡನಾಡಿಗೆ ಕಣ್ಣಾಗಲ್ ಪೆರ್ಮೆಯ ಪೆರ್ಬಂಡೆಯ ಕಲ್ ಕಲ್ಪಿ!

೪

ದಿಗ್ವಿಜಯಿಯಾದೊಡಂ ವಿಜಿಗೀಷುವೃತ್ತಿಯಾ
ಭರತ ಚಕ್ರೇಶ್ವರಂ ನಿನ್ನಗ್ರಜಂ
ಅಂದು 'ಆ ವೃಷಭಗಿರಿ ಮೇಖಳಾಭಿತ್ತಿಯೊಳ್
ಆತ್ಮೀಯ ವಿಶ್ವ ವಿಶ್ವಂಭರಾ ವಿಜಯಪ್ರಶಸ್ತಿಯಂ'
ಕೆತ್ತಿಸಲ್ ಪೋಗಿ ನೋಡಿದೊಡಲ್ಲಿ ತನಗೆ ತಾವಿಲ್ಲದಂತೆ
ಪೂರ್ವ ಚಕ್ರೇಶ್ವರ ಪ್ರಶಸ್ತಿಗಳ್ ತುಂಬಿರ್ದುದಂ ಕಂಡು
ಲೋಕಮಂ ಗೆಲ್ದವಂ ಕೀರ್ತಿಶನಿವಶನಾಗಿ
ಹಮ್ಮಿಗಡಿಯಾಳಾಗಿ ಬಿದಿಯ ನಗೆಗೀಡಾಗುವೋಲ್
ದಂಡರತ್ನದಿ ಸೀಂಟಿ ಆ ಪ್ರಶಸ್ತಿಯೊಳೊಂದನಳಿಸಿ
ಕಂಡರಣೆಗೈಸಿದನ್ ತನ್ನೀ ಪ್ರಶಸ್ತಿಯಂ,
ಶಾಶ್ವತವನರಿಯದೀ ನಶ್ವರ ಪ್ರಶಸ್ತಿಯಂ:

"ಸ್ವಸ್ತಿ ಸಮಸ್ತನರೇಶ್ವರ
ಮಸ್ತಕವಿನ್ಯಸ್ತಶಾಸನಂ ಸಕಲಜಗ
ದ್ವಿಸ್ತಾರಿತಯಶನನ್ವಯ
ವಿಸ್ತಾರಕನಾದಿದೇವನಗ್ರತನೂಜಂ.

ಭುವನವಿಶೇಷಕನಿಕ್ಷ್ವಾ
ಕುವಂಶಗಗನೇಂದು ಚಕ್ರರತ್ನಾಧೀಶಂ
ನವನಿಧಿವಲ್ಲಭನಾನತ
ದಿವಿಜಗಣಂ ನೆಗಟ್ದ ನಾಭಿರಾಜನ ಮೊಮ್ಮಂ.

ಆವನ ದಿಗ್ವಿಜಯದೊಳೈ
ರಾವತಗಜನಿಭಗಜಂಗಳಿಂ ಭುವನತಳಂ
ತೀವಿದುದಾವನ ಸೈನ್ಯದೊ
ಳಾವರಿಸಿದ ಧೂಳಿ ಪೂಟ್ದುದಂಭೋನಿಧಿಯಂ:

"ವೇಳಾವನಂಗಳುಂ ಕು
ತ್ಕೀಳಂಗಳುಮಾವ ನೃಪನ ಪಡೆ ನಡೆವೆಡೆ ನಿ
ರ್ಮೂಳಂಗಳಾದುವಾವನ
ತೋಳಿಂ ನಿಮಿರ್ದತ್ತು ಜಳಧಿವರಮವನಿತಳಂ ;
ದೇವಾಂಗನೆಯರ್ ಪಾಡುವ
ರಾವನ ಜಸಮಂ ಕುಳಾಚಳಾವಳಿಯೊಳ್ ಶೌ
ರ್ಯಾವಷ್ಟಂಭದಿನಾಳ್ದವ
ನಾವಂ ಷಟ್ಖಂಡಮಂಡಿತಕ್ಷಿತಿತಳಮಂ
ಆತಂ ಭರತೇಶ್ವರನಿಂ
ತೀ ತೆರದಿಂ ನೆಗಟ್ದ ತನ್ನ ಕೀರ್ತಿಯನೀ ವಿ
ಖ್ಯಾತ ವೃಷಭಾದ್ರಿಯೊಳ್ ಸುರ
ಗೀತಯಶಂ ನಿಱಿಸಿದಂ ನೆಲಂ ನಿಲ್ವಿನೆಗಂ"

೫

'ನಿಲ್ವಿನೆಗಂ ನೆಲಂ!'
ಅಧಿಕಾರ ಮೋಹಕ್ಕೆ ದರ್ಪಕ್ಕೆ ಏಂ ಪೈತ್ಯಮೇಂ ಚಲಂ?
ಅಂದಿನಾ ಶನಿಯೆ ತಾನಿಂದಿಗೂ ಕದಡುತಿಹುದೆಮ್ಮ ಬಾಳಂ.
ಆ ರೋಷ ಆ ದ್ವೇಷ ಆ ಅಹಂಕಾರದಾವೇಶಗಳೆ
ಪಿಡಿದಿರ್ಪವಲ್ತೆ ಪೇಳಿಂದಿಗೂ ರಾಜ್ಯಸೂತ್ರಂಗಳಂ?
ವಹಿಸಿರ್ಪವಲ್ತೆ ರಣನಾಟಕಕೆ ಶಕುನಿಪಾತ್ರಂಗಳಂ?
ಹೇ ಪೂಜ್ಯ ಬಾಹುಬಲಿ,
ಹೇ ಅಹಿಂಸಾ ಪರಮ ಧರ್ಮ ಕಲಿ,
ಆ ರೋಷ ಆ ದ್ವೇಷ ಆ ಅಹಂಕಾರಂಗಳಂ,
ಆ ಕೀರ್ತಿಲೋಭ ಮೇಣ್ ಆ ರಾಜ್ಯದಾಹಂಗಳಂ,
ನಿನ್ನಣ್ಣ ಭರತನೊಳ್ ಮೂರ್ತಿವೆತ್ತಿದಿರಾದ
ಆ ತಿಮಿರ ಆಸುರೀ ದೂತರ್ಕಳಂ
ನೀನಂದು ಧವಳಸತ್ತ್ವದಿ ಗೆಲ್ದೆಯಲ್ತೆ,
ಭರತಂವೆರಸಿ ವಿಶ್ವಮಡಿಗೆರಗುವೋಲ್!
ಭೋಗಶಿಖರದಿ ತ್ಯಾಗದಾ ಗೆಲ್ಗಂಬಮಂ ಮೆರೆದೆಯಲ್ತೆ

ಲೋಕಸರ್ವಂ ಮಣಿದು ಬೆರಗಾಗುವೋಲ್ !
ಆಲಿಸೆಯ್, ಗುರುವೆ, ಶಾಂತಿಯ ಕಲ್ಪತರುವೆ,
ನೀನಂದು ನಿನ್ನಗ್ರಜಂಗೊರೆದಾ ವಚೋವೇದಮಂ,
ದಿಟದಿಂ ನೆಲಂ ನಿಲ್ವಿನೆಗಂ ನಿಲುವ ಮೇಣ್ ವಿಾರ್ವ
ಶಾಶ್ವತದ ವಿಜಯಪ್ರಶಸ್ತಿಯಂ :
ಸರ್ವಮಾನವ ಮನೋ ವೃಷಭಗಿರಿಭಿತ್ತಿಯೊಳ್
ಚಿರಂ ಮೆರೆವ ವಜ್ರಲಿಪಿ ವಿಜಯ ಪ್ರಶಸ್ತಿಯಂ :

" ನಿನ್ನೀ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು ನೀಂ
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ !

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮಿಾ ಭಟಖಡ್ಗಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗೞ್ತೆ ಮಾಸದೇ ?

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗೞ್ದ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ! "

೬

ಸ್ವಸ್ವರೂಪದ ಸಚ್ಚಿದಾನಂದ ಸಾಕ್ಷಾತ್ಕರಣರೂಪ ಮೋಕ್ಷಂ
ಪೂರ್ಣತಾ ಸಿದ್ಧಿಯದೆ ಮನುಜ ಜನ್ಮಕೆ ಪರಮ ಚರಮ ಲಕ್ಷ್ಯಂ ;
ಕೈವಲ್ಯದಾ ಸಮ್ಯಕ್ತ್ವದೊಳ್ ನೆಲೆಸಿರ್ಪ ನೀಂ ಜಗದ್ವಂದ್ಯಂ :
ನಿನ್ನ ನೆನೆವುದೆ ನಮಗೆ ಚೇತನೋದ್ಬೋಧನಂ ;
ನಿನ್ನ ಪೂಜೆಯೆ ನಮಗೆ ಅಧ್ಯಾತ್ಮಸಾಧನಂ ;
ಆ ದಿವ್ಯ ನಿಷ್ಕ್ರಿಯಾ ಕ್ರಿಯೆಗನ್ಯ ಕರ್ಮಂಗಳೆಲ್ಲ ಹಿಮಗಿರಿಯಿದಿರ ವಿಂಧ್ಯಂ !
ಹೇ ಸಾಧುಕುಲ ಶಾಶ್ವತ ಸ್ಫೂರ್ತಿ,

ಹೇ ವಿರಾಟ್ ಭವ್ಯ ಗುರುಮೂರ್ತಿ,
ನೆಲೆಸು ನಮ್ಮೆರ್ದೆಗಳಲಿ ನಿನ್ನಾ ತಪೋರೂಪದಿಂ;
ಜ್ಯೋತಿಯೆಡೆಗೆತ್ತು ನಮ್ಮಾತ್ಮಂಗಳಂ ಸ್ವಾರ್ಥತೆಯ ಈ ತಮಃಕೂಪದಿಂ;
ಭೂಮವಾಗಲ್ ನಮ್ಮ ಚೈತನ್ಯಮದನುದ್ಧರಿಸು ಈ ಅಲ್ಪತ್ವದಭಿಶಾಪದಿಂ!
ನಿನ್ನ ಕನ್ನಡ ನಾಡನೊಂದುಗೂಡಿಸಿ ಕಾಯಿ;
ನಿನ್ನ ಕನ್ನಡನುಡಿಯನಾಡಿ ಧನ್ಯವಾಗಲಿ ನಮ್ಮ ಬಾಯಿ;
ಅನ್ಯಭಾಷಾಮೋಹದಾಸ್ಯಕ್ಕೆ ಪಕ್ಕಾಗದಿರಲೆಮ್ಮ ತಾಯಿ!
ನಿನ್ನ ಭಾರತಭೂಮಿ ನಿನ್ನುನ್ನತಿಗೆ ಬೆಳೆದು ನಿಲ್ಗೆ;
ಪೃಥಿವಿಯ ಸುಧಾಕಾಂಕ್ಷೆ ಭಾರತಿಯ ಶಾಂತಿಮಯ ವಕ್ಷದಿಂ ಸಲ್ಗೆ;
ಮರ್ತ್ಯಮಾನಸಕೋಶಕವತರಿಸಿ ನಿತ್ಯಮತಿಮಾನಸಂ ಗೆಲ್ಗೆ;
ಪೂರ್ಣತಾ ಸಿದ್ಧಿಯಿಂದೀ ಧರೆಯನೇಗಳುಂ ಕ್ಷೀರಕೈವಲ್ಯಮಾಳ್ಗೆ;
ಶ್ರೀ ಮಸ್ತಕಾಭಿಷೇಕದೊಳುದಿಸಿ ನದನದಿಗಳೆಮ್ಮಿಳೆಯ ಸಿರಿಸೊಗಂ
ಚಿರಂ ಬಾಳ್ಗೆ!*

ಕುವೆಂಪು.

---

* ಮೈಸೂರಿಗೆ ಸುಮಾರು ಹದಿನೈದು ಮೈಲಿ ದೂರದಲ್ಲಿರುವ 'ಗೋಮಟಗಿರಿ'ಯಲ್ಲಿ ಬಹು ಕಾಲದಿಂದಲೂ ಅರಣ್ಯವಾಸದ ಅಜ್ಞಾತವಾಸದಲ್ಲಿದ್ದ ಗೋಮಟೇಶ್ವರ ಶ್ರೀ ವಿಗ್ರಹಕ್ಕೆ ಜೀರ್ಣೋದ್ಧಾರಾನಂತರ ನಡೆದ ಪ್ರಥಮ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ.

ಜಗತ್ತುಗಳ ಹುಟ್ಟು ಸಾವು

೬. ನಕ್ಷತ್ರಗಳ ಜೀವನಚರಿತ್ರೆ

೧. ಜ್ಞಾನಾನ್ವೇಷಣ ಮಾರ್ಗಗಳನ್ನು ದಹರಿಸುವ ಒಂದು ರೂಪಕ

ಬೀದಿಯ ದೀಪದ ಸುತ್ತಲೂ ಹಾರಾಡುತ್ತಿರುವ ದೀಪದ ಹುಳುಗಳಿಗೆ ತಮ್ಮ ಜೀವಿತಕಾಲದ ನಾಲ್ಕೈದು ನಿಮಿಷಗಳಲ್ಲಿ ಸಮೀಪದ ಬೀದಿಯಲ್ಲಿ ಓಡಾಡುವ ಹತ್ತಾರು ಜನಗಳನ್ನು ನೋಡಿದ್ದರ ಫಲವಾಗಿ ಮಾನವಕುಲದ ಚರಿತ್ರೆಯನ್ನು ವರ್ಣಿಸಿ ವಿಮರ್ಶಿಸುವ ಅಧಿಕಾರ ಬಂದೀತೇ ? ನಕ್ಷತ್ರಗಳ ಜೀವನಚರಿತ್ರೆಯನ್ನು ಬರೆಯಲು ತೊಡಗಿರುವ ನಮಗೆ ಇರುವ ಅಧಿಕಾರವೂ ಅಂಥದೇ, ಪ್ರಾಯಶಃ ಅದಕ್ಕೂ ಕೀಳಾದದ್ದೂ ಇರಬಹುದು. ಹಾಗೆಂದು ಕೈಕಟ್ಟಿಕೊಂಡು ಕುಳಿತು ಬಿಡುವುದು ಮಾನವಸಹಜ ಸ್ವಭಾವವಲ್ಲ. ಮುಗ್ಗರಿಸಿ ಬೀಳುವ ಸಂಭವವೇ ಹೆಚ್ಚಿದ್ದರೂ ಮುನ್ನಡೆ ಇಡುವುದು ಲೇಸು.

ಚಿತ್ರಕಾರನೊಬ್ಬನು ತಾನು ರಚಿಸಿದ ಚಿತ್ರವೊಂದನ್ನು ಸಾವಿರಾರು ಚೂರುಗಳಾಗಿ ಹರಿದು ಬಯಲಿನಲ್ಲೊಂದೆಡೆ ಎಸೆದು ಹೋಗುತ್ತಾನೆ. ಗಾಳಿಯು ಚೂರುಗಳನ್ನು ಅಲ್ಲಿ ಇಲ್ಲಿ ಚದರಿಸಿದ ಮೇಲೆ ಕೆಲವು ಹುಡುಗರು ಆಟಕ್ಕಾಗಿ ಅಲ್ಲಿಗೆ ಬರುತ್ತಾರೆ. ಆಡುವಾಗ ಹಾಗೆಯೇ ಮೈದಾನದಲ್ಲಿ ಬಿದ್ದಿರುವ ಬಣ್ಣಬಣ್ಣದ ಚೂರುಗಳಲ್ಲಿ ಕೈಗೆ ಸಿಕ್ಕಿದಷ್ಟನ್ನು ಎತ್ತಿಕೊಂಡು ಮನೆಗೆ ಹೋಗುತ್ತಾರೆ. ಮನೆಯಲ್ಲಿಯೇ ಇದ್ದ ಇವರ ಅಣ್ಣತಮ್ಮಂದಿರು ಕಾಗದದ ಚೂರುಗಳನ್ನು ನೋಡಿ ಇವುಗಳನ್ನೆಲ್ಲಾ ಸರಿಯಾಗಿ ಜೋಡಿಸಿದರೆ ಒಂದು ಆಕಾರವು ರೂಪುಗೊಳ್ಳಬಹುದೆಂದು ಅನುಮಾನಿಸುತ್ತಾರೆ. ಆದರೆ ಚಿತ್ರದ ಚೂರುಗಳೆಲ್ಲವನ್ನು ಹುಡುಗರು ತಂದಿಲ್ಲವೆಂದು ಮೊಟ್ಟಮೊದಲೇ ಅವರಿಗೆ ಹೊಳೆಯುತ್ತದೆ; ಅದಕ್ಕಾಗಿ ಮೈದಾನವನ್ನೆಲ್ಲ ಶೋಧಿಸಿ ಕಣ್ಣಿಗೆ ಬಿದ್ದ ಚೂರುಗಳನ್ನೆಲ್ಲ ಆರಿಸಿ ತರುವಂತೆ ಹೇಳಿ ಮತ್ತೆ ಕೆಲವು ಹುಡುಗರನ್ನು ಪುನಃ ಮೈದಾನಕ್ಕೆ ಕಳುಹಿಸುತ್ತಾರೆ.

ಚೂರುಗಳೆಲ್ಲ ದೊರಕುವ ವರೆಗೂ ಕಾದಿರದೆ ದೊರಕಿರುವ ಚೂರುಗಳನ್ನು ಜೋಡಿಸುವ ಪ್ರಯತ್ನ ನಡೆಯುತ್ತದೆ. ಅಲ್ಲೊಂದು ಕಡೆ ಇಲ್ಲೊಂದು ಕಡೆ ಚಿತ್ರದ ಭಾಗಗಳು ಹೆಚ್ಚು ಸ್ಪಷ್ಟವಾಗಿಯೋ ಕಡಿಮೆ ಸ್ಪಷ್ಟವಾಗಿಯೋ ಆಕಾರ ತಾಳುತ್ತಿರುವಂತೆ ತೋರುತ್ತದೆ. ಕೆಲವು ವೇಳೆ ಒಂದು ಚೂರಿನ ಸ್ಥಾನವು ಇದೇ ಅದೇ

ಎಂಬ ವಿಚಾರವಾಗಿ ಜೋಡಿಸುತ್ತಿರುವವರಲ್ಲಿ ಭಿನ್ನಾಭಿಪ್ರಾಯ ಹುಟ್ಟುತ್ತದೆ. ಕೆಲವು ವೇಳೆ ಒಂದೊಂದು ಚೂರು ಚಿತ್ರಕ್ಕೆ ಎಲ್ಲಿಯೂ ಹೊಂದಿಕೊಳ್ಳುವಂತೆಯೇ ಕಾಣುವುದಿಲ್ಲ. ಮೈದಾನದಿಂದ ತಂದ ಚೂರುಗಳು ಶೇಖರವಾದಂತೆ ಇಂಥ ಕೆಲವು ಸಂದಿಗ್ಧ ಚೂರುಗಳ ಸ್ಥಾನವು ನಿಷ್ಕರ್ಷೆಯಾದರೂ ಹೊಸ ತೊಡರುಗಳೂ ಹುಟ್ಟಿಕೊಳ್ಳುತ್ತವೆ. ಚಿತ್ರವು ವಿಕಾಸವಾದಂತೆ ಚಿತ್ರವು ಅವರು ಮೊದಲು ಯೋಚಿಸಿದ್ದಕ್ಕಿಂತ ವಿಶಾಲವಾದದ್ದೆಂಬ, ಅದರ ಸಂಪೂರ್ಣ ರಚನೆಗೆ ಬೇಕಾದ ಚೂರುಗಳಲ್ಲಿ ಅಲ್ಪಸಂಖ್ಯೆಯವು ಮಾತ್ರ ದೊರಕಿವೆಯೆಂಬ ಭಾವನೆಯು ಪ್ರಬಲಗೊಳ್ಳುತ್ತದೆ.

ಈ ಮಧ್ಯೆ ಒಬ್ಬಿಬ್ಬರು "ನೀವು ಶೇಖರಿಸಿರುವ ಕಾಗದದ ಚೂರುಗಳಲ್ಲಿ ಒಂದಕ್ಕೊಂದಕ್ಕೆ ಯಾವ ಸಂಬಂಧವೂ ಇಲ್ಲ. ಈ ಚೂರುಗಳೆಲ್ಲ ಒಂದು ಚಿತ್ರದ ಭಾಗಗಳೆಂದು ಯಾವ ಆಧಾರದಮೇಲೆ ನಂಬಿದ್ದೀರಿ?" ಎಂದು ಕೇಳುವವರೂ ಇದ್ದಾರೆ. "ಮಸಕು ಮಸಕಾಗಿಯಾದರೂ ಚಿತ್ರವು ಅರ್ಥಗರ್ಭಿತ ರೂಪವನ್ನು ತೋರಿಸುತ್ತಿರುವುದು ಚೂರುಗಳನ್ನು ಜೋಡಿಸುತ್ತಿರುವ ನಮ್ಮ ಹಾದಿ ಸರಿ ಎಂಬುದಕ್ಕೆ ಚಿಹ್ನೆಯಲ್ಲವೇ?" ಎಂದು ಹೇಳಿದರೆ ಅವರು ಹೀಗೆ ಮಾರುತ್ತರ ಕೊಡುತ್ತಾರೆ. "ನಿಮ್ಮ ಪ್ರಯತ್ನದ ಫಲವಾದ ಈ ರೂಪವು ಚಿತ್ರದ ಸ್ವರೂಪವೆಂದು ಹೇಳುವಹಾಗಿಲ್ಲ. ಈ ರೂಪವು ನಿಮ್ಮ ಮನೋವ್ಯಾಪಾರವನ್ನೇ ಪ್ರತಿಬಿಂಬಿಸುತ್ತದೆ. ಬೇಕಿದ್ದರೆ ನಿಮ್ಮಿಷ್ಟಬಂದದ್ದನ್ನು ಒಂದೊಂದು ತುಂಡಿನಲ್ಲಿ ಗೀಚಿ ಸಾವಿರಾರು ತುಂಡುಗಳನ್ನು ನಮಗೆ ಕೊಡಿ. ನಾವು ಅದನ್ನು ಜೋಡಿಸಿ ಎಂಥದೋ ಒಂದು ಆಕಾರವನ್ನು ತರಿಸುತ್ತೇವೆ. ಆ ಆಕಾರವು ಅಷ್ಟು ಸುಂದರವಲ್ಲ, ಅಷ್ಟು ಅಚ್ಚುಕಟ್ಟಲ್ಲ ಎಂದು ನೀವು ಹೇಳಿದರೆ ಅದು ಅರ್ಥವಿಲ್ಲದ ಮಾತು. ಚಿತ್ರಕಾರನು ರಚಿಸಿದ್ದ ಮೂಲ ರೂಪವೇ ಇದು ಎಂದು ನಾವು ಅಭಿಪ್ರಾಯಪಟ್ಟರೆ ಅದನ್ನು ಯಾವ ಆಧಾರದ ಮೇಲೆ ವಿರೋಧಿಸಬಲ್ಲಿರಿ? ಚಿತ್ರಕ್ಕೆ ನಾವು ಕೊಡುವ ರೂಪವು ನಮ್ಮ ಮನೋವೃತ್ತಿಯನ್ನು, ನಮ್ಮ ಮನೋ ನಿಯಮಗಳನ್ನು ಅವಲಂಬಿಸುತ್ತದೆ."

ಮತ್ತೆ ಕೆಲವರು "ನಿಮಗೆ ದೊರಕಿರುವ ಚೂರುಗಳೆಲ್ಲ ಚಿತ್ರಕಾರನ ಚಿತ್ರದ ಭಾಗಗಳೇನೋ ನಿಜ, ಆದರೆ ಅವುಗಳನ್ನು ಜೋಡಿಸಿ ನೀವು ರಚಿಸಿರುವ ರೂಪವೇ ಆತನ ಕೃತಿಯ ಮೂಲರೂಪವೆಂದು ಹೇಗೆ ಹೇಳುವುದು? ಅಲ್ಲದೆ ನೀವು ಎಷ್ಟು ಶೋಧಿಸಿದರೂ ಮೈದಾನದಲ್ಲಿ ಚದರಿಹೋಗಿರುವ ಎಲ್ಲ ಚೂರುಗಳೂ ನಿಮಗೆ ಸಿಗುತ್ತವೆಂಬ ನಂಬಿಕೆ ನಿರಾಧಾರವಲ್ಲವೆ? ಈ ಮಾರ್ಗದಿಂದ ನಿಮ್ಮ ಚಿತ್ರ ಎಂದಿಗೂ ಸಂಪೂರ್ಣವಾಗುವುದಿಲ್ಲ. ಚಿತ್ರವನ್ನು ಹೀಗೆ ರಚಿಸಿರುವ ಚಿತ್ರಕಾರನ ಉದ್ದೇಶವೇನು ಎಂಬುದಂತೂ ನಿಮಗೆ ತಿಳಿಯುವುದೇ ಇಲ್ಲ. ಆದ್ದರಿಂದ ನಿಮ್ಮ ಪ್ರಯತ್ನ

ನಿರರ್ಥಕ. ಚಿತ್ರದ ಸಹಜಸ್ವರೂಪ ತಿಳಿಯಬೇಕಾದರೆ ಚಿತ್ರಕಾರನನ್ನೇ ಹುಡುಕಿಕೊಂಡು ಹೋಗುವುದೊಂದೇ ಸರಿಯಾದ ಮಾರ್ಗ. ಆತನು ಸಿಕ್ಕಿದರೆ ಇನ್ನೂ ಎಷ್ಟು ಚೂರುಗಳು ನಮ್ಮ ಕೈಗೆ ಸಿಕ್ಕಿಲ್ಲವೋ ಎಂಬ ಸಂಶಯಕ್ಕೇ ಅವಕಾಶವಿರುವುದಿಲ್ಲ. ಸಂಪೂರ್ಣ ಚಿತ್ರವನ್ನೇ ತೋರಿಸುತ್ತಾನೆ" ಎಂದು ಉಪದೇಶಿಸುತ್ತಾರೆ.


ಈ ರೂಪಕವು ಪುರಾತನ ಕಾಲದಿಂದಲೂ ನಡೆದುಬಂದಿರುವ ಮಾನವನ ಜ್ಞಾನಾನ್ವೇಷಣ ಮಾರ್ಗಗಳನ್ನು ಉದಹರಿಸುತ್ತದೆಂದು ಹೇಳಬಹುದು. ಇವುಗಳಲ್ಲಿ "ಚಿತ್ರಕಾರನನ್ನು ಹುಡುಕಿಕೊಂಡು ಹೋದರೆ ಆತನು ಸಿಕ್ಕಿದರೂ ಸಿಕ್ಕಬಹುದು, ಸಿಗದಿದ್ದರೂ ಆಯಿತು. ಆತನನ್ನು ಅರಸುತ್ತಿರುವವರು ಫಲಪ್ರದರಾಗಿ ಬಂದು ಚಿತ್ರವನ್ನು ತೋರಿಸಿದರೆ, ನಮ್ಮ ಜೋಡಣೆಯ ಚಿತ್ರದ ತಪ್ಪುಗಳನ್ನು ತಿದ್ದಿಕೊಳ್ಳಲು ನಾವು ಸದಾ ಸಿದ್ಧರು. ಈ ಮಧ್ಯೆ ನಮಗೆ ಚಿತ್ರದ ಚೂರುಗಳು ಸಿಕ್ಕಿರುವುದು ನಿಜ. ಅದೂ ನಮ್ಮ ಭ್ರಾಂತಿಯೆಂದು ನಾವು ನಂಬುವುದಿಲ್ಲ. ಈ ಚೂರುಗಳನ್ನು ನಮ್ಮ ಕೈಲಾದಷ್ಟು ಚತುರತೆಯಿಂದ ನಾವು ಜೋಡಿಸಿ ಚಿತ್ರದ ರೂಪವನ್ನು ಕಂಡುಕೊಳ್ಳೋಣ, ಕಂಡು ಆನಂದಿಸೋಣ" ಎನ್ನುವುದು ಸಾಮಾನ್ಯವಾಗಿ ವಿಜ್ಞಾನಾನ್ವೇಷಣಮಾರ್ಗ. ಈ ಮಾರ್ಗವು ವಿಶೇಷವಾಗಿ ಭೌತಖಗೋಳವಿಜ್ಞಾನಕ್ಕೆ ಅನ್ವಯಿಸುತ್ತದೆ.

೨. ರಸ್ಸೆಲ್—ಹರ್ಟ್ಸ್‌ಸ್ಪ್ರುಂಗರ ಕಾಂತಿ—ವರ್ಣನಿಯಮ

ಇದುವರೆಗೆ ನಾವು ವಿವಿಧ ವರ್ಣಗಳ ನಕ್ಷತ್ರಗಳಿವೆ, ವಿವಿಧ ಕಾಂತಿಯ ನಕ್ಷತ್ರಗಳಿವೆ ಎಂಬುದನ್ನು ನೋಡಿದ್ದೇವೆ. ಆದರೆ ಎಲ್ಲ ಬಣ್ಣದ ನಕ್ಷತ್ರಗಳೂ ಯಾವ ನಿಯಮವೂ ಇಲ್ಲದಂತೆ ಎಲ್ಲ ಕಾಂತಿಗಳಿಂದಲೂ ಬೆಳಗುತ್ತಿಲ್ಲ. ಹಾಲೆಂಡಿನ ಹರ್ಟ್ಸ್‌ಸ್ಪ್ರುಂಗ್ ಎಂಬಾತನೂ (೧೯೦೫), ಅಮೆರಿಕದ ರಸ್ಸೆಲ್ ಎಂಬಾತನೂ (೧೯೧೩) ತಾರೆಯ ಸಹಜಕಾಂತಿಗೂ ಅದರ ವರ್ಣವರ್ಗಕ್ಕೂ ಇರುವ ಸಂಬಂಧವನ್ನು ಮೊದಲು ಕಂಡುಕೊಂಡರು. ನೀಲಿಬಣ್ಣದ B ವರ್ಗದ ತಾರೆಯಿಂದ ಹಿಡಿದು ಕೆಂಪುಬಣ್ಣದ M ವರ್ಗದ ತಾರೆಯ ವರೆಗೆ ಸಹಜಕಾಂತಿ ವರ್ಗಾಂಕವು ಕ್ರಮವಾಗಿ —೩ ರಿಂದ +೧೨ ಕ್ಕೆ ಇಳಿಯುತ್ತದೆಂದು ಇವರು ತೋರಿಸಿದರು. ಈ ನಿಯಮವನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ.

ವರ್ಣವರ್ಗ	B_0	A_0	F_0	G_0	K_0	M_0	M_9
ಸಹಜಕಾಂತಿ ವರ್ಗಾಂಕ	—೩	೦	೩	೬	೮	೧೦	೧೨

ವರ್ಣವರ್ಗ—ಸಹಜಕಾಂತಿ ನಿಯಮವನ್ನು ರಸ್ಸೆಲ್‌ನು ರೇಖಾಚಿತ್ರರೂಪದಲ್ಲಿ ಪ್ರದರ್ಶಿಸಿದನಾದ ಕಾರಣ ಇದಕ್ಕೆ ರಸ್ಸೆಲ್—ಹರ್ಟ್ಸ್‌ಸ್ಪ್ರಂಗ್ ರೇಖಾಚಿತ್ರವೆಂದೂ (ಚಿತ್ರ ೧೫) ಹೆಸರು ಬಂದಿದೆ. ನಕ್ಷತ್ರಗಳಲ್ಲಿ ೧೦೦ ಕ್ಕೆ ಸುಮಾರು ೯೫ ಈ ನಿಯಮಕ್ಕೊಳಪಟ್ಟಿವೆ. ಇಂಥ ನಕ್ಷತ್ರಗಳನ್ನು ಪ್ರಧಾನಶ್ರೇಣಿಯ[1] ನಕ್ಷತ್ರ



ಚಿತ್ರ ೧೫. ರಸ್ಸೆಲ್—ಹರ್ಟ್ಸ್‌ಸ್ಪ್ರಂಗ್ ರೇಖಾಚಿತ್ರ

ಗಳೆಂದು ಕರೆಯುತ್ತಾರೆ. ಎಡ್ಡಿಂಗ್‌ಟನ್‌ನ ನಿಯಮದಂತೆ ಸಹಜಕಾಂತಿ ಹೆಚ್ಚಿದ್ದರೆ ಭಾರವೂ ಹೆಚ್ಚಾಗಿರಬೇಕು. ಅಲ್ಲದೆ ತಾರೆಯ ಹೊರಮೈ ವಿಸ್ತೀರ್ಣ ಹೆಚ್ಚಾದಷ್ಟೂ ಕಾಂತಿಯು ಹೆಚ್ಚುವುದರಿಂದ ಅಧಿಕ ಸಹಜಕಾಂತಿಯ ತಾರೆಗಳ ಗಾತ್ರವೂ ಅಧಿಕವಾಗಿರಬೇಕು. ಆದಕಾರಣ B ಮತ್ತು A ವರ್ಗದ ತಾರೆಗಳೆಲ್ಲ ಬೃಹತ್ತಾರೆಗಳು ಅಥವಾ ಪೆಡಂಭೂತಗಳು, ಇತರ ತಾರೆಗಳು ಕುಬ್ಜತಾರೆಗಳು ಎಂದು ಹೆಸರುಪಡೆದಿವೆ.

---

[1] Main sequence.

೩. ಬೃಹತ್ತಾರಾಶಾಖೆ[1]

ಪ್ರಧಾನಶ್ರೇಣಿಗೆ ಸೇರದ ತಾರೆಗಳಲ್ಲಿ ಎರಡು ಮುಖ್ಯ ಶಾಖೆಗಳಿವೆ. ಪ್ರಧಾನ ಶ್ರೇಣಿಯ ಕೆಂಪುತಾರೆಗಳು ಕುಬ್ಜತಾರೆಗಳಷ್ಟೆ. ಆದರೆ ಕೆಂಪುತಾರೆಗಳಲ್ಲಿ ಕೆಲವು ಮಹಾ ಕಾಂತಿಯ ಬೃಹತ್ತಾರೆಗಳಿವೆ. ಇವುಗಳಿಗೆ ರಕ್ತಬೃಹತ್ತಾರೆಗಳೆಂದು ಹೆಸರು. M ವರ್ಗದ ತಾರೆಗಳಲ್ಲಿ ಒಂದು ವಿಚಿತ್ರವಿದೆ. ಅವು ೧೦ ನೆಯ ಸಹಜಕಾಂತಿ ವರ್ಗಾಂಕಕ್ಕಿಂತ ಕಡಿಮೆ ಕಾಂತಿಯ ಕುಬ್ಜತಾರೆಗಳಾಗಿರುತ್ತವೆ, ಇಲ್ಲವೇ ೧ ನೆಯ ವರ್ಗಾಂಕಕ್ಕಿಂತ ಅಧಿಕ ಕಾಂತಿಯ ಪೆಡಂಭೂತಗಳಾಗಿರುತ್ತವೆಯೇ ಹೊರತು ಮಧ್ಯದ ಸಾಧಾರಣ ಕಾಂತಿಯ ಒಂದು ತಾರೆಯೂ M ವರ್ಣವರ್ಗದಲ್ಲಿ ಕಂಡುಬಂದಿಲ್ಲ. K, G ಮತ್ತು F ವರ್ಗದ ತಾರೆಗಳಲ್ಲಿಯೂ ಕೆಲವು ಬೃಹತ್ತಾರೆಗಳಿವೆ. ಇವೆಲ್ಲಾ ಸೇರಿ ಪ್ರಧಾನಶ್ರೇಣಿಯಿಂದ ಕವಲೊಡೆದ ಬೃಹತ್ತಾರಾಶಾಖೆಯಾಗಿವೆ.

೪. ಶ್ವೇತಕುಬ್ಜ[2]ಶಾಖೆ

ಬೃಹಚ್ಛಾಖೆಯಂತೆಯೇ ಕುಬ್ಜತಾರಾಶಾಖೆಯೂ ಒಂದಿದೆ. B ಮತ್ತು A ವರ್ಗದ ಪ್ರಧಾನಶ್ರೇಣಿಯ ನಕ್ಷತ್ರಗಳೆಲ್ಲವೂ ಬೃಹತ್ತಾರೆಗಳು. ಆದರೆ ಅಪರೂಪವಾಗಿ ೧೦ ನೆಯ ಸಹಜಕಾಂತಿವರ್ಗಕ್ಕಿಂತ ಕಾಂತಿಹೀನವಾದ B, A ವರ್ಗಗಳ ತಾರೆಗಳೂ ಇವೆ. ಇವಕ್ಕೆ ಶ್ವೇತಕುಬ್ಜಗಳೆಂದು ಹೆಸರು. ಶ್ವೇತಕುಬ್ಜಗಳು ಅಸಾಧಾರಣ ತಾರೆಗಳು. ಇವುಗಳ ಹೆಸರಿಗೆ ತಕ್ಕಂತೆ ಇವುಗಳ ಗಾತ್ರವೇನೋ ಚಿಕ್ಕದು, ಆದರೆ ಭಾರ ಅಷ್ಟೇನೂ ಕಡಿಮೆಯಲ್ಲ. ಇದುವರೆಗೆ ಸುಮಾರು ಇಪ್ಪತ್ತಕ್ಕಿಂತ ಹೆಚ್ಚಾಗಿ ಶ್ವೇತಕುಬ್ಜಗಳು ದೃಷ್ಟಿಗೆ ಬಿದ್ದಿಲ್ಲದಿದ್ದರೂ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗಿರಬೇಕೆಂದು ಅನುಮಾನಿಸಲಾಗಿದೆ. ಇವು ಕ್ಷೀಣಕಾಂತಿಯ ತಾರೆಗಳಾದ್ದರಿಂದ ಇವನ್ನು ಪತ್ತೆಮಾಡುವುದು ಪ್ರಯಾಸಕರ.

ಲುಬ್ಧಕತಾರೆಯು ದೊಡ್ಡ ದೂರದರ್ಶಿನಿಗಳಲ್ಲಿ ತಾರಾಯುಗ್ಮವಾಗಿ ಕಾಣುತ್ತದೆ. ನಮ್ಮ ಕಣ್ಣಿಗೆ ಪ್ರಕಾಶಮಾನವಾಗಿ ಹೊಳೆಯುವ ಲುಬ್ಧಕದ ಸುತ್ತಲೂ ಒಂದು ಕಾಂತಿಹೀನ, ಬಿಳಿಯ ಬಣ್ಣದ ನಕ್ಷತ್ರವು ಸುತ್ತುತ್ತಿದೆ. ಲುಬ್ಧಕದ ಈ ಕಾಂತಿಹೀನ ಸಖಸು ನಮಗೆ ಪತ್ತೆಯಾದ ಪ್ರಥಮ ಶ್ವೇತಕುಬ್ಜತಾರೆ. ಇದರ ವರ್ಣವರ್ಗವು A_5 ಆದರೂ ಇದರ ಸಹಜಕಾಂತಿಯು ೧ ರ ಬದಲು ೧೧ ಆಗಿದೆ. ಅಲ್ಲಿಗೆ ಇದರ ವ್ಯಾಸವು ಕೇವಲ ೨೪,೦೦೦ ಮೈಲಿಗಳೆಂದು ಆಗುತ್ತದೆ. ಇದರ ಭಾರ ಸೂರ್ಯಸ ಭಾರದ $\frac{4}{5}$ ರಷ್ಟು, ಅಂದಮೇಲೆ ಇದರ ಸರಾಸರಿ ಸಾಂದ್ರತೆಯು ನೀರಿನ ೫೦,೦೦೦

[1] Giant branch. [2] White Dwarf.

ದಷ್ಟು ಆಗುತ್ತದೆ! ಧಾತುಗಳಲ್ಲಿ ಭಾರತಮ ಧಾತುಗಳ ಸಾಂದ್ರತೆಯು ನೀರಿಗಿಂತ ೨೩ ರಷ್ಟು. ಹಾಗಾದರೆ ಶ್ವೇತಕುಬ್ಜತಾರೆಗಳು ಯಾವ ವಿಲಕ್ಷಣ ಧಾತುಗಳಿಂದ ರಚಿತವಾಗಿವೆ?

ಶ್ವೇತಕುಬ್ಜತಾರೆಗಳ ಅಗಾಧ ಸಾಂದ್ರತೆಯ ಸಮಸ್ಯೆಯನ್ನು ಎಡ್ಡಿಂಗ್‌ಟನ್‌ನು ಬಿಡಿಸಿದನು. ಈ ತಾರೆಗಳ ಬಹುಭಾಗದ ಉಷ್ಣಾಂಶವು ಹಲವು ಕೋಟಿ ಡಿಗ್ರಿಗಳಾದ್ದರಿಂದ ಇವುಗಳ ಪರಮಾಣುಗಳೆಲ್ಲ ತಮ್ಮ ಎಲೆಕ್ಟ್ರಾನ್‌ಗಳನ್ನು ಸಂಪೂರ್ಣವಾಗಿ ಕಳಚಿಹಾಕಿ ತಾರೆಗಳ ಶರೀರವೆಲ್ಲ ಪರಮಾಣುಬೀಜಗಳಿಂದ ತುಂಬಿದೆ. ಬೀಜದ ವ್ಯಾಸವು ಪರಮಾಣುವ್ಯಾಸದ ಹತ್ತುಸಾವಿರದಲ್ಲೊಂದು ಭಾಗವಾದ ಕಾರಣ ಬೀಜಗಳು ಒತ್ತಾಗಿ ಸೇರಿದರೆ ಸಾಂದ್ರತೆಯು ಅಧಿಕವಾಗುವುದು ಸ್ವಾಭಾವಿಕವೇ. ಶ್ವೇತಕುಬ್ಜಗಳ ಒಂದು ಘನ ಅಂಗುಲ ಗಾತ್ರದ ಸಾಮಗ್ರಿಯ ಭಾರ ಸುಮಾರು ಒಂದೂಕಾಲು ಟನ್ ಆಗುತ್ತದೆ!

೫. ನಕ್ಷತ್ರದ ಜೀವಿತದ ವಿವಿಧ ಹಂತಗಳು

ಪ್ರಧಾನಶ್ರೇಣಿಯ ತಾರೆಗಳು, ರಕ್ತಬೃಹತ್ತಾರೆಗಳು ಮತ್ತು ಶ್ವೇತಕುಬ್ಜಗಳು ಈ ಮೂರು ಗುಂಪುಗಳಿಗೂ ಸರಿಯಾದ ಸ್ಥಾನಗಳನ್ನು ನಮ್ಮ ವಿಶ್ವಚಿತ್ರದಲ್ಲಿ ನಿರ್ಧರಿಸಿದರೆ ನಕ್ಷತ್ರದ ಜೀವನಚರಿತ್ರೆಯು ತಾನಾಗಿಯೇ ಹೊರಬೀಳುತ್ತದೆಂದು ನಮಗನ್ನಿಸುತ್ತದಲ್ಲವೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅನೇಕ ಖಗೋಳಜ್ಞರು ನಕ್ಷತ್ರವು ಅಲ್ಪಸಾಂದ್ರತೆಯ M ವರ್ಗದ ಕೆಂಪುಬೃಹತ್ತಾರೆಯಾಗಿ ಜನ್ಮ ತಾಳುತ್ತದೆಂದು ಅಭಿಪ್ರಾಯಪಟ್ಟಿದ್ದರು. ಈ ಶೈಶವಾವಸ್ಥೆಯಲ್ಲಿ ಇದರ ಉಷ್ಣಾಂಶವು ತೀರ ಕಡಿಮೆ—ಸುಮಾರು ೨,೦೦೦ ಡಿಗ್ರಿಗಳು ಮಾತ್ರ. ಕಾಲಕ್ರಮೇಣ ಇದು ಕುಗ್ಗಿ ಇದರ ಉಷ್ಣಾಂಶ ಹೆಚ್ಚುತ್ತ ಬಂದು ಕ್ರಮವಾಗಿ K, G, F ಮತ್ತು A ವರ್ಗಗಳ ಬೃಹತ್ತಾರೆಗಳ ಅವಸ್ಥೆಗಳು ನಕ್ಷತ್ರಕ್ಕೆ ಪ್ರಾಪ್ತವಾಗುತ್ತವೆ. ಈ ರೂಪಾಂತರದಲ್ಲಿ ತಾರೆಯ ಸಾಂದ್ರತೆಯು ಹೆಚ್ಚಿದರೂ, ಉದ್ದಕ್ಕೂ ತೇಜಸ್ಸನ್ನು ಚೆಲ್ಲುತ್ತ ಬರುವುದರಿಂದ ಭಾರ ಸ್ವಲ್ಪ ಕಡಿಮೆಯಾಗುತ್ತ ಹೋಗುತ್ತದೆ. ತಾರೆಯು ಹೀಗೆ ಬೃಹಚ್ಛಾಖೆಯ ಮಾರ್ಗವಾಗಿ ಸಾಗಿ A ವರ್ಗಕ್ಕೆ ಬಂದು ಪ್ರಧಾನ ಶ್ರೇಣಿಯನ್ನು ಸೇರುತ್ತದೆ. ಇಲ್ಲಿಗೆ ನಕ್ಷತ್ರದ ಬಾಲ್ಯಯೌವನಾವಸ್ಥೆಗಳು ಮುಗಿದುವೆಂದು ಹೇಳಬಹುದು. ಈಗ ಇದರ ಉಷ್ಣಾಂಶವು ಹತ್ತಿಪ್ಪತ್ತು ಸಾವಿರ ಡಿಗ್ರಿಗಳಿಗೆ ಬಂದಿರುತ್ತದೆ.

ಮುಂದಕ್ಕೆ A ವರ್ಗದಿಂದ F, G, ಮತ್ತು K ವರ್ಣವರ್ಗಗಳ ಮಾರ್ಗವಾಗಿ ಇಳಿದು M ವರ್ಗದ ರಕ್ತ ಕುಬ್ಜತಾರೆಯಾಗುತ್ತದೆ. ಈ ಅವಸ್ಥೆಗಳಲ್ಲಿ ನಕ್ಷತ್ರದ

ಆಕಾರ, ಭಾರ ಮತ್ತು ಉಷ್ಣಾಂಶಗಳೆಲ್ಲವು ನಿಧಾನವಾಗಿ ಕಡಿಮೆಯಾಗುತ್ತ ಬರುತ್ತವೆ. ರಕ್ತ ಬೃಹದವಸ್ಥೆಯು ತಾರೆಯ ಶೈಶವಾವಸ್ಥೆಯನ್ನು ಸೂಚಿಸುವಂತೆಯೇ ರಕ್ತಕುಬ್ಜಾವಸ್ಥೆಯು ಅದರ ವೃದ್ಧಾವಸ್ಥೆಯನ್ನು ಸೂಚಿಸುತ್ತದೆಂದು ನಂಬಲಾಗಿತ್ತು. ಈ ವಾದದಂತೆ ಪ್ರಧಾನಶ್ರೇಣಿಯ G ವರ್ಗದ ತಾರೆಯಾದ ನಮ್ಮ ಸೂರ್ಯನು ಪೀತ ಕುಬ್ಜಾವಸ್ಥೆಯಲ್ಲಿರುವುದರಿಂದ ಮಧ್ಯ ವಯಸ್ಸನ್ನು ದಾಟುತ್ತಿದಾನೆಂದು ಹೇಳಬಹುದು.

ತಾರೆಗಳ ಜೀವನದ ಈ ಸರಳ ಚಿತ್ರವು ಹೃದಯಕ್ಕೆ ಆಕರ್ಷಕವಾಗಿರುವಷ್ಟು ಬುದ್ಧಿಗೆ ಸಮರ್ಪಕವಾಗಿಲ್ಲ. ಏಕೆಂದರೆ ಚಿತ್ರದ ತುಂಬ ಹುಳುಕುಗಳಿವೆ. ಮೊದಲನೆಯದಾಗಿ ಈ ವಿವರಣೆಯಲ್ಲಿ ನಾವು O ಮತ್ತು B ವರ್ಗಗಳ ಮಾತೇ ಎತ್ತಿಲ್ಲ. ಅದಕ್ಕೂ ಹೆಚ್ಚಾಗಿ ಶ್ವೇತಕುಬ್ಜಾವಸ್ಥೆಯು ಚಿತ್ರಕ್ಕೆ ಹೇಗೆ ಹೊಂದಿಕೆಯಾಗುತ್ತದೆಂದು ಹೇಳಿಲ್ಲ. ಆಮೇಲೆ ಚಂಚಲತಾರೆಗಳನ್ನಂತೂ ಸಂಪೂರ್ಣವಾಗಿ ಮರೆತಿದ್ದೇವೆ. ನೂರಕ್ಕೆ ತೊಂಬತ್ತೈದು ನಕ್ಷತ್ರಗಳನ್ನು ಸೇರಿಸಿಕೊಂಡಿರುವುದರಿಂದ ಅಲ್ಪಸಂಖ್ಯಾಕಗಳೆಂದು ಶ್ವೇತಕುಬ್ಜಗಳನ್ನೂ ಚಂಚಲತಾರೆಗಳನ್ನೂ ಅಲ್ಲಗಳೆಯುವುದು ಸರಿಯಲ್ಲ. ನಮ್ಮ ಸಮಾಜದಲ್ಲಿ ರಾಜನಿಂದ ಭಿಕ್ಷುಕನ ವರೆಗೆ, ರಾಷ್ಟ್ರನಾಯಕನಿಂದ ಕೂಲಿಯ ವರೆಗೆ ಅನೇಕ ಜನಗಳ ಸ್ಥಾನಮಾನಗಳನ್ನು ಅವರ ಉಡುಪು ಒಯ್ಯಾರಗಳಿಂದ ನಿರ್ಧರಿಸಬಹುದು. ಆದರೆ ಗಾಂಧೀ, ಹಿಟ್ಲರರಂಥ ಅಪರೂಪವ್ಯಕ್ತಿಗಳ ಸ್ಥಾನಗಳನ್ನು ಅವರ ಉಡಿಗೆತೊಡಿಗೆಗಳಿಂದಲೇ ನಿರ್ಣಯಿಸುವುದು ಅಸಾಧ್ಯದ ಕೆಲಸ. ಇಂಥವರು ಕೋಟಿಗೊಬ್ಬಿಬ್ಬರಿದ್ದರೂ, ಈ ಒಬ್ಬಿಬ್ಬರ ನಡತೆ ಸ್ವಭಾವಗಳು ಆ ಕೋಟಿ ಜನಗಳ ಸ್ಥಿತಿಗತಿಗಳ ಮೇಲೆ, ಒಳ್ಳೆಯದಕ್ಕೋ ಕೆಟ್ಟದಕ್ಕೋ, ಅಂತೂ ಅತಿಶಯಪ್ರಭಾವವನ್ನು ಬೀರಬಹುದು. ಹಾಗೆಯೇ ಬೃಹತ್ತಾರೆಗಳಲ್ಲಿಯೂ, ಶ್ವೇತಕುಬ್ಜಗಳಲ್ಲಿಯೂ ತಾರೆಗಳ ಜೀವನರಹಸ್ಯವು ಅಡಗಿದ್ದರೂ ಇರಬಹುದು.

೬. ವಿವಿಧಾವಸ್ಥೆಗಳ ನಕ್ಷತ್ರಗಳ ಭೌತಸ್ಥಿತಿಗಳು

ಶ್ವೇತಕುಬ್ಜಾದಿ ಜಾತಿಗಳ ನಕ್ಷತ್ರಗಳ ಸಮಸ್ಯೆಗಳನ್ನು ಪರಿಶೀಲಿಸುವುದಕ್ಕೆ ಮುಂಚೆ ತಾರೆಯ ಜೀವನದ ವಿವಿಧ ಹಂತಗಳ ಭೌತಸ್ಥಿತಿಗಳನ್ನು ನಾವು ಮನದಟ್ಟು ಮಾಡಿಕೊಳ್ಳುವುದು ಅವಶ್ಯ. ಇದಕ್ಕಾಗಿ ಒಂದೊಂದು ಹಂತಕ್ಕೆ ಒಂದೊಂದು ತಾರೆಯನ್ನು ಮಾದರಿಯಾಗಿ ತೆಗೆದುಕೊಂಡು ಅವುಗಳ ಭೌತಸ್ಥಿತಿಗಳನ್ನು ವಿವರಿಸುವ ಪಟ್ಟಿಯು ಕೆಳಗೆ ರಚಿತವಾಗಿದೆ. ಈ ಪಟ್ಟಿಯಲ್ಲಿನ ತಾರೆಗಳ ಸಾಂದ್ರತೆಯ ಪ್ರಮಾಣವು

ಒಂದರಿಂದ ಒಂದೂವರೆ ಕೋಟಿ ಕೋಟಿ(೧.೫×೧೦^{೧೪}), ಕಾಂತಿಯ ಪ್ರಮಾಣವು ಒಂದರಿಂದ ಎರಡೂವರೆ ಕೋಟಿ (೨.೫×೧೦^{೭}), ವ್ಯಾಸದ ಪ್ರಮಾಣವು ಒಂದರಿಂದ ಒಂದುಲಕ್ಷ($೧೦^{೫}$)ವಿದ್ದರೂ ಭಾರದ ಪ್ರಮಾಣವು ಒಂದರಿಂದ ಮುವ್ವತ್ತುಮೂರರ ವರೆಗೆ ಮಾತ್ರವೆಂಬುದನ್ನು ನಾವು ಗಮನಿಸಬೇಕು. ತಾರೆಗಳ ಇತರ ಗುಣವಿಶೇಷಗಳ ಪರಿಮಿತಿಗಳು ಬಹಳ ವಿಶಾಲವಾದರೂ, ಭಾರದ ಪರಿಮಿತಿಯು ಕಿರಿದಾದದ್ದು. ಶ್ವೇತಕುಬ್ಜಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ—ಸೂರ್ಯನಿಗಿಂತ ಹಗುರದ ಸಾಂದ್ರತರ ತಾರೆಗಳ ಗುಂಪೊಂದು, ಸೂರ್ಯನಿಗಿಂತ ಭಾರದ ಸಾಂದ್ರತಮ ತಾರೆಗಳ ಗುಂಪೊಂದು. ಹೀಗೆ ಮಾಡಿರುವುದು ನಾವು ಮುಂದೆ ವಿವೇಚನೆ ಮಾಡಲಿರುವ ಚಂದ್ರಶೇಖರನ ಶ್ವೇತಕುಬ್ಜವಾದದ ದೃಷ್ಟಿಯಿಂದ.

೭. ಮಹಾಬೃಹತ್ತಾರೆ[1]ಗಳ ಸ್ಥಿತಿ ತಾರುಣ್ಯದ ಚಿಹ್ನೆಯೊ ವೃದ್ಧಾಪ್ಯದ ಚಿಹ್ನೆಯೊ?

ಪ್ರಧಾನ ಶ್ರೇಣಿಯ ನಕ್ಷತ್ರಗಳ ತೇಜಶ್ಶಕ್ತಿಯನ್ನು ಅವುಗಳ ಅಂತರಾಳದಲ್ಲಿ ಜರುಗುತ್ತಿರುವ ಇಂಗಾಲ-ಸಾರಜನಕ ಬೀಜಕ್ರಿಯಾಚಕ್ರವು ಒದಗಿಸುತ್ತಿದೆಯೆಂದು ನಾವು ಮೊದಲನೆಯ ಅಧ್ಯಾಯದಲ್ಲಿಯೇ ತಿಳಿದೆವು. ಈ ಬೀಜಕ್ರಿಯೆಯು ಚ್ಯುತಿಯಿಲ್ಲದೆ ನಡೆಯಲು ಉಷ್ಣಾಂಶವು ಎರಡು ಕೋಟಿ ಡಿಗ್ರಿಗಳಷ್ಟು ಇರಬೇಕು, ಅಲ್ಲದೆ ಬೀಜಕ್ರಿಯಾವೇಗವು ಉಷ್ಣಾಂಶವನ್ನು ಅತಿ ನಿಕಟವಾಗಿ ಅವಲಂಬಿಸುತ್ತದೆ. ಉದಾಹರಣೆಗೆ ಉಷ್ಣಾಂಶವು ಒಂದೂವರೆ ಕೋಟಿ ಡಿಗ್ರಿಗಳಷ್ಟಕ್ಕೆ ಇಳಿದರೂ ಸಾಕು, ಬೀಜಕ್ರಿಯೆಯು ನಿಂತೇ ಹೋಗುತ್ತದೆನ್ನಬಹುದು. ಹೀಗೆ ಕ್ರಿಯೆಯು ಉಷ್ಣಾಂಶದ ಆಧಾರದ ಮೇಲೆಯೆ ನಿಂತಿರುವುದರಿಂದ ಇಂಥ ಕ್ರಿಯೆಗಳನ್ನು ಔಷ್ಣಿಕ ಬೀಜಕ್ರಿಯೆಗಳೆಂದು[2] ಕರೆಯುತ್ತಾರೆ.

ಪ್ರಧಾನ ಶ್ರೇಣಿಯ ಬೃಹತ್ತಾರೆಗಳಾದ ಕಿನ್ನರ ದ್ವಿತೀಯ, ಅಭಿಜಿತ್ ಮೊದಲಾದುವುಗಳೊಡನೆ ಹೋಲಿಸಿದರೂ ರಕ್ತಬೃಹತ್ತಾರೆಗಳಾದ ಜ್ಯೇಷ್ಠಾ, ರೋಹಿಣ್ಯಾದಿಗಳು ಗಾತ್ರದಲ್ಲಿ ಬಹು ದೊಡ್ಡವೆಂದು ಮೇಲಿನ ಪಟ್ಟಿಯ ಪರಿಶೀಲನೆಯಿಂದ ವ್ಯಕ್ತಪಡುತ್ತದೆ. ಆದ ಕಾರಣ ಇಂಥ ನಕ್ಷತ್ರಗಳನ್ನು ಮಹಾಬೃಹತ್ತಾರೆಗಳೆಂದು[1] ಕರೆಯುವ ವಾಡಿಕೆ ಬಂದಿದೆ. ಇವುಗಳ ಸಾಂದ್ರತೆ ಕೂಡ ಅತ್ಯಲ್ಪ. ಸರಾಸರಿ ಸಾಂದ್ರತೆ ಅತ್ಯಲ್ಪವಾದರೂ ನಕ್ಷತ್ರದೊಳಕ್ಕೆ ಹೋದಂತೆ ಸಾಂದ್ರತೆ ಹೆಚ್ಚುತ್ತಾ ಹೋಗುತ್ತದೆ. ನಕ್ಷತ್ರವು ಸ್ಥಿರವಾಗಿ ಬೆಳಗುತ್ತಿರಬೇಕಾದಲ್ಲಿ ಅದರ ಕೇಂದ್ರದ ಸಾಂದ್ರತೆಯು ಸರಾಸರಿ ಸಾಂದ್ರತೆಯ ೬ ರಷ್ಟಕ್ಕಿಂತ ಹೆಚ್ಚಾಗಿ ೫೫ ರಷ್ಟಕ್ಕಿಂತ

---

[1] Super Giants. [2] Thermo-nuclear reactions.

ತಾರೆಗಳ ವಿವಿಧ ಅವಸ್ಥಾವಿಶೇಷಗಳು

		ತಾರೆ	ವರ್ಣ ವರ್ಗ	ಹೊರಮೈ ಉಷ್ಣಾಂಶ	ಸಾಂದ್ರತೆ ಸೂರ್ಯ = ೧*	ಕಾಂತಿ ಸೂರ್ಯ = ೧	ಭಾರ ಸೂರ್ಯ = ೧	ವ್ಯಾಸ ಸೂರ್ಯ = ೧
ಬೃಹದಾಕೃತಿ		ಜ್ಯೇಷ್ಠಾ	M_0	೩,೦೦೦	೦.೦೦೦೦೦೦೦೨	೩೫೦೦	೧೦	೩೯೦
		ರೋಹಿಣಿ	K_5	೩,೨೦೦	೦.೦೦೦೦೧	೯೦	೪	೭೨
		ಸ್ವಾತಿ	K_0	೪,೦೦೦	೦.೦೦೦೧	೧೦೦	೪	೩೦
		ಬ್ರಹ್ಮಹೃದಯ	G_0	೫,೩೦೦	೦.೦೦೧	೧೫೦	೪	೧೬
ಪ್ರಧಾನಶ್ರೇಣಿ		ಕಿನ್ನರ ದ್ವಿತೀಯ[1]	B_0	೧೯,೦೦೦	೦.೦೨	೩೧೦೦	೪	೬
		ಅಭಿಜಿತ್	A_0	೧೦,೬೦೦	೦.೨	೫೦	೩	೨.೬
		ಲುಬ್ಧಕ	A_0	೧೦,೬೦೦	೦.೩	೨೬	೨.೪	೧.೯
		ಶ್ರವಣ	A_5	೮,೨೦೦	೦.೫	೯.೨	೨	೧.೬
		ಲಘುಶ್ವಾನ ಪ್ರಥಮ[2]	F_5	೬,೩೦೦	೦.೧	೫.೪	೧.೧	೨.೩
		ಕಿನ್ನರ ಪ್ರಥಮ[3]	G_0	೫,೭೫೦	೦.೫	೧.೧	೧.೧	೧.೩
		ಸೂರ್ಯ	G_0	೫,೭೫೦	೧.೦	೧.೦	೧.೦	೧.೦
		ಉರಗಧರನ ೭೦[4]	K_0	೪,೯೦೦	೦.೯	೦.೪೨	೦.೯	೧.೦
		ರಾಜಹಂಸದ ೬೧[5]	K_7	೩,೯೦೦	೧.೪	೦.೨೧	೦.೫	೦.೭
		ಕ್ರೂ'ಗರ್ ೬೦[6]	M_3	೩,೩೦೦	೯.೦	೦.೦೦೨	೦.೩	೦.೩
ಶ್ವೇತಕುಬ್ಜಗಳು	ಹಗುರ	ಲುಬ್ಧಕನ ಸಖ	A_5	೭,೮೦೦	೩೦,೦೦೦	೦.೦೦೨೫	೦.೯೬	೦.೦೩೪
		ವೈತರಣಿ ಪಂಚದಶದ ಸಖ[7]	A_0	೧೧,೦೦೦	೬೦,೦೦೦	೦.೦೦೫	೦.೪೪	೦.೦೧೯
	ಭಾರ	ಫಾನ್‌ಮಾನೆನ್‌ನ ೨[8]	F_0	೭,೦೦೦	೪೫,೦೦,೦೦೦	೦.೦೦೦೧೪	೩.೩೮	೦.೦೦೯
		ಕುಯ್ಪರನ ತಾರೆ[9]	....	೨೦,೦೦೦ (?)	೩,೩೦,೦೦,೦೦೦	೦.೦೧೭	೨.೫	೦.೦೦೪೨

* ಸೂರ್ಯನ ಸರಾಸರಿ ಸಾಪೇಕ್ಷ ಸಾಂದ್ರತೆಯು ೧.೪ ಆದ್ದರಿಂದ ಈ ಸಂಖ್ಯೆಗಳನ್ನು ೧.೪ ರಿಂದ ಗುಣಿಸಿದರೆ ನೀರಿಗೆ ಸಾಪೇಕ್ಷವಾಗಿ ತಾರೆಗಳ ಸಾಪೇಕ್ಷ ಸಾಂದ್ರತೆಗಳು ಸಿಕ್ಕುತ್ತವೆ.

[1] β-Centauri. [2] α-Canis Minoris. [3] α-Centauri. [4] 70 Ophiuchi A. [5] 61 Cygni A.
[6] Krueger 60 A. [7] o-Eridani B. [8] Van Maanen No. 2. [9] Kuiper's Star.

ಕಡಮೆಯಾಗಿ ಇರಬೇಕೆಂದು ಗಣಿತಜ್ಞರು ನಿರ್ಣಯಿಸಿದ್ದಾರೆ. ಅಲ್ಲಿಗೆ ಮಹಾ ಬೃಹತ್ತಾರೆಗಳ ಕೇಂದ್ರಸಾಂದ್ರತೆಯು ಸುಮಾರು ೦.೦೦೦೧ ಎಂದಾಗುತ್ತದೆ. ಈ ಸಾಂದ್ರತೆಗೆ ಹೊಂದುವ ಉಷ್ಣಾಂಶವು ಹತ್ತು ಲಕ್ಷ ಡಿಗ್ರಿಗಳನ್ನು ಮೀರಲಾರದು. ಆದಕಾರಣ ಈ ನಕ್ಷತ್ರಗಳಲ್ಲಿ ಇಂಗಾಲ-ಸಾರಜನಕ ಬೀಜಕ್ರಿಯೆಯು ಸಾಧ್ಯವಿಲ್ಲ. ಅದರ ಬದಲು ಲಿಥಿಯಂ, ಬೋರಾನ್, ಬೆರಿಲಿಯಂ, ಇತ್ಯಾದಿ ಹಗುರ ಪರಮಾಣು ಬೀಜಕ್ರಿಯೆಗಳು ಇಂಥ ನಕ್ಷತ್ರಗಳನ್ನು ಜೀವಂತವಾಗಿಡುತ್ತವೆ. ಆದರೆ ಇಂಗಾಲ ಸಾರಜನಕ ಕ್ರಿಯಾಚಕ್ರದಲ್ಲಿ ಇಂಗಾಲವು ಹೇಗೆ ಪರಿವರ್ತನೆ ಹೊಂದಿ ತಿರುಗಿ ಇಂಗಾಲವಾಗಿಯೇ ಉಳಿದು ಕ್ರಿಯಾಚಕ್ರದಲ್ಲಿ ಪುನಃಪುನಃ ಪಾತ್ರ ವಹಿಸುತ್ತದೆಯೋ ಹಾಗೆ ಈ ಹಗುರ ಪರಮಾಣು ಬೀಜಕ್ರಿಯೆಗಳಲ್ಲಿ ಆಗುವುದಿಲ್ಲ. ಆದ್ದರಿಂದ ನಕ್ಷತ್ರದಲ್ಲಿ ಶೇಖರವಾಗಿರುವ ಈ ಧಾತು ಸಾಮಗ್ರಿಗಳು ಸುಮಾರು ಹತ್ತು ಕೋಟಿ ವರ್ಷಗಳಲ್ಲಿ ಮುಗಿದುಹೋಗುತ್ತವೆ. ಈ ವಾದ ಸರಿಯಾಗಿದ್ದಲ್ಲಿ ನಮಗೆ ಕಾಣುವ ರಕ್ತಬೃಹತ್ತಾರೆಗಳೆಲ್ಲ ಜಗತ್ತಿನ ವಯಸ್ಸಿನ (ಇನ್ನೂರು ಮುನ್ನೂರು ಕೋಟಿ ವರ್ಷಗಳ) ದೃಷ್ಟಿಯಿಂದ ಮೊನ್ನೆ ತಾನೇ ಹುಟ್ಟಿದವುಗಳಾಗಿರಬೇಕು.

ಮಹಾಬೃಹತ್ತಾರೆಗಳ ಬೆಳವಣಿಗೆಯನ್ನು ಬೇರೊಂದು ರೀತಿಯಲ್ಲಿಯೂ ಖಗೋಳಜ್ಞರು ಚಿತ್ರಿಸಿದ್ದಾರೆ. ಈ ತಾರೆಗಳು ಜನ್ಮವೆತ್ತಿದಾಗ ಇವುಗಳ ಕೇಂದ್ರ ಬಿಂದುಗಳಲ್ಲಿ ಸಾಕಷ್ಟು ಉಷ್ಣಾಂಶವಿದ್ದು ಇಂಗಾಲ-ಸಾರಜನಕ ಬೀಜಕ್ರಿಯೆಯಿಂದಲೇ ಜಲಜನಕ ಬೀಜಗಳು ಹೀಲಿಯಂ ಬೀಜಗಳಾಗಿ ಪರಿವರ್ತನೆಯಾದುವು. ಹೀಗೆ ಆ ಕೇಂದ್ರಭಾಗದ ಜಲಜನಕ ಬೀಜಗಳೆಲ್ಲ ಪರಿವರ್ತನೆಯಾದಮೇಲೆ ಅಲ್ಲಿ ಬೀಜಕ್ರಿಯೆಯು ನಿಂತು ಆ ಪುಟ್ಟಗೋಳದ ಸುತ್ತಲ ಚಿಪ್ಪಿನಲ್ಲಿ ಬೀಜಕ್ರಿಯೆ ಆರಂಭಿಸಿತು. ಆ ಚಿಪ್ಪಿನ ಜಲಜನಕ ಬೀಜಗಳು ಅದೃಶ್ಯವಾದ ಕೂಡಲೆ ಚಿಪ್ಪು ಜಲಜನಕ ರಹಿತ ಕೇಂದ್ರದೊಂದಿಗೆ ಸೇರಿಕೊಂಡು ಅದರ ಆವರಣದ ಚಿಪ್ಪಿನಲ್ಲಿ ಬೀಜಕ್ರಿಯೆ ಆರಂಭಿಸಿತು. ಹೀಗೆ ಬೀಜಕ್ರಿಯಾವಲ್ಕವು[1] (ಚಿಪ್ಪು) ಕಾಲಕ್ರಮೇಣ ಕೇಂದ್ರದಿಂದ ನಕ್ಷತ್ರದ ಹೊರಹೊರ ವಲಯಗಳಿಗೆ ವ್ಯಾಪಿಸುತ್ತ ಬಂದಿದೆ. ವಲ್ಕದ ಒಳಭಾಗವು ಅತ್ಯುಷ್ಣದ ಜಲಜನಕ ರಹಿತ ಬೀಜದ್ರವ್ಯ. ತೆಳುವಾದ ವಲ್ಕದಲ್ಲಿ ನಕ್ಷತ್ರಕ್ಕೆ ಶಕ್ತಿಯನ್ನು ಒದಗಿಸುವ ಬೀಜಕ್ರಿಯೆಗಳ ವ್ಯಾಪಾರ. ವಲ್ಕದ ಆವರಣವು ಅತ್ಯಲ್ಪ ಸಾಂದ್ರತೆಯ, ಆದ್ದರಿಂದ ವಿಶಾಲವಾಗಿ ಹರಡಿರುವ ಶೀತಲ ಅನಿಲರಾಶಿ. ಇಲ್ಲಿ ಶೀತಲವೆಂದರೆ ಭೂದೃಷ್ಟಿಯಿಂದಲ್ಲ, ನಕ್ಷತ್ರಗಳ ಉಷ್ಣಾಂಶಗಳ ದೃಷ್ಟಿಯಿಂದ.

ಈ ವಲ್ಕಜನ್ಯ ಶಕ್ತಿವಾದಕ್ಕ[2]ನುಸಾರವಾಗಿ ನಕ್ಷತ್ರದ ಕೇಂದ್ರ ಸಾಂದ್ರ

[1] Nuclear reaction shell. [2] Theory of shell source of energy.

ತೆಯು ಸರಾಸರಿ ಸಾಂದ್ರತೆಯ ೫೦ ರೊಳಗೇ ಇರಬೇಕಾದ್ದಿಲ್ಲ. ಏಕೆಂದರೆ ಮೇಲೆ ತಿಳಿಸಿರುವ ಕೇಂದ್ರ ಸಾಂದ್ರತೆ ಸರಾಸರಿ ಸಾಂದ್ರತೆಗಳಿಗಿರಬೇಕಾದ ಪ್ರಮಾಣಮಿತಿಗಳು ಪ್ರಧಾನ ಶ್ರೇಣಿಯ ತಾರೆಗಳಂಥ ಅನೇಕಾವರ್ತ ಅಥವಾ ಅನೇಕವಲ್ಕ[1] ಮಾದರಿಯ ತಾರೆಗಳಿಗೆ ಅನ್ವಯಿಸುತ್ತವೆ. ಆಕಾಶಕಾಯದ ಸಾಂದ್ರತೆಯು ಕೇಂದ್ರದಲ್ಲಿ ಅಧಿಕವಾಗಿದ್ದು ಅದರ ತ್ರಿಜ್ಯ ಹೆಚ್ಚಿದಂತೆ ಸಾಂದ್ರತೆ ಕಡಿಮೆಯಾಗುತ್ತ ಹೋದರೆ ಅಂಥ ಕಾಯಗಳಿಗೆ ಅನೇಕವಲ್ಕಕಾಯಗಳೆಂದು ಹೆಸರು. ಏಕವಲ್ಕಗಳಾದ ಮಹಾಬೃಹತ್ತಾರೆಗಳ ಅಗಾಧ ವ್ಯಾಸವು ಒಂದು ವಿಧದಲ್ಲಿ ಸಾಂಕೇತಿಕಮಾತ್ರವೆಂದು ಹೇಳಬಹುದು. ಏಕೆಂದರೆ ನಮ್ಮ ಅಳತೆಗೆ ಸಿಕ್ಕಿರುವುದು ಈ ನಕ್ಷತ್ರಗಳ ವಿರಳ ಅನಿಲವಾತಾವರಣಗಳ ವ್ಯಾಸ. ಮಹಾಬೃಹತ್ತಾರೆಯ ವಸ್ತುಸಾಮಗ್ರಿಯಲ್ಲಿ ಶೇಕಡ ೯೦ ರಷ್ಟು ಅದರ ತ್ರಿಜ್ಯದ ಶೇಕಡ ೧೦ ರಷ್ಟರೊಳಗೇ ಅಡಕವಾಗಿದೆಯೆಂದು ತಿಳಿಯಬಂದಿದೆ. ಈ ವಲ್ಕವಾದವು ಸರಿಯಾಗಿದ್ದಲ್ಲಿ ಮಹಾಬೃಹತ್ತಾರೆಗಳು ಪುರಾತನ ತಾರೆಗಳಾಗಿಯೇ ಇರಬೇಕು. ಇವು ಪುರಾತನ ತಾರೆಗಳೆಂಬುದನ್ನು ಅವುಗಳ ಭ್ರಮಣವೇಗಗಳೂ ಸಮರ್ಥಿಸುತ್ತವೆ. ತಾರೆಗೆ ವಯಸ್ಸಾದಂತೆ ಅದರ ಭ್ರಮಣವೇಗ ಕುಗ್ಗುತ್ತದೆ. ನಕ್ಷತ್ರಲೋಕದಲ್ಲಿ ಮಹಾಬೃಹತ್ತಾರೆಗಳ ಭ್ರಮಣವೇಗ ಕಡಿಮೆಯೇ.

೮. ಶ್ವೇತಕುಬ್ಜಗಳ ಸಮಸ್ಯೆ

ಶ್ವೇತಕುಬ್ಜಗಳ ಸಮಸ್ಯೆಯೂ ಇಷ್ಟೇ ತೊಡಕಾದದ್ದು. ಈ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಪಟ್ಟಿರುವವರಲ್ಲಿ ಚಂದ್ರಶೇಖರ್, ಕೊಠಾರಿ ಮತ್ತು ಸೇನ್ ಎಂಬ ಭಾರತೀಯರೂ ಇದ್ದಾರೆ. ಶ್ವೇತಕುಬ್ಜಗಳ ಸಾಂದ್ರತೆ ಅಗಾಧವೆಂಬುದನ್ನಂತೂ ಆಗಲೇ ಕಂಡಿದ್ದೇವೆ. ಈ ತಾರೆಗಳು ಜಲಜನಕರಹಿತವೆಂಬುದು ಇವುಗಳ ಮತ್ತೊಂದು ವೈಶಿಷ್ಟ್ಯ. ಬೀಜಕ್ರಿಯೆಗಳಿಂದ ತಾರೆಯಲ್ಲಿರುವ ಜಲಜನಕವೆಲ್ಲ ಖರ್ಚಾಗಲಿಕ್ಕೆ ಬೇಕಾಗುವ ಕಾಲ ಅದರ ಭಾರವನ್ನವಲಂಬಿಸುತ್ತದೆ. ಭಾರ ಕಡಿಮೆಯಾದಷ್ಟು ಜಲಜನಕ ಸವೆಯಲು ಕಾಲ ಹೆಚ್ಚು ಬೇಕು. ಸೂರ್ಯನ ಭಾರದ ನಕ್ಷತ್ರದಲ್ಲಿರುವ ಜಲಜನಕ ವ್ಯಯವಾಗಲು ಸುಮಾರು ಹತ್ತುಸಾವಿರ ಕೋಟಿ ($೧೦^{೧೧}$) ವರ್ಷಗಳಾದರೂ ಬೇಕು. ಶ್ವೇತಕುಬ್ಜಗಳ ಭಾರವೆಲ್ಲ ಬಹಳ ಮಟ್ಟಿಗೆ ಸೂರ್ಯನಷ್ಟು ಅಥವಾ ಅದಕ್ಕೂ ಹಗುರ. ಅಂದಮೇಲೆ ಈ ತಾರೆಗಳು ಇತರ ತಾರೆಗಳಂತೆ ಬೀಜಕ್ರಿಯಾಶಕ್ತಿಯಿಂದ ಬೆಳೆದು ಬೆಳಗಿ, ವಯಸ್ಸಾದಂತೆ ತಮ್ಮ

[1] Polytrope models.

ಜಲಜನಕವನ್ನೆಲ್ಲ ತಿಂದು ಮುಗಿಸಿ ಈಗಿನ ಶ್ವೇತಕುಬ್ಜಾವಸ್ಥೆಗೆ ಇಳಿದಿದ್ದರೆ ಇವುಗಳಿಗೆ ಹತ್ತುಸಾವಿರಕೋಟಿ ವರ್ಷಗಳಾದರೂ ವಯಸ್ಸಾಗಿರಬೇಕು. ಆದರೆ ಅನೇಕ ಕಾರಣಗಳಿಂದ ಸೃಷ್ಟ್ಯಾದಿಯಿಂದ ಇದುವರೆಗೆ ೩೦೦ ಕೋಟಿ ವರ್ಷಗಳಿಗಿಂತ ಹೆಚ್ಚಾಗಿ ಆಗಿರಲಾರದೆಂದು ನಂಬಲಾಗಿದೆ. ಇದೇ ಶ್ವೇತಕುಬ್ಜಗಳ ಸಮಸ್ಯೆ.

ರಾಜ್ಯಾಡಳಿತದ ಸೂತ್ರವನ್ನು ವಹಿಸಲು ಒಂದು ರಾಷ್ಟ್ರದ ರಾಜಕೀಯ ಪಕ್ಷಗಳು ಸ್ಪರ್ಧಿಸುವಂತೆ ನಕ್ಷತ್ರರಾಜ್ಯವನ್ನು ವಶದಲ್ಲಿಟ್ಟುಕೊಳ್ಳಲು ಗುರುತ್ವಾಕರ್ಷಣ ಮತ್ತು ವಿಸರಣಶಕ್ತ್ಯುತ್ಪಾದಕ ಬೀಜಕ್ರಿಯಾಶಕ್ತಿಗಳು ಸ್ಪರ್ಧಿಸುತ್ತವೆಂದು ಹೇಳಬಹುದು. ಅಧಿಕಾರದಲ್ಲಿರುವ ಪಕ್ಷದ ಆಡಳಿತವು ವಿಹಿತವಾಗಿರಬೇಕಾದರೆ ವಿರೋಧಪಕ್ಷವು ಸಾಕಷ್ಟು ಪ್ರಬಲವಾಗಿರಬೇಕಾದದ್ದು ಹೇಗೆ ಅತ್ಯವಶ್ಯವೋ ಹಾಗೆಯೇ ನಕ್ಷತ್ರವು ಸಮಸ್ಥಿತಿಯಿಂದ ಬೆಳಗಬೇಕಾದರೆ ಗುರುತ್ವಾಕರ್ಷಣ ಮತ್ತು ಬೀಜಕ್ರಿಯಾಶಕ್ತಿಗಳು ಸಮಸ್ಪರ್ಧಿಗಳಾಗಿರಬೇಕು. ಸೂರ್ಯನ ಭಾರದ ನಕ್ಷತ್ರಗಳ ಜಲಜನಕದ ಪ್ರಮಾಣವು ಶೇಕಡ ೧/೫೦೦ ಕ್ಕೆ ಇಳಿದ ಕೂಡಲೆ ಗುರುತ್ವಾಕರ್ಷಣ ಶಕ್ತಿಯ ಕೈ ಮೇಲಾಗುತ್ತದೆ, ನಕ್ಷತ್ರವು ಕುಗ್ಗಲು ಪ್ರಾರಂಭಿಸುತ್ತದೆ. ನಕ್ಷತ್ರದ ಭಾರವು ಹೆಚ್ಚಾದಂತೆ ಜಲಜನಕದ ಪ್ರಮಾಣವು ಇನ್ನೂ ಹೆಚ್ಚಾಗಿರುವಾಗಲೇ ಅಂದರೆ ಇನ್ನೂ ಮುಂಚೆಯೇ ಗುರುತ್ವಾಕರ್ಷಣ ಶಕ್ತಿಗೆ ನಕ್ಷತ್ರವು ಕಟ್ಟುಬಿದ್ದು ಕುಸಿಯಲು ಮೊದಲಾಗುತ್ತದೆ. ನಕ್ಷತ್ರದ ಭಾರವು ಸೂರ್ಯಭಾರದ ಒಂದೂವರೆಯಷ್ಟಕ್ಕಿಂತ ಹೆಚ್ಚಿದ್ದರೆ ಈ ಸಂಕೋಚವು ಮಿತಿಯಿಲ್ಲದೆ ಅಂದರೆ ನಕ್ಷತ್ರದ ವ್ಯಾಸವು ಶೂನ್ಯವಾಗುವ ವರೆಗೂ ಸಾಗುತ್ತದೆ. ಭಾರವು ಒಂದೂವರೆಯಷ್ಟಕ್ಕಿಂತ ಕಡಮೆಯಿದ್ದರೆ ನಕ್ಷತ್ರವು ಒಂದು ನಿರ್ದಿಷ್ಟ ವ್ಯಾಸದ ವರೆಗೆ ಮಾತ್ರ ಸಂಕುಚಿಸಿ ಅಲ್ಲಿಂದ ಮುಂದಕ್ಕೆ ಆರಿ ಅದೇ ವ್ಯಾಸದ ಕೃಷ್ಣತಾರೆಯಾಗಿ ಪರ್ಯವಸಾನವಾಗುತ್ತದೆ. ಸೂರ್ಯನ ಭಾರದ ಶ್ವೇತಕುಬ್ಜದ ಕನಿಷ್ಠತಮ ವ್ಯಾಸವು ಸೌರವ್ಯಾಸದ ೧/೧೨೫ ರಷ್ಟು. ಲುಬ್ಧಕ ಸಖನ ವ್ಯಾಸವು ಸೌರವ್ಯಾಸದ ೧/೩೦ ರಷ್ಟು ಈಗ ಇದೆ. ಆದ್ದರಿಂದ ಲುಬ್ಧಕ ಸಖನು ಅವನ ಅಂತಿಮಾವಸ್ಥೆಯಿಂದ ಇನ್ನೂ ದೂರದಲ್ಲಿದಾನೆ. ಇದರಲ್ಲಿ ವಿಚಿತ್ರವೇನೆಂದರೆ ಭಾರ ಕಡಮೆಯಾದಷ್ಟು ನಿರ್ದಿಷ್ಟ ಮಿತಿಯ ವ್ಯಾಸವು ದೊಡ್ಡದಾಗುತ್ತದೆ. ಸೂರ್ಯಭಾರದ ಈ ಒಂದೂವರೆಯಷ್ಟು ಭಾರವನ್ನು ಸಂಧಿಭಾರ[1]ವೆಂದು ಕರೆಯುತ್ತಾರೆ. ಶ್ವೇತಕುಬ್ಜಗಳ ಅವನತ ಸ್ಥಿತಿ[2]ಯನ್ನು ಕೂಲಂಕಷವಾಗಿ ಗಣಿತಮಾರ್ಗದಿಂದ ಅನ್ವೇಷಣೆ ಮಾಡಿ ಅವಕ್ಕೆ ಒಂದು ಸಂಧಿಭಾರವಿದೆಯೆಂದು ಮೊದಲು ತೋರಿಸಿದವನು ಚಂದ್ರಶೇಖರನು. ಎಲೆಕ್ಟ್ರಾನ್

[1] Critical mass. [2] Degenerate state.

ಗಳನ್ನು ಸಂಪೂರ್ಣವಾಗಿ ಕಳಚಿಹಾಕಿ ಪರಮಾಣು ಬೀಜಗಳಿಂದ ನಿಬಿಡವಾಗಿರುವ ವಸ್ತುಸ್ಥಿತಿಗೆ ಅವನತಸ್ಥಿತಿಯೆಂದು ಹೆಸರು. ಎಲ್ಲ ತಾರೆಗಳ ಕೇಂದ್ರಭಾಗವೂ ಹೀಗೆ ಅವನತಸ್ಥಿತಿಯಲ್ಲಿದ್ದರೂ ಶ್ವೇತಕುಬ್ಜಗಳ ಕೇಂದ್ರಭಾಗ ಮಾತ್ರವಲ್ಲ, ಶೇಕಡ ೯೯ ಕ್ಕಿಂತ ಹೆಚ್ಚು ಭಾಗವು ಅವನತಸ್ಥಿತಿಯಲ್ಲಿದೆ. ಇವುಗಳ ತೆಳುಪೊರೆಯ ಹಾಗಿರುವ ಹೊರಮೈ ಮಾತ್ರ ಸಾಮಾನ್ಯ ಅನಿಲಸ್ಥಿತಿ ಅಥವಾ ಅನವನತ ಸ್ಥಿತಿ[1]ಯಲ್ಲಿರುತ್ತದೆ.

ಸಂಧಿಭಾರಕ್ಕಿಂತ ಹೆಚ್ಚು ಭಾರದ ನಕ್ಷತ್ರವು ಅವನತಸ್ಥಿತಿಯಲ್ಲಿದ್ದರೆ ಅದು ಮಿತಿಯಿಲ್ಲದೆ ಕುಗ್ಗುತ್ತ ಹೋಗುತ್ತದೆಯೆಂದು ಹೇಳಿತಷ್ಟೆ. ಆದರೆ ವಾಸ್ತವವಾಗಿ ಹೀಗಾಗುವುದಿಲ್ಲ. ಗುರುತ್ವಾಕರ್ಷಣ ಬಲವೇ ನಿರಂಕುಶಾಧಿಕಾರಿಯಾಗಿದ್ದರೆ ಹೀಗಾಗುತ್ತಿತ್ತೇನೊ? ಇದಕ್ಕೆ ಆಸ್ಪದಕೊಡದಂತೆ ಕೇಂದ್ರವಿಮುಖಬಲವು[2] ಹುಟ್ಟಿಕೊಂಡು ತನ್ನ ದರ್ಪವನ್ನು ಹೆಚ್ಚು ಹೆಚ್ಚು ಪ್ರಕಟಮಾಡುತ್ತ ಬರುತ್ತದೆ. ಇದು ಹೇಗೆಂದು ತಿಳಿದುಕೊಳ್ಳಲು ನಾವು ಕೋನಾವೇಗ ಸ್ಥಾಯಿತ್ವ ತತ್ತ್ವ[3]ದ ಪರಿಚಯ ಮಾಡಿಕೊಳ್ಳಬೇಕು. ಒಂದು ವಸ್ತುವು ಚಲಿಸುತ್ತಿದ್ದರೆ ಅದರ ಭಾರ (ಜಡತ್ವ)ವೇಗಗಳ ಗುಣಲಬ್ಧವನ್ನು ವಸ್ತುವಿನ ಆವೇಗವೆಂದು ಕರೆಯುತ್ತಾರೆ. ವಸ್ತುವು ಒಂದು ಅಕ್ಷದ ಸುತ್ತ ತಿರುಗುತ್ತಿದ್ದರೆ ಅದರ ಆವೇಗವನ್ನು[4] ಅಕ್ಷದಿಂದ ವಸ್ತುವಿಗಿರುವ ದೂರದಿಂದ ಗುಣಿಸಿದರೆ ಫಲಿಸುವ ಲಬ್ಧವನ್ನು ಕೋನಾವೇಗ[5]ವೆಂದು ಕರೆಯುತ್ತಾರೆ. ಯಾವುದಾದರೊಂದು ವ್ಯವಸ್ಥೆಯಲ್ಲಿ ಅದರ ವಸ್ತುಗಳ ಚಲನವೇಗ, ಭ್ರಮಣಗಳು ಪರಸ್ಪರ ವಿನಿಮಯವಾದರೆ ಆ ವ್ಯವಸ್ಥೆಯ ಒಟ್ಟು ಕೋನಾವೇಗವು ಹೆಚ್ಚಾಗಲೂ ಸಾಧ್ಯವಿಲ್ಲ, ಕಡಮೆಯಾಗಲೂ ಸಾಧ್ಯವಿಲ್ಲ, ಇದ್ದಷ್ಟೇ ಇರಬೇಕು. ಈ ತತ್ತ್ವಕ್ಕೆ ಕೋನಾವೇಗ ಸ್ಥಾಯಿತ್ವ ತತ್ತ್ವವೆಂದು ಹೆಸರು. ಇದರ ಸತ್ಯವನ್ನು ಒಂದು ಸರಳಪ್ರಯೋಗದಿಂದ ತೋರಿಸಬಹುದು. ಒಂದು ತಿರುಗುವ ಮೇಜಿನ ಮೇಲೆ ಒಬ್ಬ ಹುಡುಗನನ್ನು ನಿಲ್ಲಿಸಿ ಅವನು ಕೈಗಳನ್ನು ಪೂರ್ತಿಯಾಗಿ ಚಾಚಿ ನಿಂತಿರುವಾಗ ಮೇಜನ್ನು ವೇಗವಾಗಿ ಸುತ್ತುವಂತೆ ಬೀಸಬೇಕು. ಈಗ ಹುಡುಗನು ಕೈಗಳನ್ನು ಮಡಿಸಿಕೊಂಡರೆ ಬಾಹುದೂರವು ಕಡಿಮೆಯಾಗಿ ಕೋನಾವೇಗವು ಕಡಿಮೆಯಾಗುತ್ತದೆ. ಸ್ಥಾಯಿತ್ವ ತತ್ತ್ವಕ್ಕೆ ಇದು ವಿರೋಧವಾದ್ದರಿಂದ ಮೇಜಿನ ಭ್ರಮಣವೇಗವು ಹೆಚ್ಚಬೇಕು, ಆಗ ಕೋನಾವೇಗವು ಮೊದಲಿನಂತೆಯೇ ಉಳಿಯುತ್ತದೆ. ಹುಡುಗನು ಕೈಗಳನ್ನು ಮಡಿಸಿಕೊಂಡ ಕೂಡಲೆ ಮೇಜಿನ ಭ್ರಮಣವೇಗವು ತಾನಾಗಿಯೇ ಹೆಚ್ಚುವುದನ್ನೂ, ತಿರುಗಿ ಕೈಗಳನ್ನು ಚಾಚಿದರೆ ಭ್ರಮಣವೇಗವು ಇಳಿಯುವುದನ್ನೂ ಸುಲಭವಾಗಿ ನೋಡಬಹುದು.

---

[1] Non-degenerate state. [2] Centrifugal force. [3] Principle of conservation of angular momentum. [4] Momentum. [5] Angular momentum.

ಈ ತತ್ತ್ವವನ್ನು ಅವನತಸ್ಥಿತಿಯಲ್ಲಿರುವ ಭಾರತಾರೆಗಳಿಗೆ ಅನ್ವಯಿಸೋಣ. ತಾರೆಗಳಿಗೆ ಭ್ರಮಣವಿದ್ದೇ ಇರುತ್ತದೆ. ಗುರುತ್ವಾಕರ್ಷಣಬಲದ ಹಿಡಿತಕ್ಕೆ ಸಿಕ್ಕಿ ಕುಸಿಯುತ್ತಿರುವ ನಕ್ಷತ್ರದ ವ್ಯಾಸವು ಕಿರಿದಾದಂತೆಲ್ಲ, ಕೋನಾವೇಗವು ಸ್ಥಾಯಿಯಾಗಿರಬೇಕಾದರೆ ಅದರ ಭ್ರಮಣವೇಗವು ಹೆಚ್ಚಲೇಬೇಕು. ಭ್ರಮಣವೇಗವು ಹೆಚ್ಚಿದಂತೆ ಕೇಂದ್ರವಿಮುಖ ಬಲವು ಹೆಚ್ಚುತ್ತದೆ. ಇದು ಬಹಳ ಹೆಚ್ಚಿದರೆ ನಕ್ಷತ್ರವು ಸಿಡಿದು ಹೋಳಾಗುತ್ತದೆ. ಈ ಹೋಳುಗಳ ಭಾರವು ಸಂಧಿಭಾರಕ್ಕೆ ಕಡಿಮೆಯಾದರೆ ಅವು ಶ್ವೇತಕುಬ್ಜಗಳಾಗಿ ನಿಲ್ಲುತ್ತವೆ. ಆದ್ದರಿಂದಲೇ ನಮಗೆ ಕಾಣುವ ಶ್ವೇತಕುಬ್ಜಗಳೆಲ್ಲ ಲಘು ಶ್ವೇತಕುಬ್ಜಗಳು. ಅವುಗಳಲ್ಲಿ ಭಾರ ಶ್ವೇತಕುಬ್ಜಗಳ ವ್ಯಾಸಗಳು ಲಘು ಕುಬ್ಜಗಳವಕ್ಕಿಂತ ಕಡಿಮೆ ಇರುವುದೂ ಚಂದ್ರಶೇಖರನ ಈ ವಾದವನ್ನು ಸಮರ್ಥಿಸುತ್ತದೆ.

೯. ನವ್ಯಗಳು[1]

ಭಾರತಾರೆಗಳು ಹೋಳುಗಳಾಗಿ ಒಡೆದು ಶ್ವೇತಕುಬ್ಜಗಳಾದಲ್ಲಿ ತಾರೆಗಳು ಹೀಗೆ ಸೀಳಾಗುವುದು ಆಗಾಗ್ಗೆಯಲ್ಲದಿದ್ದರೆ ಒಮ್ಮೊಮ್ಮೆಯಾದರೂ ನಮ್ಮ ಕಣ್ಣಿಗೆ ಬೀಳಬೇಡವೇ ಎಂಬುದು ಸಹಜವಾದ ಪ್ರಶ್ನೆ. ಖಗೋಳದೃಶ್ಯಗಳಲ್ಲೆಲ್ಲ ಪ್ರಾಯಶಃ ಅತ್ಯಂತ ಜನಾಕರ್ಷಣೀಯವಾದದ್ದು ಹೊಸ ತಾರೆಯ ಹುಟ್ಟು. ಆಕಾಶದಲ್ಲಿ ಒಂದೊಂದುಸಲ ಹೊಸನಕ್ಷತ್ರವು ಹುಟ್ಟಿ ಘಂಟೆಘಂಟೆಗೂ ಕಾಂತಿಯಲ್ಲಿ ಶೀಘ್ರವಾಗಿ ವೃದ್ಧಿಹೊಂದಿ ಒಂದೆರಡೇ ದಿನಗಳಲ್ಲಿ ಪ್ರಥಮವರ್ಗದ ತಾರೆಗಿಂತ ಹೆಚ್ಚು ಪ್ರಕಾಶಮಾನವಾಗಿ ಬೆಳಗುತ್ತದೆ. ಅನಂತರ ನಿಧಾನವಾಗಿ ಕಳೆಗುಂದಿ ಕೆಲವು ತಿಂಗಳುಗಳೊಳಗೆ ಕಣ್ಣಿಗೆ ಕಾಣಿಸದಷ್ಟು ಕ್ಷೀಣಕಾಂತಿಗಿಳಿದು ಅದೃಶ್ಯವಾಗುತ್ತದೆ. ಇಂಥ ನಕ್ಷತ್ರಗಳಿಗೆ ನವ್ಯಗಳೆಂದು ಹೆಸರು.

ನವ್ಯಗಳು ವಾಸ್ತವವಾಗಿ ನವತಾರೆಗಳಲ್ಲ. ನವ್ಯಗಳು ಉದ್ಭವಿಸಿದ ಖಗೋಳ ಪ್ರದೇಶದ ಹಳೆಯ ನಕ್ಷೆಗಳನ್ನು ಅಥವಾ ಛಾಯಾಚಿತ್ರಗಳನ್ನು ಪರೀಕ್ಷಿಸಿದರೆ ಪ್ರತಿಯೊಂದು ನವ್ಯಸ್ಥಾನದಲ್ಲಿಯೂ ತಪ್ಪದಂತೆ ಒಂದು ಕ್ಷೀಣಕಾಂತಿಯ ನಕ್ಷತ್ರವಿದ್ದುದು ಕಂಡುಬಂದಿದೆ. ಆದಕಾರಣ ನವ್ಯಪದವು ಕ್ಷೀಣಕಾಂತಿಯಿಂದ ಹಠಾತ್ತಾಗಿ ಶೀಘ್ರವಾಗಿ ಮಹಾಕಾಂತಿಗೇರುವ ನಕ್ಷತ್ರವನ್ನು ನಿರ್ದೇಶಿಸುವ ಪಾರಿಭಾಷಿಕ ಪದಮಾತ್ರ, ಅದಕ್ಕೆ ಹೊಸದು ಎಂಬ ಅರ್ಥ ಮಾಡಬಾರದು. ಸಾಮಾನ್ಯವಾಗಿ ನವ್ಯಗಳ ಕಾಂತಿಯು ಒಂದೆರಡು ದಿನಗಳಲ್ಲಿ ಹತ್ತು ಹನ್ನೆರಡು ಕಾಂತಿವರ್ಗಾಂಕಗಳಷ್ಟು (೧೦,೦೦೦ ದಿಂದ ೬೦,೦೦೦ ದಷ್ಟು) ಹೆಚ್ಚುತ್ತದೆ.

[1] Novae.

ಇವು ಅತ್ಯಂತ ಪ್ರಕಾಶದಿಂದ ಹೊಳೆಯುವಾಗ ಇವುಗಳ ಸಹಜಕಾಂತಿವರ್ಗಾಂಕವು, ಸುಮಾರು —೫ ಇರುತ್ತದೆ. ಇದು ವಿಶ್ವದ ಪ್ರಕಾಶತಮ ನಕ್ಷತ್ರಗಳ ಕಾಂತಿಗೆ ಸಮ. ಈ ಕಾಂತಿಗೇರಿದ ಮೇಲೆ ಕೆಲವು ತಿಂಗಳುಗಳ ಕಾಲ ಕಾಂತಿಯು ಹೆಚ್ಚುಕಡಿಮೆ ಆವರ್ತಕವಾಗಿ (ಆವರ್ತಕಾಲ ೧೦-೧೫ ದಿನಗಳು) ಏರಿಳಿದರೂ ಒಟ್ಟಿನಲ್ಲಿ ಇಳಿಮುಖ ವಾಗಿಯೇ ಇರುತ್ತದೆ. ಎರಡು ಮೂರು ವರ್ಷಗಳು ಕಳೆದಮೇಲೆ ಸಹಜಕಾಂತಿಯು ೨-೩ ವರ್ಗಾಂಕಕ್ಕಿಳಿದು ನಿಲ್ಲುತ್ತದೆ. ತೋರಿಕೆಯ ಕಾಂತಿಯು ನವ್ಯದ ದೂರವನ್ನವ ಲಂಬಿಸುವುದರಿಂದ ಅತಿ ಸಮೀಪದ ನವ್ಯಗಳು ಮಾತ್ರ ಅವು ಮಹಾಕಾಂತಿಯಿಂದ ಬೆಳಗುವಷ್ಟು ಕಾಲ ಬರಿಯ ಕಣ್ಣಿಗೆ ಗೋಚರವಾಗುತ್ತವೆ, ಅನಂತರ ಅದೃಶ್ಯವಾಗು ತ್ತವೆ. ನಮ್ಮ ಸ್ಥಳೀಯ ಬ್ರಹ್ಮಾಂಡದಲ್ಲಿ ಪ್ರತಿವರ್ಷವೂ ಇಪ್ಪತ್ತು ಮೂವತ್ತು ನವ್ಯಗಳು ಉದ್ಭವಿಸುವುದು ದೂರದರ್ಶಿನಿಗಳಿಗೆ ಗೋಚರವಾಗುತ್ತದೆ. ಇವುಗಳಲ್ಲಿ ಎಂಟು ಹತ್ತು ವರ್ಷಗಳಿಗೊಮ್ಮೆ ಕಣ್ಣಿಗೆ ಕಾಣಿಸುವ ನವ್ಯಗಳು ಹುಟ್ಟಿ ಮಾಯ ವಾಗುತ್ತವೆ.

ಆಕಾಶದ ಯಾವ ಭಾಗದಲ್ಲಿ ಎಂದು ನವ್ಯವು ಉದ್ಭವಿಸುತ್ತದೆಂದು ಹೇಳ ಲಿಕ್ಕಾಗುವುದಿಲ್ಲ. ಖಗೋಳದಲ್ಲಿ ಸಂಪೂರ್ಣ ಅನಿರೀಕ್ಷಿತ ಘಟನೆ ಎಂದರೆ ನವ್ಯೋ ದ್ಭವ ಬಿಟ್ಟರೆ ಬೇರೆ ಇಲ್ಲ. ನವ್ಯವು ಒಂದೊಂದು ವೇಳೆ ಒಂದೇ ದಿನದಲ್ಲಿ ತನ್ನ ಅಧಿಕತಮ ಕಾಂತಿಗೇರುವುದರಿಂದಲೂ, ರಾತ್ರಿಕಾಲದಲ್ಲಿ ಮಾತ್ರ ನಕ್ಷತ್ರಗಳ ವೀಕ್ಷಣವು ಸಾಧ್ಯವಾದದ್ದರಿಂದಲೂ, ಕಾಂತಿಯು ವೃದ್ಧಿಯಾಗುತ್ತಿರುವ ಪರ್ವ ಕಾಲದಲ್ಲಿಯೇ ನವ್ಯದ ವರ್ಣಪಟಲವನ್ನು ಹಿಡಿಯುವುದು ಪ್ರತಿಸಲವೂ ಸಾಧ್ಯವಲ್ಲ. ದಕ್ಷಿಣ ಆಫ್ರಿಕದ ಅಂಚೆಯವನೊಬ್ಬನು ನಿತ್ಯ ಪದ್ಧತಿಯಂತೆ ಒಂದು ಬೆಳಗಿನ ಝಾವ ಟಪ್ಪಾಲು ತೆಗೆದುಕೊಂಡು ಸೈಕಲು ಸವಾರಿಮಾಡುತ್ತಿದ್ದಾಗ ಆಕಾಶದಲ್ಲಿ ಒಂದು ಅಪರಿಚಿತ ನಕ್ಷತ್ರವನ್ನು ಕಂಡನು. ಸೂರ್ಯೋದಯಕ್ಕೆ ಮುಂಚೆಯೇ ಸೈಕಲು ಮೇಲೆ ಓಡುವುಧು ಅವನಿಗೆ ಬಹಳ ವರ್ಷಗಳ ದಿನಚರಿಯಾಗಿದ್ದದ್ದರಿಂದ ಶ್ರಮ ಸಾಧನೆಗಳಿಲ್ಲದೆಯೇ ಆತನಿಗೆ ನಕ್ಷತ್ರಗಳು ಚೆನ್ನಾಗಿ ಗುರುತಾಗಿದ್ದುವು. ಹೊಸ ನಕ್ಷತ್ರವೆಂದು ಆತನಿಗೆ ತೋರಿದ ಕೂಡಲೆ ಅದರ ಮಹತ್ತ್ವವನ್ನು ಗ್ರಹಿಸಿ ಸಮೀಪದ ಅವೇಕ್ಷಣಾಲಯವೊಂದಕ್ಕೆ ಸಮಾಚಾರ ತಿಳಿಸಿದ್ದರಿಂದ ಆ ನವ್ಯದ ವರ್ಣಪಟಲವನ್ನು ಸಕಾಲಕ್ಕೆ ಹಿಡಿಯುವುದು ಸಾಧ್ಯವಾಯಿತು. ಪ್ರಯತ್ನಪೂರ್ವಕವಾಗಿ ನಕ್ಷತ್ರ ಮಂಡಲವನ್ನು ಹುಡುಕುತ್ತಿದ್ದು ನವ್ಯವನ್ನು ಪತ್ತೆಮಾಡುವುದು ಮಹಾ ಅಸಂಭವ. ಹೀಗಿದ್ದರೂ ಹತ್ತು ವರ್ಷಗಳ ಅನಂತರ ಈತನು ಮತ್ತೊಂದು ನವ್ಯವನ್ನು ಕಂಡು ಹಿಡಿದು ಸಫಲಪ್ರಯತ್ನನಾದದ್ದು ಅತ್ಯಂತಾಶ್ಚರ್ಯದ ಸಂಗತಿಯಲ್ಲವೇ! ಅಕಾಸ್ಮಾ

ತ್ತಾಗಿ ಹೀಗೆ ಪರೀಕ್ಷೆಗೆ ಸಿಕ್ಕಿದ ಕೆಲವು ನವ್ಯಗಳ ವರ್ಣಪಟಲ ವೀಕ್ಷಣೆಗಳಿಂದ ಈ ಅಂಶಗಳು ಹೊರಬಿದ್ದಿವೆ.

ಅಧಿಕತಮ ಕಾಂತಿಯನ್ನು ತಲಪುವ ಮುನ್ನ ನವ್ಯದ ವರ್ಣಪಟಲವು A ಅಥವಾ B ವರ್ಣವರ್ಗವನ್ನು ಹೋಲುತ್ತದೆ; ಅವಿಚ್ಛಿನ್ನ ವರ್ಣರಾಶಿಯ ಹಿನ್ನೆಲೆಯ ಮೇಲೆ ಕೆಲವು ಕೃಷ್ಣರೇಖೆಗಳು ಗೋಚರವಾಗುತ್ತವೆ. ಈ ರೇಖೆಗಳ ನೀಲಿಪಲ್ಲಟವು ಸೆಕಂಡೊಂದಕ್ಕೆ ಒಂದೆರಡು ಸಾವಿರ ಮೈಲಿಗಳ ಭೂ ಅಭಿಮುಖವೇಗವನ್ನು ಸೂಚಿಸುತ್ತದೆ. ಅಧಿಕತಮ ಕಾಂತಿಯಿಂದ ಬೆಳಗಿದ್ದಾದ ಮೇಲೆ ತಾರೆಯ ಬಣ್ಣವು ಬಿಳಿಯಿಂದ ಹಳದಿಗೆ ತಿರುಗಿ ವರ್ಣಪಟಲದಲ್ಲಿ ಕೃಷ್ಣರೇಖೆಗಳ ಬದಲು ಜಲಜನಕ, ಕಬ್ಬಿಣಗಳ ಕಾಂತಿರೇಖೆಗಳು ಹೇರಳವಾಗಿ ಮೂಡಿ ಅವಿಚ್ಛಿನ್ನ ವರ್ಣಗಳ ಹಿನ್ನೆಲೆಯನ್ನು ಅಳಿಸಿಬಿಡುವಂತೆ ತೋರುತ್ತದೆ. ಕೆಲವು ದಿನಗಳ ಅನಂತರ ಪುನಃ ನೀಲಿ ಪಲ್ಲಟದ ಕೃಷ್ಣರೇಖೆಗಳೇ ಹುಟ್ಟುತ್ತವೆ. ಇವೂ ಶಾಶ್ವತವಲ್ಲ. ಶೀಘ್ರದಲ್ಲಿಯೇ ಇವುಗಳ ಸ್ಥಾನದಲ್ಲಿ ಗ್ರಹಸದೃಶ ಜ್ಯೋತಿರ್ಮೇಘ[1]ಗಳ (ಇದೇ ಅಧ್ಯಾಯದ ೧೧ ನೆಯ ಪ್ರಕರಣ ನೋಡಿ) ವರ್ಣಪಟಲವನ್ನು ಹೋಲುವ ಕಾಂತಿರೇಖೆಗಳ ವರ್ಣಪಟಲವು ತೋರಿಬರುತ್ತದೆ. ನವ್ಯದ ಕಾಂತಿಯು ಮತ್ತೂ ಕ್ಷೀಣವಾದಂತೆ ಅದರ ವರ್ಣಪಟಲವೂ ಕ್ರಮವಾಗಿ ರೂಪಾಂತರವಾಗಿ ಹಲವು ವರ್ಷಗಳಲ್ಲಿ ಒಂದು ವಿಚಿತ್ರ ಜಾತಿಯ O ವರ್ಣವರ್ಗದ್ದಾಗಿ ನಿಲ್ಲುತ್ತದೆ. ಈ ಪಟಲದಲ್ಲಿ ಅವಿಚ್ಛಿನ್ನ ವರ್ಣಗಳ ಹಿನ್ನೆಲೆಯ ಮೇಲೆ ಕೃಷ್ಣರೇಖೆಗಳೂ ಕಾಂತಿರೇಖೆಗಳೂ ಎದ್ದು ಕಾಣುತ್ತವೆ.

ಈಗ ನವ್ಯದ ಸ್ವರೂಪವು ಈ ರೀತಿ ಇರಬೇಕೆಂದು ತೀರ್ಮಾನಕ್ಕೆ ಬರಬಹುದು. ಶ್ವೇತವರ್ಣದ ಭಾರಕುಬ್ಜವೊಂದು ಇದ್ದಕ್ಕಿದ್ದಂತೆಯೇ ಅಗಾಧ ರಭಸದಿಂದ ಹಿಗ್ಗಲು ಪ್ರಾರಂಭಿಸುತ್ತದೆ. ಇದನ್ನೇ ವರ್ಣಪಟಲವು ಸೆಕಂಡೊಂದಕ್ಕೆ ಸಾವಿರಾರು ಮೈಲಿಗಳ ಅಭಿಮುಖವೇಗವಾಗಿ ತೋರಿಸುತ್ತದೆ. ಈ ಅಪರಿಮಿತದ ಉಬ್ಬರವೇಗವನ್ನು ತಟ್ಟಿಕೊಳ್ಳಲಾರದೆ ತಾರೆಯು ಅನೇಕ ಕಡೆಗಳಲ್ಲಿ ಬಿರಿಯುತ್ತದೆ. ಈ ಒಡಕುಗಳ ಮೂಲಕ ನಕ್ಷತ್ರದ ಅತ್ಯುಗ್ರ ಉಷ್ಣಾಂಶದ ಅಂತರ್ಭಾಗವು ಬಯಲಾಗಿ ಕಾಂತಿಯು ಹಲವು ಸಹಸ್ರಮಡಿಯಾಗಿ ವೃದ್ಧಿಯಾಗುತ್ತದೆ. ಬಿರುಕುಗಳ ಮೂಲಕ ಉಷ್ಣ ಬೆಳಕುಗಳು ಪ್ರಚಂಡ ಪ್ರಮಾಣದಲ್ಲಿ ಸೋರಿಹೋಗುವುದರಿಂದ ಈಗ ನಕ್ಷತ್ರವು ಆರಲು ಪ್ರಾರಂಭವಾಗುತ್ತದೆ. ನಕ್ಷತ್ರದ ಜೀವಿತಕಾಲವು ಕಡಿಮೆಯೆಂದರೆ ಹಲವು ಸಹಸ್ರಕೋಟಿ ವರ್ಷಗಳು. ಇಂಥ ಬೃಹತ್ಕಾಯವು ಕೆಲವು ಘಂಟೆಗಳೊಳಗಾಗಿ ಉಬ್ಬಿ ಒಡೆದುಹೋಗುವುದೆಂದರೆ ಇದರೊಳಗಡೆ ಎಂಥ ಅದ್ಭುತ ವಿಪ್ಲವವಾಗಿರಬೇಕು,

[1] Planetary nebulae.

ಏನು ಅಲ್ಲೋಲ ಕಲ್ಲೋಲ ಜರುಗಿರಬೇಕು, ಈ ಮಹಾ ಪ್ರಳಯವನ್ನು ಪ್ರಚೋದಿಸಿದ, ಊಹಿಸಲಸದಳವಾದಷ್ಟು ಪ್ರಚಂಡ ಶಕ್ತಿಯ ಉತ್ಪತ್ತಿ ರಹಸ್ಯವೇನು ಎಂಬ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ದೊರಕಿಲ್ಲ. ಇಂಥ ಅಪಘಾತಕ್ಕೆ ಸಿಕ್ಕಿದ ನಕ್ಷತ್ರವು ತಿರುಗಿ ತೆಪ್ಪತ್ತುಕೊಳ್ಳುವುದು ಬಹಳ ಅಪರೂಪ. ಒಂದೆರಡು ನವ್ಯಗಳೇನೋ ಹಲವು ವರ್ಷಗಳು ಕಳೆದ ಮೇಲೆ ಪುನಃಪುನಃ ನವ್ಯಗಳಾಗಿ ತೋರಿಕೊಂಡಿವೆ. ಆದರೆ ಸಾಮಾನ್ಯವಾಗಿ ನಕ್ಷತ್ರದ ಸ್ಫೋಟನೆಗೆ ಮೂಲಕಾರಣವಾದ ವಿಕಾಸವೇಗವು ಸ್ಫೋಟನಾನಂತರ ಹಲವು ವರ್ಷಗಳ ಕಾಲ, ಹಲವು ಶತಮಾನಗಳ ಕಾಲ, ಸಿಡಿದು ಹೋದ ನಕ್ಷತ್ರಸಾಮಗ್ರಿಯನ್ನು ನಿಧಾನವಾಗಿ ಹಿಗ್ಗಿಸುತ್ತ, ಚದರಿಸುತ್ತ ಹೋಗುತ್ತದೆ. ನಕ್ಷತ್ರವು ಚಿಂದಿಚಿಂದಿಯಾಗಿ ಹರಿದುಹೋಗಿ ಧೂಳಾಗಿ ಹೆಚ್ಚುಹೆಚ್ಚು ವಿಶಾಲಪ್ರದೇಶಗಳಿಗೆ ಹರಡುತ್ತದೆ. ನವ್ಯೋತ್ಪಾತದಲ್ಲಿ ನಕ್ಷತ್ರವು ತನ್ನ ಭಾರದ ಸುಮಾರು ಒಂದು ಲಕ್ಷಾಂಶವನ್ನು ಕಳೆದುಕೊಳ್ಳುತ್ತದೆ. ನವ್ಯವು ಹೊಸ ನಕ್ಷತ್ರದ ಜನನದೃಶ್ಯವಲ್ಲ, ಮುದಿ ನಕ್ಷತ್ರದ ಮರಣದೃಶ್ಯ.

೧೦. ಮಹಾನವ್ಯಗಳು[1]

ಬಹಳ ಅಪರೂಪವಾಗಿ ನವ್ಯದ ಸಹಜಕಾಂತಿಯು —೫ ನೆಯ ವರ್ಗಾಂಕವನ್ನು ತಟಾದು —೧೬ ನೆಯ ವರ್ಗಾಂಕದ ವರೆಗೂ ಏರುತ್ತದೆ. ಇದು ಅಗಾಧಕಾಂತಿ. ನೂರುಕೋಟಿ ಸೂರ್ಯರ ಕಾಂತಿಗೆ ಸಮ. ಇಂಥ ಆಕಾಶಕಾಯವು ನಮ್ಮಿಂದ ೧೦ ಪಾರ್ಸೆಕ್ (೩೩ ಜ್ಯೋತಿರ್ವರ್ಷ)ಗಳ ದೂರದಲ್ಲಿದ್ದರೆ ಹತ್ತು ಪೂರ್ಣಚಂದ್ರರ ಬೆಳಕನ್ನು ಬೀರುತ್ತದೆ. ಇಂಥ ನವ್ಯಗಳಿಗೆ ಬೃಹನ್ನವ್ಯ[1] ಅಥವಾ ಮಹಾನವ್ಯಗಳೆಂದು ಹೆಸರು. ನಮ್ಮ ಸ್ಥಳೀಯ ಬ್ರಹ್ಮಾಂಡದಲ್ಲಿ ಸುಮಾರು ೬೦೦ ವರ್ಷಗಳಿಗೊಂದು ಬಾರಿ ಮಹಾನವ್ಯವು ಕಾಣಿಸಿಕೊಳ್ಳುತ್ತದೆ.

ದೂರದರ್ಶಿನಿಯಿಂದ ಅಂತರಿಕ್ಷವನ್ನು ಪರೀಕ್ಷಿಸಿದರೆ ನಕ್ಷತ್ರಗಳು ಕಾಣುವುದೇ ಅಲ್ಲದೆ, ಹಿಂಜಿದ ಹತ್ತಿಯಂತೆ ತೋರುವ ಜ್ಯೋತಿರ್ಮೇಘಗಳೂ ಕಾಣುತ್ತವೆ. ಇವುಗಳಿಗೆ ಸ್ಪಷ್ಟವಾದ ಎಲ್ಲೆ ಇರುವುದು ಗೊತ್ತಾಗುವುದಿಲ್ಲ, ಕೇಂದ್ರವು ಕಾಂತಿಯಿಂದ ಬೆಳಗಿ ಸುತ್ತಲೂ ಕಾಂತಿಯು ಕ್ರಮವಾಗಿ ಇಳಿಯುತ್ತ ಬಂದು ಹೊರಭಾಗವು ಆಕಾಶದೊಂದಿಗೆ ಐಕ್ಯವಾದಂತೆ ತೋರುತ್ತದೆ. ಆದಕಾರಣ ಇವನ್ನು ಶಿಥಿಲ ಜ್ಯೋತಿರ್ಮೇಘ[2]ಗಳೆಂದು ಕರೆಯಬಹುದು. ಇವುಗಳ ಆಕಾರವನ್ನು ನೋಡಿ ಇವುಗಳಲ್ಲಿ ಕೆಲವಕ್ಕೆ ಉಂಗುರದ ಅಥವಾ ಅಂಗುಲೀಯಕ[3] ಜ್ಯೋತಿರ್ಮೇಘ, ಗೂಬೆಯ ಅಥವಾ ಉಲೂಕ,[4] ಕನ್ಯಾವಕುಂಠನದ,[5] ಮೂರು ತುತ್ತಿನ ಅಥವಾ

[1] Super-novae. [2] Diffuse nebulae. [3] Ring. [4] Owl. [5] Bridal veil.

ತ್ರಿವಿಭಕ್ತ,[1] ಸರಿಗೆಯ[2] ಅಥವಾ ಜಾಲಾಂಚನ, ನಳ್ಳಿಯ ಅಥವಾ ಕುಳೀರ[3] ಇತ್ಯಾದಿ ಜ್ಯೋತಿರ್ಮೇಘಗಳೆಂದು ಹೆಸರುಕೊಟ್ಟಿದಾರೆ. ದೂರದರ್ಶಿನಿಯಲ್ಲಿ ಇವುಗಳು ನೋಟಕ್ಕೆ ಬಹು ಸುಂದರ, ಬರಿಯ ಕಣ್ಣಿಗೆ ಅಗೋಚರ. ಇಂಥ ಜ್ಯೋತಿರ್ಮೇಘ ಗಳಲ್ಲಿ ಕಣ್ಣಿಗೆ ಕಾಣುವುದು ವ್ಯಾಧಖಡ್ಗದಲ್ಲಿರುವ ಮೇಘವೊಂದೇ. ಅದೂ ಕೂಡ ಸ್ವಲ್ಪ ಅಸ್ಪಷ್ಟಾಕಾರದ ಸಾಧಾರಣ ತಾರೆಯಂತೆ ಕಾಣುತ್ತದೆ. ಆದರೆ ದೂರ ದರ್ಶಿನಿಯಲ್ಲಿ ಇದರ ದೃಶ್ಯವು ಅಮೋಘವಾದದ್ದು, ಎಂಥವರನ್ನೂ ಸ್ತಂಭೀಭೂತ ರನ್ನಾಗಿ ಮಾಡುವಂಥದು (ಷಷ್ಠಪಟ).

ಕೆಲವು ವರ್ಷಗಳ ಅಂತರದಲ್ಲಿ ತೆಗೆದ ನಳ್ಳಿಯ ಜ್ಯೋತಿರ್ಮೇಘದ ಎರಡು ಛಾಯಾಚಿತ್ರಗಳನ್ನು ಒಂದಕ್ಕೊಂದು ಹೋಲಿಸಿ ೧೯೨೧ ರಲ್ಲಿ ಲಾ'ಂಪ್'ಲಾ'ಂಡನು ಈ ಮೇಘವು ವರ್ಷಕ್ಕೆ ⅕ ಕೋನ ಸೆಕಂಡುಗಳಂತೆ ಹಿಗ್ಗುತ್ತಿದೆ ಎಂದು ತೀರ್ಮಾನಿ ಸಿದನು. ಇದರ ವರ್ಣಪಟಲದ ರೇಖೆಗಳ ಸ್ಥಾನಪಲ್ಲಟದಿಂದಲೂ ಇದರ ಉದ್ದ ಅಗಲಗಳು ಸೆಕಂಡೊಂದಕ್ಕೆ ೧೬೦೦ ಮೈಲಿಗಳಂತೆ ವೃದ್ಧಿಯಾಗುತ್ತಿವೆಯೆಂದು ಕಂಡುಬಂದಿದೆ. ಹಿಂದಿನಿಂದಲೂ ಸರಾಸರಿ ಇದೇ ವೇಗದಲ್ಲಿ ಈ ಜ್ಯೋತಿರ್ಮೇಘವು ಹಿರಿದಾಗುತ್ತ ಬಂದಿದ್ದರೆ ಸುಮಾರು ಕ್ರಿ.ಶ. ೧೦೫೦ ರಲ್ಲಿ ಇದು ಒಂದು ತಾರೆಯಂತೆ ಬಿಂದುವಾಗಿ ತೋರಬೇಕಾಗುತ್ತಿತ್ತು. ಇದೇ ಸ್ಥಾನದಲ್ಲಿ ಕ್ರಿ.ಶ. ೧೦೫೪ ರಲ್ಲಿ ಒಂದು ಮಹಾಪ್ರಕಾಶದ ಹೊಸ ನಕ್ಷತ್ರವು ಹುಟ್ಟಿತೆಂದೂ, ಕೆಲವು ದಿನಗಳು ಅದು ನಡುಹಗಲಿನಲ್ಲಿಯೂ ಗೋಚರಿಸುತ್ತಿದ್ದು ಅನಂತರ ಕಣ್ಮರೆಯಾಯಿತೆಂದೂ, ಚೀಣೀಯರ ಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಪ್ರಾಯಶಃ ಅಂದು ಸಿಡಿದ ನವ್ಯವೇ ಇಂದು ನಮಗೆ ಜ್ಯೋತಿರ್ಮೇಘವಾಗಿ ಕಾಣುತ್ತಿದೆ. ಸುಮಾರು ೯೦೦ ವರ್ಷಗಳ ಹಿಂದೆ ಆ ತಾರೆಯು ತಿಂದ ಪೆಟ್ಟಿನ ಪರಿಣಾಮವು ಇನ್ನೂ ತೀರಿಲ್ಲ, ಅದರ ಕಾರಣವಾಗಿ ಅದು ಈಗಲೂ ಊದುತ್ತಿದೆ. ಹಗಲು ಹೊತ್ತೂ ಕಾಣುತ್ತಿತ್ತೆಂದು ವರ್ಣಿಸಿರುವುದರಿಂದ ನವ್ಯದ ತೋರಿಕೆಯ ಕಾಂತಿಯು —೫ನೆಯ ವರ್ಗಾಂಕ ವಾಗಿರಬೇಕು. ಅದರ ದೂರವು ೪೧೦೦ ಜ್ಯೋತಿರ್ವರ್ಷಗಳಾದ್ದರಿಂದ ಸಹಜಕಾಂತಿ ವರ್ಗಾಂಕವು —೧೫.೫ ಆಗಿದ್ದಿರಬೇಕು. ಅಲ್ಲಿಗೆ ಅದು ಸೊಗಸಾದ ಮಹಾನವ್ಯ ವೆಂದೇ ಹೇಳಬೇಕು. ನಳ್ಳಿಯ ಜ್ಯೋತಿರ್ಮೇಘದ ದೂರವು ೪೧೦೦ ಜ್ಯೋತಿ ರ್ವರ್ಷಗಳೆಂಬುದರ ಅರ್ಥ ಆ ನಕ್ಷತ್ರವು ಸಿಡಿದದ್ದು ನಮಗೆ ಕ್ರಿ.ಶ. ೧೦೫೪ ರಲ್ಲಿ ಕಂಡರೂ ಆಕಾಶದಲ್ಲಿ ಘಟನೆಯು ಅದಕ್ಕೆ ೪೧೦೦ ವರ್ಷಗಳ ಹಿಂದೆ ಅಂದರೆ ಸುಮಾರು ಕ್ರಿ.ಪೂ. ೩೧೦೦ ರಲ್ಲಿ, ನಾವು ಕಲಿಯುಗಾದಿ ಎಂದು ಹೇಳುವ ಕಾಲದಲ್ಲಿ ಆಗಿರಬೇಕು.

[1] Trifid. [2] Lace. [3] Crab.

ಚೀಣೀಯ ಬೃಹನ್ನವ್ಯವಲ್ಲದೆ ನಮ್ಮ ಆಕಾಶಗಂಗೆಯಲ್ಲಿ ೧೫೭೨ ರಲ್ಲಿ ಟೈಖೋ ಬ್ರಾಹೆಯ, ೧೬೦೪ ರಲ್ಲಿ ಕೆಪ್ಲರನ ಬೃಹನ್ನವ್ಯಗಳು ತೋರಿಬಂದಿವೆ. ಕ್ರಿಸ್ತನ ಜನ್ಮಕಾಲದಲ್ಲಿ ಕಂಡ ಬೆತ್ಲೆಹೇಂ ತಾರೆಯೂ ಬೃಹನ್ನವ್ಯವಿದ್ದಿರಬಹುದು. ಬೃಹನ್ನವ್ಯ ಸ್ಫೋಟನೆಗಳಲ್ಲಿ ನಕ್ಷತ್ರದ ಸಾಕಷ್ಟು ಭಾಗ—ಒಂದೆರಡು ಸೂರ್ಯಭಾರಗಳಷ್ಟು—ಸಾಮಗ್ರಿಯು ನಷ್ಟವಾಗುತ್ತದೆ.

ಮೇಲಿನ ಪರಿಶೀಲನೆಗಳಿಂದ ನಕ್ಷತ್ರಕ್ಕೆ ವೃದ್ಧಾಪ್ಯವು ಪ್ರಾಪ್ತವಾದಾಗ, ಅದು ಹಗುರತಾರೆಯಾದರೆ ಶ್ವೇತಕುಬ್ಜವಾಗಿ ಅನಂತರ ಆರಿ ಸಾಯುತ್ತದೆಂದೂ, ಅದು ಭಾರ ತಾರೆಯಾದರೆ ನವ್ಯವಾಗಿಯೋ, ಬಹು ಭಾರ ತಾರೆಯಾದರೆ ಮಹಾನವ್ಯವಾಗಿಯೋ ಸಿಡಿದು ಸತ್ತು ಬೂದಿಯಾಗುತ್ತದೆಂದೂ ಪ್ರಾಯಶಃ ತೀರ್ಮಾನಕ್ಕೆ ಬರಬಹುದು. ಆದರೆ ನಮಗೆ ಕಾಣುವ ಜ್ಯೋತಿರ್ಮೇಘಗಳೆಲ್ಲ ತಾರೆಗಳ ಭಗ್ನಾವಶೇಷಗಳೆಂದು ಹೇಳುವಹಾಗಿಲ್ಲ. ಹಾಗೆ ಹೇಳಲು ಇನ್ನೂ ಸಾಕಾದಷ್ಟು ಸಮರ್ಥನೆ ದೊರಕಿಲ್ಲ. ದೂರದರ್ಶಿನಿಯ ಮತ್ತು ವರ್ಣಪಟಲಗ್ರಾಹಿಯ ಯುಗವು ಮೊನ್ನೆ ತಾನೇ ಆರಂಭವಾಗಿದೆ, ಇವುಗಳ ಸಹಾಯದಿಂದ ಹೇರಳವಾಗಿ ವಿಷಯಸಂಗ್ರಹವಾದಮೇಲೆ ಇಂಥ ತೀರ್ಮಾನಗಳನ್ನು ನಂಬುಗೆಯಿಂದ ಮಾಡಲು ಸಾಧ್ಯವಾದೀತು.

ನಕ್ಷತ್ರಗಳು ದೊಡ್ಡ ದೂರದರ್ಶಿನಿಗಳಿಗೂ ಬಿಂದುಗಳಂತೆ ತೋರಿದರೂ, ಜ್ಯೋತಿರ್ಮೇಘಗಳು ವಿಶಾಲವಾಗಿ ತೋರಿದರೂ, ಈ ಮೇಘಗಳು ನಕ್ಷತ್ರಗಳಿಗಿಂತ ಬಹಳ ಭಾರಕಾಯಗಳೇನೂ ಅಲ್ಲ. ಏಕೆಂದರೆ ಇವುಗಳ ಸಾಂದ್ರತೆ ಅತ್ಯಲ್ಪ, B ವರ್ಗದ ತಾರೆಗಳಿಗಿಂತಲೂ ಬಹಳ ಕಡಿಮೆ. ಕೆಲವು ಜ್ಯೋತಿರ್ಮೇಘಗಳ ವ್ಯಾಸವು ೨೦-೨೫ ಜ್ಯೋತಿರ್ವರ್ಷಗಳಷ್ಟು! ಆದರೆ ಅವುಗಳ ಭಾರ ಸೌರಭಾರದ ೨೦ ರಿಂದ ೧೦೦ ರೊಳಗೇ—ಬೃಹತ್ತಾರೆಗಳ ಭಾರದಷ್ಟು. ಅಲ್ಲಿಗೆ ಅವುಗಳ ಸರಾಸರಿ ಸಾಂದ್ರತೆಯು ನಮ್ಮ ವಾಯುಮಂಡಲದ ಸಾಂದ್ರತೆಯ ಕೋಟ್ಯಂಶದ ಕೋಟ್ಯಂಶ ಮಾತ್ರ. ನಾವು ಅನಿಲರಹಿತ ಅಥವಾ ಶೂನ್ಯಾವರಣ[1]ವೆಂದು ಕರೆಯುವ ಎಕ್ಸ್-ರೇ, ರೇಡಿಯೋ ಕೊಳವಿಗಳಲ್ಲಿ ಅನಿಲಸಾಂದ್ರತೆಯು ಇದಕ್ಕೂ ಸಾವಿರಪಾಲು ಅಧಿಕವಿರುತ್ತದೆ.

೧೧. ಕ್ಷೇಪಕ ತಾರೆಗಳು[2]; ವುಲ್ಫ್-ರಾಯೆಟ್ ತಾರೆಗಳು[3]

ತಾರೆಗಳ ವಿವಿಧ ಭೌತಸ್ಥಿತಿಗಳನ್ನು ಉದಹರಿಸಿರುವ ನಮ್ಮ ಪಟ್ಟಿಯಲ್ಲಿ O ವರ್ಣವರ್ಗಕ್ಕೆ ನಾವು ಯಾವ ತಾರೆಯನ್ನೂ ಮಾದರಿಯಾಗಿ ಆರಿಸಿಲ್ಲದಿರುವು

[1] Vacuum. [2] Erupting Stars. [3] Wolf-Rayet Stars.

ದನ್ನು ಪಾಠಕರು ಗಮನಿಸಿರಬೇಕು. O ವರ್ಗದ ವರ್ಣಪಟಲವನ್ನೇನೋ ಸಂಕ್ಷೇಪವಾಗಿ ವರ್ಣಿಸಿದ್ದಾಗಿದೆ. ಕೆಂಪು ಬೃಹತ್ತಾರೆಗಳ ವರ್ಣಪಟಲವು ಸ್ಫುಟವಾದ ಸೂಕ್ಷ್ಮ ಕೃಷ್ಣರೇಖೆಗಳಿಂದ ದಟ್ಟವಾಗಿ ತುಂಬಿರುತ್ತದೆ; ಅದಕ್ಕೆ ಪ್ರತಿಯಾಗಿ ಡಾಪ್ಲರ್ ಪರಿಣಾಮದಿಂದ ಅಗಲವಾದ, ಅಸ್ಪಷ್ಟವಾದ ಅಂಚುಗಳ, ಕೆಲವೇ ಕಾಂತಿರೇಖೆಗಳ ವರ್ಣಪಟಲವು O ವರ್ಗಗಳದ್ದು. ಈ ರೇಖೆಗಳ ಅಗಲದಿಂದ ಇಂಥ ತಾರೆಗಳು ವಿವಿಧ ವೇಗಗಳ ಅನಿಲರಾಶಿಗಳನ್ನು ಸತತವಾಗಿ ಚಿಮ್ಮಿ ಉಗುಳುತ್ತಿವೆಯೆಂದೂ, ಇವು ಕೃಷ್ಣರೇಖೆಗಳ ಬದಲು ಕಾಂತಿರೇಖೆಗಳಾಗಿರುವುದರಿಂದ ಈ ತಾರೆಗಳನ್ನು ಆವರಿಸಿರುವ ವಾತಾವರಣವು ಜ್ಯೋತಿರ್ಮಯವಾಗಿ ಬಹುದೂರ ವ್ಯಾಪಿಸಿರಬೇಕೆಂದೂ ಅನುಮಾನಿಸಲಾಗಿದೆ. ತಾರೆಯಿಂದ ಹೊರಟ ನೀಲಾತೀತ ಕಿರಣಗಳಿಂದ ಸ್ಫುರಣ[1]ಗೊಂಡೇ ತಾರೆಯನ್ನಾವರಿಸಿರುವ ಮೋಡವು ಬೆಳಗುತ್ತಿದೆ. ಇವುಗಳ ಸ್ವಭಾವವನ್ನು ವುಲ್ಫ್ ಮತ್ತು ರಾಯೆಟ್ ಎಂಬವರು ಮೊದಲು ಪ್ರಚುರಪಡಿಸಿದ್ದರಿಂದ O ವರ್ಗಕ್ಕೆ ಸೇರಿರುವ ಈ ನಕ್ಷತ್ರಗಳಿಗೆ ವುಲ್ಫ್-ರಾಯೆಟ್ ತಾರೆಗಳೆಂದು ಹೆಸರುಬಂದಿದೆ. ಇವುಗಳ ಹೊರಮೈ ಉಷ್ಣಾಂಶವು ಅಗಾಧವಾದದ್ದು— ೩೦,೦೦೦-೪೦,೦೦೦ ಡಿಗ್ರಿಗಳು. ಒಂದು ಲಕ್ಷ ಡಿಗ್ರಿಗಳ ವುಲ್ಫ್-ರಾಯೆಟ್ ತಾರೆಗಳೂ ಕೆಲವು ಸಿಕ್ಕಿವೆ.

ಕ್ಷೇಪಕ ತಾರೆಗಳು ಹೀಗೆ ಸತತವಾಗಿ ವಾತಾವರಣವನ್ನು ಉಗುಳುತ್ತಿರುವುದರ ಪರಿಣಾಮವಾಗಿ ಅಂಗುಲೀಯಕ ಜ್ಯೋತಿರ್ಮೇಘದಂಥ ಗ್ರಹಸದೃಶ ಜ್ಯೋತಿರ್ಮೇಘಗಳು ನಿರ್ಮಾಣವಾಗಿರಬೇಕು. ಇಂಥ ಜ್ಯೋತಿರ್ಮೇಘಗಳು ಸುಮಾರು ೧೫೦ ಪತ್ತೆಯಾಗಿವೆ. ಸಣ್ಣ ದೂರದರ್ಶಿನಿಗಳಿಗೆ ಇವು ಗ್ರಹಗಳಂತೆ ಬಿಲ್ಲೆಯ ಆಕಾರವನ್ನು ತೋರುವುದರಿಂದ ಇವಕ್ಕೆ ಗೃಹಸದೃಶ ಜ್ಯೋತಿರ್ಮೇಘಗಳೆಂದು ಹೆಸರು ಬಂದಿದೆಯೇ ಹೊರತು ಈ ನಕ್ಷತ್ರಗಳಿಗೆ ಯಾವ ಗ್ರಹಪರಿವಾರವೂ ಇಲ್ಲ, ಗ್ರಹಸಂಬಂಧವೂ ಇಲ್ಲ. ವಿಶಾಲವಾದ ಜ್ಯೋತಿರ್ಮಯ ಮೇಘಗಳಿಂದ ಆಚ್ಛಾದಿತವಾಗದಿರುವ ಕೆಲವು ವುಲ್ಫ್-ರಾಯೆಟ್ ತಾರೆಗಳೂ ಇವೆ, ಕೇಂದ್ರತಾರೆಯನ್ನು ತೋರದಿರುವ ಕೆಲವು ಗ್ರಹಸದೃಶ ಜ್ಯೋತಿರ್ಮೇಘಗಳೂ ಇವೆಯೆಂಬುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕು. ಪ್ರಧಾನಶ್ರೇಣಿಯ ಇದೇ ಉಷ್ಣಾಂಶದ ತಾರೆಗಳಿಗೆ ಹೋಲಿಸಿದರೆ ಈ ತಾರೆಗಳ ವ್ಯಾಸ ಕಿರಿದು. O ವರ್ಗದ ತಾರೆಗಳು ಪ್ರಾಯಶಃ ಪೂರ್ವನವ್ಯಗಳು[2] ಅಥವಾ ಉತ್ತರನವ್ಯಗಳು[3] ಎಂದು ಹೇಳಬಹುದು.

[1] Fluorescence. [2] Pre-novae. [3] Post-novae.

೧೨. ನಕ್ಷತ್ರಗಳ ಚಂಚಲತ್ವದ ಹಲವು ಬಗೆಗಳು

ಚಂಚಲತಾರೆಗಳ ಆವರ್ತಕಾಲವು ಕೆಲವು ಘಂಟೆಗಳಿಂದ ಒಂದೆರಡು ವರ್ಷಗಳ ವರೆಗೆ ವ್ಯಾಪಿಸಿದ್ದರೂ ಈ ಪರಿಮಿತಿಯಲ್ಲಿ ನಿರ್ದಿಷ್ಟವಾದ ಮೂರು ಆವರ್ತಕಾಲಗಳೊಳಗೆ ಅನೇಕ ಚಂಚಲತಾರೆಗಳು ಸೇರಿಹೋಗುತ್ತವೆ. ಈ ದೃಷ್ಟಿಯಿಂದ ಚಂಚಲತಾರೆಗಳನ್ನು ಸ್ಥೂಲವಾಗಿ ಕೆಳಗೆ ಕಂಡಂತೆ ವಿಂಗಡಿಸಬಹುದು.

(ಅ) ಕ್ಷಿಪ್ರಾವರ್ತ ಚಂಚಲಗಳು: ಈ ಗುಂಪಿನ ನಕ್ಷತ್ರಗಳಲ್ಲಿ ಅನೇಕ ನಕ್ಷತ್ರಗಳ ಆವರ್ತಕಾಲ ಸುಮಾರು ಅರ್ಧ ದಿನವಾದರೂ ಮೂರು ನಾಲ್ಕು ಘಂಟೆಗಳಿಂದ ಒಂದೆರಡು ದಿನಗಳ ವರೆಗಿನ ಆವರ್ತಕಾಲಗಳ ಚಂಚಲತಾರೆಗಳನ್ನೆಲ್ಲ ಇಲ್ಲಿಗೇ ಸೇರಿಸಬಹುದು. ಇವು A ವರ್ಣವರ್ಗದ ಬಿಳಿನೀಲಿ ತಾರೆಗಳು. ಇವುಗಳ ಭಾರ ಕಡಿಮೆ. ಇವು ಸಾಮಾನ್ಯವಾಗಿ ಗೋಳಾಕಾರದ ತಾರಾಗುಚ್ಛಗಳಲ್ಲಿರುವುದರಿಂದ ಇವಕ್ಕೆ ಗುಚ್ಛಚಂಚಲಗಳೆಂಬ[1] ಹೆಸರೂ ಇದೆ. ಈ ನಕ್ಷತ್ರಗಳು ಅತ್ಯಧಿಕ ಯಥಾರ್ಥ ವೇಗಗಳುಳ್ಳವು. ಇವುಗಳ ಬೀಜಕ್ರಿಯೆ ಇಂಗಾಲ-ಸಾರಜನಕ ಕ್ರಿಯಾಚಕ್ರವಲ್ಲ. ೧೦ ನೆಯ ಭಾರಾಂಕದ ಬೋರಾನ್ ಬೀಜವು ಜಲಜನಕದ ಬೀಜದೊಂದಿಗೆ ಸೇರಿ ೧೧ ನೆಯ ಭಾರಾಂಕದ ಇಂಗಾಲವಾಗಿ ಪರಿವರ್ತನೆಯಾಗುವುದು ಈ ಚಂಚಲಗಳ ಔಷ್ಣಿಕ ಬೀಜಕ್ರಿಯೆಯೆಂದು ನಂಬಲಾಗಿದೆ.

(ಆ) ಯೌಧಿಷ್ಠಿರ ಚಂಚಲಗಳು: ಇವುಗಳಲ್ಲಿ ಬಹುಸಂಖ್ಯಾಕಗಳ ಆವರ್ತಕಾಲವು ಏಳೆಂಟು ದಿನಗಳು. ಒಂದೆರಡು ದಿನಗಳಿಂದ ಐವತ್ತು ದಿನಗಳ ವರೆಗಿನ ಆವರ್ತಕಾಲಗಳ ಚಂಚಲಗಳೆಲ್ಲ ಯೌಧಿಷ್ಠಿರ ಚಂಚಲಗಳೆಂದು ಹೇಳಬಹುದು. ಇವು ಸಾಮಾನ್ಯವಾಗಿ F ಮತ್ತು G ವರ್ಗದ ಭಾರ ಪೀತತಾರೆಗಳು. ಇವುಗಳ ವೇಗ ಮಂದ. ಬೆರಿಲಿಯಂ ಮತ್ತು ಜಲಜನಕಗಳು ಸೇರಿ ಲಿಥಿಯಂ ಮತ್ತು ಹೀಲಿಯಂಗಳಾಗುವ, ಹಾಗೂ ೧೧ ನೆಯ ಭಾರಾಂಕದ ಬೋರಾನ್ ಜಲಜನಕದೊಂದಿಗೆ ಕೂಡಿಕೊಂಡು ಮೂರು ಹೀಲಿಯಂ ಬೀಜಗಳಾಗುವ ಬೀಜಕ್ರಿಯೆಗಳು ಈ ಚಂಚಲತಾರೆಗಳಿಗೆ ಶಕ್ತಿಯನ್ನು ಒದಗಿಸುತ್ತಿವೆಯೆಂದು ನಂಬಲಾಗಿದೆ.

(ಇ) ದೀರ್ಘಾವರ್ತ ಚಂಚಲಗಳು: ಈ ಗುಂಪಿನ ತಾರೆಗಳ ಆವರ್ತಕಾಲಗಳ ಪರಿಮಿತಿ ಐವತ್ತು ದಿನಗಳಿಂದ ಒಂದೆರಡು ವರ್ಷಗಳ ವರೆಗೆ ಇದ್ದರೂ ೩೦೦ ದಿನಗಳವೇ ಹೆಚ್ಚು ಸಂಖ್ಯೆಗಳಲ್ಲಿವೆ. ಇವೆಲ್ಲ ರಕ್ತಬೃಹತ್ತಾರೆಗಳು. ಇವುಗಳ ಆವರ್ತಕಾಲಗಳು ಮೇಲಿನ ಎರಡು ಗುಂಪುಗಳ ಆವರ್ತಕಾಲಗಳಷ್ಟು ನಿಷ್ಕೃಷ್ಟ ಪುನರಾವರ್ತಕಗಳಲ್ಲ. ಒಂದು ಆವರ್ತದ ಅಧಿಕತಮ ಕನಿಷ್ಠತಮ ಕಾಂತಿಗಳಿಗೂ ಮತ್ತೊಂದು

[1] Cluster variables.

ಆವರ್ತದ ಅಧಿಕತಮ ಕನಿಷ್ಠತಮ ಕಾಂತಿಗಳಿಗೂ ಸ್ವಲ್ಪ ವ್ಯತ್ಯಾಸವಿರುವುದೂ ಉಂಟು. 'ಕೌತುಕದ' ತಾರೆಯೆಂದು ಖ್ಯಾತಿಗಳಿಸಿರುವ ಮೀರಾ ತಾರೆಯು ಈ ಗುಂಪಿಗೆ ಸೇರಿದ್ದು. ಎರಡು ಸಾಮಾನ್ಯ ಜಲಜನಕಗಳು ಸೇರಿ ಒಂದು ಭಾರ ಜಲ ಜನಕವಾಗುವುದು ಅಥವಾ ಆರು ಮತ್ತು ಏಳು ಭಾರಾಂಕಗಳ ಲಿಥಿಯಂಗಳು ಜಲ ಜನಕಗಳೊಂದಿಗೆ ಸಂಯೋಜಿಸಿ ಹೀಲಿಯಂಗಳಾಗುವುದು ಈ ಚಂಚಲಗಳ ಬೀಜ ಕ್ರಿಯೆಗಳು.

(ಈ) ಅನಿಯತ ಚಂಚಲಗಳು[1] : ಮೇಲಿನ ಮೂರು ಗುಂಪುಗಳಲ್ಲಿ ಯಾವುದಕ್ಕೂ ಸೇರದ ಚಂಚಲತಾರೆಗಳು ಹಲವಿವೆ. ರಾಜಹಂಸ ರಾಶಿಯ 'S S' ಎಂಬ ತಾರೆಯನ್ನು ಇವಕ್ಕೊಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇದು ಒಂದೆರಡು ತಿಂಗಳ ಕಾಲ ಕ್ಷೀಣಕಾಂತಿಯಿಂದಿದ್ದು ಇದ್ದಕ್ಕಿದ್ದಂತೆಯೇ ನೂರ್ಮಡಿಯಾಗಿ ಅಧಿಕ ಕಾಂತಿಯಿಂದ ಬೆಳಗಿ ಅನಂತರ ನಿಧಾನವಾಗಿ ಆರಿಹೋಗುತ್ತದೆ. ತಿರುಗಿ ತಿರುಗಿ ಹೀಗೆಯೇ ಅಧಿಕ ಕಾಂತಿಯಿಂದ ಸಿಡಿದರೂ ಇದರ ಆವರ್ತಕಾಲ ಅಷ್ಟು ನಿರ್ದಿಷ್ಟ ವಲ್ಲ. ಕೆಲವು ನವ್ಯಗಳು ಪುನಃಪುನಃ ಹೀಗೆ ಸಿಡಿಯುತ್ತವೆಂದು ಅರಿತಿದ್ದೇವೆ. ಆದ್ದರಿಂದ ಇಂಥ ತಾರೆಗಳನ್ನು 'ಸೌಮ್ಯ ನವ್ಯ'[2]ಗಳೆಂದು ಕರೆದರೆ ತಪ್ಪೇನೂ ಅಲ್ಲ.

ಉತ್ತರ ಕಿರೀಟರಾಶಿಯಲ್ಲಿ 'R' ಎಂಬೊಂದು ನಕ್ಷತ್ರವಿದೆ. ಇದು ಹಲವು ವರ್ಷಗಳು ನಿಶ್ಚಲವಾಗಿ ಹೊಳೆಯುತ್ತಿದ್ದು ಇದ್ದಕ್ಕಿದ್ದಂತೆಯೇ ಒಂದೆರಡು ವಾರ ಗಳಲ್ಲಿ ಹಲವು ನೂರ್ಮಡಿ ಕಾಂತಿಹೀನವಾಗುತ್ತದೆ. ಅನೇಕ ತಿಂಗಳುಗಳ ಅನಂತರ ಮೊದಲ ಕಾಂತಿಗೇ ಏರುತ್ತದೆ. ಅನೇಕ ವರ್ಷಗಳು ಕಳೆದ ಮೇಲೆ ಇದೇ ಜಾಡ್ಯ ಈ ನಕ್ಷತ್ರಕ್ಕೆ ಇನ್ನೂ ಹೆಚ್ಚು ತೀವ್ರವಾಗಿಯೋ ಅಥವಾ ಸೌಮ್ಯವಾಗಿಯೋ ಕಾಣಿಸಿಕೊಳ್ಳಬಹುದು. ಇಂಥ ನಕ್ಷತ್ರಗಳನ್ನು 'ವಿಪರ್ಯಯ ನವ್ಯ'[3]ಗಳೆಂದು ಕರೆಯ ಬಹುದು.

ಹೀಗೆ ನಕ್ಷತ್ರಗಳ ಕಾಂತಿಗಳು ಬಗೆಬಗೆಯಾಗಿ ಏರಿ ಇಳಿಯಲು ಉಷ್ಣಾಂಶ ಗಳು ಹೆಚ್ಚುಕಡಿಮೆಯಾಗುವುದೊಂದೇ ಕಾರಣವಲ್ಲ. ನಕ್ಷತ್ರಗಳ ಸಂಕೋಚ ವ್ಯಾಕೋಚಗಳಿಂದಾದ ಮೇಲ್ಮೈಯ ವಿಸ್ತೀರ್ಣದ ವೃದ್ಧಿಕ್ಷಯಗಳೂ ಒಂದು ಕಾರಣ, ನಕ್ಷತ್ರಗಳಿಂದ ಎಸೆಯಲ್ಪಟ್ಟ ಜ್ಯೋತಿರ್ಮಯ ಅಥವಾ ಕೃಷ್ಣ ಅನಿಲಾ ವರಣಗಳು ಮತ್ತೊಂದು ಕಾರಣ. ನಕ್ಷತ್ರದ ಚಂಚಲತ್ವವನ್ನು ಸಮರ್ಪಕವಾಗಿ ತಿಳಿಯಹೇಳುವ ವಾದವು ಇವೆಲ್ಲ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

---

[1] Irregular variables. [2] Mild novae.
[3] Inverse novae.

೧೩. ಚಂಚಲತ್ವವು ಕೆಲವೇ ತಾರೆಗಳ ವಿಶೇಷ ಗುಣವೇ?

ಸ್ಥೂಲದೃಷ್ಟಿಗೆ ನಮ್ಮ ಸೂರ್ಯನು ಏರಿಳಿತಗಳಿಲ್ಲದೆ ಏಕರೀತಿಯಲ್ಲಿ ಪ್ರಕಾಶಿಸುತ್ತಿರುವ ನಿಶ್ಚಂಚಲತಾರೆಯಂತೆ ಕಾಣುತ್ತಾನೆ. ಆದರೆ ಸೌರಭೌತಾವೇಕ್ಷಣ ಶಾಲೆಗಳ[1] ವೀಕ್ಷಕರನ್ನು ಕೇಳಿದರೆ ನಮಗೆ ಬರುವ ಉತ್ತರವೇ ಬೇರೆ. ಸೂರ್ಯನ ಕಾಂತಿಗೆ ವೃದ್ಧಿಕ್ಷಯಗಳಿವೆ, ಕಾಂತಿಯ ಆವರ್ತಕಾಲ ಸುಮಾರು ಹನ್ನೊಂದು ವರ್ಷಗಳೆಂದು ಅವರು ಹೇಳುತ್ತಾರೆ. ಆದರೆ ಕಾಂತಿಯು ಹೆಚ್ಚುಕಡಿಮೆಯಾಗುವ ಪ್ರಮಾಣ ಅತ್ಯಲ್ಪ—ಶೇಕಡ ಒಂದೆರಡರಷ್ಟು. ಈ ಕಾಂತಿವ್ಯತ್ಯಾಸವು ನಮ್ಮ ಭೂಮಿಯ ವಾಯುಮಂಡಲವನ್ನು ತೂರಿಬರುವ ಬೆಳಕಿನ ಕಾಂತಿವ್ಯತ್ಯಾಸ. ನಮ್ಮ ವಾಯುಮಂಡಲವು ನೀಲಾತೀತ ಬೆಳಕನ್ನು ಸಂಪೂರ್ಣವಾಗಿ ಹೀರಿಬಿಡುತ್ತದೆಂದು ಹೇಳಬಹುದು. ವಾಯುಮಂಡಲದ ಹೊರಗಡೆ ನೀಲಾತೀತ ಬೆಳಕಿನ ತೀಕ್ಷ್ಣತೆಯು ಶೇಕಡ ೧೦೦ ರಷ್ಟು (ಇಮ್ಮಡಿಯಾಗಿ) ಹೆಚ್ಚುಕಡಿಮೆಯಾಗಬಹುದೆಂದು ಅನುಮಾನಿಸಲಾಗಿದೆ. ಆಗಾಗ್ಯೆ ಸೂರ್ಯನು ತನ್ನ ಹೊರಮೈಯಿಂದ ಅಗ್ನಿಜ್ವಾಲೆಗಳನ್ನು ಸೆಕಂಡಿಗೆ ೩೦೦-೪೦೦ ಮೈಲಿಗಳ ವೇಗದಲ್ಲಿ ಲಕ್ಷಾಂತರ ಮೈಲಿಗಳ ದೂರ ಎರಚುವಂತೆ ಉಗುಳುತ್ತಾನೆ. ಇಂಥ ಸೌರೋದ್ರೇಕ[2]ಗಳಲ್ಲಿ ಹಲವು ಭೂಮಿಗಳ ಭಾರದಷ್ಟು ಸಾಮಗ್ರಿಯು ಚಲ್ಲಾಪಿಲ್ಲಿಯಾಗಿ ಚದರಿಹೋಗುತ್ತದೆ. ಇದನ್ನು ನಾವು ವುಲ್ಫ್-ರಾಯೆಟ್ ಜಾತಿಯ ಕ್ಷೇಪಕತಾರೆಗಳ ನಡತೆಯೊಂದಿಗೆ ಹೋಲಿಸಬಹುದು. ಉತ್ಪಾತದ ಪ್ರಮಾಣವು ಸ್ವಲ್ಪ ಕಡಿಮೆ ಅಷ್ಟೇ, ರೀತಿಯೇನೋ ಒಂದೇ. ಇಷ್ಟಾದರೂ ದೂರದಿಂದ ಅಂದರೆ ಇತರ ನಕ್ಷತ್ರಲೋಕಗಳಿಂದ ನೋಡುವವರಿಗೆ ನಮ್ಮ ಸೂರ್ಯನು ಶಾಂತಚಿತ್ತನಾಗಿ ಸ್ಥಿರಕಾಂತಿಯಿಂದ ಹೊಳೆಯುತ್ತಿರುವ ನಕ್ಷತ್ರವಾಗಿ ಕಾಣುತ್ತಾನೆ. ಇದೇ ರೀತಿಯಲ್ಲಿಯೇ ನಮಗೆ ನಿಶ್ಚಂಚಲವಾಗಿ ತೋರಿಬರುವ ನಕ್ಷತ್ರಗಳಲ್ಲಿಯೂ ಸ್ವಲ್ಪಮಟ್ಟಿಗೆ ಚಂಚಲತ್ವವು ಇರಬಹುದು. ಇದು ಬಿರುಸಾದರೆ ಚಂಚಲತಾರೆಗಳು, ಅನಿಯತ ಚಂಚಲಗಳು, ಕ್ಷೇಪಕತಾರೆಗಳು, ನವ್ಯಗಳು, ಬೃಹನ್ನವ್ಯಗಳು ಮುಂತಾಗಿ ಪರಿಣಮಿಸುತ್ತವೆ. ಚಂಚಲತ್ವವನ್ನು ನಕ್ಷತ್ರಲೋಕಗಳ ವ್ಯಾಧಿವಿಶೇಷವೆಂದು ಕರೆಯಬಹುದು. ನಮ್ಮಲ್ಲಿ ಹೇಗೆ ಜೀವಾವಧಿ ಸಂಪೂರ್ಣ ಆರೋಗ್ಯವಂತರು ದೊರಕಲಾರರೋ ಹಾಗೆಯೇ ನಕ್ಷತ್ರಗಳಲ್ಲಿ ನಿಶ್ಚಂಚಲತಾರೆಗಳು ಇಲ್ಲವಾದೀತು.


---

[1] Solar Physics Observatories.

[2] Solar flare.

೧೪. ನಕ್ಷತ್ರಗಳ ಜೀವನಯಾತ್ರೆ

ಇಷ್ಟೆಲ್ಲ ನೋಡಿದಮೇಲೆ ೫ ನೆಯ ಪ್ರಕರಣದಲ್ಲಿ ನಾವು ವಿವರಿಸಿದ ನಕ್ಷತ್ರಗಳ ಜೀವನದ ಸರಳ ಚಿತ್ರವು ಸಮರ್ಪಕವಲ್ಲವೆನ್ನುವುದು ಸ್ವತಃಸಿದ್ಧ. ನಮಗೆ ತಿಳಿದಿರುವ ಮಟ್ಟಿಗೆ ಎಲ್ಲ ನಕ್ಷತ್ರಗಳ ಸ್ಥಾನವನ್ನು ಸೂಚಿಸಿರುವ ಪರಿಷ್ಕೃತ ರಸ್ಸೆಲ್-ಹರ್ಟ್ಸ್‌ಸ್ಪ್ರಂಗ್ ರೇಖಾಚಿತ್ರವನ್ನು (ಚಿತ್ರ ೧೬) ಕೆಳಗೆ ಕೊಟ್ಟಿದೆ. ಚಿತ್ರದಲ್ಲಿ ರೂಪಿಸಿರುವ ರೇಖಾಸಮೂಹಗಳ ವಿಸ್ತೀರ್ಣ ಹೆಚ್ಚಿದ್ದರೆ ಆ ಕಾಂತಿ-ವರ್ಣವರ್ಗಗಳ ನಕ್ಷತ್ರಗಳ ಸಂಖ್ಯೆ ಹೆಚ್ಚೆಂದು ತಿಳಿಯಬಾರದು; ರೇಖೆಗಳು ದಟ್ಟವಾದಷ್ಟು ನಕ್ಷತ್ರಗಳ ಸಂಖ್ಯೆ ಹೆಚ್ಚು, ರೇಖೆಗಳು ದೂರದೂರವಾಗಿದ್ದರೆ ರೇಖಾಪ್ರದೇಶವು ವಿಶಾಲವಾಗಿದ್ದರೂ ಆ ಜಾತಿಯ ನಕ್ಷತ್ರಗಳ ಸಂಖ್ಯೆ ಕಡಿಮೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.



ಚಿತ್ರ ೧೬. ಪರಿಷ್ಕೃತ ವರ್ಣ—ಕಾಂತಿ ರೇಖಾಚಿತ್ರ

"ರಿವ್ಯೂ ಆಫ್ ಮಾಡರ್ನ್ ಫಿಸಿಕ್ಸ್"ನ ಏಪ್ರಿಲ್ ೧೯೫೦ ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಟೆರ್‌ಹಾರ್‌ರವರ ಲೇಖನದ ೩ ನೆಯ ಚಿತ್ರದ ಆಧಾರದಮೇಲೆ ಈ ಚಿತ್ರ ರಚಿತವಾಗಿದೆ. ಸೂರ್ಯನ ಭಾರದ ಒಂದು ತಾರೆಯ ಮತ್ತು ನಾಲ್ಕೈದು ಸೌರಭಾರಗಳಷ್ಟರ ಮತ್ತೊಂದು ತಾರೆಯ ಜೀವನಗಳ ವಿಕಾಸಪಥಗಳು ಪ್ರಾಯಶಃ ಈ ಚಿತ್ರದ ಛದ್ರರೇಖೆಗಳಿಗನುಸಾರವಾಗಿ ಇರಬಹುದು.

ರೇಖಾಚಿತ್ರದಲ್ಲಿ ಏಳು ಪ್ರತ್ಯೇಕಪ್ರದೇಶಗಳಿವೆ. ಮೊದಲನೆಯ ಪ್ರದೇಶವು ಪ್ರಧಾನಶ್ರೇಣಿಯ ತಾರೆಗಳನ್ನು ಸೂಚಿಸುತ್ತದೆ. ಈಗಾಗಲೇ ತಿಳಿಸಿರುವಂತೆ ೧೦೦ ಕ್ಕೆ ೯೫ ನಕ್ಷತ್ರಗಳು ಈ ಶ್ರೇಣಿಗೆ ಸೇರುತ್ತವೆ. ಎರಡನೆಯ ಪ್ರದೇಶವು ಉಪಕುಬ್ಜಗಳದು[1]. ಅದೇ ವರ್ಣವರ್ಗದ ಪ್ರಧಾನಶ್ರೇಣಿಯ ನಕ್ಷತ್ರಗಳಿಗಿಂತ ಇವುಗಳ ಕಾಂತಿ ಸ್ವಲ್ಪ ಕಡಿಮೆ, ಅಂದರೆ ಗಾತ್ರ ಸ್ವಲ್ಪ ಕಿರಿದು. ೧೦೦ ಕ್ಕೊಂದು ನಕ್ಷತ್ರ ಈ ಪಂಗಡಕ್ಕೆ ಬೀಳುತ್ತದೆ. ಉಪಕುಬ್ಜಗಳೆಲ್ಲ ಅಧಿಕ ಸಹಜವೇಗದ ತಾರೆಗಳು. ಮೂರನೆಯ ಪ್ರದೇಶವು ಶ್ವೇತಕುಬ್ಜಗಳದು. ಇವು ೧೦೦ ಕ್ಕೆ ೩ ರಂತೆ ಇವೆ. ನಾಲ್ಕನೆಯ ಪ್ರದೇಶವೇ ಬೃಹಚ್ಛಾಖೆ. ಈ ಶಾಖೆಯ ಅರ್ಧಭಾಗದ ತಾರೆಗಳು—ಪ್ರಧಾನ ಶ್ರೇಣಿಗೆ ಸಮೀಪದ ಅರ್ಧಭಾಗ—ಉಪಬೃಹತ್ತಾರೆಗಳು[2], ಇನ್ನರ್ಧಭಾಗದ ತಾರೆಗಳು ಬೃಹತ್ತಾರೆಗಳು. ಇವೆರಡೂ ಸೇರಿ ಬೃಹಚ್ಛಾಖೆಯ ನಕ್ಷತ್ರಗಳು ೧೦೦ ಕ್ಕೊಂದೇ ಆಗುತ್ತವೆ. ಐದನೆಯ ಪ್ರದೇಶದಲ್ಲಿ ಚಂಚಲತಾರೆಗಳ ಮೂರು ಸ್ಥೂಲ ಉಪಜಾತಿಗಳಾದ ಕ್ಷಿಪ್ರಾವರ್ತ, ಯೌಧಿಷ್ಠಿರ ಮತ್ತು ದೀರ್ಘಾವರ್ತ ಚಂಚಲಗಳ ಸ್ಥಾನಗಳನ್ನು ಗುರುತಿಸಿದೆ. ಇವೂ ಸಾಮಾನ್ಯವಾಗಿ ಅಧಿಕವೇಗದ ತಾರೆಗಳು. ಬೃಹಚ್ಛಾಖೆ ಮತ್ತು ಚಂಚಲಶಾಖೆಗಳ ಮೇಲ್ಭಾಗವು ನಕ್ಷತ್ರಗಳಲ್ಲೆಲ್ಲ ಅತ್ಯಂತ ಅಲ್ಪಪ್ರಮಾಣಸಂಖ್ಯೆಯ ಮಹಾಬೃಹತ್ತಾರೆಗಳ ಪ್ರದೇಶ. ಏಳನೆಯ ಪ್ರದೇಶವು ಪೂರ್ವ ಮತ್ತು ಉತ್ತರ ನವ್ಯಗಳದು. O ವರ್ಣವರ್ಗಕ್ಕೆ ಸೇರಿದ ಕ್ಷೇಪಕತಾರೆಗಳೂ ಇಲ್ಲಿಯೇ ಇವೆ. ಐದು, ಆರು ಮತ್ತು ಏಳನೆಯ ಪ್ರದೇಶದ ನಕ್ಷತ್ರಗಳೆಲ್ಲ ಸೇರಿ ಒಟ್ಟು ನಕ್ಷತ್ರಗಳ ಶೇಕಡ ೧/೧೦೦ ಕ್ಕೆ ಕಡಿಮೆ ಇವೆ.

ನಕ್ಷತ್ರಗಳ ಜೀವನಯಾತ್ರೆಯು ಯಾವ ಯಾವ ಮಾರ್ಗಗಳಲ್ಲಿ ಸಾಗುತ್ತಿರಬಹುದೆಂಬುದನ್ನು ವಿಚಾರಿಸಲಿರುವ ನಾವು ಈಗಾಗಲೇ ತಿಳಿದುಕೊಂಡಿರುವ ಮತ್ತೊಂದೆರಡು ವಿಷಯಗಳನ್ನು ನೆನಪಿಗೆ ತಂದುಕೊಳ್ಳಬೇಕು. ನಕ್ಷತ್ರದಲ್ಲಿ ಬೀಜಕ್ರಿಯೆಗಳು ನಡೆಯುತ್ತಿದ್ದಷ್ಟು ಕಾಲ ನಕ್ಷತ್ರವು ಪ್ರಶಾಂತವಾಗಿ ಬೆಳೆಯುತ್ತಿದ್ದು, ಏನಾದರೂ ಕಾರಣದಿಂದ ಕ್ರಿಯಾವ್ಯಾಪಾರವು ನಿಂತರೆ ಗುರುತ್ವಾಕರ್ಷಣಕ್ಕೆ ಅದು ವಶವಾಗಿ ಕುಗ್ಗುತ್ತದೆ. ಪ್ರಧಾನಶ್ರೇಣಿಯ ತಾರೆಗಳ ಭಾರಗಳು ಕಾಂತಿ—ಭಾರ ನಿಯಮವನ್ನು ಪಾಲಿಸುತ್ತವೆ, ಅಂದರೆ ಶ್ರೇಣಿಯಲ್ಲಿನ ಕೆಂಪುತಾರೆಗಳಿಂದ ನೀಲಿ ತಾರೆಗಳ ವರೆಗೆ ಭಾರವು ಕ್ರಮವಾಗಿ ಹೆಚ್ಚುತ್ತ ಹೋಗುತ್ತದೆ. ಅಲ್ಲಿಗೆ ಯಾವ ಒಂದು ತಾರೆಯೂ ಪ್ರಧಾನ ಶ್ರೇಣಿಯ ಎಲ್ಲ ವರ್ಣವರ್ಗಗಳ ಹಾದಿಯನ್ನೂ ಕಾಲ ಕ್ರಮದಲ್ಲಿ ತುಳಿಯುವುದು ಸಾಧ್ಯವಲ್ಲವೆಂದಾಯಿತು. ಇಂಗಾಲ-ಸಾರಜನಕ ಕ್ರಿಯಾ

[1] Sub-dwarfs. [2] Sub-giants.

ಚಕ್ರವು ಉರುಳುತ್ತಿರುವಷ್ಟು ಕಾಲ ನಕ್ಷತ್ರದಲ್ಲಿ ಜಲಜನಕದ ಪ್ರಮಾಣ ಇಳಿಯು ತ್ತಿರುತ್ತದೆ, ಹಾಗೂ ಉಷ್ಣಾಂಶ, ಕಾಂತಿಗಳು ವೃದ್ಧಿಯಾಗುತ್ತಿರುತ್ತವೆ. ಈ ಅವಧಿ ಯಲ್ಲಿ ಕಾಂತಿಯು ಸುಮಾರು ನೂರ್ಮಡಿ ಅಥವಾ ಐದು ವರ್ಗಾಂಕಗಳಷ್ಟು ಏರು ತ್ತದೆ. ಅಂದಮೇಲೆ ಒಂದು ನಕ್ಷತ್ರವು ಹೆಚ್ಚೆಂದರೆ ಪ್ರಧಾನಶ್ರೇಣಿಯ ನಾಲ್ಕರ ಲ್ಲೊಂದುಭಾಗದ ದಾರಿಯನ್ನು ಮೆಟ್ಟೀತು. ನಕ್ಷತ್ರದ ಭಾರವು ಹೆಚ್ಚಾದರೆ ಪ್ರಧಾನಶ್ರೇಣಿಯ ಮೇಲ್ಭಾಗಗಳೂ, ಕಡಮೆಯಾದರೆ ಕೆಳಭಾಗಗಳೂ ಅದರ ಪಾಲಿಗೆ ಬೀಳುತ್ತವೆ. ಆದರೆ ಪ್ರಧಾನಶ್ರೇಣಿಯ ಮಾರ್ಗದಲ್ಲಿ ನಕ್ಷತ್ರದ ಜೀವ ನದ ಬಹುಭಾಗ ಕಳೆಯಬೇಕಾಗಿರುವುದರಿಂದ ನೂರರಲ್ಲಿ ತೊಂಬತ್ತೈದು ನಕ್ಷತ್ರಗಳು ನಮಗೆ ಆ ಅವಸ್ಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಈಗ ಸೂರ್ಯನ ಭಾರದ ತಾರೆಯೊಂದರ ಬೆಳವಣಿಗೆ ಹೇಗಿದ್ದೀತೆಂದು ನೋಡೋಣ. ಇಂಥ ತಾರೆಯು K ವರ್ಗದ ಕಿತ್ತಳೆ ಬಣ್ಣದ ಸ್ಥಿತಿಯಿಂದ ಆರಂಭ ವಾಗಿ ಜಲಜನಕವನ್ನು ಬಳಸಿಕೊಂಡಂತೆ G ಮತ್ತು F ವರ್ಗಗಳ ಕಾಂತಿಗೇರು ತ್ತದೆ. ಅಷ್ಟುಹೊತ್ತಿಗೆ ಅದರ ಉಗ್ರಾಣದ ಜಲಜನಕವೆಲ್ಲ ಮುಗಿದಿರುತ್ತದೆ. ಆಗ ಪ್ರಧಾನಶ್ರೇಣಿಯನ್ನು ಬಿಟ್ಟು ಕುಗ್ಗಲು ಪ್ರಾರಂಭಿಸುತ್ತದೆ. ಉಷ್ಣಾಂಶವು ಹೆಚ್ಚಿ ನಕ್ಷತ್ರವು ಬಿಳಿಯಬಣ್ಣಕ್ಕೆ ತಿರುಗಿ ಶ್ವೇತಕುಬ್ಜವಾಗಿ ಹಲವು ಕೋಟಿ ವರ್ಷಗಳು ಬಾಳಿ ಅನಂತರ ಆರಿ ಕೃಷ್ಣತಾರೆಯಾಗಿ ತನ್ನ ಜನ್ಮವನ್ನು ಮುಗಿಸುತ್ತದೆ. ರೇಖಾ ಚಿತ್ರದಲ್ಲಿ ಇದರ ಸಂಭವಪಥವನ್ನು ಗುರುತಿಸಿದೆ.

ಇನ್ನು ತಾರೆಯ ಭಾರವು ನಾಲ್ಕೈದು ಸೌರಭಾರಗಳಾಗಿದ್ದರೆ ಅದು ರಕ್ತ ಬೃಹತ್ತಾರೆಯಾಗಿ ಪ್ರಾರಂಭವಾಗುತ್ತದೆ. ಆದಿಯಲ್ಲಿ ತಾರೆಯ ಕೇಂದ್ರಭಾಗದ ಉಷ್ಣಾಂಶವೂ ಕಡಿಮೆಯಿತ್ತೆಂದು ಇಟ್ಟುಕೊಂಡರೆ ಅದರ ಬೀಜಕ್ರಿಯೆಗೆ ಲಿಥಿಯಂ, ಬೆರಿಲಿಯಂ ಇತ್ಯಾದಿ ಬೀಜಗಳು ಸಾಮಗ್ರಿಯಾಗುತ್ತವೆ. ಇವುಗಳ ಶೇಖರಣೆಯು ಇಂಗಿದಂತೆ ಬೀಜಕ್ರಿಯಾವ್ಯಾಪಾರವು ಕಡಿಮೆಯಾಗಿ ಗುರುತ್ವಾಕರ್ಷಣದಿಂದ ತಾರೆಯು ಸಂಕೋಚವಾಗುತ್ತದೆ. ಸಂಕೋಚದ ಫಲವಾಗಿ ಉಷ್ಣಾಂಶವು ಹೆಚ್ಚಿ ಇಂಗಾಲ-ಸಾರಜನಕ ಕ್ರಿಯಾಚಕ್ರವು ನಡೆಯಲು ಸಾಧ್ಯವಾಗುತ್ತದೆ. ಬೀಜ ಕ್ರಿಯೆಯು ಲಿಥಿಯಂ, ಬೆರಿಲಿಯಂ, ಬೋರಾನ್‌ಗಳಿಂದ ಇಂಗಾಲ-ಸಾರಜನಕ ಚಕ್ರಕ್ಕೆ ಹಾರುವ ಸಂಧಿಸನ್ನಿವೇಶದಲ್ಲಿ ತಾರೆಯು ಚಂಚಲತಾರೆಯಾಗಿ ಕಾಲ ನೂಕಬೇಕಾಗುತ್ತದೆ. ಯಾವ ಉಪಜಾತಿಯ ಚಂಚಲತಾರೆಯೆಂಬುದನ್ನು ಅದರ ಭಾರವು ನಿರ್ಧರಿಸುತ್ತದೆ. ಹೊಸ ಸನ್ನಿವೇಶಕ್ಕೆ ನಕ್ಷತ್ರದ ಜೀವನವು ಒಗ್ಗಿದಾಗ ಅದು ಪ್ರಧಾನಶ್ರೇಣಿಯ F ಅಥವಾ A ವರ್ಗದಲ್ಲಿ ಕಾಲಿಟ್ಟಿರುತ್ತದೆ. ಈ ಶ್ರೇಣಿ

ಯಲ್ಲಿ B ವರ್ಗಕ್ಕೆ ತಿರುಗುವ ಹೊತ್ತಿಗೆ ಜಲಜನಕ ವ್ಯಯವಾಗಿರುತ್ತಾದಕಾರಣ ನಕ್ಷತ್ರವು ಶ್ರೇಣಿಯನ್ನು ಬಿಟ್ಟು ನೀಲಿತಾರೆಯಾಗಿ ಕುಸಿಯಲು ಪ್ರಾರಂಭಿಸುತ್ತದೆ. ಇದರ ಭಾರವು ಸಂಧಿಭಾರಕ್ಕಿಂತ ಹೆಚ್ಚಾಗಿರುವುದರಿಂದ ನವ್ಯವಾಗಿ ಸಿಡಿದು ಹೆಚ್ಚಾದ ಭಾರವನ್ನು ಉಗುಳಿ ಶ್ವೇತಕುಬ್ಜವಾಗಿ ವೃದ್ಧಾಪ್ಯಕ್ಕಿಳಿಯುತ್ತದೆ. ನಕ್ಷತ್ರಗಳ ವಾತಾವರಣದಲ್ಲಿ ಜಲಜನಕ, ಹೀಲಿಯಂ, ಇಂಗಾಲ, ಸಾರಜನಕ ಇತ್ಯಾದಿ ಧಾತುಗಳ ಪ್ರಮಾಣವು ಒಂದು ನಿಯಮಕ್ಕನುಸಾರವಾಗಿ ಕ್ರಮವಾಗಿ ಕಡಿಮೆಯಾಗಿದೆಯೆಂದು ಕಂಡುಬಂದಿದೆ. ಆದರೆ ಬೆರಿಲಿಯಂ, ಲಿಥಿಯಂ, ಬೋರಾನ್‌ಗಳು ಈ ನಿಯಮಕ್ರಮಕ್ಕಿಂತ ಬಹಳ ಕಡಿಮೆಯ ಪ್ರಮಾಣದಲ್ಲಿವೆ. ನಕ್ಷತ್ರಗಳ ಜೀವನದ ಆದಿಭಾಗದಲ್ಲಿ ಈ ಧಾತುಗಳು ಉಪಯೋಗವಾಗಿ ಹೋಗಿವೆಯೆಂಬ ವಾದವನ್ನು ಇದು ಸಮರ್ಥಿಸುತ್ತದೆ. ರೇಖಾಚಿತ್ರದಲ್ಲಿ ಒಂದು ಭಾರತಾರೆಯ ಜೀವನಪಥವನ್ನೂ ಗುರುತಿಸಿದೆ.

೧೫. ರೇಡಿಯೋ ನಕ್ಷತ್ರಗಳು

ಶ್ವೇತಕುಬ್ಜಾವಸ್ಥೆಯ ಅವಸಾನಕಾಲಾನಂತರದಲ್ಲಿ ತಾರೆಯು ಕೃಷ್ಣತಾರೆಯಾಗಿ ಕಣ್ಣಿಗೆ ಕಾಣದಂತಾಗಿ ಹೋಗಬೇಕಷ್ಟೆ. ಈ ಕೃಷ್ಣಾವಸ್ಥೆಯಲ್ಲಿರುವ ತಾರೆಗಳು ನಮ್ಮ ಗಮನಕ್ಕೆ ಬರುವಂತೆಯೇ ಇಲ್ಲವಾದ್ದರಿಂದ ಈ ಅವಸ್ಥೆಗೆ ಪ್ರಾಯೋಗಿಕ ಸಮರ್ಥನೆ ದೊರಕುವ ಸಂಭವವಿರುವಂತೆ ತೋರುವುದಿಲ್ಲ. ಆದರೆ ಪರಿಸ್ಥಿತಿ ಅಷ್ಟೊಂದು ನಿರಾಶಾದಾಯಕವಾಗಿಲ್ಲ. ನಕ್ಷತ್ರಗಳ ಭೌತಸ್ಥಿತಿಗಳನ್ನು ಅವು ನೀಲಿಬಣ್ಣದಿಂದ ಕೆಂಪುಬಣ್ಣದ ವರೆಗಿನ ಬಣ್ಣಗಳಲ್ಲಿ ಕಳುಹಿಸುವ ವಿದ್ಯುತ್ಕಾಂತ ವಿಸರಣ[1]ಶಕ್ತಿಯನ್ನು ಅಳೆದು ನಿರ್ಣಯಿಸಿದ್ದೇವೆಯಾದರೂ, ಈ ಪರಿಮಿತಿಗಳಾಚೆಯ ಬಣ್ಣಗಳಲ್ಲಿಯೂ ಅವು ಶಕ್ತಿಯನ್ನು ಪ್ರಸರಿಸುತ್ತಿವೆ. ಈ ನೀಲಾತೀತ ಮತ್ತು ರಕ್ತಾತೀತ ವಿಸರಣಗಳು ನಮ್ಮ ಕಣ್ಣಿಗೆ ಕಾಣದಿರುವ ಕಾರಣದಿಂದ ಮಾತ್ರವಲ್ಲ ನಾವು ಆ ವರ್ಣಗಳ ಶಕ್ತಿಗಳನ್ನು ಸಂಶೋಧನೆಗೀಡುಮಾಡದಿರುವುದು. ಏಕೆಂದರೆ ನಮ್ಮ ಕಣ್ಣಿಗೆ ನೇರವಾಗಿ ಕಾಣದಿದ್ದರೂ ಯಂತ್ರೋಪಕರಣಗಳಿಂದಲಾದರೂ ಅನ್ವೇಷಣೆ ಮಾಡಬಹುದಾಗಿತ್ತು. ಹಾಗೆ ಮಾಡದಿರಲಿಕ್ಕೆ ನಮ್ಮ ಭೂಮಿಯ ವಾತಾವರಣವೇ ಕಾರಣ. ವಿಶ್ವದಲ್ಲಿ ವ್ಯಾಪಿಸಿರುವ ಅಗಾಧ ಪರಿಮಿತಿಯ ಆವೃತ್ತಿಸಂಖ್ಯೆಗಳ[2] ವಿದ್ಯುತ್ಕಾಂತ ವಿಸರಣಗಳ ಪೈಕಿ ಸುಮಾರು ಅರ್ಧ ಕೋಟಿಕೋಟಿಯಿಂದ ಮುವ್ವತ್ತು ಕೋಟಿಕೋಟಿ ಆವೃತ್ತಿಸಂಖ್ಯೆಗಳೊಳಗಣ ವಿಸರಣಗಳನ್ನು

[1] Electro-magnetic radiation. [2] Frequencies.

(ನೀಲಿಯಿಂದ ಕೆಂಪಿನ ವರೆಗಿನ ಬಣ್ಣಗಳ ಬೆಳಕುಇದರೊಳಗೆ ಸೇರಿದೆ) ಮತ್ತು ಮೂರು ಕೋಟಿಯಿಂದ ಮುವ್ವತ್ತು ಕೋಟಿಗಳ ವರೆಗಿನ ಆವೃತ್ತಿಸಂಖ್ಯೆಗಳ ರೇಡಿಯೋ ಅಲೆಗಳನ್ನು ಮಾತ್ರ ನಮ್ಮ ವಾಯುಮಂಡಲವು ಭೂಮಿಯನ್ನು ಸೇರುವಂತೆ ಬಿಡುತ್ತದೆ. ಉಳಿದೆಲ್ಲ ವಿಸರಣಗಳನ್ನು ಅದು ಹೀರಿಬಿಡುತ್ತದೆ, ಇಲ್ಲ ಹೊರಕ್ಕೆ ಪ್ರತಿಫಲಿಸಿ ತಳ್ಳಿಬಿಡುತ್ತದೆ. ಭೂನಿವಾಸಿಗಳ ಚಟುವಟಿಕೆಗಳನ್ನು ಹದ್ದಿನಲ್ಲಿಡಲು ಮತ್ತು ಅವರನ್ನು ರಕ್ಷಿಸಲು ರಚಿತವಾಗಿರುವ ಛಾವಣಿಗೆ ನಮ್ಮ ವಾಯುಮಂಡಲವನ್ನು ಹೋಲಿಸಬಹುದು. ಈ ಛಾವಣಿಯಲ್ಲಿ ಎರಡು ಸಣ್ಣ ಬಿರುಕುಗಳಿವೆ. ಒಂದರ ಮೂಲಕ ಬರುತ್ತಿರುವ ಬೆಳಕಂತೂ ನಮಗೆಲ್ಲರಿಗೂ ಪರಿಚಿತವೇ. ಇನ್ನೊಂದು ಬಿರುಕು ಇದೆ ಎಂಬ ವಿಷಯ ಕೂಡ ನಮಗೆ ಐದಾರು ವರ್ಷಗಳಿಗೆ ಹಿಂದೆ ತಿಳಿದಿರಲಿಲ್ಲ.

ಮೂರರಿಂದ ಮುವ್ವತ್ತು ಕೋಟಿಗಳ ಆವೃತ್ತಿಸಂಖ್ಯೆಗಳ ಅಥವಾ ಹತ್ತು ಮೀಟರ್‌ಗಳಿಂದ ಒಂದು ಮೀಟರ್ ವರೆಗಿನ ತರಂಗದೂರಗಳ[1] ರೇಡಿಯೋ ಅಲೆಗಳನ್ನು ಪತ್ತೆಹಚ್ಚತಕ್ಕ ರೇಡಿಯೋ ಗ್ರಾಹಕಗಳ[2] ಸಹಾಯದಿಂದ ಹಲವು ವಿಜ್ಞಾನಿಗಳು ಇತ್ತೀಚೆಗೆ ಆಕಾಶದ ದಿಕ್ಕುದಿಕ್ಕುಗಳನ್ನು ಶೋಧಿಸುತ್ತಿದ್ದಾರೆ. ಇದರ ಫಲವಾಗಿ ಅನೇಕ ನಕ್ಷತ್ರಗಳು ಬೆಳಕಿನ ಜೊತೆಗೆ ಈ ತರಂಗದೂರಗಳ ಅಲೆಗಳನ್ನೂ ಪ್ರಸರಿಸುತ್ತಿರುವುದು ಗೊತ್ತಾಗಿದೆ. ಕೆಲವು ಅತಿ ಕ್ಷೀಣಕಾಂತಿಯ ನಕ್ಷತ್ರಗಳು ಇಂಥ ರೇಡಿಯೋ ಅಲೆಗಳನ್ನು ಪ್ರಬಲವಾಗಿಯೇ ಕಳುಹಿಸುತ್ತಿರುವುದೂ ಉಂಟು. ಎಂಥ ಪ್ರಬಲ ದೂರದರ್ಶಿನಿಗೂ ಯಾವ ಆಕಾಶಕಾಯವೂ ಕಾಣದಿರುವ ದಿಕ್ಕುಗಳಿಂದ ಕೂಡ ಅಲೆಗಳು ಬರುತ್ತಿರುವುದನ್ನು ಈ ರೇಡಿಯೋ ದೂರದರ್ಶಿನಿಗಳು[3] ಪತ್ತೆಹಚ್ಚಿವೆ. ಖಗೋಳದ ಈ ಪ್ರದೇಶಗಳಲ್ಲಿ ಪ್ರಾಯಶಃ ಕೃಷ್ಣತಾರೆಗಳಿರಬೇಕೆಂದು ಅನುಮಾನಿಸಲಾಗಿದೆ. ಇವಕ್ಕೆ ರೇಡಿಯೋ ನಕ್ಷತ್ರಗಳೆಂದು ಹೆಸರಿಟ್ಟಿದ್ದಾರೆ. ರೇಡಿಯೋ ನಕ್ಷತ್ರಗಳಲ್ಲಿ[4] ಕೆಲವು ಶ್ವೇತಕುಬ್ಜಾವಸ್ಥೆಯಿಂದ ಕೃಷ್ಣಕುಬ್ಜಾವಸ್ಥೆಗಿಳಿದಿರುವ ನಕ್ಷತ್ರಗಳಿದ್ದರೂ ಇರಬಹುದು. ರೇಡಿಯೋ ದೂರದರ್ಶಿನಿಯು ರೇಡಿಯೋ ಖಗೋಳವಿಜ್ಞಾನ[5]ವೆಂಬ ಒಂದು ಹೊಸ ವಿಜ್ಞಾನಭಾಗವನ್ನೇ ಸೃಷ್ಟಿಸಿದೆ. ಇನ್ನೂ ಶೈಶವಾವಸ್ಥೆಯಲ್ಲಿರುವ ಈ ವಿಜ್ಞಾನಭಾಗದ ನೆರವಿನಿಂದ ಖಚಿತವಾದ ಅಭಿಪ್ರಾಯಗಳನ್ನು ಮಂಡಿಸುವುದು ಈಗ ಸಾಧುವಲ್ಲವಾದರೂ ಕೃಷ್ಣಕುಬ್ಜಗಳ ಸಮಸ್ಯೆಗೆ ಮತ್ತು ಇತರ ಕೆಲವು ಖಗೋಳ ವೈಜ್ಞಾನಿಕ ಸಮಸ್ಯೆಗಳಿಗೆ ಉತ್ತರಗಳನ್ನು ಶೀಘ್ರದಲ್ಲಿಯೇ ನಾವು ಈ ಹೊಸ ವಿಜ್ಞಾನಭಾಗದಿಂದ ನಿರೀಕ್ಷಿಸಬಹುದು.

---

[1] Wave lengths. [2] Radio receivers. [3] Radio telescopes.
[4] Radio stars. [5] Radio astronomy.

ಇನ್ನು ನಕ್ಷತ್ರದ ಭಾರವು ನಾಲ್ಕೈದು ಸೌರಭಾರಗಳಿಗಿಂತಲೂ ಹೆಚ್ಚಾಗಿದ್ದು ನಿರ್ದಿಷ್ಟವಾದ ಒಂದು ಪರಿಮಿತಿಯೊಳಗಿದ್ದರೆ ಅದರ ಕೇಂದ್ರದಲ್ಲಿ ಪ್ರೋಟಾನ್‌ಗಳು ನ್ಯೂಟ್ರಾನ್‌ಗಳಾಗಿ ಪರಿವರ್ತನೆಹೊಂದುತ್ತವೆ. ಇದರ ಪರಿಣಾಮವಾಗಿ ಒತ್ತಡ ಕಡಿಮೆಯಾಗಿ ನಕ್ಷತ್ರವು ಬೃಹನ್ನವ್ಯವಾಗಿ ಸಿಡಿಯಬಹುದೆಂದು ಹಲವು ಖಗೋಳಜ್ಞರು ತೋರಿಸಿದ್ದಾರೆ. ಅಳತೆಗೆ ಸಿಕ್ಕಿರುವ ಬೃಹನ್ನವ್ಯಗಳ ಭಾರಗಳು ಈ ಪರಿಮಿತಿಯೊಳಗೇ ಇವೆ. ಆದರೆ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಇದ್ದುದರಲ್ಲಿ ಪ್ರಶಾಂತವಾಗಿ ಹಲವು ಲಕ್ಷ ಅಥವಾ ಕೋಟಿ ವರ್ಷಗಳ ಕಾಲ ತೆಗೆದುಕೊಂಡು ಬೆಳೆದು ಬಾಳುವ ನಕ್ಷತ್ರಕ್ಕೆ ಹಠಾತ್ತಾಗಿ ಕೆಲವು ಘಂಟೆ ಅಥವಾ ದಿನಗಳಷ್ಟು ಅಲ್ಪಕಾಲದಲ್ಲಿ ಸಿಡಿದು ಬೂದಿಯಾಗುವ ಪರಿಸ್ಥಿತಿ ಹೇಗೆ ಒದಗುತ್ತದೆಂಬುದನ್ನು ಸಮರ್ಪಕವಾಗಿ ವಿವರಿಸಲು ಇದುವರೆಗೆ ಸಾಧ್ಯವಾಗಿಲ್ಲ. ಸಂಧಿಭಾರಕ್ಕಿಂತ ಅಧಿಕ ಭಾರದ ಎಲ್ಲ ನಕ್ಷತ್ರಗಳಿಗೂ ಅಂತ್ಯಾವಸ್ಥೆಯಲ್ಲಿ ನವ್ಯೋತ್ಪಾತ ಅಥವಾ ಮಹಾ ನವ್ಯೋತ್ಪಾತವು ಅನಿವಾರ್ಯವೇ ಎಂಬ ಪ್ರಶ್ನೆಗೂ ಕಂಠೋಕ್ತವಾಗಿ ಉತ್ತರ ಹೇಳುವಂತಿಲ್ಲ.

ಮತ್ತೊಂದು ಪ್ರಶ್ನೆಯೂ ಉಳಿದಿದೆ. ನಕ್ಷತ್ರವು M ವರ್ಣವರ್ಗದ ಅವಸ್ಥೆಗಿಂತ ಮುಂಚೆ ಯಾವ ರೂಪದಲ್ಲಿರುತ್ತದೆ ಎಂಬುದು. ಇದು ಧಾತುಗಳ ಸೃಷ್ಟಿ ಮತ್ತು ನೀಹಾರಕಗಳ ಅಥವಾ ಬ್ರಹ್ಮಾಂಡಗಳ ಸೃಷ್ಟಿಗೆ ಸಂಬಂಧಿಸಿದ್ದು. ಆದ್ದರಿಂದ ಇನ್ನೆರಡು ಅಧ್ಯಾಯಗಳಾದಮೇಲೆ ಈ ಪ್ರಶ್ನೆಯನ್ನು ಎತ್ತಿಕೊಳ್ಳುತ್ತೇವೆ.

೭. ಸ್ಥಳೀಯ ಬ್ರಹ್ಮಾಂಡದ ರಚನೆ

೧. ಸೂರ್ಯಮಾರ್ಗ[1]

ಕೆಲವು ನಕ್ಷತ್ರಗಳಿಗೆ ಹೆಚ್ಚು, ಕೆಲವಕ್ಕೆ ಕಡಿಮೆ ಅಂತೂ ಎಲ್ಲ ನಕ್ಷತ್ರಗಳಿಗೂ ಯಥಾರ್ಥ ಚಲನೆ ಮತ್ತು ದೃಷ್ಟಿಪಥ ಚಲನೆಗಳು ಇವೆ ಎಂದು ಅರಿತಿದ್ದೇವೆ. ಆದರೆ ಈ ಚಲನೆಗಳನ್ನು ನಾವು ಭೂಮಿಗೆ ಅಥವಾ ಸೌರವ್ಯೂಹಕ್ಕೆ ಸಾಪೇಕ್ಷವಾಗಿ ಮಾತ್ರ ನಿರ್ಣಯಿಸಬಲ್ಲೆವು. ನಕ್ಷತ್ರಗಳೆಲ್ಲಕ್ಕೂ ಇರುವಂತೆ ಸೂರ್ಯನಿಗೂ ಚಲನೆ ಇರಲೇಬೇಕಲ್ಲವೆ? ಅದನ್ನು ಕಂಡುಹಿಡಿಯುವುದು ಹೇಗೆ? ಇತರ ನಕ್ಷತ್ರಗಳ ಚಲನೆಯನ್ನು ನಾವು ಸೂರ್ಯನಿಗೆ ಸಾಪೇಕ್ಷವಾಗಿ ಅಳೆಯುತ್ತೇವಾದ್ದರಿಂದ ಈ ಸೂರ್ಯಚಲನೆಯನ್ನು ಕಂಡುಹಿಡಿದರೇ ನಮಗೆ ನಕ್ಷತ್ರಗಳ ಸಹಜವಾದ ಚಲನೆಗಳು ಲೆಕ್ಕಕ್ಕೆ ಸಿಗುತ್ತವೆ.

[1] Sun's way.

ಒಂದು ದೊಡ್ಡ ತೋಪಿನೊಳಗೆ ಸೇರಿಕೊಂಡು ನಾವು ಯಾವುದಾದರೂ ದಿಕ್ಕಿನಲ್ಲಿ ವೇಗವಾಗಿ ಓಡುತ್ತಿದ್ದರೆ, ಆ ದಿಕ್ಕಿನಲ್ಲಿರುವ ಮರಗಳು ದೂರಸರಿದು ವಿರಳವಾಗುತ್ತಿರುವಂತೆಯೂ, ಹಿಂಬದಿಯ ಮರಗಳು ಒತ್ತಾಗಿ ಕೂಡಿಕೊಳ್ಳುತ್ತಿರುವಂತೆಯೂ, ಅಕ್ಕಪಕ್ಕದ ಮರಗಳು ನಾವು ಓಡುತ್ತಿರುವ ದಿಕ್ಕಿಗೆ ವಿರೋಧವಾಗಿ ಚಲಿಸುತ್ತಿರುವಂತೆಯೂ ನಮಗೆ ತೋರುತ್ತದೆ. ಇದೇ ರೀತಿಯಲ್ಲಿಯೇ ನಕ್ಷತ್ರಗಳ ಯಥಾರ್ಥ ಚಲನೆಗಳ ಸಂಶೋಧನೆಯಿಂದ ಆಕಾಶದ ಒಂದು ಭಾಗದಲ್ಲಿರುವ ನಕ್ಷತ್ರಗಳು ಸಾಮಾನ್ಯವಾಗಿ ಪರಸ್ಪರ ದೂರ ಚಲಿಸುತ್ತಿರುವಂತೆಯೂ, ಸರಿಯಾಗಿ ಅದರ ಎದುರುಭಾಗದಲ್ಲಿ ಹತ್ತಿರ ಹತ್ತಿರ ಸೇರುತ್ತಿರುವಂತೆಯೂ, ಮಧ್ಯಭಾಗದಲ್ಲಿ ನಮ್ಮನ್ನು ದಾಟಿಕೊಂಡು ಹರಿದುಹೋಗುತ್ತಿರುವಂತೆಯೂ ಕಾಣುತ್ತವೆ. ಆದಕಾರಣ ನಕ್ಷತ್ರಗಳು ದೂರಸರಿಯುತ್ತಿರುವಂತೆ ತೋರುವ ದಿಕ್ಕಿನಲ್ಲಿ ನಮ್ಮ ಸೂರ್ಯನು ಧಾವಿಸುತ್ತಿರಬೇಕು. ಹೀಗೆ ಐದಾರು ಸಾವಿರ ನಕ್ಷತ್ರಗಳ ಯಥಾರ್ಥ ಚಲನೆಗಳನ್ನು ಎಚ್ಚರಿಕೆಯಿಂದ ವಿಭಜಿಸಿ ಸೂರ್ಯನು ಉತ್ತರದಿಕ್ಕಿನಲ್ಲಿರುವ ಅಭಿಜಿತ್ ನಕ್ಷತ್ರಾಭಿಮುಖವಾಗಿ ಓಡುತ್ತಿದ್ದಾನೆಂದು ನಿರ್ಧರಿಸಿದ್ದಾರೆ.

ಯಥಾರ್ಥ ಚಲನೆಗಳ ವಿಭಜನೆಯನ್ನು ಮಾಡಿದಂತೆಯೇ ದೃಷ್ಟಿಪಥವೇಗಗಳ ವಿಭಜನೆಯಿಂದಲೂ ಸೂರ್ಯಮಾರ್ಗದ ದಿಕ್ಕನ್ನು ಪತ್ತೆಹಚ್ಚಬಹುದು. ಸೂರ್ಯನು ಯಾವ ದಿಙ್ಮುಖವಾಗಿ ಚಲಿಸುತ್ತಿದಾನೆಯೋ ಆ ದಿಕ್ಕಿನ ನಕ್ಷತ್ರಗಳು ನಮ್ಮ ಕಡೆಗೇ ಬರುತ್ತಿರುವಂತೆಯೂ, ಎದುರುದಿಕ್ಕಿನ ನಕ್ಷತ್ರಗಳು ನಮಗೆ ವಿಮುಖವಾಗಿ ಓಡುತ್ತಿರುವಂತೆಯೂ ಮಧ್ಯಭಾಗದ ನಕ್ಷತ್ರಗಳು ಸಾಮಾನ್ಯವಾಗಿ ಅಭಿಮುಖ, ವಿಮುಖ ವೇಗರಹಿತಗಳಾಗಿಯೂ ತೋರಬೇಕು. ಈ ವಿಧಾನದಿಂದಲೂ ಸೂರ್ಯನು ಅಭಿಜಿತ್ ನಕ್ಷತ್ರದ ದಿಕ್ಕಿನಲ್ಲಿಯೇ ಚಲಿಸುತ್ತಿರುವಂತೆ ಕಾಣುತ್ತಾನೆ. ಆಕಾಶದಲ್ಲಿ ಸೂರ್ಯನು ಅನುಸರಿಸುತ್ತಿರುವ ಹಾದಿಗೆ ಸೂರ್ಯಮಾರ್ಗ[1]ವೆಂದೂ, ಸೂರ್ಯಮಾರ್ಗದ ಅಭಿಮುಖದಿಕ್ಕಿಗೆ ಸೂರ್ಯಮಾರ್ಗ ಶಿಖರ[2]ವೆಂದೂ ಹೆಸರುಗಳಿವೆ. ಸೂರ್ಯಮಾರ್ಗ ಶಿಖರವು ಅಭಿಜಿತ್ ತಾರೆಗೆ ನೈಋತ್ಯದಲ್ಲಿ ಸುಮಾರು ೫ ಡಿಗ್ರಿಗಳ ಅಂತರದಲ್ಲಿದೆ. ಈ ಶಿಖರದೆಡೆಗೆ ಸೂರ್ಯನು ಸೆಕಂಡೊಂದಕ್ಕೆ ೧೨ ಮೈಲಿಗಳ ವೇಗದಲ್ಲಿ ಓಡುತ್ತಿದಾನೆ.

೨. ನಕ್ಷತ್ರಗಳ ಎಣಿಕೆ

ಬರಿಯ ಕಣ್ಣಿಗೆ ನಮಗೆ ಕಾಣಬಹುದಾದ ಒಟ್ಟು ನಕ್ಷತ್ರಗಳ ಸಂಖ್ಯೆ ೪೮೦೦ ನ್ನು ಮೀರಲಾರದೆಂದು ನಮಗೆ ತಿಳಿದಿದೆ. ದೂರದರ್ಶಿನಿಯಿಂದ ನೋಡಿದರೆ ಈ ಸಂಖ್ಯೆ ಅದ್ಭುತವಾಗುತ್ತದೆ. ದೂರದರ್ಶಿನಿಯ ಸಾಮರ್ಥ್ಯ ಹೆಚ್ಚಿದಂತೆಲ್ಲ

[1] Sun's way. [2] Apex of Sun's way.

ಹೆಚ್ಚು ಹೆಚ್ಚು ಸಂಖ್ಯೆಯ ನಕ್ಷತ್ರಗಳು ಆಕಾಶದ ಅಗಾಧ ಅಂತರಾಳದಿಂದ ಕೊನೆಯಿಲ್ಲದೆ ಎದ್ದುಬರುವಂತೆ ತೋರುತ್ತವೆ. ಈಗ ನಕ್ಷತ್ರಗಳನ್ನೆಣಿಸುವುದು ನಿಜವಾಗಿಯೂ ನಮ್ಮ ಕೈಮೀರಿದ್ದೆನ್ನಿಸುತ್ತದೆ. ಆದರೂ ಕಾಂತಿವರ್ಗಾಂಕವು ಹೆಚ್ಚಿದಂತೆ ನಕ್ಷತ್ರಗಳ ಸಂಖ್ಯೆಯು ಹೇಗೆ ಬೆಳೆಯುತ್ತದೆಂಬುದನ್ನು ಪರಿಶೀಲಿಸೋಣ. ೧೭ ನೆಯ ವರ್ಗಾಂಕದ ವರೆಗಿನ ನಕ್ಷತ್ರಗಳ ಸಂಖ್ಯೆ ೧೫ ಕೋಟಿ, ೧೮ ರ ವರೆಗೆ ೨೯½ ಕೋಟಿ, ೧೯ ರ ವರೆಗೆ ೫೭ ಕೋಟಿ, ೨೦ ರ ವರೆಗೆ ೧೦೦ ಕೋಟಿ. ವರ್ಗಾಂಕ ಹೆಚ್ಚಿದಂತೆ ನಕ್ಷತ್ರಗಳ ಸಂಖ್ಯೆ ಹೆಚ್ಚಿದರೂ, ಹೆಚ್ಚುವ ಪ್ರಮಾಣವು ಅಂದರೆ ಸಂಖ್ಯೆಯ ವೃದ್ಧಿವೇಗವು ಕ್ರಮವಾಗಿ ಕಡಿಮೆಯಾಗುತ್ತಿದೆ ಎಂದು ಈ ಸಂಖ್ಯೆಗಳು ತಿಳಿಸುತ್ತವೆ. ಆದ್ದರಿಂದ ನಕ್ಷತ್ರಗಳ ಸಂಖ್ಯೆ ಅನಂತವಿರಲಾರದೆಂಬ ಸಂಶಯಕ್ಕೆ ಇದು ಪ್ರಥಮಸೂಚನೆ.

ಆಕಾಶವನ್ನೆಲ್ಲ ನಕ್ಷತ್ರಗಳು ಸಮಸಾಂದ್ರತೆಯಿಂದ ವ್ಯಾಪಿಸಿದ್ದರೆ ಆರನೆಯ ವರ್ಗಾಂಕದ ವರೆಗಿನ ನಕ್ಷತ್ರಗಳ ಸಂಖ್ಯೆ ಐದನೆಯ ವರ್ಗಾಂಕದೊಳಗಿನ ನಕ್ಷತ್ರಗಳ ನಾಲ್ಕರಷ್ಟಿರಬೇಕಾಗಿತ್ತು, ೨೦ ನೆಯ ವರ್ಗದೊಳಗಿನ ನಕ್ಷತ್ರಗಳು ೧೯ ನೆಯದರೊಳಗಿನ ನಕ್ಷತ್ರಗಳ ನಾಲ್ಕರಷ್ಟು, ಹೀಗೆಯೇ ಪ್ರತಿಯೊಂದು ವರ್ಗಾಂಕಕ್ಕೂ ನಾಲ್ಕರಷ್ಟರಂತೆ ಏರಬೇಕಾಗಿತ್ತು ಎಂದು ಸುಲಭವಾಗಿ ಗುಣಿಸಬಹುದು. ಈ ಪ್ರಮಾಣಕ್ಕೆ ನಕ್ಷತ್ರಪ್ರಮಾಣ[1]ವೆಂದು ಹೆಸರು. ಮೊದಲಿನ ಮೂರು ನಾಲ್ಕು ವರ್ಗಗಳ ವರೆಗೆ ಪ್ರಾಯೋಗಿಕ ನಕ್ಷತ್ರಪ್ರಮಾಣವು, ತಾತ್ತ್ವಿಕ ನಕ್ಷತ್ರಪ್ರಮಾಣದಂತೆ ನಾಲ್ಕೇ ಆಗಿದೆ. ಅನಂತರ ಈ ಪ್ರಮಾಣವು ಬರಬರುತ್ತ ಕಡಿಮೆಯಾಗಿ ೨೧ ನೆಯ ಕಾಂತಿವರ್ಗಾಂಕಕ್ಕೆ ಬಂದಾಗ ನಕ್ಷತ್ರಪ್ರಮಾಣವು ಎರಡಕ್ಕೂ ಕಡಿಮೆಯಾಗಿದೆ. ಸಾಮಾನ್ಯವಾಗಿ ದೂರ ಅಧಿಕವಾದಂತೆ ಕಾಂತಿ ಕಡಿಮೆಯಾಗುವುದರಿಂದ ನಕ್ಷತ್ರಗಳ ಸಾಂದ್ರತೆಯು ಸೂರ್ಯನ ಸಮೀಪಪ್ರದೇಶದಲ್ಲಿ ಹೆಚ್ಚು, ಸೂರ್ಯನಿಂದ ದೂರಹೋದಂತೆ ಕಡಿಮೆ ಎಂಬುದು ಇದರ ಅರ್ಥ.

೩. ನಕ್ಷತ್ರಪ್ರಮಾಣಗಳ ದಿಗ್ವಿಭಜನೆ

ಸಮಗ್ರ ಆಕಾಶದ ನಕ್ಷತ್ರಪ್ರಮಾಣಗಳನ್ನು ಪರಿಶೀಲಿಸುವುದರ ಜೊತೆಗೆ ಆಕಾಶದ ಸಣ್ಣಸಣ್ಣ ಪ್ರದೇಶಗಳ ನಕ್ಷತ್ರಪ್ರಮಾಣಗಳನ್ನು ಪರಿಶೀಲಿಸಿದರೆ ಬಹಳ ಗಮನಾರ್ಹವಾದ ಅಂಶಗಳು ಹೊರಬೀಳುತ್ತವೆ. ನಕ್ಷತ್ರಗಳ ಕಾಂತಿವರ್ಗಾಂಕವು ಅಧಿಕವಾದಂತೆ ನಕ್ಷತ್ರಪಮಾಣವು ಕಡಿಮೆಯಾಗುತ್ತದಷ್ಟೆ. ಹೀಗೆ ಕಡಿಮೆಯಾಗುವ ದರವು ಎಲ್ಲ ದಿಕ್ಕುಗಳಲ್ಲಿಯೂ ಒಂದೇ ಅಲ್ಲ. ಆಕಾಶಗಂಗೆಯು ಹರಡಿರುವ ದಿಕ್ಕಿನಲ್ಲಿ

[1] Star ratio.

ಈ ದರವು ಅಷ್ಟು ತೀವ್ರವಲ್ಲ, ಆಕಾಶಗಂಗೆಯ ತಲಕ್ಕೆ ಸಮಕೋನದ ದಿಕ್ಕಿನಲ್ಲಿ ದರವು ತೀವ್ರ. ಉದಾಹರಣೆಗೆ ೬ ನೆಯ ವರ್ಗದ ಮತ್ತು ೫ ನೆಯ ವರ್ಗದ ವರೆಗಿನ ತಾರೆಗಳ ಪ್ರಮಾಣವು ಆಕಾಶಗಂಗೆಯ ದಿಕ್ಕಿನಲ್ಲಿ ೨.೯, ಆದರ ತಲಕ್ಕೆ ಸಮಕೋನದಲ್ಲಿ ೨.೮. ಅದೇ ೨೧ ನೆಯ ಮತ್ತು ೨೦ ನೆಯ ವರ್ಗಗಳ ನಕ್ಷತ್ರಪ್ರಮಾಣಗಳು ಕ್ರಮವಾಗಿ ೧.೯ ಮತ್ತು ೧.೪; ಅಂದರೆ ೬ ರಿಂದ ೨೧ ರ ವರೆಗಿನ ೧೫ ವರ್ಗಗಳಲ್ಲಿ ನಕ್ಷತ್ರ ಪ್ರಮಾಣವು ಆಕಾಶಗಂಗೆಯ ತಲದ ದಿಕ್ಕಿನಲ್ಲಿ ೨.೯ ರಿಂದ ೧.೯ ಕ್ಕೆ ಅಥವಾ ೧೦೦ ರಿಂದ ೬೫ ಕ್ಕೆ, ಸಮಕೋನದ ದಿಕ್ಕಿನಲ್ಲಿ ಅದೇ ೧೫ ವರ್ಗಗಳಲ್ಲಿ ೨.೮ ರಿಂದ ೧.೪ ಕ್ಕೆ ಅಥವಾ ೧೦೦ ರಿಂದ ೫೦ ಕ್ಕೆ ಇಳಿಯುತ್ತದೆ.

ನಕ್ಷತ್ರಗಳ ಹರಡಿಕೆಯಲ್ಲಿ ಆಕಾಶಗಂಗೆಯು ವಹಿಸಿರುವ ಪ್ರಧಾನಪಾತ್ರವು ಆಕಾಶದ ವಿವಿಧಭಾಗಗಳ ನಕ್ಷತ್ರಗಳ ಎಣಿಕೆಯಿಂದ ಇನ್ನೂ ಸ್ಪಷ್ಟವಾಗುತ್ತದೆ. ೮ ನೆಯ ಕಾಂತಿವರ್ಗಾಂಕದ ವರೆಗಿನ ನಕ್ಷತ್ರಗಳು ಆಕಾಶಗಂಗೆಯ ದಿಕ್ಕಿನಲ್ಲಿ ಪ್ರತಿಯೊಂದು ಚದರ ಡಿಗ್ರಿಗೆ ಒಂದರಂತೆಯೂ, ಅದಕ್ಕೆ ಸಮಕೋನದಲ್ಲಿ ಒಂದು ಚದರ ಡಿಗ್ರಿಗೆ ೦.೨೭೫ ಅಂದರೆ ಸುಮಾರು ನಾಲ್ಕು ಚದರ ಡಿಗ್ರಿಗಳಿಗೆ ಒಂದ ರಂತೆಯೂ ಎಣಿಕೆಯಾಗಿದೆ. ಇಪ್ಪತ್ತೊಂದನೆಯ ವರ್ಗಾಂಕದ ವರೆಗಿನ ನಕ್ಷತ್ರಗಳು ಆಕಾಶಗಂಗೆಯ ದಿಕ್ಕಿನಲ್ಲಿ ಚದರ ಡಿಗ್ರಿಯೊಂದಕ್ಕೆ ೭೪,೧೦೦, ಆಕಾಶಗಂಗೆಯ ತಲಕ್ಕೆ ೩೦ ಡಿಗ್ರಿಗಳ ಕೋನದಲ್ಲಿ ಒಂದು ಚದರ ಡಿಗ್ರಿಗೆ ೮,೭೧೦, ೬೦ ಡಿಗ್ರಿಗಳ ಅಂತರದಲ್ಲಿ ೨,೬೩೦, ೯೦ ಡಿಗ್ರಿಗಳ ಕೋನದಲ್ಲಿ ೧,೬೬೦ ಮಾತ್ರ.

ಬೇರೆಬೇರೆ ದಿಕ್ಕುಗಳಲ್ಲಿ ಕಾಣುವ ನಕ್ಷತ್ರಗಳ ದೂರವಿಭಜನೆಯಿಂದಲೂ ಇದೇ ಅಂಶವು ಎದ್ದು ಕಾಣುತ್ತದೆ. ಮೂಲ, ಪೂರ್ವಾಷಾಢ, ಉತ್ತರಾಷಾಢ ನಕ್ಷತ್ರಗಳ ಸಮೀಪದಲ್ಲಿರುವ ಆಕಾಶಗಂಗೆಯ ದಿಕ್ಕಿನಲ್ಲಿ ೮೦,೦೦೦ ಜ್ಯೋತಿರ್ವರ್ಷ ಗಳ ವರೆಗೂ ನಕ್ಷತ್ರಗಳು ಹಬ್ಬಿರುವುದು ಕಂಡುಬಂದಿದೆ. ಆರ್ದ್ರಾ, ಬ್ರಹ್ಮಹೃದಯ ನಕ್ಷತ್ರಗಳ ಪ್ರದೇಶದ ಆಕಾಶಗಂಗೆಯ ದಿಕ್ಕಿನಲ್ಲಿ ಸುಮಾರು ೨೦,೦೦೦ ಜ್ಯೋತಿ ರ್ವರ್ಷಗಳಿಗಿಂತ ದೂರದ ನಕ್ಷತ್ರಗಳು ಸಿಕ್ಕಿಲ್ಲ. ಆಕಾಶಗಂಗೆಯ ತಲದ ಸಮ ಕೋನದ ದಿಕ್ಕುಗಳಲ್ಲಿ ಅಂದರೆ ಆಕಾಶಗಂಗೆಯ ಧ್ರುವದಿಕ್ಕುಗಳಲ್ಲಿ ೪೦೦೦ ಜ್ಯೋತಿರ್ವರ್ಷಗಳಾಚೆ ನಕ್ಷತ್ರಗಳಿರುವಂತೆ ಕಂಡಿಲ್ಲ.


೪. ಆಕಾಶಗಂಗೆಯ ವ್ಯಾಸ, ಗಾತ್ರಗಳು ; ಸೂರ್ಯನ ಸ್ಥಾನ

ಈ ಅಂಕಿ ಅಂಶಗಳು ಹೇಳುವ ಕಥೆ ಇದು. ನಮ್ಮ ಕಣ್ಣಿಗೆ ಕಾಣುವ ಮತ್ತು ನಮ್ಮ ದೂರದರ್ಶಿನಿಗಳ ಬಿಂಬಗ್ರಾಹಿಫಲಕಗಳ ಮೇಲೆ ಚುಕ್ಕೆ ಇಡುವ ಕೋಟ್ಯನು ಕೋಟಿ ನಕ್ಷತ್ರಗಳೆಲ್ಲ ಆಕಾಶಗಂಗೆಯ ವ್ಯವಸ್ಥೆಗೆ ಸೇರಿದ ನಕ್ಷತ್ರಗಳೇ. ಈ

ವ್ಯವಸ್ಥೆಯು ಒಂದು ಭೂತಗನ್ನಡಿಯ ಅಥವಾ ಇಡ್ಲಿಯ ಆಕಾರದಲ್ಲಿದೆ. ಇದರ ವ್ಯಾಸವು ಸುಮಾರು ಒಂದು ಲಕ್ಷ ಜ್ಯೋತಿರ್ವರ್ಷಗಳು, ಕೇಂದ್ರಭಾಗದಲ್ಲಿ ಇದರ ದಪ್ಪವು ಸುಮಾರು ೧೦,೦೦೦ ಜ್ಯೋತಿರ್ವರ್ಷಗಳು. ಒಂದೆರಡು ಕಿರಿದಾದ ಖಗೋಳಪ್ರದೇಶಗಳಲ್ಲಿ ಮಾತ್ರ ನಕ್ಷತ್ರಸಾಂದ್ರತೆಯು ನಮ್ಮ ಸೂರ್ಯನಿರುವ ಪ್ರದೇಶದ ಸಾಂದ್ರತೆಗಿಂತ ಸ್ವಲ್ಪ ಹೆಚ್ಚಾಗಿರುವುದರಿಂದ ಸೂರ್ಯನು ಆಕಾಶಗಂಗೆಯ ಕೇಂದ್ರದಲ್ಲಿಲ್ಲ, ಕೇಂದ್ರಕ್ಕೆ ೩೦,೦೦೦ ಜ್ಯೋತಿರ್ವರ್ಷಗಳ ದೂರದಲ್ಲಿದಾನೆ. ಕೇಂದ್ರವು ಧನುರ್ವೃಶ್ಚಿಕ ರಾಶಿಗಳ ದಿಕ್ಕಿನಲ್ಲಿದೆ. ಆದರಿಂದಲೇ ನಕ್ಷತ್ರಗಳು ಆ ದಿಕ್ಕಿನಲ್ಲಿ ೮೦,೦೦೦ ಜ್ಯೋತಿರ್ವರ್ಷಗಳ ವರೆಗೂ, ಎದುರುದಿಕ್ಕಿನಲ್ಲಾದರೆ ೨೦,೦೦೦ ಜ್ಯೋತಿರ್ವರ್ಷಗಳ ವರೆಗೆ ಮಾತ್ರ ವ್ಯಾಪಿಸಿರುವುದು. ಆಕಾಶಗಂಗೆಯು ನಮಗೆ ಹೆಚ್ಚುಕಡಿಮೆ ಮಹಾವೃತ್ತವಾಗಿ ತೋರುವುದರಿಂದ ಅಂದರೆ ಖಗೋಳವನ್ನು ಎರಡು ಸಮಭಾಗಗಳಾಗಿ ಸೀಳಿರುವುದರಿಂದ ಸೌರವ್ಯೂಹವು ವ್ಯವಸ್ಥೆಯ ಕೇಂದ್ರ ತಲಕ್ಕೆ ಸಮೀಪದಲ್ಲಿಯೇ ಇರಬೇಕು. ಆದರೆ ಹೆಚ್ಚುಕಡಿಮೆ ಸಮಭಾಗಗಳಾಗಿ ಹಂಚಿರುವುದರಿಂದ ಈ ಭಾಗಗಳಿಗಿರುವ ಅಲ್ಪ ವ್ಯತ್ಯಾಸದ ಅಳತೆಯಿಂದ ಸೌರ ವ್ಯೂಹವು ಕೇಂದ್ರತಲದಿಂದ ಸುಮಾರು ೧೦೦ ಜ್ಯೋತಿರ್ವರ್ಷಗಳು ಎತ್ತರದಲ್ಲಿವೆ ಎಂದು ಅಂದಾಜಾಗಿದೆ.

ಈ ಆಕಾರದ ಆಕಾಶಗಂಗೆಯಲ್ಲಿ ನಕ್ಷತ್ರಗಳು ಸರಿಸುಮಾರಾಗಿ ಸಮಸಾಂದ್ರತೆಯಿಂದ ಹರಡಿವೆ. ಹಾಗಿದ್ದಲ್ಲಿ ಆಕಾಶದ ಎಲ್ಲ ಭಾಗಗಳೂ ಒಂದೇಸಮನಾಗಿ ನಕ್ಷತ್ರಗಳಿಂದ ಕಿಕ್ಕಿರುವಂತೆ ಕಾಣಬೇಕಲ್ಲವೆ ಎಂದು ನಮಗನ್ನಿಸಬಹುದು. ಇದು ಸರಿಯಾದ ನಿರೀಕ್ಷಣೆಯಲ್ಲ. ಆಕಾಶಗಂಗೆಯು ಗೋಳಾಕಾರವಾಗಿದ್ದು ನಾವು ಅದರ ಕೇಂದ್ರದಲ್ಲಿದ್ದಿದ್ದರೆ ಆಗ ಮಾತ್ರ ನಕ್ಷತ್ರಮಂಡಲವು ಮೇಲಿನ ನಿರೀಕ್ಷಣೆಯಂತೆ ಕಾಣುತ್ತಿತ್ತು. ಇದಕ್ಕೊಂದು ನಿದರ್ಶನವನ್ನು ಕೊಡಬಹುದು. ಒಂದು ಮೈದಾನದಲ್ಲಿ ಹತ್ತು ಅಡಿಗಳಿಗೊಬ್ಬೊಬ್ಬರಂತೆ ಹತ್ತು ಜನರನ್ನು ಸಾಲಾಗಿ ನಿಲ್ಲಿಸೋಣ. ಇಂಥ ಸಾಲುಗಳು ಪ್ರತಿ ಹತ್ತು ಅಡಿಗಳ ಅಂತರಕ್ಕೊಂದರಂತೆ ನೂರು ಸಾಲು ಜನರನ್ನು ನಿಲ್ಲಿಸೋಣ. ಈ ಜನಸ್ತೋಮದ ೮೦ ನೆಯ ಸಾಲಿನಲ್ಲಿ ಐದನೆಯವರೇ ನೀವೆಂದೂಹಿಸಿಕೊಳ್ಳಿ. ಆಗ ಜನಸ್ತೋಮದಲ್ಲಿ ಜನಸಾಂದ್ರತೆಯು ಸಮವಾಗಿದ್ದರೂ ನಿಮಗೆ ಮುಂದುಗಡೆ ಹಿಂದುಗಡೆ ಜನರು ಬಹಳ ದಟ್ಟವಾಗಿರುವಂತೆಯೂ, ಅಕ್ಕಪಕ್ಕಗಳಲ್ಲಿ ಜನರು ವಿರಳವಾಗಿ ನಿಂತಿರುವಂತೆಯೂ ಕಾಣುತ್ತದೆ (ಚಿತ್ರ ೧೭). ಆಕಾಶಗಂಗೆಯಲ್ಲಿ ಸೂರ್ಯನ ಸ್ಥಾನವು ಜನಸ್ತೋಮದಲ್ಲಿ ನಿಮ್ಮ ಸ್ಥಾನವನ್ನು ಹೋಲುತ್ತದೆ. ಸಾಲದ್ದಕ್ಕೆ ವಿವಿಧ ದೂರಗಳಲ್ಲಿರುವ ನಕ್ಷತ್ರಗಳೆಲ್ಲ ಒಂದೇ

ದೂರದಲ್ಲಿರುವ ಖಗೋಳದ ಮೈಗೆ ಅಂಟಿಕೊಂಡಿರುವಂತೆ ನಮಗೆ ಕಾಣುವುದರಿಂದ ಆಕಾಶಗಂಗೆಯ ತಲದ ದಿಕ್ಕಿನಲ್ಲಿ ನಕ್ಷತ್ರಸಾಂದ್ರತೆಯು ಅತ್ಯಧಿಕವಾಗಿ ತೋರುತ್ತದೆ.



ಚಿತ್ರ ೧೭

ಹೆಚ್ಚು ಕಡಿಮೆ ಸಮಸಾಂದ್ರತೆಯ ಈ ಚುಕ್ಕೆಗಳ ವ್ಯೂಹದಲ್ಲಿ × ಗುರುತಿರುವಲ್ಲಿ ಒಬ್ಬ ವೀಕ್ಷಕನಿದ್ದರೆ ಅವನ ನೋಟಕ್ಕೆ ಚುಕ್ಕೆಗಳು ಒಂದು ವೃತ್ತಾಕಾರದಲ್ಲಿ ಚಿತ್ರದಲ್ಲಿ ತೋರಿಸಿರುವಂತೆ ಹರಡಿಕೊಂಡಿರುವುದಾಗಿ ಕಾಣುತ್ತದೆ.

೫. ಸೂರ್ಯನ ಪ್ರದಕ್ಷಿಣವೇಗ

ಹೀಗೆ ಕೋಟ್ಯನುಕೋಟಿ ನಕ್ಷತ್ರಗಳಿಂದ ರಚಿತವಾಗಿರುವ ಬೃಹದ್ಗಾತ್ರದ ಆಕಾಶಗಂಗೆಯ ಕೇಂದ್ರವು ಅದರ ಅಂಗಗಳಾದ ನಕ್ಷತ್ರಗಳ ಮೇಲೆ ಪ್ರಯೋಗಿ

ಸುವ ಗುರುತ್ವಾಕರ್ಷಣ ಬಲವು ಅಪಾರವಾದದ್ದು. ಆದಕಾರಣ ನಕ್ಷತ್ರಗಳು ಅಧಿಕವೇಗದಿಂದ ಈ ಕೇಂದ್ರವನ್ನು ಪ್ರದಕ್ಷಿಣೆ ಮಾಡುತ್ತಿರಬೇಕು, ಇಲ್ಲದಿದ್ದರೆ ಅವೆಲ್ಲ ಉಲ್ಕಾಪಾತಗಳು ಭೂಮಿಯ ಮೇಲೆ ಒಂದೊಂದು ಸಲ ಬೀಳುವಂತೆ, ತಪ ತಪನೆ ಕೇಂದ್ರದ ಮೇಲೆ ಮಳೆಗರೆಯಬೇಕು. ನಮಗೆ ತಿಳಿದಿರುವಂತೆ ನಕ್ಷತ್ರಗಳ ಸೃಷ್ಟಿಯಾಗಿ ಹಲವು ನೂರು ಕೋಟಿ ವರ್ಷಗಳಾದರೂ ಆಗಿವೆಯಾದಕಾರಣ, ಕನಿಷ್ಠಪಕ್ಷ ಅಷ್ಟು ಕಾಲದಿಂದ ಆಕಾಶಗಂಗೆಯ ವ್ಯವಸ್ಥೆ ಉಳಿದುಬಂದಿದೆ. ಆದ್ದರಿಂದ ನಕ್ಷತ್ರಗಳೆಲ್ಲ ಮಹಾಪ್ರದಕ್ಷಿಣೆಗಳನ್ನು ಮಾಡುತ್ತಿರಲೇಬೇಕು, ಇಲ್ಲದಿದ್ದರೆ ಇಷ್ಟುಹೊತ್ತಿಗೆ ಆಕಾಶಗಂಗೆಯು ಕುಸಿದುಬಿದ್ದು ಒಂದು ಮುದ್ದೆಯಾಗುತ್ತಿತ್ತು.

ನಕ್ಷತ್ರಗಳ ಪ್ರದಕ್ಷಿಣವೇಗಗಳನ್ನು ನಿರ್ಣಯಿಸುವುದು ಬಹಳ ಕಷ್ಟದ ಕೆಲಸ. ನಾವು ಈ ಅಧ್ಯಾಯದ ಆದಿಭಾಗದಲ್ಲಿ ನಿರ್ಣಯಿಸಿರುವ ಸೂರ್ಯನ ವೇಗವು ಈ ಪ್ರದಕ್ಷಿಣವೇಗವಲ್ಲ. ಅದು ಸೂರ್ಯನಿಗೆ ಸಮೀಪದಲ್ಲಿರುವ ನಕ್ಷತ್ರಗಳಿಗೆ ಸಾಪೇಕ್ಷವಾದ ವೇಗ ಮಾತ್ರ. ಸೂರ್ಯನೂ ಆ ನಕ್ಷತ್ರಗಳೂ ಸಾಮೂಹಿಕವಾಗಿ ಕೇಂದ್ರದ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿರುವ ವೇಗ ಈಗ ನಮಗೆ ಬೇಕಾದದ್ದು. ಉದಾಹರಣೆಗೆ ನಾವು ರೈಲುಗಾಡಿಯಲ್ಲಿ ಪ್ರಯಾಣಮಾಡುತ್ತಿರುವಾಗ ಗಾಡಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಘಂಟೆಗೆ ಎರಡು ಮೈಲಿಗಳ ವೇಗದಲ್ಲಿ ನಡೆದರೆ ಇತರ ಪ್ರಯಾಣಿಕರಿಗೆ ಸಾಪೇಕ್ಷವಾಗಿ ನಮ್ಮ ವೇಗ ಇಷ್ಟೇ ಆದರೂ ಭೂಮಿಯ ಮೈಗೆ ಸಾಪೇಕ್ಷವಾಗಿ ಘಂಟೆಗೆ ೩೦-೪೦ ಮೈಲಿಗಳಿರಬಹುದು. ಈ ವೇಗವನ್ನು ನಿರ್ಧರಿಸಬೇಕಾದರೆ ನಮ್ಮ ದೃಷ್ಟಿಯು ಪ್ರಯಾಣಿಕರು ಮತ್ತು ಗಾಡಿಯನ್ನು ದಾಟಿ ಹೊರಗಣ ಗಿಡಬೆಟ್ಟಗಳ ಕಡೆಗೆ ಹೋಗಬೇಕು.

ಇದೇ ರೀತಿಯಲ್ಲಿಯೇ ಸೂರ್ಯನ ಪ್ರದಕ್ಷಿಣವೇಗ ನಿರ್ಣಯಕ್ಕೆ ನಾವು ಸೂರ್ಯನ ಸಮೀಪದ ನಕ್ಷತ್ರಗಳಾಚೆ ಇರುವ ದೂರದ ನಕ್ಷತ್ರವ್ಯೂಹಗಳಿಗೆ ಸಾಪೇಕ್ಷವಾದ ವೇಗಗಳನ್ನು ಪರೀಕ್ಷಿಸಿ ವಿಭಜಿಸಬೇಕು. ಇದು ಬಹಳ ಶ್ರಮಸಾಧ್ಯವಾದ ಮತ್ತು ದೀರ್ಘಕಾಲದ ಕೆಲಸ. ಕೆನಡಾದ ಪ್ಲಾಸ್ಕೆಟ್ ಮತ್ತು ಪಿಯರ್ಸ್‌ರ, ಹಾಲೆಂಡಿನ ಊರ್ಟ್‌ನ, ಸ್ವೀಡನ್ನಿನ ಲಿಂಡ್‌ಬಾಲ್ಡ್‌ನ ಸಂಶೋಧನೆಗಳ ಫಲವಾಗಿ ಸೂರ್ಯನು ಆಕಾಶಗಂಗೆಯ ಕೇಂದ್ರವನ್ನು ಸೆಕಂಡೊಂದಕ್ಕೆ ೧೫೦ ಮೈಲಿಗಳ ವೇಗದಲ್ಲಿ ಬಳಸುತ್ತಿದಾನೆಂದು ನಂಬಲಾಗಿದೆ. ಈ ವೇಗದಲ್ಲಿ ಒಂದು ಪ್ರದಕ್ಷಿಣೆ ಮುಗಿಸಲು ೨೫ ಕೋಟಿ ವರ್ಷಗಳು ಹಿಡಿಯುತ್ತವೆ. ಭೂಮಿಯು ಜನನವಾದಂದಿನಿಂದ ಸೂರ್ಯನು ಎಂಟೊಂಬತ್ತು ಪ್ರದಕ್ಷಿಣೆಗಳನ್ನು ಮಾತ್ರ ಮಾಡಿದ್ದಾನೆ.

೬. ಬ್ರಾಹ್ಮಾಂಡ ಗುಚ್ಛಗಳು[1]

ನಕ್ಷತ್ರಗಳ ಮಹಾವ್ಯವಸ್ಥೆಯಾದ ಆಕಾಶಗಂಗೆಯಲ್ಲಿ ಅಲ್ಲಲ್ಲಿ ಒತ್ತಾಗಿ ಕಲೆತು ಕೊಂಡಿರುವ ತಾರಾಗುಚ್ಛಗಳೂ ಬಿಟ್ಟಿವೆ. ಈ ಗುಚ್ಛಗಳಿಗೆ ಬ್ರಾಹ್ಮಾಂಡ ಗುಚ್ಛಗಳೆಂದು ಹೆಸರು. ಕೃತ್ತಿಕಾಗುಚ್ಛವು ಇಂಥ ಬ್ರಾಹ್ಮಾಂಡಗುಚ್ಛಗಳಲ್ಲಿ ಎಲ್ಲರಿಗೂ ಪರಿಚಿತವಾದದ್ದು. ಈ ಗುಚ್ಛದ ವ್ಯಾಸವು ಸುಮಾರು ೩೩ ಜ್ಯೋತಿರ್ವರ್ಷಗಳು, ಇದು ನಮ್ಮಿಂದ ೫೦೦ ಜ್ಯೋತಿರ್ವರ್ಷಗಳ ದೂರದಲ್ಲಿದೆ. ಬ್ರಾಹ್ಮಾಂಡಗುಚ್ಛಗಳೆಲ್ಲವೂ ಆಕಾಶಗಂಗೆಯ ತಲದಲ್ಲಿ ಅಥವಾ ಅದಕ್ಕೆ ಸಮೀಪದಲ್ಲಿಯೇ ಇವೆ. ಸುಮಾರು ೪೦೦ ಗುಚ್ಛಗಳಲ್ಲಿ ೯ ಮಾತ್ರ ಆಕಾಶಗಂಗೆಯ ತಲದಿಂದ ೧೫೦೦ ಜ್ಯೋತಿರ್ವರ್ಷಗಳಿಗಿಂತ ಹೆಚ್ಚು ದೂರದಲ್ಲಿರುವುದಾಗಿ ತಿಳಿದುಬಂದಿದೆ.

ಬ್ರಾಹ್ಮಾಂಡಗುಚ್ಛಗಳ ವ್ಯಾಸಗಳು ೫ ರಿಂದ ೫೦ ಜ್ಯೋತಿರ್ವರ್ಷಗಳವರೆಗೂ ಹಬ್ಬಿದ್ದರೂ ಮುಕ್ಕಾಲು ಮೂರುವೀಸಪಾಲೆಲ್ಲ ೭ ರಿಂದ ೨೦ ಜ್ಯೋತಿರ್ವರ್ಷಗಳೊಳಗೇ ಇವೆ. ಇವುಗಳ ಅಂದವನ್ನು ಅನುಭವಿಸಲು ಒಂದು ಸಣ್ಣ ದೂರದರ್ಶಿನಿಯಾದರೂ ಅವಶ್ಯ. ನಮ್ಮ ಸೂರ್ಯನಿರುವ ಪ್ರದೇಶದಲ್ಲಿ ನಕ್ಷತ್ರಗಳ ಸಾಂದ್ರತೆಯು ಸುಮಾರು ೧೦ ಘನ ಪಾರ್ಸೆಕ್‌ಗಳಿಗೊಂದು, ಅಂದರೆ ೭ ಜ್ಯೋತಿರ್ವರ್ಷಗಳು ಉದ್ದ, ಅಷ್ಟೇ ಅಗಲ, ಅಷ್ಟೇ ದಪ್ಪವಿರುವ ಘನಾವಕಾಶದಲ್ಲಿ ಸರಾಸರಿ ಒಂದು ನಕ್ಷತ್ರದಂತೆ ತಾರೆಗಳು ಹರಡಿವೆ. ಗುಚ್ಛಗಳಲ್ಲಿ ಸಾಂದ್ರತೆಯು ಇದರ ನಾಲ್ಕೈದರಷ್ಟು ಇರುತ್ತದೆ.

೭. ಜ್ಯೋತಿರ್ಮೇಘಗಳು

ತಾರೆಗಳೂ ತಾರಾಗುಚ್ಛಗಳೂ ಅಲ್ಲದೆ ಜ್ಯೋತಿರ್ಮೇಘಗಳೂ ಆಕಾಶಗಂಗೆಯಲ್ಲಿ ಅಲ್ಲೊಂದು ಇಲ್ಲೊಂದು ಹರಡಿವೆ. ಜ್ಯೋತಿರ್ಮೇಘಗಳು ದೂರದರ್ಶಿನಿಗೆ ತೋರುವ ಆಕಾರಕ್ಕನುಸಾರವಾಗಿ ಅವನ್ನು ಎರಡು ಜಾತಿಗಳಾಗಿ ವಿಂಗಡಿಸಿದ್ದಾರೆ. ಗ್ರಹಸದೃಶ ಜ್ಯೋತಿರ್ಮೇಘಗಳು ಮೊದಲನೆಯ ಜಾತಿಗೆ ಸೇರಿವೆ. ಇಂಥ ಅನೇಕ ಜ್ಯೋತಿರ್ಮೇಘಗಳ ಮಧ್ಯಭಾಗಗಳು ಹೆಚ್ಚು ಪ್ರಕಾಶದಿಂದ ಬೆಳಗುತ್ತವೆ. ಕಲವುಗಳಲ್ಲಿ ಹೊರವಳಯ ಮಾತ್ರ ಹೊಳೆಯುತ್ತಿದ್ದು ಕೇಂದ್ರಭಾಗವು ಕಪ್ಪಗೆ ಕಾಣುವುದೂ ಉಂಟು. ಇವನ್ನು ಉಂಗುರಜ್ಯೋತಿರ್ಮೇಘಗಳೆಂದು ಕರೆಯುತ್ತಾರೆ. ಉಂಗುರದ ಮಧ್ಯದಲ್ಲಿ ಒಂದು ತಾರೆಯು ಹೊಳೆಯುತ್ತದೆ. ಈ ಎರಡು ಉಪಜಾತಿಗಳಿಗೂ ರೂಪಬಿಟ್ಟು ಬೇರೆ ಏನೂ ವ್ಯತ್ಯಾಸ ಕಂಡುಬಂದಿಲ್ಲ.

[1] Galactic clusters.

ಗ್ರಹಸದೃಶ ಜ್ಯೋತಿರ್ಮೇಘಗಳದು ಸಂಪೂರ್ಣ ಗೋಳಾಕಾರವಾಗಲಿ ವೃತ್ತಾಕಾರವಾಗಲಿ ಅಲ್ಲ, ಸ್ವಲ್ಪ ದೀರ್ಘಗೋಳಾಕಾರ[1] (ಅಂಡಾಕಾರ). ಇವುಗಳ ಭ್ರಮಣಚಲನೆಯ ಅಕ್ಷವು ದೀರ್ಘಗೋಳದ ಕಿರಿಯವ್ಯಾಸ. ಭ್ರಮಣಕಾಲವು ಕೆಲವು ನೂರು ವರ್ಷಗಳಿಂದ ಒಂದೆರಡು ಲಕ್ಷವರ್ಷಗಳ ವರೆಗೂ ಇರುವುದುಂಟು. ಇವುಗಳ ಭಾರವು ಹತ್ತಿಪ್ಪತ್ತು ಸೌರಭಾರಗಳಿಂದ ನೂರಿನ್ನೂರರಷ್ಟರ ವರೆಗೂ ಇರುತ್ತದೆ. ಇವುಗಳ ವರ್ಣಪಟಲವು O ವರ್ಗದ ತಾರೆಯದರಂತಿದ್ದು ಕಾಂತಿರೇಖೆಗಳಿಂದ ಕೂಡಿರುತ್ತದೆ. ವರ್ಣಪಟಲದ ರೀತಿ, ಅತ್ಯಲ್ಪ ಸಾಂದ್ರತೆ ಮತ್ತು ಈ ಜ್ಯೋತಿರ್ಮೇಘಗಳ ಕೇಂದ್ರಸಮೀಪ ಭಾಗಗಳ ಭ್ರಮಣವೇಗಗಳು ದೂರ ಭಾಗಗಳ ವೇಗಗಳಿಗಿಂತ ಹೆಚ್ಚಾಗಿರುವುದು ಇವೆಲ್ಲ ಸಂಗತಿಗಳೂ ಇವುಗಳ ಅನಿಲ ಸ್ಥಿತಿಯನ್ನೇ ನಿಸ್ಸಂದೇಹವಾಗಿ ಸೂಚಿಸುತ್ತವೆ.

ಎರಡನೆಯ ಜಾತಿಯ ಜ್ಯೋತಿರ್ಮೇಘಗಳು ನಾವು ಹಿಂದಿನ ಅಧ್ಯಾಯದಲ್ಲಿ ಶಿಥಿಲ ಜ್ಯೋತಿರ್ಮೇಘಗಳೆಂದು ವಿವರಿಸಿದವುಗಳೇ. ಇವುಗಳ ಸಾಂದ್ರತೆಯು ಎಷ್ಟು ಕಡಿಮೆಯೆಂದು ಆಗಲೇ ಅರಿತಿದ್ದೇವೆ. ಗ್ರಹಸದೃಶ ಮೇಘಗಳಿಗಿಂತಲೂ ಕಡಿಮೆ ಇವುಗಳ ಸಾಂದ್ರತೆ. ಶಿಥಿಲಮೇಘಗಳಿಗೆ ಕ್ರಮವಾದ ರೂಪವಿಲ್ಲದ್ದರಿಂದ ಇವುಗಳಿಗೆ ಭ್ರಮಣವಿಲ್ಲ. ಆದರೆ ಈ ಮೇಘಗಳ ವಿವಿಧ ಭಾಗಗಳು ವಿವಿಧ ದಿಕ್ಕುಗಳಲ್ಲಿ ಅಗಾಧವೇಗಗಳಿಂದ ನುಗ್ಗುತ್ತಿರುವುದರಿಂದ ಶಿಥಿಲಜ್ಯೋತಿರ್ಮೇಘಗಳ ಸ್ಥಿತಿಯು ಯಾವಾಗಲೂ ಅತ್ಯುಗ್ರ ಅಶಾಂತಿಯು, ತೀವ್ರ ಅಲ್ಲೋಲ ಕಲ್ಲೋಲದ ಸ್ಥಿತಿ. ಇವುಗಳ ವರ್ಣಪಟಲಗಳೂ ಕಾಂತಿರೇಖೆಗಳಿಂದಲೇ ಕೂಡಿವೆ. ಸಮೀಪದ ನಕ್ಷತ್ರಗಳು ಕಳಿಸುವ ನೀಲಾತೀತ ಕಿರಣಗಳ ತೇಜಶ್ಶಕ್ತಿಯನ್ನು ಈ ಮೇಘಗಳ ಪರಮಾಣುಗಳು ಹೀರಿ ಉದ್ರೇಕಗೊಂಡು ತಾವು ತಮಗೆ ಸಹಜವಾದ ಬೆಳಕನ್ನು ಪ್ರಸರಿಸುತ್ತವೆ. O ಮತ್ತು B ವರ್ಗಗಳ ತಾರೆಗಳು ಮಾತ್ರ ನೀಲಾತೀತ ಕಿರಣಗಳನ್ನು ಹೇರಳವಾಗಿ ಎರಚಬಲ್ಲವು. ಶಿಥಿಲಜ್ಯೋತಿರ್ಮೇಘಗಳ ಹತ್ತಿರದಲ್ಲಿ ಈ O ಮತ್ತು B ವರ್ಣವರ್ಗಗಳ ನಕ್ಷತ್ರಗಳು ಕಂಡುಬಂದಿವೆ.

ಸೂರ್ಯನಲ್ಲಿರುವ ಧಾತುಗಳೆಲ್ಲ ಈ ಶಿಥಿಲ ಮತ್ತು ಗ್ರಹಸದೃಶ ಜ್ಯೋತಿರ್ಮೇಘಗಳಲ್ಲಿಯೂ ಇವೆಯೆಂದು ಇವುಗಳ ವರ್ಣಪಟಲಗಳ ರೇಖೆಗಳು ಸಾಕ್ಷ್ಯಕೊಡುತ್ತವೆ. ತೊಂಬತ್ತೆರಡು ಪರಮಾಣುಗಳಲ್ಲಿ ಅರುವತ್ತಾರು ಆದರೂ ಸೂರ್ಯ, ನಕ್ಷತ್ರ ಮತ್ತು ಜ್ಯೋತಿರ್ಮೇಘಗಳಲ್ಲಿ ಇರುವುದಾಗಿ ತಿಳಿದುಬಂದಿದೆ. ಹೊರಮೈಯ್ಯಲ್ಲಿರುವ ಧಾತುಗಳನ್ನು ಮಾತ್ರ ವರ್ಣಪಟಲಗಳು ಸೂಚಿಸುವುದರಿಂದ ಒಳಭಾಗದಲ್ಲಿ ಇತರ

[1] Ellipsoid.

ಧಾತುಗಳಿಲ್ಲವೇ ಇಲ್ಲವೆಂದು ನಿರ್ಧರವಾಗಿ ಹೇಳಲಿಕ್ಕಾಗುವುದಿಲ್ಲ. ಜ್ಯೋತಿರ್ಮೇಘ ಗಳ ವರ್ಣಪಟಲಗಳನ್ನು ಮೊದಲಿಗೆ ಪರೀಕ್ಷಿಸಿದಾಗ ಪಟಲಗಳಲ್ಲಿ ಕೆಲವು ಅಪರಿಚಿತ ರೇಖೆಗಳು ಕಣ್ಣಿಗೆ ಬಿದ್ದುವು. ಇವು ಭೂಮಿಯ ಮೇಲೆ ದೊರಕುವ ಯಾವ ವಸ್ತುವಿನ ರೇಖೆಗಳಿಗೂ ಹೊಂದಲಿಲ್ಲವಾದ್ದರಿಂದ, ಈ ಮೇಘಗಳಲ್ಲಿ ಒಂದು ವಿಜಾತೀಯ ಧಾತುವಿರಬೇಕೆಂದು ಊಹಿಸಿ ಅದಕ್ಕೆ ನೆಬ್ಯೂಲಿಯಂ (ಜ್ಯೋತಿ ರ್ಮೇಘಧಾತು) ಎಂದು ಹೆಸರಿಟ್ಟರು. ಆದರೆ ಈಚೆಗೆ ನೆಬ್ಯೂಲಿಯಂ ಧಾತುವು ನಮಗೆ ಚೆನ್ನಾಗಿಯೇ ಪರಿಚಿತವಾಗಿರುವ ಆಮ್ಲಜನಕದ ಬೇರೊಂದು ರೂಪವೆಂದು ಗೊತ್ತಾಗಿದೆ.

ಜ್ಯೋತಿರ್ಮೇಘಗಳೆಲ್ಲ ಆಕಾಶಗಂಗೆಯ ತಲದಲ್ಲಿ ಇಲ್ಲವೆ ಅದಕ್ಕೆ ಹತ್ತಿರ ದಲ್ಲಿಯೇ ಇವೆ. ಅವುಗಳ ಸರಾಸರಿ ದೂರವು ೪,೭೦೦ ಜ್ಯೋತಿರ್ವರ್ಷಗಳು. ಮಹಾವ್ಯಾಧದ ಜ್ಯೋತಿರ್ಮೇಘದ ದೂರ ೧೮೦೦ ಜ್ಯೋತಿರ್ವರ್ಷಗಳು, ಅದರ ವ್ಯಾಸವು ೨೫ ಜ್ಯೋತಿರ್ವರ್ಷಗಳಿಗಿಂತಲೂ ಹೆಚ್ಚು.

೮. ಶಿಥಿಲಮೇಘವು ನಕ್ಷತ್ರದ ಭ್ರೂಣಾವಸ್ಥೆಯೇ?

ನಳ್ಳಿಯ ಜ್ಯೋತಿರ್ಮೇಘವು ಒಂದು ನಕ್ಷತ್ರಶರೀರದ ಭಸ್ಮಾವಶೇಷ ವಿದ್ದರೂ ಇರಬಹುದೆಂದು ಆಗಲೇ ತಿಳಿಸಿದೆ. ಕೆಲವು ಸ್ವಯಂಪ್ರಕಾಶ ಶಿಥಿಲ ಮೇಘಗಳು ಹೀಗೆ ನಕ್ಷತ್ರಗಳ ಅವಶೇಷಗಳಾಗಿದ್ದರೂ ಎಲ್ಲ ಮೇಘಗಳೂ ಇಂಥವೇ ಎಂದು ತೀರ್ಮಾನಿಸಲು ಸಾಕಾದಷ್ಟು ಸಮರ್ಥನೆ ದೊರಕಿಲ್ಲ. ಕೇಂದ್ರ ನಕ್ಷತ್ರ ರಹಿತ ಗ್ರಹಸದೃಶಮೇಘಗಳಲ್ಲಿ ಸೃಷ್ಟಿಕರ್ತನು ನಾಳಿನ ನಕ್ಷತ್ರಗಳಿಗೆ ರೂಪು ಕೊಡುತ್ತಿರುವಂತೆ ತೋರುತ್ತದೆ. ಕೆಲವು ಶಿಥಿಲಮೇಘಗಳು ನಕ್ಷತ್ರನಿರ್ಮಾಣದ ಮೊಟ್ಟಮೊದಲ ಹೆಜ್ಜೆ ಇದ್ದರೂ ಇರಬಹುದು. ಇವುಗಳ ಅನಿಲ ಮಹಾರಾಶಿಗಳ ಪ್ರಚಂಡ ಪ್ರವಾಹಗಳೂ, ಅವ್ಯವಸ್ಥಿತ ಬಿರುಗಾಳಿಗಳೂ ತಮ್ಮ ರಭಸವನ್ನು ಸ್ವಲ್ಪ ನೀಗಿಕೊಂಡಮೇಲೆ, ಒಂದು ಅಕ್ಷವು ಅಸ್ಪಷ್ಟವಾಗಿ ರೂಪುಗೊಂಡು, ದಿಕ್ಕು ಗುರಿಯಿಲ್ಲದ ಜ್ಯೋತಿರ್ಮೇಘದ ತಳಮಳದಲ್ಲಿ ಒಂದು ವಿಧವಾದ ವ್ಯವಸ್ಥೆ ಬರಬರುತ್ತ ಏರ್ಪಟ್ಟು, ಈ ಅಕ್ಷದ ಸುತ್ತಲೂ ಮೇಘವು ಸುತ್ತುವಂತಾಗಬಹುದು. ಮೇಘವು ಕಾಲಕ್ರಮೇಣ ಸಂಕುಚಿತವಾಗಿ ಗ್ರಹಸದೃಶ ಮೇಘವಾಗಬಹುದು.

ನಕ್ಷತ್ರದ ಭ್ರೂಣಾವಸ್ಥೆಯ ಮತ್ತು ವಾರ್ಧಕ್ಯದ ರೂಪಗಳೆಂದು ನಾವು ಅನುಮಾನಿಸಿರುವ ಈ ಎರಡು ರೂಪಗಳಿಗಿರುವ ಸಾದೃಶ್ಯವು "ವಾರ್ಧಕ್ಯವು ಮಾನವನ ಎರಡನೆಯ ಶೈಶವವು" ಎಂಬ ಪುರಾತನ ನುಡಿಯನ್ನು ನೆನಪಿಗೆ ತರುತ್ತದೆ. ಆದರೆ ಇವೆಲ್ಲಾ ಊಹೆಗಳು, ಸಿದ್ಧಾಂತದ ಮಟ್ಟಕ್ಕೆ ಇನ್ನೂ ಏರಿಲ್ಲ.

೯. ಶಿಥಿಲ ಕಾಳಮೇಘಗಳು[1]

ಶಿಥಿಲಮೇಘಗಳ ಉಪವರ್ಗವಾಗಿ ಕಾಂತಿರಹಿತವಾದ ಕೃಷ್ಣಮೇಘಗಳೂ ಆಕಾಶಗಂಗೆಯಲ್ಲಿ ಹಲವೆಡೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕಾಂತಿರಹಿತವಾದ ಆಕಾಶ ಕಾಯಗಳು ಕಾಣಿಸಿಕೊಳ್ಳುತ್ತವೆ ಎಂದರೆ ಅರ್ಥರಹಿತವಾಗಿ ತೋರಬಹುದು. ಆದರೆ ವ್ಯಾಧಶೃಂಖಲದ ಮೂರು ನಕ್ಷತ್ರಗಳಲ್ಲಿ ದಕ್ಷಿಣದ ತುದಿಯ ನಕ್ಷತ್ರಪ್ರದೇಶ ವನ್ನು ದೂರದರ್ಶಿನಿಯ ಮೂಲಕ ನೋಡಿದರೆ ದಟ್ಟವಾದ ಕರಿಯ ಮೋಡದ ರೂಪವೊಂದು ಕಾಣುತ್ತದೆ. ಅದನ್ನು ನೋಡಿದ ಕೂಡಲೆ ಆಕಾಶಭಾಗವು ಕಾಂತಿ ರಹಿತವಾಗಿ ಕಾಣುವುದಕ್ಕೆ ಅಲ್ಲಿಯ ವಸ್ತುರಿಕ್ತತೆ ಕಾರಣವಲ್ಲವೆಂಬುದು ವ್ಯಕ್ತ ವಾಗುತ್ತದೆ. ಅಲ್ಲಿರುವ ಸಾಮಗ್ರಿಯು ಅದರ ಹಿಂಬದಿಯಲ್ಲಿರುವ ತೇಜಃಕಾಯ ಗಳಿಗೆ ಅಡ್ಡಬಂದು ಅವುಗಳ ಬೆಳಕನ್ನು ಸಂಪೂರ್ಣವಾಗಿ ತಡೆಗಟ್ಟಿದೆ ಎಂದು ಭಾಸವಾಗುತ್ತದೆ. ಇವು ಶಿಥಿಲ ಕಾಳಮೇಘಗಳು.

ಸೌರವ್ಯೂಹದ ಗ್ರಹೋಪಗ್ರಹಗಳು ಹೇಗೆ ಸೂರ್ಯಪ್ರತಿಫಲಿತ ಕಾಂತಿಯಿಂದ ಬೆಳಗುತ್ತಿವೆಯೋ ಹಾಗೆಯೇ ನಕ್ಷತ್ರಗಳ ಕಾಂತಿಯನ್ನು ಪ್ರತಿಫಲಿಸಿ ಬೆಳಗುವ ಬೃಹತ್ಕಾಯಗಳೂ ಆಕಾಶಗಂಗೆಯ ವ್ಯವಸ್ಥೆಯಲ್ಲಿ ಸೇರಿಕೊಂಡಿವೆ. ಕೃತ್ತಿಕಾ ಗುಚ್ಛದ ಕೆಲವು ತಾರೆಗಳನ್ನು ವಿಶಾಲಗಾತ್ರದ ಜ್ಯೋತಿರ್ಮೇಘಗಳು ಆವರಿಸಿವೆ. ಇವು ನೋಟಕ್ಕೆ ಮೇಲೆ ವಿವರಿಸಿರುವ ಶಿಥಿಲ ಜ್ಯೋತಿರ್ಮೇಘಗಳಂತೆ ಕಂಡರೂ ಇವುಗಳ ವರ್ಣಪಟಲಗಳಲ್ಲಿ ಕಾಂತಿರೇಖೆಗಳೊಂದೂ ಇಲ್ಲ. ಅವಿಚ್ಛಿನ್ನ ವರ್ಣರಾಶಿಯ ಮೇಲೆ ಕೆಲವು ಕೃಷ್ಣರೇಖೆಗಳು ಕಾಣುತ್ತವೆ. ಮೇಘಾವರಣ ದೊಳಗಿರುವ ತಾರೆಗಳ ವರ್ಣಪಟಲ ರೇಖೆಗಳಿಗೂ ಈ ರೇಖೆಗಳಿಗೂ ಏನೊಂದು ವ್ಯತ್ಯಾಸವೂ ತೋರುವುದಿಲ್ಲ. ಆದ್ದರಿಂದ ಈ ಜ್ಯೋತಿರ್ಮೇಘಗಳ ಕಾಂತಿಯು ಸಂಪೂರ್ಣವಾಗಿ ನಕ್ಷತ್ರಗಳ ಬೆಳಕನ್ನು ಪ್ರತಿಫಲಿಸಿದ್ದರಿಂದ ಬಂದದ್ದು ಎಂದು ಹೇಳಬಹುದು.

ಶಿಥಿಲಮೇಘಗಳು O ಅಥವಾ B ವರ್ಣವರ್ಗಗಳ ತಾರೆಗಳ ಸಮೀಪದಲ್ಲಿದ್ದರೆ ಸ್ವಯಂಪ್ರಕಾಶಜ್ಯೋತಿರ್ಮೇಘಗಳಾಗಿ, ಇತರ ತಾರೆಗಳ ಸಮೀಪದಲ್ಲಿದ್ದರೆ ಪ್ರತಿ ಫಲಿತ ಕಾಂತಿಯ ಮೇಘಗಳಾಗಿ, ಯಾವ ತಾರೆಗಳೂ ಹತ್ತಿರದಲ್ಲಿಲ್ಲದಿದ್ದರೆ ಆ ದಿಕ್ಕಿನಲ್ಲಿ ದೂರದಲ್ಲಿರುವ ತಾರೆಗಳೆಲ್ಲವನ್ನೂ ಮುಚ್ಚಿ ಕಾಳಮೇಘಗಳಾಗಿ ನಮಗೆ ಕಾಣುತ್ತವೆಂದು ಹೇಳಬಹುದು.

---

[1] Diffuse dark nebulae.

೧೦. ಗುಚ್ಛಗೋಳಗಳು[1]

ಅಭಿಜಿತ್ ತಾರೆಗೂ ಸ್ವಾತೀ ತಾರೆಗೂ ಮಧ್ಯೆ ತೃತೀಯ ಕಾಂತಿವರ್ಗಾಂಕದ ಒಂದು ತಾರೆ ಇದೆ. ಇದಕ್ಕೆ ಉತ್ತರದಲ್ಲಿ (ಧ್ರುವತಾರೆಯ ದಿಕ್ಕಿನಲ್ಲಿ) ಸುಮಾರು ೫ ಡಿಗ್ರಿಗಳ ಅಂತರದಲ್ಲಿ ಪ್ರಸಿದ್ಧವಾದ ಒಂದು ತಾರಾಗುಚ್ಛವಿದೆ. ಇದೇ ಭೀಮ ರಾಶಿಯ ತಾರಾಗುಚ್ಛಗೋಳ. ಆದರೆ ಸೂಕ್ಷ್ಮದೃಷ್ಟಿಯುಳ್ಳವರಿಗೂ ಕೂಡ ಇದು ಬರಿಯ ಕಣ್ಣಿಗೆ ಕ್ಷೀಣಕಾಂತಿಯ ಒಂದು ತಾರೆಯಂತೆ ತೋರುತ್ತದೆ. ದೊಡ್ಡ ದೂರದರ್ಶಿನಿಯಿಂದ ನೋಡಿದರೆ ಖಗೋಳದ ಅತಿ ಮನೋಹರದೃಶ್ಯಗಳಲ್ಲಿ ಇದ ಕ್ಕೊಂದು ಮುಖ್ಯಸ್ಥಾನವಿದೆ ಎಂಬುದು ಗೊತ್ತಾಗುತ್ತದೆ. ನೋಟಕ್ಕೆ ಇದು ವಜ್ರ, ಹವಳ, ಕೆಂಪು, ಪಚ್ಚೆ, ನೀಲಮಣಿ ಮುಂತಾದ ರತ್ನಗಳಿಂದ ಕೆತ್ತಿದ ಸುಂದರ ಪದಕ ದಂತೆ ಕಾಣುತ್ತದೆ.

ಈ ಪಂಗಡದ ತಾರಾಗುಚ್ಛಗಳು ಗೋಳಾಕಾರವಾಗಿರುವುದರಿಂದ ಇವಕ್ಕೆ ಗುಚ್ಛಗೋಳಗಳೆಂದು ಹೆಸರು ಬಂದಿದೆ. ಈ ಆಕಾಶಕಾಯಗಳು ನಮ್ಮ ಆಕಾಶ ಗಂಗೆಯ ವ್ಯವಸ್ಥೆಗೆ ಸೇರಿವೆಯೋ ಇಲ್ಲವೆ ಅದರ ಹೊರಗಿವೆಯೋ ಎಂಬ ಪ್ರಶ್ನೆಗೆ ಸಾಧಾರವಾದ ಉತ್ತರವು ೧೯೧೮ ರ ವರೆಗೆ ದೊರೆತಿರಲಿಲ್ಲ. ಗುಚ್ಛಗೋಳಗಳಲ್ಲಿ ಅನೇಕ ಯೌಧಿಷ್ಠಿರ ಚಂಚಲತಾರೆಗಳಿವೆ. ಇವುಗಳ ಸಹಾಯದಿಂದ ಷೇಪ್ಲಿಯು ಗುಚ್ಛಗಳ ದೂರಗಳನ್ನು ನಿರ್ಣಯಿಸಿ ಇವು ಆಕಾಶಗಂಗೆಯ ತಲದ ಹೊರಗಿದ್ದರೂ ಆ ವ್ಯವಸ್ಥೆಗೇ ಸೇರಿವೆ ಎಂದು ತೀರ್ಮಾನಿಸಿದನು.

ಆಕಾಶದಲ್ಲಿ ಇಲ್ಲಿಯ ವರೆಗೆ ಸುಮಾರು ಒಂದು ನೂರು ಗುಚ್ಛಗೋಳಗಳು ಪತ್ತೆಯಾಗಿವೆ. ಇವುಗಳಲ್ಲಿ ಒಂದೊಂದರ ವ್ಯಾಸವು ೫೦ ಜ್ಯೋತಿರ್ವರ್ಷಗಳು, ಒಂದೊಂದರದು ೩೮೦ ಜ್ಯೋತಿರ್ವರ್ಷಗಳು ಇದ್ದರೂ ಅನೇಕ ಗೋಳಗಳ ವ್ಯಾಸವು ಹೆಚ್ಚು ಕಡಿಮೆ ೧೮೦ ಜ್ಯೋತಿರ್ವರ್ಷಗಳೇ ಇರುವುದು ಗಮನಾರ್ಹವಾದ ಸಂಗತಿ. ಒಂದೊಂದು ಗೋಳದಲ್ಲಿಯೂ ಸುಮಾರು ಒಂದು ಲಕ್ಷ ನಕ್ಷತ್ರಗಳು ಕಲೆತಿರುತ್ತವೆ. ಅಲ್ಲಿಗೆ ಗುಚ್ಛಗೋಳಗಳ ಸರಾಸರಿ ನಕ್ಷತ್ರಸಾಂದ್ರತೆಯು ೩ ಜ್ಯೋತಿರ್ವರ್ಷಗಳು ಉದ್ದ, ಅಗಲ, ದಪ್ಪದ ಘನಾವಕಾಶಕ್ಕೆ ಒಂದರಂತೆ ಆಗುತ್ತದೆ. ಇದು ಸೂರ್ಯ ಸಮೀಪದ ಖಗೋಳಪ್ರದೇಶದ ನಕ್ಷತ್ರಸಾಂದ್ರತೆಯ ೧೩ ರಷ್ಟು. ಗೋಳದ ಕೇಂದ್ರಭಾಗಗಳಲ್ಲಿ ಸಾಂದ್ರತೆಯು ಇದಕ್ಕೂ ಹೆಚ್ಚಾಗಿ, ಹೊರಭಾಗಗಳಲ್ಲಿ ಇದಕ್ಕೂ ಕಡಿಮೆಯಾಗಿ ಇರುತ್ತದೆ.

ಇದುವರೆಗೆ ನಾವು ಪರಿಶೀಲಿಸಿರುವ ಆಕಾಶಕಾಯಗಳಾದ ನಕ್ಷತ್ರಗಳು,

---


[1] Globular clusters.

ಅಷ್ಟಮಪಟ ೧



ವೃಷಭರಾಶಿಯ ಕುಳೀರ (ನಳ್ಳಿ) ಜ್ಯೋತಿರ್ಮೇಘ

ಅಷ್ಟಮಪಟ ೨



ವೀಣಾರಾಶಿಯ ಅಂಗುಲೀಯಕ ಜ್ಯೋತಿರ್ಮೇಘ


ನವಮಪಟ



ರಾಜಹಂಸದ ಪೆಲಿಕನ್ ಅಥವಾ ಕಹ್ವಜ್ಯೋತಿರ್ಮೇಘ


ವಿಲ್ಸನ್ ಶಿಖರದ ಅವೇಕ್ಷಣ ಶಾಲಾಧಿಕಾರಿಗಳ ಕೃಪೆಯಿಂದ

ದಶಮಪಟ



ರಾಜಹಂಸದ ಕನ್ಯಾವಕುಂಠನ ಜ್ಯೋತಿರ್ಮೇಘ

ವಿಲ್ಸನ್ ಶಿಖರದ ಆವೇಕ್ಷಣ ಶಾಲಾಧಿಕಾರಿಗಳ ಕೃಪೆಯಿಂದ



ಭೀಮರಾಶಿಯ ಗುಚ್ಛಗೋಳ


ವಿಲ್ಸನ್ ಶಿಖರದ ಅವೇಕ್ಷಣ ಶಾಲಾಧಿಕಾರಿಗಳ ಕೃಪೆಯಿಂದ

ದ್ವಾದಶ ಪಟ



ಕುಮಾರವೊಲು ಚಂದ್ರಶೇಖರನ್

—ರಾಜಗೋಪಾಲನ್ ಮತ್ತು ರಾಧಾಕೃಷ್ಣನ್ ಅವರ ಕೃಪೆಯಿಂದ




ತ್ರಿವಿಭಕ್ತ ಅಥವಾ ಮೂರುತುತ್ತಿನ ಜ್ಯೋತಿರ್ಮೇಘ

—ಲೋವೆಲ್ ಅವೇಕ್ಷಣ ಶಾಲೆ

ಬ್ರಾಹ್ಮಾಂಡ ಗುಚ್ಛಗಳು, ಜ್ಯೋತಿರ್ಮೇಘಗಳು ಇವೆಲ್ಲ ಆಕಾಶಗಂಗೆಯ ತಲದಿಂದ ದೂರವಾಗಿರುವ ಪ್ರದೇಶಗಳಲ್ಲಿ ಕಂಡುಬಂದಿಲ್ಲ. ಆದರೆ ಗುಚ್ಛಗೋಳಗಳು ಆಕಾಶಗಂಗೆಯ ತಲಕ್ಕೆ ಸಮೀಪವಾಗಿ ಕಂಡುಬಂದಿರುವುದು ಅಪರೂಪ, ತಲದಿಂದ ದೂರಪ್ರದೇಶಗಳಲ್ಲೆಲ್ಲ ಇವು ಹರಡಿವೆ. ಭೂಮಿಯಿಂದ (ಅಂದರೆ ಸೂರ್ಯನಿಂದ) ಸುಮಾರು ೧೦,೦೦೦ ಜ್ಯೋತಿರ್ವರ್ಷಗಳಿಂದ ಹಿಡಿದು ಮುಕ್ಕಾಲು ಲಕ್ಷ ಜ್ಯೋತಿರ್ವರ್ಷಗಳ ವರೆಗೂ ಇವು ವ್ಯಾಪಿಸಿವೆ. ಮೂಲಾನಕ್ಷತ್ರಪ್ರದೇಶವನ್ನು ಕೇಂದ್ರವಾಗುಳ್ಳ ಖಗೋಳಾರ್ಧದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಸುಮಾರು ಐವತ್ತಾರುವತ್ತು ಸಾವಿರ ಜ್ಯೋತಿರ್ವರ್ಷಗಳ ವರೆಗೆ ಹಬ್ಬಿವೆ. ಉಳಿದ ಖಗೋಳಾರ್ಧದಲ್ಲಿ ಇವು ಕಂಡುಬಂದಿರುವುದು ಬಹಳ ಅಲ್ಪಸಂಖ್ಯೆಯಲ್ಲಿ.

ಗುಚ್ಛಗೋಳಗಳು ಖಗೋಳದ ಒಂದರ್ಧಭಾಗಕ್ಕೆ ತೋರಿರುವ ಈ ಪಕ್ಷಪಾತವು ಬಹಳ ವಿಚಿತ್ರವಾಗಿ ಕಾಣಬಹುದು. ಆದರೆ ವಾಸ್ತವವಾಗಿ ಹಾಗೆ ಅವಕ್ಕೇನೂ ಪಕ್ಷಪಾತವಿಲ್ಲ. ಆಕಾಶಗಂಗೆಯ ಕೇಂದ್ರದಿಂದ ೫೦,೦೦೦ ಜ್ಯೋತಿರ್ವರ್ಷಗಳ ತ್ರಿಜ್ಯದ ಒಂದು ಗೋಳವನ್ನು ನಿರ್ಮಿಸಿದರೆ ಆ ಗೋಳದಲ್ಲೆಲ್ಲ ಸಮನಾಗಿ ಸುಮಾರು ಹದಿನೈದಿಪ್ಪತ್ತು ಸಾವಿರ ಜ್ಯೋತಿರ್ವರ್ಷಗಳಿಗೊಂದರಂತೆ ಈ ಗುಚ್ಛಗೋಳಗಳು ಹರಡಿವೆ. ಆದರೆ ನಾವು ಆಕಾಶಗಂಗೆಯ ಕೇಂದ್ರದಲ್ಲಿರದೆ ಒಂದು ಪಕ್ಕಕ್ಕಿರುವುದರಿಂದ, ಕೇಂದ್ರದ ದಿಕ್ಕಿನ (ಮೂಲಾನಕ್ಷತ್ರಪ್ರದೇಶದ) ಖಗೋಳಾರ್ಧದಲ್ಲಿ ಹೆಚ್ಚು ಗುಚ್ಛಗಳಿರುವಂತೆ ನಮಗೆ ಕಾಣುತ್ತದೆ; ಜನಸಂದಣಿಯ ಮಧ್ಯದಲ್ಲಿ ನಾವಿದ್ದರೆ ಜನರು ಎಲ್ಲ ದಿಕ್ಕುಗಳಲ್ಲಿಯೂ ಸೇರಿರುವಂತೆ ನಮಗೆ ಕಾಣುತ್ತದೆ, ಅದರ ಬದಲು ನಾವು ಗುಂಪಿನ ಒಂದು ಅಂಚಿನಲ್ಲಿ ನಿಂತಿದ್ದರೆ ನಮ್ಮ ಮುಂಭಾಗದಲ್ಲಿ ಹೆಚ್ಚು ಮಂದಿ ಕಂಡು ಹಿಂಭಾಗದಲ್ಲಿ ಕಡಿಮೆ ಕಂಡುಬರುವುದಿಲ್ಲವೇ, ಹಾಗೆ (ಚಿತ್ರ ೧ಲ).

ಆಕಾಶಗಂಗೆಯ ನಕ್ಷತ್ರಗಳು ಹೇಗೆ ಕೇಂದ್ರವನ್ನು ಪ್ರದಕ್ಷಿಣೆ ಮಾಡುತ್ತಿವೆಯೋ ಹಾಗೆಯೇ ಈ ಗುಚ್ಛಗೋಳಗಳೂ ಆಕಾಶಗಂಗೆಯ ಗುರುತ್ವಾಕರ್ಷಣಕ್ಕೆ ಒಳಪಟ್ಟು ಅದರ ಕೇಂದ್ರವನ್ನು ಬಳಸುತ್ತಿವೆ. ನಕ್ಷತ್ರಗಳಂತೆ ಈ ಗೋಳಗಳು ಒಂದೇ ತಲಕ್ಕೆ ಕಟ್ಟುಬಿದ್ದಿಲ್ಲವಾದ್ದರಿಂದ ಇವುಗಳ ಪ್ರದಕ್ಷಿಣಪಥಗಳು ಒಂದನ್ನೊಂದು ಖಗೋಳದ ಅನೇಕ ಬಿಂದುಗಳಲ್ಲಿ ಸಂಧಿಸುತ್ತವೆ, ಆಕಾಶಗಂಗೆಯ ತಲವನ್ನೂ ಅನೇಕ ಬಿಂದುಗಳಲ್ಲಿ ಸಂಧಿಸುತ್ತವೆ. ಗುಚ್ಛಗೋಳಗಳು ಆಕಾಶಗಂಗೆಯ ತಲದ ಹೊರಗಿರುವುದರಿಂದ ಅವುಗಳಿಗೆ ಸಾಪೇಕ್ಷವಾಗಿ ಸೂರ್ಯನ ಚಲನೆಯನ್ನು ಅಳೆದು ಸೂರ್ಯನ ಪ್ರದಕ್ಷಿಣವೇಗವನ್ನು ಹೆಚ್ಚು ನಂಬುಗೆಯಿಂದ ನಿರ್ಧರಿಸಬಹುದು.



ಚಿತ್ರ ೧೮. ಸ್ಥಳೀಯ ಬ್ರಹ್ಮಾಂಡದ ರಚನೆ

ಆಕಾಶಗಂಗೆಯಲ್ಲಿ ಶಿಥಿಲ ಜ್ಯೋತಿರ್ಮೇಘ, ಶಿಥಿಲ ಕಾಳಮೇಘಗಳನ್ನೂ, ಕರಿಯ ಗಲ್ಲಿಯನ್ನೂ ತೋರಿಸಿದೆ. + ಗುರುತು ಸೂರ್ಯನ ಸ್ಥಾನವನ್ನು ಸೂಚಿಸುತ್ತದೆ. ಈ ಸ್ಥಾನದಿಂದ ಬ್ರಹ್ಮಾಂಡ ಧ್ರುವರೇಖೆಯ ಬಲಭಾಗದ ಖಗೋಳಾರ್ಧದಲ್ಲಿ ೫೦ ಗುಚ್ಛಗೋಳಗಳೂ, ಎಡಭಾಗದ ಖಗೋಳಾರ್ಧದಲ್ಲಿ ೧೧ ಗುಚ್ಛಗೋಳಗಳೂ ಇರುವಂತೆ ಕಾಣುತ್ತದೆಂಬುದನ್ನು ಗಮನಿಸಿ.

ಈ ವಿಧಾನವನ್ನನುಸರಿಸಿಯೇ ಲೇಯ್‌ಡನ್ನಿನ ಊರ್ಟ್ಸನು ಸೂರ್ಯನ ಪ್ರದಕ್ಷಿಣಕಾಲವನ್ನು ೨೫ ಕೋಟಿ ವರ್ಷಗಳೆಂದು ತೀರ್ಮಾನಿಸಿರುವುದು.

೧೦. ಅಂತರಮೇಘ[1]

ಜಲಜನಕ, ಹೀಲಿಯಂ ಮೊದಲಾದ ಲಘುಧಾತುಗಳ ಕಾಂತಿರೇಖೆಗಳು O ಮತ್ತು B ವರ್ಣವರ್ಗಗಳ ತಾರೆಗಳ ವರ್ಣಪಟಲಗಳ ವೈಶಿಷ್ಟ್ಯವೆಂದು ಹಿಂದೆ ತಿಳಿಸಿ

[1] Space cloud.

ದ್ದೇವೆ. ಈ ರೇಖೆಗಳ ಜೊತೆಗೆ ಕ್ಯಾಲ್ಷಿಯಂ ಲೋಹದ ಕೃಷ್ಣರೇಖೆಗಳೂ ತಾರೆಗಳ ವರ್ಣಪಟಲಗಳಲ್ಲಿ ಬೆರೆತಿರುತ್ತವೆ. ಆದರೆ ನಕ್ಷತ್ರದ ದೃಷ್ಟಿಪಥವೇಗಕ್ಕನುಗುಣವಾಗಿ ಜಲಜನಕ, ಹೀಲಿಯಂ ರೇಖೆಗಳು ಸ್ಥಾನಪಲ್ಲಟವನ್ನು ಪ್ರದರ್ಶಿಸಿದರೂ, ಕ್ಯಾಲ್ಷಿಯಂನ ಕೃಷ್ಣರೇಖೆಗಳು ಮಾತ್ರ ಸ್ವಸ್ಥಾನದಲ್ಲಿಯೇ ನಿಶ್ಚಲವಾಗಿರುತ್ತವೆಂಬ ವಿಚಿತ್ರ ಸಂಗತಿಯನ್ನು ಜರ್ಮನಿಯ ಹಾರ್ಟ್‌ಮನ್ ಎಂಬಾತನು ಮೊದಲು ವಿಜ್ಞಾನಿಗಳ ಗಮನಕ್ಕೆ ತಂದನು. ನಕ್ಷತ್ರಗಳಿಗೂ ನಮಗೂ ಮಧ್ಯೆ ವಿಶಾಲವಾದ ಆದರೆ ವಿರಳವಾದ ಕ್ಯಾಲ್ಷಿಯಂ ಆವಿಯ ಮೇಘವು ಹರಡಿರಬೇಕೆಂದೂ, ಈ ಮೇಘದ ಕ್ಯಾಲ್ಷಿಯಂ ಪರಮಾಣುಗಳು ತಮ್ಮ ಮೂಲಕ ಹಾಯ್ದು ಬರುತ್ತಿರುವ ನಕ್ಷತ್ರಗಳ ಬೆಳಕಿನಲ್ಲಿ ಅವಕ್ಕೆ ಗ್ರಹಿಸಲು ಸಾಧ್ಯವಾದಷ್ಟು ವರ್ಣಭಾಗವನ್ನು ಮಾತ್ರ ನುಂಗುವುದರಿಂದ ಕೃಷ್ಣರೇಖೆಗಳು ಈ ತಾರೆಗಳ ವರ್ಣಪಟಲಗಳಲ್ಲಿ ಹುಟ್ಟಿಕೊಂಡಿವೆಯೆಂದೂ ಈತನೇ ವಿವರಣೆಯಿತ್ತನು. ಕ್ಯಾಲ್ಷಿಯಂ ಕೃಷ್ಣರೇಖೆಗಳ ಉತ್ಪತ್ತಿಸ್ಥಾನವು ತಾರೆಯ ವಾತಾವರಣವಲ್ಲದ್ದರಿಂದ ತಾರಾವೇಗಮೂಲವಾದ ಸ್ಥಾನಪಲ್ಲಟವನ್ನು ಈ ರೇಖೆಗಳು ತೋರುವುದಿಲ್ಲ. ಈ ಮೇಘಕ್ಕೆ ಅಂತರಮೇಘ[1]ವೆಂದೂ, ಪಲ್ಲಟ ರಹಿತ ಕೃಷ್ಣರೇಖೆಗಳಿಗೆ ಅಂತರ ತಾರಾರೇಖೆ[2]ಗಳೆಂದೂ ಹೆಸರುಗಳು ಬಂದಿವೆ.

ಕ್ಯಾಲ್ಷಿಯಂ ರೇಖೆಗಳ ಜೊತೆಗೆ ಸೋಡಿಯಂ, ಪೊಟಾಸಿಯಂ, ಕಬ್ಬಿಣ, ಟಿಟಾನಿಯಂ, ಇಂಗಾಲ, ಸಾರಜನಕ, ಜಲಜನಕ ಇತ್ಯಾದಿ ಪರಮಾಣು, ಅಣುಗಳ ಪಲ್ಲಟರಹಿತ ಕೃಷ್ಣರೇಖೆಗಳೂ ತಾರೆಗಳ ವರ್ಣಪಟಲಗಳಲ್ಲಿ ಕಂಡುಬಂದಿವೆ. ಅಲ್ಲದೆ ತಾರೆಗಳ ದೂರ ಹೆಚ್ಚಿದಂತೆ ಪಲ್ಲಟರಹಿತ ರೇಖೆಗಳು ಹೆಚ್ಚು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಆದಕಾರಣ ಅಂತರಮೇಘದ ವ್ಯಾಪ್ತಿಯು ಬಹಳ ವಿಶಾಲವಾಗಿರಬೇಕು. ಹಾಗಾದರೆ ಈ ಕೃಷ್ಣರೇಖೆಗಳು O, B ಗಳಲ್ಲದೆ ಇತರ ವರ್ಗಗಳ ತಾರಾವರ್ಣಪಟಲಗಳಲ್ಲಿ ಏಕೆ ಕಾಣುವುದಿಲ್ಲ? ಈ ಇತರ ತಾರೆಗಳ ವಾತಾವರಣಗಳಲ್ಲಿಯೇ ಕ್ಯಾಲ್ಷಿಯಂ ಇತ್ಯಾದಿ ಪರಮಾಣುಗಳ ಕೃಷ್ಣರೇಖೆಗಳು ಉತ್ಪತ್ತಿಯಾಗುವುದರಿಂದ, ಅಂತರಮೇಘದ ಪಲ್ಲಟರಹಿತ ರೇಖೆಗಳನ್ನು ಇವು ಮುಚ್ಚಿಬಿಡುತ್ತವೆ.

ಅಂತರಮೇಘವು ಹೆಚ್ಚು ಕಡಿಮೆ ಒಂದೇ ಸಮನಾಗಿ ಆಕಾಶಗಂಗೆಯನ್ನೆಲ್ಲ ಆವರಿಸಿದೆಯೆಂದು ಎಡ್ಡಿಂಗ್‌ಟನ್‌ನ ಮತ. ಮೇಘದ ಸರಾಸರಿ ಸಾಂದ್ರತೆಯು ಪ್ರತಿಯೊಂದು ಘನ ಅಂಗುಲಕ್ಕೆ ಒಂದು ಪರಮಾಣುವಿನಂತೆ ಇರಬೇಕೆಂದು ಗುಣಿಸಿದಾರೆ. ಸ್ಥೂಲದೃಷ್ಟಿಗೆ ಈ ಸಾಂದ್ರತೆಯು ಅತ್ಯಲ್ಪವೆಂದು ತೋರದಿರಬಹುದು. ಭೂಮಿಯ ಮೇಲಣ ಒಂದು ಘನ ಅಂಗುಲ ಗಾಳಿಯಲ್ಲಿರುವ ಪರಮಾಣು

[1] Space cloud. [2] Inter-stellar lines.

ಗಳನ್ನು ಘನ ಅಂಗುಲ ಒಂದಕ್ಕೆ ಒಂದು ಪರಮಾಣುವಿನಂತೆ ಹರಡಿದರೆ, ಅವಕ್ಕೆ ೩೦೦ ಮೈಲಿಗಳು ಉದ್ದ, ೩೦೦ ಮೈಲಿಗಳು ಅಗಲ, ೩೦೦ ಮೈಲಿಗಳು ದಪ್ಪದ ಅವಕಾಶವು ಬೇಕಾಗುತ್ತದೆ! ಅಂತರಮೇಘವು ವಿಶ್ವವಾಪಿಯಾದರೂ ಇದರ ಪರಮಾಣುಗಳು ತಮಗೆ ಸಹಜವಾದ ನಾಲ್ಕಾರು ವರ್ಣರೇಖೆಗಳಷ್ಟು ಕಾಂತಿಯನ್ನು ಮಾತ್ರ ನಕ್ಷತ್ರಗಳ ಬೆಳಕಿನಿಂದ ಕಸಿಯುವುದರಿಂದ ಈ ಅನಿಲಮೇಘವು ನಕ್ಷತ್ರಗಳ ಕಾಂತಿಯನ್ನು ಕುಂದಿಸುವುದಿಲ್ಲ.

೧೨. ಅಂತರ ತಾರಾವಿಶ್ವಧೂಳಿ[1]

ಆಕಾಶದಲ್ಲಿ ಅನಿಲಪರಮಾಣುಗಳ ಮೇಘದ ಬದಲು ಮರಳು ಮುಂತಾದ ಘನಪದಾರ್ಥಗಳ ಕಣಗಳ ತಂಡವಿದ್ದಿದ್ದರೆ ಅದು ಬೆಳಕನ್ನು ಪೂರ್ತಿಯಾಗಿ ತಡೆದು ಬಿಡುತ್ತಿತ್ತು. ದಕ್ಷಿಣದ ವೃಶ್ಚಿಕರಾಶಿಯಿಂದ ಹಿಡಿದು ಉತ್ತರದ ರಾಜಹಂಸರಾಶಿಯ ವರೆಗೂ ಆಕಾಶಗಂಗೆಯನ್ನು ಸೀಳಿರುವಂತೆ ತೋರುವ ಕರಿಯ ಗಲ್ಲಿಯು ಪ್ರಾಯಶಃ ಇಂಥ ಮರಳುಕಣಗಳ ರಾಶಿಯೆಂದು ನಂಬಲಾಗಿದೆ. ತ್ರಿಶಂಕುರಾಶಿಯ ದಕ್ಷಿಣ ತುದಿಯಲ್ಲಿಯೂ ದಟ್ಟವಾದ ಇಂಥ ಕರಿಯ ಮೋಡವಿದೆ. ಇದನ್ನು ಕಲ್ಲಿದ್ದಲು ಮೂಟೆ[2] ಎಂದು ಕರೆಯುತ್ತಾರೆ.

ಹೀಗೆ ಅಲ್ಲಲ್ಲಿ ಸೇರಿಕೊಂಡಿರುವ ಕಣಗಳ ರಾಶಿಗಳೇ ಅಲ್ಲದೆ ಆಕಾಶಗಂಗೆಯನ್ನು ಎಲ್ಲೆಡೆಯಲ್ಲಿಯೂ ವಿರಳವಿರಳವಾದ ಸೂಕ್ಷ್ಮಧೂಳಿನ ಕಣಗಳೂ ಆವರಿಸಿವೆ. ಧೂಳು ಬೆಳಕನ್ನು ಹೀರಿ ಎಲ್ಲ ದಿಕ್ಕುಗಳಿಗೂ ಚೆದರಿಸುತ್ತದೆ. ನೀಲಿ ಬಣ್ಣದ ಬೆಳಕನ್ನು ಚೆದರಿಸುವುದು ಕೆಂಪು ಬಣ್ಣವನ್ನು ಚೆದರಿಸುವುದಕ್ಕಿಂತ ಸುಲಭ. ಆದ್ದರಿಂದ ಸರ್ವವ್ಯಾಪಿಯಾದ ಈ ಧೂಳನ್ನು ತೂರಿಕೊಂಡು ಬರುವ ನಕ್ಷತ್ರಗಳ ಬೆಳಕಿನಲ್ಲಿ ನೀಲಿಬಣ್ಣವು ಕೆಂಪು ಬಣ್ಣಕ್ಕಿಂತ ಹೆಚ್ಚು ಅಪಹಾರವಾಗಿರುತ್ತದೆ. ಮತ್ತು ನಕ್ಷತ್ರಗಳು ಅವುಗಳ ಸಹಜ ವರ್ಣಕ್ಕಿಂತ ಹೆಚ್ಚು ಕೆಂಪಾಗಿ ಕಾಣುತ್ತವೆ. ನಕ್ಷತ್ರಗಳ ದೂರ ಹೆಚ್ಚಿದಂತೆ ಅವುಗಳ ಬೆಳಕು ಧೂಳಿನಲ್ಲಿ ಹೆಚ್ಚು ದೂರ ಹರಿದು ಬರಬೇಕಾದದ್ದರಿಂದ ಹೆಚ್ಚು ಕಾಂತಿಹೀನವಾಗಿಯೂ, ಹೆಚ್ಚು ಕೆಂಪಾಗಿಯೂ ತೋರುತ್ತವೆ. ಸೂರ್ಯೋದಯ ಸೂರ್ಯಾಸ್ತ ಕಾಲಗಳಲ್ಲಿ ಸೂರ್ಯನು ಕೆಂಪಾಗಿ ಕಾಣುವುದೂ ಭೂಮಿಯ ವಾಯುಮಂಡಲದಲ್ಲಿರುವ ಧೂಳಿನ ಮಹಿಮೆಯಿಂದಲೇ. ಮಧ್ಯಾಹ್ನಕಾಲದಲ್ಲಿ ಸೂರ್ಯನ ಬೆಳಕು ವಾಯುಮಂಡಲವನ್ನು ನೇರವಾಗಿ ದಾಟುವುದರಿಂದ ಕಡಿಮೆ ದೂರವನ್ನೂ ಉದಯಾಸ್ತ ಕಾಲಗಳಲ್ಲಿ ಓರೆಯಾಗಿ ದಾಟುವುದರಿಂದ ಹೆಚ್ಚು ದೂರವನ್ನೂ ತಟಾಯಬೇಕಾಗುತ್ತದೆ. ಧೂಳು ನೀಲಿ ಬೆಳಕನ್ನು ಹೆಚ್ಚಾಗಿ ಚೆದರಿಸಿ ಎಲ್ಲ ದಿಕ್ಕುಗಳಿಗೂ

[1] Inter-stellar cosmic dust. [2] Coal sack.

ಚೆಲ್ಲುವುದರಿಂದ ಆಕಾಶವು ನೀಲಿಬಣ್ಣವಾಗಿ ಕಾಣುತ್ತದೆ. ಧೂಳಿಲ್ಲದಿದ್ದರೆ ಆಕಾಶವು ಕಪ್ಪಗೆ ಕಾಣುತ್ತಿತ್ತು.

ಸುಮಾರು ಇನ್ನೂರು ಜ್ಯೋತಿರ್ವರ್ಷಗಳಿಗಿಂತ ದೂರದ ಆಕಾಶಕಾಯಗಳ ದೂರನಿರ್ಣಯ ವಿಧಾನಗಳೆಲ್ಲಕ್ಕೂ ಕಾಯಗಳ ಸಹಜಕಾಂತಿ ವರ್ಗಾಂಕ ಮತ್ತು ತೋರಿಕೆಯ ಕಾಂತಿ ವರ್ಗಾಂಕಗಳಿಗಿರುವ ವ್ಯತ್ಯಾಸನಿರ್ಣಯಗಳೇ ಆಧಾರ. ಈ ವಿಧಾನಗಳಲ್ಲಿ ಕಾಯದ ಕಾಂತಿಯು ಅದರ ದೂರದ ವರ್ಗಕ್ಕೆ ವಿಲೋಮಾನುಪಾತವಾಗಿ ಕುಗ್ಗುತ್ತದೆಂದು ಗುಣಿಸುತ್ತೇವೆ. ಕಾಯಕ್ಕೂ ನಮಗೂ ಮಧ್ಯೆ ಕಾಂತಿ ಗ್ರಹಣ ಸಾಮಗ್ರಿಯೇನೂ ಇಲ್ಲದಿದ್ದರೆ ಮಾತ್ರ ಈ ನಿಯಮವು ಸರಿಯಾಗಿ ಅನ್ವಯಿಸುತ್ತದೆ. ಆದ್ದರಿಂದ ಮೇಲೆ ತಿಳಿಸಿರುವ ಅಂತರತಾರಾವಿಶ್ವಧೂಳಿಯ ಕಾಂತಿಗ್ರಹಣಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ದೂರಕಾಯಗಳ ದೂರನಿರ್ಣಯಗಳು ಪ್ರಮಾದಮಿಶ್ರ ನಿರ್ಣಯಗಳಾಗುತ್ತವೆ.

ಹಲವು ಸಂಶೋಧನೆಗಳ ಫಲವಾಗಿ ಆಕಾಶಕಾಯದ ಕಾಂತಿವರ್ಗಾಂಕವು ವಿಶ್ವಧೂಳಿಯ ಪರಿಣಾಮವಾಗಿ ಪ್ರತಿ ೧೦೦೦ ಪಾರ್ಸೆಕ್‌ಗಳ ದೂರಕ್ಕೆ ೩/೪ ಅಂಕ ಹೆಚ್ಚುತ್ತದೆಂದು ನಿರ್ಣಯವಾಗಿದೆ. ಇದು ನೀಲಕಾಂತಿಗೆ ಅಂದರೆ ಛಾಯಾಚಿತ್ರಗಳಿಗೆ ಅನ್ವಯಿಸುತ್ತದೆ. ನಮ್ಮ ಕಣ್ಣುಗಳಿಗಾದರೋ ಪ್ರತಿ ೧೦೦೦ ಪಾರ್ಸೆಕ್‌ಗಳಿಗೆ ೧/೪ ಅಂಕ ಹೆಚ್ಚುತ್ತದೆ. ಉದಾಹರಣೆಗೆ ಹತ್ತು ಪಾರ್ಸೆಕ್‌ಗಳ ದೂರದ ಒಂದು ತಾರೆಯ ಕಾಂತಿವರ್ಗಾಂಕವು ೧ ಇದ್ದರೆ, ಅದೇ ತಾರೆಯನ್ನು ೧೦೦೦ ಪಾರ್ಸೆಕ್‌ಗಳ ದೂರ ಒಯ್ದರೆ ಅದರ ತೋರಿಕೆಯ ಕಾಂತಿವರ್ಗಾಂಕವು ವಿಶ್ವಧೂಳಿಯಿಲ್ಲದಿದ್ದರೆ ೧೧ ಆಗುತ್ತಿತ್ತು. ವಿಶ್ವಧೂಳಿಯಿರುವುದರಿಂದ ಬಿಂಬಗ್ರಾಹಿಗೆ ತೋರಿಕೆಯ ಕಾಂತಿ ವರ್ಗಾಂಕವು ೧೧೩/೪ ಆಗುತ್ತದೆ, ಕಣ್ಣಿಗೆ ೧೧೧/೪ ಆಗಿ ತೋರುತ್ತದೆ.

ಆಕಾಶಗಂಗೆಯನ್ನು ಅಂತರತಾರಾಧೂಳಿಯು ಸುಮಾರು ೨೦೦೦ ಜ್ಯೋತಿರ್ವರ್ಷಗಳಷ್ಟು ದಪ್ಪಕ್ಕೆ ಮುಸುಕಿದೆಯೆಂದು ಗುಣಿಸಿದ್ದಾರೆ.

೧೪. ಅಂತರಗುಚ್ಛ ತಾರಾಶೀಕರ[1]

ಆಕಾಶಗಂಗೆಯ ದಪ್ಪ ಸುಮಾರು ೧೦,೦೦೦ ಜ್ಯೋತಿರ್ವರ್ಷಗಳಷ್ಟೆ. ಈ ದಪ್ಪದ ದಿಕ್ಕಿನಲ್ಲಿಯೂ ಅಂದರೆ ಆಕಾಶಗಂಗೆಯ ತಲಕ್ಕೆ ಸಮಕೋನಗಳಲ್ಲಿಯೂ ಮೂವತ್ತು ನಲವತ್ತು ಸಾವಿರ ಜ್ಯೋತಿರ್ವರ್ಷಗಳ ದೂರದಲ್ಲಿ ಕೂಡ ಅಪರೂಪವಾಗಿ ಕೆಲವು ತಾರೆಗಳು ಪತ್ತೆಯಾಗಿವೆ. ಇವುಗಳಲ್ಲಿ ಕೆಲವು ಯೌಧಿಷ್ಠಿರ ಚಂಚಲಗಳಾದ್ದರಿಂದ ಅಂಥವುಗಳ ದೂರಗಳು ನಿರ್ಧರವಾಗಿವೆ. ಅಂತೂ ಆಕಾಶಗಂಗೆಯ

[1] Inter-cluster Star haze.

ಪ್ರಧಾನವ್ಯವಸ್ಥೆಯ ಹೊರಗೆ ಕೂಡ ಗಂಗೆಯ ಕೇಂದ್ರದಿಂದ ೫೦,೦೦೦ ಜ್ಯೋತಿರ್ವರ್ಷಗಳ ತ್ರಿಜ್ಯದ ಗೋಳಾವಕಾಶದಲ್ಲಿ ಗುಚ್ಛಗೋಳಗಳ ನಡುವೆ ಅತಿ ವಿರಳವಾಗಿ ತಾರೆಗಳು ಹರಡಿರಬೇಕು. ಈ ಅಂತರಗುಚ್ಛ ತಾರಾಶೀಕರದ ನಕ್ಷತ್ರಸಾಂದ್ರತೆಯು ಆಕಾಶಗಂಗೆಯ ಸರಾಸರಿ ನಕ್ಷತ್ರಸಾಂದ್ರತೆಯ $\frac{೧}{೧೦೦}$ ಇರಬಹುದು.

೧೪. ಮ್ಯಾಗೆಲಾನಿನ ಮೇಘಗಳು

ಹಿಂದಿನ ಅಧ್ಯಾಯವೊಂದರಲ್ಲಿ ತಿಳಿಸಿರುವಂತೆ ಖಗೋಳದ ದಕ್ಷಿಣಧ್ರುವಕ್ಕೆ ಸಮೀಪವಾಗಿ ಮ್ಯಾಗೆಲಾನಿನ ಮಹಾಮೇಘ ಲಘುಮೇಘಗಳಿವೆ. ಇವುಗಳಲ್ಲಿ ಅನೇಕ ಯೌಧಿಷ್ಠಿರ ಚಂಚಲತಾರೆಗಳಿರುವುದರಿಂದ ಇವುಗಳ ದೂರಗಳನ್ನು ನಿಷ್ಕೃಷ್ಟವಾಗಿ ನಿರ್ಣಯಿಸಬಹುದು. ಮಹಾಮೇಘವು ನಮ್ಮಿಂದ ೭೫,೦೦೦ ಜ್ಯೋತಿರ್ವರ್ಷಗಳ ದೂರದಲ್ಲಿಯೂ, ಲಘುಮೇಘವು ೮೪,೦೦೦ ಜ್ಯೋತಿರ್ವರ್ಷಗಳ ದೂರದಲ್ಲಿಯೂ ಇವೆ. ಆದ್ದರಿಂದ ಈ ಮೇಘಗಳು ನಮ್ಮ ಆಕಾಶಗಂಗೆಯ ಗೋಳದ ಅಂಚಿನಲ್ಲಿಯೇ ಇವೆ.

ಮಹಾಮೇಘ ಲಘುಮೇಘಗಳೆರಡರಲ್ಲಿಯೂ ಅನೇಕ ಅನಿಲಜ್ಯೋತಿರ್ಮೇಘಗಳೂ ಇವೆ. ಇವುಗಳಲ್ಲಿ ಒಂದರ ವ್ಯಾಸವು ಮಹಾವ್ಯಾಧ ಮೇಘದ್ದಕ್ಕಿಂತ ನೂರರಷ್ಟು ದೊಡ್ಡದಾಗಿದೆ. ಅಲ್ಪಸ್ವಲ್ಪ ಗುಚ್ಛಗೋಳಗಳೂ, ನಮ್ಮ ಕೃತ್ತಿಕಾ ಗುಚ್ಛದಂಥ ಅನೇಕ ವಿರಳ ತಾರಾಗುಚ್ಛಗಳೂ ಕೂಡ ಇವೆ. ಮಹಾಮೇಘದ ಒಂದು ನಕ್ಷತ್ರದ ಸಹಜ ಕಾಂತಿವರ್ಗಾಂಕವು —೯. ಇದು ಖಗೋಳದ ಕಾಂತಿತಮ ನಕ್ಷತ್ರಗಳಲ್ಲೊಂದು, ಐದು ಲಕ್ಷ ಸೂರ್ಯರಷ್ಟು ಪ್ರಕಾಶಮಾನವಾದದ್ದು. ಮಹಾಮೇಘದಲ್ಲೊಂದು ನವ್ಯ, ಲಘುಮೇಘದಲ್ಲಿಯೂ ಒಂದು ನವ್ಯವು ಪತ್ತೆಯಾಗಿವೆ.

ಮೇಲಿನ ವಿವರಣೆಗಳಿಂದ ಎರಡು ಮೇಘಗಳ ರಚನೆಯೂ ಆಕಾಶಗಂಗೆಯದನ್ನೇ ಹೋಲುತ್ತದೆಂಬುದು ವ್ಯಕ್ತವಾಗುತ್ತದೆ. ಮಹಾಮೇಘದ ವ್ಯಾಸವು ೧೦,೦೦೦ ಜ್ಯೋತಿರ್ವರ್ಷಗಳು, ಲಘುಮೇಘದ ವ್ಯಾಸ ೫೦೦೦. ಈ ಮೇಘಗಳ ಸುತ್ತಲೂ ಆಕಾಶಗಂಗೆಯನ್ನು ಕವಿದಿರುವಂತೆಯೇ ಅತಿ ವಿರಳವಾದ ತಾರೆಗಳ ಕ್ಷೀಣಕಾಂತಿಯ ಮಂಜು ಕವಿದಿದೆ. ಇದನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಇವುಗಳ ವ್ಯಾಸಗಳು ಮೇಲೆ ಕೊಟ್ಟಿರುವ ಸಂಖ್ಯೆಗಳ ಸುಮಾರು ಮೂರು ನಾಲ್ಕರಷ್ಟಾಗುತ್ತವೆ. ಅಲ್ಲಿಗೂ ಆಕಾಶಗಂಗೆಗಿಂತ ಗಾತ್ರದಲ್ಲಿ ಇವು ಚಿಕ್ಕ ವ್ಯವಸ್ಥೆಗಳೇ. ಇವುಗಳ ಚಲನೆಯಿಂದ ಇವು ಆಕಾಶಗಂಗೆಯ ಗುರುತ್ವಾಕರ್ಷಣ ಬಲಕ್ಕೇ ಅಧೀನವಾಗಿವೆಯೆಂದೂ ಕಂಡುಬಂದಿದೆ. ಆದಕಾರಣ ಇವೂ ನಮ್ಮ ಸ್ಥಳೀಯ ಬ್ರಹ್ಮಾಂಡ[1]ವಾದ

[1] Local Universe, Local Galaxy

ಆಕಾಶಗಂಗೆಗೇ ಸೇರಿದ ಉಪಬ್ರಹ್ಮಾಂಡಗಳು. ಆಕಾಶಗಂಗೆಯನ್ನು ಭರತಖಂಡಕ್ಕೆ ಹೋಲಿಸಿದರೆ ಮೇಘಗಳು ಸಿಂಹಳದ್ವೀಪದಂತೆ.

ಆಕಾಶಗಂಗೆಯ ವ್ಯವಸ್ಥೆಯ ಒಟ್ಟು ಭಾರವು ಸುಮಾರು ಹತ್ತುಸಾವಿರ ಕೋಟಿ ($೧೦^{೧೧}$) ಸೌರಭಾರಗಳಷ್ಟು ಎಂದು ಅಂದಾಜು ಮಾಡಲಾಗಿದೆ. ಮಹಾ ಮೇಘ, ಲಘುಮೇಘಗಳ ಭಾರಗಳು ಇದಕ್ಕೂ ಬಹಳ ಕಡಿಮೆ. ಇವುಗಳ ಭ್ರಮಣ ವೇಗಗಳು ಪತ್ತೆಯಾಗಿಲ್ಲವಾದ್ದರಿಂದ ಭಾರಗಳು ಎಷ್ಟೆಂದು ನಿರ್ಣಯವಾಗಿಲ್ಲ.

ಇಲ್ಲಿಗೆ ನಮ್ಮ ಸ್ಥಳೀಯ ಬ್ರಹ್ಮಾಂಡದ ಅವಸರದ ಯಾತ್ರೆಯು ಪೂರೈಸಿತೆಂದು ಹೇಳಬಹುದು. ಈ ವಿಹಂಗಮಾವಲೋಕನದಲ್ಲಿ ನಾವು ಕಂಡ ಪ್ರಧಾನ ದೃಶ್ಯಗಳನ್ನು ಈಗ ಸಂಗ್ರಹವಾಗಿ ಚಿಂತನೆಮಾಡೋಣ. ನಮ್ಮ ಪ್ರವಾಸದ ಅನುಭವಗಳ ವಿಪುಲತೆ ವೈವಿಧ್ಯಗಳು ಒಂದಾದ ಮೇಲೊಂದು ಬಿಡುವಿಲ್ಲದೆ ತರಂಗ ತರಂಗವಾಗಿ ನಮ್ಮ ಮನೋಭಿತ್ತಿಯ ಮೇಲೆ ಹಾದುಹೋಗಿರುವುದರಿಂದ ನಮ್ಮ ಭಾವನೆಗಳನ್ನು ವ್ಯವಸ್ಥಿತ ರೂಪಕ್ಕೆ ತಂದು ನಿಲ್ಲಿಸಲು ಈ ಸಂಗ್ರಹವು ಅವಶ್ಯ.

೧೫. ಸ್ಥಳೀಯ ಬ್ರಹ್ಮಾಂಡದ ರಚನೆಯ ಸಂಗ್ರಹವರ್ಣನೆ

ನಮ್ಮ ಭೂಮಿಯಿಂದ ಒಂಬತ್ತು ಕೋಟಿ ಮುವ್ವತ್ತು ಲಕ್ಷ ಮೈಲಿಗಳ ದೂರದಲ್ಲಿ ಅಥವಾ ಸುಮಾರು ಎಂಟು ಜ್ಯೋತಿರ್ನಿಮಿಷಗಳ ದೂರದಲ್ಲಿ ಸೂರ್ಯನಿದ್ದಾನೆ. ಗಾತ್ರದಲ್ಲಿಯೂ ಭಾರದಲ್ಲಿಯೂ ಸೂರ್ಯನು ಭೂಮಿಗಿಂತ ಬಹು ದೊಡ್ಡವನು. ಭೂಮಿಯ ವ್ಯಾಸವು ೮,೦೦೦ ಮೈಲಿಗಳು, ಸೂರ್ಯನ ವ್ಯಾಸವು ಇದರ ೧೦೮ ರಷ್ಟು, ಭೂಮಿಯ ಭಾರವು ೬ ಕೋಟಿ ಕೋಟಿ ಕೋಟಿ ಟನ್‌ಗಳು, ಸೂರ್ಯನ ಭಾರವು ಇದರ ೩,೩೩,೦೦೦ ದಷ್ಟು. ಭೂಮಿಯಂತೆಯೇ ಇತರ ಗ್ರಹಗಳೂ ಸೂರ್ಯನನ್ನು ಬೇರೆಬೇರೆ ದೂರಗಳಲ್ಲಿ ಪ್ರದಕ್ಷಿಣೆ ಮಾಡುತ್ತಿವೆ. ದೂರತಮ ಗ್ರಹವಾದ ಪ್ಲುಟೋ ಗ್ರಹವು ಭೂಮಿ ಸೂರ್ಯರ ದೂರದ ೪೦ ರಷ್ಟು ದೂರದಲ್ಲಿ ೨೫೦ ವರ್ಷಗಳಿಗೊಂದರಂತೆ ಸೂರ್ಯ ಪ್ರದಕ್ಷಿಣೆ ಮಾಡುತ್ತಿದೆ. ಭೂಮಿಗೆ ಅತ್ಯಂತ ಸಮೀಪದಲ್ಲಿರುವ ಆಕಾಶಕಾಯವು ಚಂದ್ರ. ಚಂದ್ರನ ದೂರವು ೨,೩೮,೦೦೦ ಮೈಲಿಗಳು, ಸುಮಾರು ಒಂದೂಕಾಲು ಜ್ಯೋತಿಕ್ಷಣಗಳು.

ಆಕಾಶದಲ್ಲಿರುವ ನಕ್ಷತ್ರಗಳೆಲ್ಲ ಸೂರ್ಯರೇ. ಕೆಲವು ನಕ್ಷತ್ರಗಳು ನಮ್ಮ ಸೂರ್ಯನಿಗಿಂತ ಭಾರ, ಕೆಲವು ಸ್ವಲ್ಪ ಹಗುರ, ಕೆಲವು ಗಾತ್ರದಲ್ಲಿ ದೊಡ್ಡವು, ಕೆಲವು ಚಿಕ್ಕವು, ಕೆಲವು ಸೂರ್ಯನಿಗಿಂತ ಅಧಿಕ ಉಷ್ಣಾಂಶದವು, ಕೆಲವು ಕಡಿಮೆ ಉಷ್ಣಾಂಶದವು, ಕೆಲವು ಸೂರ್ಯನಿಗಿಂತ ತರುಣ ತಾರೆಗಳು, ಕೆಲವು ವಯಸ್ಸಿನಲ್ಲಿ ಅವನಿಗಿಂತ ಹಿರಿಯವು.

ಬಣ್ಣದಲ್ಲಿಯೂ ಅವನು ಅಷ್ಟು ಬಿಳಿಯನೂ ಅಲ್ಲ, ಅಷ್ಟು ಕೆಂಜನೂ ಅಲ್ಲ; ಒಟ್ಟಿನಲ್ಲಿ ನಮ್ಮ ಸೂರ್ಯನು ಮಧ್ಯ ವಯಸ್ಸಿನ ಸಾಮಾನ್ಯ ತಾರೆ, ತಾರಾಪ್ರಪಂಚ ದಲ್ಲಿ ಅವನಿಗೆ ಯಾವ ವೈಶಿಷ್ಟ್ಯವೂ ಇಲ್ಲ. ಅವನ ಗ್ರಹಪರಿವಾರವು ಸೂರ್ಯನಿಗಿರುವ ಒಂದು ಅದ್ವಿತೀಯ ಸಂಪತ್ತು ಎಂದು ಕೆಲವು ವರ್ಷಗಳ ಹಿಂದೆ ಅಂದುಕೊಂಡಿದ್ದೆವು, ಆದರೆ ಈಗ ಪ್ರಾಯಶಃ ಆರು ನಕ್ಷತ್ರಗಳಲ್ಲೊಂದಕ್ಕೆ ಗ್ರಹಗಳಿರಬೇಕೆಂದು ನಂಬಿದ್ದೇವೆಯಾದ್ದರಿಂದ ಇದೂ ಅಷ್ಟೇನು ಹೇಳಿಕೊಳ್ಳುವಂಥ ವಿಶೇಷವಲ್ಲ.

ನಕ್ಷತ್ರಗಳಲ್ಲಿ ನಮಗೆ ಅತ್ಯಂತ ಹತ್ತಿರದಲ್ಲಿರುವ ನಕ್ಷತ್ರದ ದೂರ ಸುಮಾರು ನಾಲ್ಕೂಕಾಲು ಜ್ಯೋತಿರ್ವರ್ಷಗಳು. ಸುಮಾರು ೮೦,೦೦೦ ಜ್ಯೋತಿರ್ವರ್ಷಗಳು ಬಹುದೂರ ನಕ್ಷತ್ರದ ದೂರ. ಈ ಎಲ್ಲ ನಕ್ಷತ್ರಗಳೂ ಖಗೋಳವನ್ನು ಎರಡು ಸಮ ಭಾಗಗಳನ್ನಾಗಿ ಮಾಡಿರುವಂತೆ ತೋರುವ ನಕ್ಷತ್ರಗಳ ಮಹಾವ್ಯೂಹವಾದ ಆಕಾಶಗಂಗೆಯ ವ್ಯವಸ್ಥೆಗೆ ಸೇರಿವೆ. ಈ ವ್ಯೂಹವು ಆಕಾರದಲ್ಲಿ ಇಡ್ಲಿಯಂತೆ ಇದೆ. ಇದರ ವ್ಯಾಸವು ಸುಮಾರು ಒಂದು ಲಕ್ಷ ಜ್ಯೋತಿರ್ವರ್ಷಗಳು, ದಪ್ಪವು ಸುಮಾರು ಹತ್ತುಸಾವಿರ ಜ್ಯೋತಿರ್ವರ್ಷಗಳು.

ಈ ವ್ಯವಸ್ಥೆಯ ಕೇಂದ್ರದಿಂದ ೩೦,೦೦೦ ಜ್ಯೋತಿರ್ವರ್ಷಗಳ ದೂರದಲ್ಲಿ ಮತ್ತು ಕೇಂದ್ರತಲದಿಂದ ೧೦೦ ಜ್ಯೋತಿರ್ವರ್ಷಗಳ ಎತ್ತರದಲ್ಲಿ ಸೂರ್ಯನಿದ್ದಾನೆ. ಆಕಾಶಗಂಗೆಯ ತಲದ ದಿಕ್ಕುಗಳಲ್ಲಿ ಕೋಟ್ಯಂತರ ನಕ್ಷತ್ರಗಳು ಕೂಡಿವೆಯಾಗಿ ಆಕಾಶಗಂಗೆಯು ಮಹಾವೃತ್ತಾಕಾರವಾಗಿ ಕಾಣುತ್ತದೆ. ಆಕಾಶಗಂಗೆಯ ತಲಕ್ಕೆ ಸಮಕೋನಗಳಲ್ಲಿ ನಕ್ಷತ್ರಗಳು ಬಹಳ ದೂರ ವ್ಯಾಪಿಸಿಲ್ಲವಾಗಿ ಆ ದಿಕ್ಕುಗಳಲ್ಲಿ ನಕ್ಷತ್ರಗಳು ಬಿಡಿಬಿಡಿಯಾಗಿಯೇ ತೋರುತ್ತವೆ. ಈ ನಕ್ಷತ್ರಗಳನ್ನು ನಮ್ಮ ಅನುಕೂಲಕ್ಕಾಗಿ ನಾವು ಹಲವು ನಕ್ಷತ್ರರಾಶಿಗಳಾಗಿ ವಿಂಗಡಿಸಿಕೊಂಡಿದ್ದೇವೆ. ನಮ್ಮ ಕಣ್ಣಿಗೆ ಹೀಗೆ ಕಂಡರೂ ಆಕಾಶಗಂಗೆಯ ವ್ಯವಸ್ಥೆಯಲ್ಲಿ ನಕ್ಷತ್ರಗಳ ಸಾಂದ್ರತೆ ಹೆಚ್ಚು ಕಡಿಮೆ ಸಮನಾಗಿಯೆ ಇದೆ. ಸುಮಾರು ಆರೇಳು ಜ್ಯೋತಿರ್ವರ್ಷಗಳ ದೂರಕ್ಕೊಂದೊಂದರಂತೆ ನಕ್ಷತ್ರಗಳು ಹರಡಿವೆ, ನಮಗೆ ನಕ್ಷತ್ರಗಳಿಂದ ಕಿಕ್ಕಿರಿದಿರುವಂತೆ ಕಾಣುವ ಆಕಾಶಗಂಗೆಯ ದಿಕ್ಕುಗಳಲ್ಲಿಯೂ ನಕ್ಷತ್ರಸಾಂದ್ರತೆಯು ಇದಕ್ಕಿಂತ ಹೆಚ್ಚಿಲ್ಲವೆಂಬುದು ನಮ್ಮ ಗಮನದಲ್ಲಿರಬೇಕು. ಈ ನಕ್ಷತ್ರಗಳಲ್ಲಿ ಬಹು ಸಂಖ್ಯೆಯವು ಬಿಡಿ ನಕ್ಷತ್ರಗಳಾದರೂ ಕೆಲವು ತಾರಾಯುಗ್ಮಗಳೂ ಇವೆ, ಇನ್ನೂ ಅಲ್ಪಸಂಖ್ಯೆಯಲ್ಲಿ ಕೆಲವು ತಾರಾನೇಕಗಳೂ ಇವೆ.

ಆಕಾಶಗಂಗೆಯ ಈ ನಕ್ಷತ್ರಗಳ ಮಧ್ಯೆ ಅಲ್ಲಲ್ಲಿ ಸಾಂದ್ರತರದ ಬ್ರಾಹ್ಮಾಂಡ ಗುಚ್ಛಗಳೂ, ಅನಿಲಜ್ಯೋತಿರ್ಮೇಘಗಳೂ, ಶಿಥಿಲ ಕಾಳಮೇಘಗಳೂ ಹರಡಿವೆ.

ಕೆಲವುಕಡೆ ಮರಳು ಕಣರಾಶಿಗಳ ಕರಿಯ ಗಲ್ಲಿಗಳು ವ್ಯೂಹವನ್ನು ತೂರಿವೆ. ಇವುಗಳ ಜೊತೆಗೆ ಆಕಾಶಗಂಗೆಯ ಸುತ್ತಲೂ ಸುಮಾರು ೨,೦೦೦ ಜ್ಯೋತಿರ್ವರ್ಷಗಳ ದೂರದ ವರೆಗಾದರೂ ಸರ್ವವ್ಯಾಪಿಯಾದ ಅಂತರತಾರಾವಿಶ್ವಧೂಳಿಯು ಕವಿದಿದೆ. ಆಕಾಶಗಂಗೆಯ ಕೇಂದ್ರದಿಂದ ಒಂದು ಲಕ್ಷ ಜ್ಯೋತಿರ್ವರ್ಷಗಳ ವ್ಯಾಸದ ಗೋಳವನ್ನು ನಿರ್ಮಿಸಿದರೆ ಈ ಗೋಳಾವಕಾಶದಲ್ಲಿ ಹದಿನೈದಿಪ್ಪತ್ತು ಸಾವಿರ ಜ್ಯೋತಿರ್ವರ್ಷಗಳಿಗೊಂದರಂತೆ ತಾರಾಗುಚ್ಛಗೋಳಗಳು ಹಬ್ಬಿವೆ. ಇವುಗಳೊಂದೊಂದರ ವ್ಯಾಸವೂ ಸುಮಾರು ೧೮೦ ಜ್ಯೋತಿರ್ವರ್ಷಗಳು, ಒಂದೊಂದೂ ಸುಮಾರು ಒಂದು ಲಕ್ಷ ತಾರೆಗಳ ಹಿಂಡು. ಗುಚ್ಛಗೋಳಗಳ ಮಧ್ಯಾವಕಾಶದಲ್ಲಿ ಅಲ್ಲೊಂದು ಇಲ್ಲೊಂದು ಬಿಡಿತಾರೆಗಳೂ ಸೇರಿಕೊಂಡಿವೆ. ಈ ಬಿಡಿತಾರೆಗಳ ಗುಂಪಿಗೆ ಅಂತರಗುಚ್ಛ ತಾರಾಶೀಕರವೆಂಬ ಹೆಸರಿದೆ. ಈ ಸಮಸ್ತ ಕಾಯಗಳ ಮಧ್ಯಸ್ಥಲವನ್ನೆಲ್ಲ ಅತಿ ವಿರಳವಾದ ಅನಿಲರೂಪದ ಅಂತರಮೇಘವು ಆಕ್ರಮಿಸಿದೆ. ಈ ಮಹಾವ್ಯವಸ್ಥೆಯೇ ಆಕಾಶಗಂಗೆ (ಚಿತ್ರ ೧೮).

ಆಕಾಶಗಂಗೆಯ ಕಾಯಗಳೆಲ್ಲ ಅದರ ಕೇಂದ್ರವನ್ನು ಬಳಸುತ್ತಿವೆ. ನಮ್ಮ ಸೂರ್ಯನ ಮತ್ತು ಕೇಂದ್ರದಿಂದ ಸೂರ್ಯನಷ್ಟು ದೂರದಲ್ಲಿರುವ ಇತರ ಕಾಯಗಳ ಪ್ರದಕ್ಷಿಣ ವೇಗವು ಸೆಕಂಡೊಂದಕ್ಕೆ ಸುಮಾರು ೧೫೦ ಮೈಲಿಗಳು. ಈ ವೇಗದಂತೆ ಒಂದು ಕೇಂದ್ರ ಪ್ರದಕ್ಷಿಣೆಗೆ ೨೫ ಕೋಟಿ ವರ್ಷಗಳು ಹಿಡಿಯುತ್ತದೆ. ಸೂರ್ಯನಿಗಿಂತ ಹತ್ತಿರದ ನಕ್ಷತ್ರಗಳ ಪ್ರದಕ್ಷಿಣಕಾಲ ಇದಕ್ಕಿಂತ ಕಡಿಮೆ, ದೂರದ ನಕ್ಷತ್ರಗಳ ಪ್ರದಕ್ಷಿಣಕಾಲ ಇದಕ್ಕಿಂತ ಹೆಚ್ಚು. ಆಕಾಶಗಂಗೆಯ ಒಟ್ಟು ಭಾರವು ಹತ್ತು ಹದಿನೈದು ಸಾವಿರ ಕೋಟಿ ಸೌರಭಾರಗಳಷ್ಟು.

ಗೋಳಾಕಾರದ ಆಕಾಶಗಂಗೆಯ ಅಂಚಿನಲ್ಲಿ ಆಕಾಶಗಂಗೆಯಂಥ ಮತ್ತೆರಡು ಉಪಬ್ರಹ್ಮಾಂಡಗಳಿವೆ. ಒಂದರ ವ್ಯಾಸ ಸುಮಾರು ೧೦,೦೦೦, ಇನ್ನೊಂದರದು ೫,೦೦೦ ಜ್ಯೋತಿರ್ವರ್ಷಗಳು. ಈ ಉಪಬ್ರಹ್ಮಾಂಡಗಳೂ ಆಕಾಶಗಂಗೆಯ ಗುರುತ್ವಾಕರ್ಷಣ ಬಲಕ್ಕೇ ಅಧೀನವಾಗಿ ಅದರ ಕೇಂದ್ರವನ್ನು ಬಳಸುತ್ತಿವೆ. ನಮ್ಮ ಸ್ಥಳೀಯ ಬ್ರಹ್ಮಾಂಡದ ಪ್ರಧಾನ ಖಂಡವಾದ ಆಕಾಶಗಂಗೆಯ ಎರಡು ದ್ವೀಪ ಬ್ರಹ್ಮಾಂಡ[1]ಗಳೆಂದು ಈ ಮಹಾಮೇಘ ಲಘುಮೇಘಗಳನ್ನು ಕರೆಯಬಹುದು.

ಈ ಎಲ್ಲ ಕಾಯಗಳಲ್ಲಿರುವ ಧಾತುಸಾಮಗ್ರಿಯೂ ಭೂಮಿಯ ಮೇಲೆ ನಮಗೆ ಪರಿಚಿತವಾಗಿರುವ ಧಾತುಗಳದೇ ಅಲ್ಲದೆ ಬೇರೆಯಲ್ಲ. ವಿವಿಧ ಧಾತುಗಳ ಪ್ರಮಾಣಗಳು ಕೂಡ ಹೆಚ್ಚು ಕಡಿಮೆ ಭೂಸಾಮಗ್ರಿಯಲ್ಲಿರುವಂತೆಯೇ. ಅವುಗಳ ಭೌತ

[1] Island Universes.

ಸ್ಥಿತಿಗಳಲ್ಲಿರುವ ವ್ಯತ್ಯಾಸಗಳು ಮಾತ್ರ ಅಗಾಧವಾದುವು. ಈ ವ್ಯತ್ಯಾಸದಿಂದ ಭೂಮಿಯಲ್ಲಿ ರಾಸಾಯನಿಕ ಕ್ರಿಯೆಗಳದೇ ಪ್ರಧಾನಪಾತ್ರವಾಗಿ ವಿವಿಧ ಸಂಯೋಜಿತ ದ್ರವ್ಯಗಳಾಗಿವೆ, ನಕ್ಷತ್ರಗಳಲ್ಲಿ ಬೀಜಕ್ರಿಯೆಗಳದೇ ಪ್ರಧಾನಪಾತ್ರವಾಗಿ ವಿವಿಧ ವರ್ಣಗಳ ತೇಜಸ್ಸು ಪ್ರಸಾರವಾಗುತ್ತಿದೆ. ಒಂದು ದೃಷ್ಟಿಯಿಂದ ಅಪಾರ ವೈವಿಧ್ಯತೆ, ಮತ್ತೊಂದು ದೃಷ್ಟಿಯಿಂದ ಸರಳ ಐಕ್ಯತೆ; ವಿಶ್ವಕರ್ತನ ಕೃತಿರಚನಾಕೌಶಲವು ಎಷ್ಟು ಅದ್ಭುತವಾದದ್ದು ! ಆದರೆ ಭೌತವಿಶ್ವಮಾತ್ರದ ವರ್ಣನೆಯಲ್ಲಿ ತೊಡಗಿರುವ ನಮ್ಮ ಮಿತದೃಷ್ಟಿಯಿಂದ ಕೂಡ ಇಲ್ಲಿಯವರೆಗೆ ನಾವು ಈ ಮಹಾ ವಿಶ್ವದ ಒಂದು ರೇಣನ್ನು ಪೂತ್ರ ಪರಿಶೀಲಿಸಿದ್ದೇವೆ. ಆದಕಾರಣ ನಮ್ಮ ಅಜ್ಞಾನದ ಪರಿಮಿತಿ ಎಷ್ಟೆಂಬ ಜ್ಞಾನವನ್ನು ಪಡೆಯಲಿಕ್ಕೆ ನಾವು ಮಾಡಬೇಕಾದ ಅಧ್ಯವಸಾಯವಿನ್ನೂ ಉಳಿದಿದೆ.

ಆರ್. ಎಲ್. ನರಸಿಂಹಯ್ಯ.

ನಮ್ಮ ದಿಬ್ಬ

ಈಸಲ ಬೇಸಗೆಯ ರಜವನ್ನೆಲ್ಲಾ ನಮ್ಮ ಹಳ್ಳಿಯಲ್ಲೇ ಕಳೆದೆ. ಎಳೆಂಟು ತಿಂಗಳ ನಗರವಾಸದ ಗಲಿಬಿಲಿಗೆ ಮನಸ್ಸು ಬೇಸರವಾಗಿತ್ತು. ನಮ್ಮೂರಿನ ಚೈತ್ರ ಮಾಸದ ಹಸಿರು, ಸುತ್ತಲೂ ಬಳಸಿ ನಿಂದಿರುವ ಕಿರುಗುಡ್ಡಗಳ ನಸುನೀಲ ಗಾಂಭೀರ್ಯ, ಊರ ಬದಿಯಲ್ಲಿ ಜುಳುಜುಳನೆ ಹರಿದೋಡುವ ಹಳ್ಳದ ದಡದ ಚೆಲುವು, ಬಾನಂಗಳದಲ್ಲಿ ಗುಡುಗು ಮಿಂಚುಗಳೊಡನೆ ಧಾಳಿಟ್ಟು ತಾಂಡವವಾಡಿ ತಿರೆಗೆ ಮಂಗಳ ಮಜ್ಜನಗೈದ ಮುಂಗಾರಿನ ಮಹಾದ್ಭುತದ ರುದ್ರರಮಣೀಯತೆ ಇದೆಲ್ಲವೂ ಯುಗ ಯುಗಗಳಿಗಾಗುವ ಆಹಾರವನ್ನು ನನ್ನ ರಸಕೋಶಕ್ಕೆ ತುಂಬಿದುವು. ಆದರೂ ಪ್ರಿಯಬಂಧುವಿನ ವಿರಹದಂತೆ, ನಗರದಾಚೆ ನಾನು ದಿನವೂ ಹೋಗಿ ಕೂತುಕೊಳ್ಳು ತ್ತಿದ್ದ ನಮ್ಮ ದಿಬ್ಬದ ನೆನಪು ಆಗಾಗ ಮನದಲ್ಲಿ ಮೂಡಿ ನಿಲ್ಲುತ್ತಿತ್ತು. ಇಷ್ಟೊಂದು ಸೊಗಸಿನ ನಡುವೆಯೂ ನಮ್ಮ ದಿಬ್ಬದ ನೆನಪು ನನ್ನನ್ನು ನಿರಂತರವಾಗಿ ಅತ್ತ ಸೆಳೆಯುತ್ತಿತ್ತು.

ಬೇಸಿಗೆ ರಜೆ ಕಳೆಯುತ್ತಲೂ ನಾನು 'ನಗರ'ಕ್ಕೆ ಹಿಂದಿರುಗಿ ಮತ್ತೆ ಸ್ವಕರ್ಮದಲ್ಲಿ ಉದ್ಯೋಗಸ್ಥನಾದೆ. ಹೋದ ದಿನ ಸಂಜೆಯೇ ಬಹುಕಾಲ ಅಗಲಿದ ಪ್ರಿಯಬಂಧುವನ್ನು ಸಂದರ್ಶಿಸುವ ಸಂಭ್ರಮಾತುರದಿಂದ ನಮ್ಮ ದಿಬ್ಬದ ಕಡೆಗೆ ಧಾವಿಸಿದೆ. ಆ ನಮ್ಮ ದಿಬ್ಬವನ್ನು ನೆನೆದು ನನ್ನ ಮನಸ್ಸು ನೂರಾರು ನೆನಹಿನ ತರಂಗದಿಂದ ಪುಲಕಿತವಾಯಿತು ! ಇನ್ನೇನು ಬಂತು ನಮ್ಮ ದಿಬ್ಬ ; ಅದೋ ಅಲ್ಲಿ . . . ಎಂಬನಿತು ದೂರದಲ್ಲಿ ತಲೆಯೆತ್ತಿ ನೋಡಿದೆ. ನನ್ನ ಹೃದಯದ ಮೇಲೆ ಬರೆ ಎಳೆ ದಂತಾಯಿತು. ಅಯ್ಯೋ ಎಂದೆ.

*   *   *   *

ಊರಾಚೆ ಸುಮಾರು ಒಂದು ಮೈಲಿ ದೂರದಲ್ಲಿ ಇದೆಯಲ್ಲ, ಆ ಹೊಲದ ನಡುವಣ ದಿಣ್ಣೆ,—ಅದೇ ನಮ್ಮ ದಿಬ್ಬ. ಅದು "ನನ್ನ ದಿಬ್ಬ"ವಲ್ಲ, 'ನಮ್ಮ ದಿಬ್ಬ' 'ನಮ್ಮ' ಎಂಬುದು ನಾವಿಬ್ಬರನ್ನು ಕುರಿತದ್ದು. ನಾವಿಬ್ಬರು ಗೆಳೆಯರು. ನಾನು ಈ ಊರಿಗೆ ಬರುವ ಮುನ್ನ, ಇದೇ ಊರಿನವರಾದ ನನ್ನ ಗೆಳೆಯರು ನನ್ನಂತೆಯೇ ಇಂತಹ ರಸಸ್ಥಾನಗಳ ಅರಸುವಿಕೆಯಲ್ಲಿ ಆಸಕ್ತರಾದವರು—ನಿತ್ಯವೂ ಸಂಜೆ ಹೋಗಿ ಕುಳಿತುಕೊಳ್ಳುತ್ತಿದ್ದರು ಆ ಸ್ಥಳದಲ್ಲಿ. ನಾನು ಈ ಊರಿಗೆ ಬಂದಮೇಲೆ ನನ್ನನ್ನು ಆ ದಿಬ್ಬಕ್ಕೆ ಪರಿಚಯಿಸಿದರು. ನಾನು ಮೊದಲು ಪರಿಚಿತನಾಗಿ, ಕ್ರಮೇಣ ಗೆಳೆಯನಾದೆ.

ನಾನು ಈಗೀಗ ಅದಕ್ಕೆ ಅತ್ಯಂತ ಪ್ರಿಯನಾಗಿದ್ದೇನೆ. ಅದೊಂದು ಸುಂದರ ಶಾಂತಿಪ್ರದ ರಸಪ್ರದೇಶ. ಅದನ್ನು ನನಗೆ ಮೊದಲು ತೋರಿಸುವವರಾರೂ ಇಲ್ಲದಿದ್ದರೂ, ಇಂತಹ ಸ್ಥಳಗಳನ್ನು ಹುಡುಕುವ ಹುಚ್ಚುಳ್ಳ ನಾನು, ಎಂದಾದರೊಮ್ಮೆ ಅದನ್ನು ಕಂಡು ನಾನೇ ಪರಿಚಯಿಸಿಕೊಳ್ಳುತ್ತಿದ್ದೆ. ಆದರೆ ನನ್ನ ಗೆಳೆಯರು ತಾವಾಗಿಯೇ ಅದಕ್ಕೆ ನನ್ನನ್ನು ಪರಿಚಯಮಾಡಿಕೊಟ್ಟುದರಿಂದ—ನಾನಾಗಿಯೇ ಅದನ್ನು ಹುಡುಕಿ ನನ್ನ ಪರಿಚಯಮಾಡಿಕೊಂಡು ಗಳಿಸಬಹುದಾಗಿದ್ದ ಪ್ರಿಯತೆಗಿಂತ—ಹೆಚ್ಚು ಪ್ರಿಯನಾಗಿದ್ದೇನೆ. ಏಕೆಂದರೆ ಅದನ್ನು ಪರಿಚಯಮಾಡಿಕೊಟ್ಟ ಗೆಳೆಯರು ನನಗೆ ಪ್ರಿಯರಾದವರು.

ಈ ಊರಿನ ಹೊರಗೆ ಇದೆ ಎಂದೆನಲ್ಲವೆ? ಈ ನಗರದ ಹೊಲಸು ಗಲಿಬಿಲಿ ತಟ್ಟದ ದೂರದಲ್ಲಿ, ಹಸುರಿನ ಬಯಲಿನಲ್ಲಿ ನಮ್ಮ ದಿಬ್ಬ ಕುಳಿತಿದೆ. ಅದು ಎಂದಿನಿಂದ ಹೀಗೆ ಕುಳಿತಿದೆಯೋ, ಏಕೆ ಕುಳಿತಿದೆಯೋ, ಯಾರೂ ಬರೆದಿಟ್ಟಿಲ್ಲ. ಅದು ಏಕಾಂಗಿಯಾಗಿ, ಮೌನವಾಗಿ ಯಾವುದೋ ಪರಮಕಲ್ಯಾಣಕ್ಕೆ ನೋಂತ ಋಷಿವರ್ಯನಂತೆ ತೋರುತ್ತದೆ. ಅಲ್ಲಿಗೆ ದೂರದ ನಗರ ಕಾಣಿಸುವುದಿಲ್ಲ. ಅದರ ಸೌಧಗಳೂ ಕಾಣದೆ ಹುದುಗಿರುತ್ತವೆ. ಆದರೆ ಅಲ್ಲಿ ಉತ್ತರದ ದೂರದ ತಗ್ಗಿನಲ್ಲಿ ನಗರವಿದೆ ಎಂಬುದು ಸ್ಪಷ್ಟವಾಗುತ್ತದೆ. ದೂರದ ಜೇನ್ಗೂಡಿನ ಗುಂಜಾರವದಂತೆ, ಎಲ್ಲೋ ದೂರದಲ್ಲಿ ಮೊರೆಯುವ ಬಿರುಗಾಳಿಯ ರವದಂತೆ, ನಾಗರಿಕತೆಯ ಪಾತ್ರೆಯಲ್ಲಿ ತಕಪಕನೆ ಕುದಿಯುವ ನಗರ ಮಹಾಮನದ ಸದ್ದು ಇಲ್ಲಿಗೆ ಆಗಾಗ ಅಸ್ಪಷ್ಟವಾಗಿ ಕೇಳಿಬರುತ್ತದೆ. ದೂರದಲ್ಲಿ ಶಿಳ್ಳುಹಾಕಿ, ಕಪ್ಪುಹೊಗೆಯನ್ನು ಕಾರುತ್ತಾ ಧಡಧಡನೆ ಓಡುವ ರೈಲುಗಳ ಸದ್ದು, ಜೀವ ಹಾರಿಹೋಗುವುದೋ ಎಂಬಂತೆ, ನಾಗರಿಕ ಯಂತ್ರ ಮದಗಜದ ಘೀಂಕಾರದಂತೆ ಕರ್ಕಶವಾಗಿ ಚೀರಿಡುವ 'ಮಿಲ್ಲು'ಗಳ ಚೀತ್ಕಾರ, ಇವು ಆಗಾಗ ಈ ದಿಬ್ಬದ ಮೌನವನ್ನು ಕಲಕುತ್ತವೆ. ಕಲ್ಲೆಸೆದಾಗ ಕದಡಿ ತರಂಗ ವರ್ತುಲಗಳನ್ನು ಸೃಜಿಸಿದ ಸರೋವರದ ನೀರು, ಕೊಂಚ ಹೊತ್ತಿನಮೇಲೆ ಒಯ್ಯೊಯ್ಯನೆ ನಿಸ್ತರಂಗವಾಗುವಂತೆ, ಮತ್ತೆ ಆ ದಿಬ್ಬದ ಮಹಾಮೌನಸರೋವರ ನಿಸ್ತರಂಗ ಶಾಂತರಮ್ಯವಾಗುತ್ತದೆ.

ಈ ನಮ್ಮ ದಿಬ್ಬ ಕೊಂಚ ಉದ್ದವಾಗಿ ಎರಡುಕಡೆ ತಲೆ ಎತ್ತಿದೆ. ಒಂದನೆಯ ಕಿರಿಯ ಶಿಖರ ಮಾತಿನ ದಿಬ್ಬ, ಎರಡನೆಯದು ಮೌನದ ದಿಬ್ಬ. 'ಮೌನದ ದಿಬ್ಬ'ದಲ್ಲಿ ಕುಳಿತಾಗ ಮೌನವಾಗಿರಬೇಕು. ಅಲ್ಲಿಗೆ ಲೌಕಿಕ ಜಂಜಡಗಳನ್ನು ಒಯ್ಯಲೇ ಬಾರದು. 'ಮಾತಿನ ದಿಬ್ಬ'ದಲ್ಲಿ ಕೂತಾಗ ಈ ನಿಬಂಧನೆ ಯಾವುದೂ ಇಲ್ಲ. ಒಂದು ಸ್ವಾತಂತ್ರ್ಯದ, ಮತ್ತೊಂದು ಮಹಾಸಂಯಮದ ಸಂಕೇತವಾಗಿವೆ ನಮ್ಮ

ಪಾಲಿಗೆ! ಈ ಪ್ರದೇಶ ನಮ್ಮ ಹಲವಾರು ಸಮಸ್ಯೆಗಳನ್ನು ಬಿಡಿಸಿದೆ, ವ್ಯಾಕುಲ ಗಳನ್ನು ಪರಿಹರಿಸಿದೆ, ಅನೇಕ ಭವ್ಯಭಾವ ಸಂಚಾರಮಾಡಿಸಿದೆ. ನಮಗೆ ಮಾತ್ರ ಅತ್ಯಂತ ಪವಿತ್ರ ಹಾಗೂ ಪ್ರಿಯವಾಗಿದೆ.

ಇಲ್ಲಿಗೆ ಇಂತಹ ಶಾಂತಸುಂದರ ವಾತಾವರಣ ಬರಲು ಕಾರಣವೇನಿರಬಹುದು ಎಂಬ ಪ್ರಶ್ನೆ ಹಲವು ಸಲ ತಲೆದೋರಿದೆ. ನದಿ ಹರಿಯುವ ಕಡೆಗಳಲ್ಲೆಲ್ಲಾ ನೀರಿ ದ್ದರೂ, ಅದೆಲ್ಲವೂ 'ತೀರ್ಥ' ಎನಿಸಿಕೊಳ್ಳದೆ, ಎಲ್ಲೋ ಕೆಲವು ವಿಶಿಷ್ಟವಾದ ಪ್ರದೇಶಗಳಲ್ಲಿ ಮಾತ್ರ 'ತೀರ್ಥ' ಎನಿಸಿಕೊಳ್ಳುವ ಪುಣ್ಯಕ್ಕೆ ಮಹಿಮೆಗೆ ಪಾತ್ರ ವಾಗುವಂತೆ, ಅಲ್ಲಲ್ಲಿ ಇದರಂತೆಯೇ ಇನ್ನೂ ಹಲವಾರು ದಿಬ್ಬಗಳು ಇದ್ದರೂ, ಆ ಎಲ್ಲಾ ದಿಬ್ಬಗಳಲ್ಲೂ ಮೈದೋರದ ಅಪೂರ್ವವಾದ ಒಂದು ಗುಣ, ಒಂದು ಚೆಲುವು ಈ ದಿಬ್ಬದಲ್ಲಿ ಮೈದೋರಿ ನಮ್ಮ ದೃಷ್ಟಿಯಲ್ಲಿ ಪವಿತ್ರತೆಯನ್ನು ಪಡೆದಿದೆ. ಇದಕ್ಕೆ ಏನು ಕಾರಣವಿದ್ದೀತು? ನನ್ನ ಗೆಳೆಯರು ಹೇಳುತ್ತಾರೆ ಇದು ಹಿಂದೊಮ್ಮೆ ಋಷ್ಯಾ ಶ್ರಮದ ಪ್ರದೇಶವಾಗಿದ್ದಿರಬೇಕು ಎಂದು. 'ಇದೋ ಇತ್ತನೋಡಿ, ಈ ದಿಬ್ಬದ ಬದಿ ಯಲ್ಲಿ ಹಳ್ಳವೊಂದು ಹರಿದುಹೋಗಿರುವ ಗುರುತು ಇನ್ನೂ ಸ್ಪಷ್ಟವಾಗಿದೆ. ಈ ಕಿರಿಯ ತೊರೆಯ ಬದಿಯಲ್ಲಿ ದಿಬ್ಬದ ಎತ್ತರವಾದ ಪ್ರದೇಶದಲ್ಲಿ ಹಿಂದೆ ಋಷಿಯ ಆಶ್ರಮ ವಿದ್ದಿರಬೇಕು. ಆತನ ವಾಸಮಹಿಮೆಯಿಂದ, ತಪಸ್ಸಿನ ಪ್ರಭಾವದಿಂದ ಈ ಪ್ರದೇಶಕ್ಕೆ ಈ ಬಗೆಯ ಶಾಂತ ಸುಂದರಪ್ರಸನ್ನತೆ ಬಂದಿರಬೇಕು ಎಂದು ಮೊದಲಾಗಿ ಪೌರಾ ಣಿಕ ಹಿನ್ನೆಲೆಯನ್ನೇ ಕೊಡಲು ಯತ್ನಿಸುತ್ತಾರೆ.

ಏಕೆ . . . ಏನು . . . ಇತ್ಯಾದಿ ಸಂಶೋಧನೆಯಲ್ಲಿ ತೊಡಗಲು ನಮಗೆ ಇಷ್ಟ ವಿಲ್ಲ. ಅದು ಇತಿಹಾಸಜ್ಞರ ಪಾಡು. ಕುಳಿತು ನೋಡುವ ಕಣ್ಣು ಈ ಗತ ಇತಿಹಾಸ ವನ್ನು ಕುರಿತು ಚಿಂತಿಸಿದರೆ, ದೂರ ದೂರ ದಿಗಂತ ವಿಶ್ರಾಂತವಾಗಿ ಹರಹಿರುವ ಈ ಬಯಲಿನ ಸೊಬಗನ್ನು ಸವಿಯುವುದಾವಾಗ?

ದೃಷ್ಟಿ ಹೋಗುವ ವರೆಗೂ ಬಟ್ಟಬಯಲು ಹರಹಿದೆ. ಬಾನಂಚಿನ ಆ ಕಿರು ಗುಡ್ಡಗಳ ಅಸ್ಪಷ್ಟವಾದ ಗೆರೆಯಂಚಲ್ಲದೆ ಬೇರೆಯ ಗಡಿಯಿಲ್ಲದ ಈ ಮಹಾ ಭವ್ಯ ವಾದ ಬಯಲಿಗೆ ನಾನು ಬೆರಗಾಗಿದ್ದೇನೆ. ಮೇಲೆ ನೀಲಗುಮ್ಮಟದ ಹಾಗೆ ಮಗುಚಿ ಕೊಂಡಿರುವ ಬಾನಿನ ಬಟ್ಟಲು! ಕೆಳಗೆ ವಿವಿಧವರ್ಣ ಮಿಶ್ರವಾದ ವಿಸ್ತಾರವಾದ ಬಯಲು! ಈ ಬೃಹತ್ತು ಮಹತ್ತುಗಳೆರಡೂ ವಿರಾಟ್ ಅಹಂಕಾರದಂತೆ, 'ನಾನು' ಎನ್ನುವ ಈ ಪ್ರಾಣಿಯ ಅಹಂಕಾರವನ್ನು ಅರೆದು ಅಣಕಿಸುವಂತೆ ತೋರುತ್ತಿವೆ.

ಒಂದು ದೃಷ್ಟಿಯಿಂದ, ಮಲೆನಾಡಿನಲ್ಲಿ ನಾವು ಕಾಣಲಾಗದ ಆಕಾಶದ ವಿಸ್ತ ರಣವನ್ನು ನಾವಿಲ್ಲಿ ಕಾಣಬಹುದು ಎನಿಸುತ್ತದೆ. ಮಲೆನಾಡಿನಲ್ಲಾದರೆ ಆಕಾಶದ

ಅನಂತತೆಯ ದರ್ಶನಕ್ಕೆ ಅಲ್ಲಿ ತುರುಗಿನಿಂದ ತರುರಾಜಿಗಳಾಗಲಿ, ಭೀಮಕಾಯವಾದ ಬೆಟ್ಟಗಳಾಗಲೀ ಅಡ್ಡಬಂದು ನಮ್ಮ ದೃಷ್ಟಿಗೆ ಆಕಾಶವನ್ನು ಕಿರಿದುಮಾಡುತ್ತವೆ. ಆದರೆ ಈ ಬಯಲುನಾಡಿನಲ್ಲಿ ಹಾಗಲ್ಲ. ಎತ್ತನೋಡಿದರತ್ತ ಆಕಾಶ—ತಾನಾಗಿಯೇ ಬಾಗಿದೆ ನೆಲದಂಚಿಗೆ! ಬಯಲು ಆಕಾಶ, ಆಕಾಶ ಬಯಲು, ಎರಡೂ ಅನಂತ ಪ್ರಣಯಿಗಳಂತೆ ಬೆಳಕಿನ ಮೂಲಕ ಒಂದನ್ನೊಂದು ಚುಂಬಿಸಿ ನಲಿಯುತ್ತವೆ. ಇಂತಹ ವಿಸ್ತಾರವಾದ ಬಯಲಿಗೆ ಆಸರವಾದೀತೋ ಏನೋ ಎಂದು ದೂರದಲ್ಲಿ ಪಶ್ಚಿಮದಲ್ಲಿ ಕಿರುಗುಡ್ಡವೊಂದು ತನ್ನೆರಡು ಮರಿಗಳೊಡನೆ ನಿಂತಿದೆ! ಅಲ್ಲಿಂದ ಎಡಕ್ಕೆ ಕೊಂಚದೂರದಲ್ಲಿ ಬಾನಂಚಿಗೆ ಹೊಂದಿಕೊಂಡಂತೆ ಒಂದು ಕೆರೆ ಇದೆ. ಆದರೆ ಹೊಂದಿಕೊಂಡಿಲ್ಲ. ಬಾನಿಗೂ, ಕೆರೆಗೂ ನಡುವೆ ಕಪ್ಪಾದ ಏರಿಯೊಂದು ಅಡ್ಡವಾಗಿದೆ. ಆ ಕೆರೆಯಂತೂ ಸಂಧ್ಯಾರಾಗದಲ್ಲಿ ಆವೇಶಗೊಂಡ ಕವಿಯ ಮನಸ್ಸಿನಂತೆ ಉಜ್ವಲ ವಾಗುತ್ತದೆ.

ಇಂತಹ ಸುಂದರವಾದ ಸ್ಥಳದಲ್ಲಿ, ಆಕಾಶವೇ ಮೇಲ್‌ಛಾವಣಿಯಾಗಿ ನೆಲವೇ ತಳಹದಿಯಾಗಿ ಉಳ್ಳ ಈ ವಿಶ್ವಕುಟೀರದಲ್ಲಿ ಈ ದಿಬ್ಬ ಋಷಿಯಂತೆ ಬಹು ದೀರ್ಘ ತಪಸ್ವಿಯಾಗಿದೆ. ಈ ದಿಬ್ಬ ನಮಗೆ ಅನೇಕ ರಸಾನುಭವಗಳನ್ನು ದಾನಮಾಡಿದೆ. ಅನೇಕ ಭಾವಗೀತೆಗಳನ್ನು ಉಸುರಿದೆ. ಅನೇಕ ರಸಚಿತ್ರಗಳನ್ನು ನಮ್ಮ ಮನಸ್ಸಿಗೆ ತುಂಬಿದೆ. ಹೀಗೆ ಈ ರಸಕೋಶದಲ್ಲಿ ಆಪೂರಣವಾಗಿರುವ ಚಿತ್ರದ ಸುರುಳಿಯನ್ನು ಒಮ್ಮೆ ತೆರೆದರೆ ಎಂತಹ ರಸಾನುಭವವಾಗುತ್ತದೆ!

ಅಂದೊಮ್ಮೆ ಮಾಗಿಯ ಪ್ರಭಾತದಲ್ಲಿ ಆ ದಿಬ್ಬದೆಡೆ ನಿಂತು ಮೂಡಣಬಾನಿನ ನಸುಗೆಂಪಾದ ರವಿದೇವನ ಆರೋಹಣ ವೇದಿಕೆಯನ್ನು ನೋಡುತ್ತಿದ್ದೆ. ಶಿಶಿರನ ದೂತರು "ಹನಿಹನಿ ಮುತ್ತುಮುತ್ತಾಗಿ" ನನಗಿಂತ ಮೊದಲೇ ನೆಲದ ಹಸುರಿಗೆ ಅವತರಿಸಿ ನನ್ನಂತೆಯೇ ಸೂರ್ಯೋದಯವನ್ನು ನಿರೀಕ್ಷಿಸುತ್ತಿದ್ದರು. ತೆಳುವಾದ ಮಂಜಿನ ಹೊದಿಕೆಯಲ್ಲಿ ದೃಶ್ಯವೆಲ್ಲವೂ ಅಸ್ಪಷ್ಟ ಸುಂದರವಾಗಿತ್ತು. ಒಯ್ಯೊಯ್ಯನೆ ಅರುಣಮುಖಿಯಾದ ರವಿದೇವ ಸದ್ದಿಲ್ಲದೆ ಆ ಮಂಜಿನ ಮುಸುಕಿನಲ್ಲಿ—ಸಂನ್ಯಾಸವನ್ನು ಧರಿಸಿದ ವೀರನಂತೆ ತೋರುತ್ತಾ—ಮೇಲೇರಿದ. ಆತನ ತರುಣಾರುಣ ಕಿರಣದಲ್ಲಿ ಹಸಿರಬಯಲು ಪುಲಕಿತವಾಯಿತು. ಹನಿಹನಿಯ ಹೃದಯವೂ ಆನಂದದಿಂದ ನಕ್ಕು ನಲಿಯಿತು. ಎಲ್ಲೆಲ್ಲೂ ಕಿಡಿಕೆತ್ತಿದಂತೆ ಮಂಜುಮಣಿಗಳ ಮೋಹನರಂಗು ಹೊಮ್ಮಿತು. ನಾನು ನಿಂತ ದಿಬ್ಬವಂತೂ ಮೈತುಂಬಾ ಮಿರುಮಿರುಗುವ ಮಣಿಗಳನ್ನು ಧರಿಸಿದ ರತ್ನವೇದಿಕೆಯಾಗಿತ್ತು. ಮೇಲೇನಾದರೂ ಐರಾವತದ ಮೇಲೆ ದೇವೇಂದ್ರನು ಹೋಗುತ್ತಿದ್ದರೆ, ಆತ ಖಂಡಿತವಾಗಿಯೂ ತನ್ನ ಐರಾವತವನ್ನುಳಿದು ಈ ದಿಬ್ಬದ ಮಣಿ ಖಚಿತವಾದ ಪಚ್ಚೆಯ ಪೀಠಕ್ಕೆ ಅವತರಿಸುತ್ತಿದ್ದ.

ಗೆಳೆಯರು ದೂರದೂರಿಗೆ ಹೋದರು ಸರ್ಕಾರಿ ನೌಕರರಾಗಿ. ಆಗಾಗ ರಜೆಯಲ್ಲಿ ಬರುತ್ತಾರೆ. ಅವರಿಲ್ಲದಾಗ ನಾನೊಬ್ಬನೇ ನಮ್ಮ ದಿಬ್ಬಕ್ಕೆ ಹೋಗುತ್ತೇನೆ. ಎಂದಿನಂತೆ ಒಂದು ಆಶ್ವಯುಜದ ಸಂಜೆ ಅಲ್ಲಿ ಕುಳಿತಿದ್ದೆ. ದಿಗಂತದವರೆಗೂ ಉಸಿರಾಡುವ ಹಸಿರಬಯಲು. ನೆಲದ ಮೃದು ಹಸಿರು ಮೇಲಿನ ಆಕಾಶದ ರಮ್ಯನೀಲಿಮೆಯೊಡನೆ ಸ್ಪರ್ಧಿಯಾದಂತಿತ್ತು. ಹೊಡೆ ಹೊಮ್ಮಿದ ಜೋಳದ ಪಯಿರು ಆಳೆತ್ತರ ನಿಂತು ಸೈನಿಕರ ಶಿಸ್ತಿನಿಂದ ರಾಜಿಸಿತ್ತು. ನಮ್ಮ ದಿಬ್ಬದಿಂದ ಆ ಸಿರಿಹಸುರಿನ ಮೇಲೆ ನನ್ನ ಅಕ್ಷಿಪಕ್ಷಿಯನ್ನು ಹಾರಿಬಿಟ್ಟೆ. ದಿಗಂತ ವಿಶ್ರಾಂತವಾದ ಈ ಪೈರುತುಂಬಿದ ಹಸುರಬಯಲು ಗಾಳಿಗೆ ತೂಗಾಡುತ್ತಿತ್ತು. ಬೀಸುವ ಗಾಳಿಗೆ ಮರ್ಮರ ದನಿಗೈವ ಜೋಳದ ಗರಿಗಳ ಸದ್ದು,—ಬೇಸಗೆಯ ನಡುಹಗಲಲ್ಲಿ ತುರುಗಿನಿಂದ ತರುರಾಜಿಯ ಮಲೆನಾಡಿನ ಕಾಡಿನೊಡಲಿನಲ್ಲಿ ಅಗೋಚರವಾಗಿ ಎಲ್ಲಿಯೋ ಹರಿಯುವ ತೊರೆಯ ಮಂಜುಳರವದಂತೆ—ಕೇಳಿಬರುತ್ತಿತ್ತು. ಸಂಜೆಯಾಗಿ ಹೊತ್ತುಮುಳುಗಿದ ಆ ಶಾಂತ ಗಂಭೀರ ವಾತಾವರಣದಲ್ಲಿ ಈ ಜೋಳದ ಗರಿಗಳ ಮರ್ಮರನಾದ ನೂರಾರು ವಿಚಿತ್ರ ಕಲ್ಪನೆಗಳನ್ನೆಳಿಸುತ್ತಿತ್ತು. ಇರುಳಿಳಿಯುವ ಸಂಜೆಯ ಬಾನಿಗೆ ಎದುರಾಗಿ ಧೀರವಾಗಿ ನಿಂತ ಜೋಳದ ಹೊಲದ ಗರಿಗರಿಗಳ ಹಸುರ್ಗೆನ್ನೆಯಲ್ಲೂ ಸಂಜೆಯ ನಸುಗೆಂಪು ಮಿನುಗುತ್ತಿತ್ತು.

ಅಂದೊಂದು ಶರತ್‌ಕಾಲದ ಸಂಧ್ಯೆ: ಎಂದಿನಂತೆ ನಾವಿಬ್ಬರೂ ಅಲ್ಲಿ ಕುಳಿತಿದ್ದೆವು. ಆಕಾಶದ ನೀಲಶುಭ್ರಸರೋವರದಲ್ಲಿ ಶಾರದ ನೀರದ ಕಲಹಂಸಗಳು ಚರಿಸುತ್ತಿದ್ದುವು. ಗಗನದ ಗಂಧರ್ವರ ನಗರಿ ಚಣಚಣಕ್ಕೂ ಸಂಧ್ಯಾಶಿಲ್ಪಿಯ ಕಿರಣದಿಂದ ವರ್ಣವರ್ಣಾಂತರವನ್ನು ತಾಳುತ್ತಿತ್ತು. ಪಡುವಣಕ್ಕೆ ಆಗಲೇ ರುಕ್ಮರವಿ ಮೌನವಾಗಿ ಅವತರಿಸುತ್ತಿದ್ದ. ಸುತ್ತಲಿನ ಹೊಲದಲ್ಲಿ ಪೈರೇನೂ ಇರಲಿಲ್ಲ. ಇನ್ನೂ ಉತ್ತಿರಲಿಲ್ಲವಾದ್ದರಿಂದ ಹಳೆಯ ಪೈರಿನ ಕೂಳೆಗಳು ಸಾಲಾಗಿದ್ದುವು—ಅಳಿದ ಸಿರಿಹಸಿರುಪೈರಿನ ಸ್ಮೃತಿಯ ಅವಶೇಷದಂತೆ. ದೂರದ ಕೆರೆಯ ತೆರೆಗಳು ಥಳಥಳಿಸುತಿದ್ದುವು. ಬರುಬರುತ್ತಾ ಆ ನೀರಿನ ಹೊಂಬಣ್ಣ, ಥಳಿಸುವ ಬೆಳ್ಳಿಯಾಯಿತು. ಹಾಗೆಯೇ ಇರುಳಹಕ್ಕಿಯ ರೆಕ್ಕೆಯ ಛಾಯೆ ಆ ನೀರಿನ ಎದೆಯಲ್ಲಿ ಬಿಂಬಿಸಿತು. ದೂರದ ಬಾನು ನಸುರೆಪ್ಪೆದೆರೆದ ವಿಶ್ವತಪಸ್ವಿನಿಯ ಕಣ್ಬೆಳಗಿನಂತಿತ್ತು. ಮೇಲೆ ಒಂದೊಂದೇ ನಕ್ಷತ್ರಗಳು ನಿಗೂಢ ರಹಸ್ಯದಂತೆ ಮೌನವಾಗಿ ಇಣುಕಿದುವು. ಪೂರ್ವದೆಶೆಯಲ್ಲಿ ನೀಲಿಯ ತಳದಾಳದಿಂದ ಹೊನ್ನಿನುರಿ ಹೊಮ್ಮಿಸಿ ಸುಂದರ ಹಿಮಕರನು ಮೈದೋರಿದನು. ಆತನ ಮೇಲೆ ಸಾಲುಗಟ್ಟಿದ ಬೆಳ್ಮೋಡದ ಮಾಲೆ, ಸಂಧ್ಯಾರಾಗದಿಂದ ಇನ್ನೂ ನಸುಗೆಂಪಾಗಿ ಚಂದ್ರನಾಗಮನಕ್ಕೆ ತೋರಣ ಕಟ್ಟಿದಹಾಗಿತ್ತು. ನಕ್ಷತ್ರಗಳು ಆ

ರಾಜನ ಆಗಮನಕ್ಕೆ ಗೌರವದಿಂದ ಬಾಗಿದುವು. ನಾವು ಕುಳಿತ ದಿಬ್ಬ ಚಂದ್ರನ ಬೆಳಕಿನಲ್ಲಿ ತೇಲಿ ಯಾವುದೋ ಸ್ವಪ್ನ ಲೋಕವಾಯಿತು. ಅದರಮೇಲೆ ಕುಳಿತ ನಾವು ಕಲ್ಪನಾಸಮುದ್ರದಲ್ಲಿ ರಸದ ಹರಿಗೋಲನ್ನೇರಿ ತೇಲುವ ರಸಿಕರಂತೆ ತೋರಿದೆವು.

ಬರೆಯುತ್ತಾ ಹೋದರೆ, ಮನಸ್ಸಿನ ಚಿತ್ರಗಳನ್ನು ತೆರೆಯುತ್ತಾ ಹೋದರೆ ಅವುಗಳ ಉದ್ದ ಆಂಜನೇಯನ ಬಾಲವಾದೀತು! ಮಾರ್ಗಶಿರ ಪುಷ್ಯಮಾಸಗಳಲ್ಲಿ ದೂರದ ಕೆರೆಯತ್ತಣಿಂದ ಬೈಗು ಮುಗಿಲಿನ ಆಕಾಶಪಥದಲ್ಲಿ—ರಾತ್ರಿರತಿಗೆ ದಿನ ದೇವಿಯು ಕೊಡುಗೆಯಾಗಿ ತೇಲಿಸಿದ ಹೂಮಾಲೆಗಳಂತೆ—ತೇಲುತ್ತಾ ತಮ್ಮ ಕ್ವಣಿತನಿಸ್ವನದಿಂದ ಬೆರಗಾಗಿಸುವ ಕ್ರೌಂಚಮಾಲೆ; ಶ್ರಾವಣದ ಆಕಾಶದಂಚಿನಲ್ಲಿ ಮಳೆಯಿಂದ ಭಾರವಾಗಿ—ಭಕ್ತನೆಡೆಗೆ ಬಾಗುವ ಭಗವತ್ ಕೃಪೆಯಂತೆ—ಜೋಲುವ ಮೋಡಗಳ ತುಮುಲಮಾಲೆ; ಮಾರ್ಗಶಿರದ ವ್ಯೋಮಪಥದಲ್ಲಿ ಆಕಸ್ಮಿಕವಾಗಿ ಮೈದೋರುವ ಲಾಂಗೂಲಸದೃಶವಾದ ಗರಿ ಮೋಡಗಳ ಮನೋಹರತೆ; ಮಾಗಿಯ ಮಂಜಿನ ಸಂಜೆಯಲ್ಲಿ ನಸುಮುಳುಗಿ ಕನಸಿನಂತೆ ತೋರುವ ದೂರದ ಕಿರಿಯಗಿರಿ; ಫಾಲ್ಗುಣಮಾಸದ ಬೋಳುಬಯಲಿನ ಅಂಚಿನಲ್ಲಿ, ಸಂಜೆಯ ನಸುಗೆಂಪಿನ ನಡು ಪಟ್ಟಿಯ ಮೇಲಿನ ನಸುನೀಲಿಯಲ್ಲಿ ಶಾಂತಿಗೆ, ಗಾಂಭೀರ್ಯಕ್ಕೆ, ಸೌಂದರ್ಯಕ್ಕೆ, ಮತ್ತೆ ತೇಜಸ್ಸಿಗೆ ಸಂಕೇತವಾಗಿ ಪ್ರಜ್ವಲಿಸುವ 'ಬೆಳ್ಳಿ'ಯ ಧ್ಯಾನಶೀಲತೆ; ಬೇಸಗೆಯ ಬಿಸಿಲಿಗೆ ಬೆಂಡಾಗಿ ಬಾಯಾರಿ ತೃಷಿತ ದೃಷ್ಟಿಯನ್ನು ಬೀರಿ ಮೇಲಿನ ಮುಗಿಲುಗಳನ್ನು ಆಹ್ವಾನಿಸುವ ನೆಲದ ಕರೆ; ಇಂತೆಲ್ಲಾ ಮುಗಿಯಲಾರದ, ಮುಗಿಸಲಾರದ ದೃಶ್ಯಗಳಿವೆ ನನ್ನ ಅಪೂರಣವಾದ ಮನಸ್ಸಿನಲ್ಲಿ! ಈ ದೃಶ್ಯಗಳೆಲ್ಲಾ ನಗರದ ಯಾಂತ್ರಿಕ ಜೀವನಕ್ಕೆ, ದೈನಂದಿನ ಸಂಕ್ಷೋಭೆಗೆ ನೊಂದ ಮನಸ್ಸಿಗೆ ಅಪೂರ್ವವಾದ ಶಾಂತಿಯನ್ನು ಕೊಡುತ್ತವೆ. ಒಳಮನಸ್ಸಿನ ಹಲವಾರು ಅನುಭವದ ಮೂಕತೆಗೆ ಬಾಯಿಕೊಟ್ಟಿದೆ. ಮನಸ್ಸಿನ ಜಡವಾದ ಕಲ್ಗುಂಡುಗಳನ್ನು ಕೆತ್ತಿ ಸುಂದರ ಶಿಲ್ಪಕಲಾಕೃತಿಯನ್ನು ಸೃಜಿಸುವ ಶಿಲ್ಪಿಯ ಚಾಣದಂತಿದೆ ಈ ನಮ್ಮ ದಿಬ್ಬ.

ನನ್ನ ಬಾಳಿಗೊಂದು ಹೊಸ ಬೆಳಕನ್ನು ಕೊಡುವುದರಿಂದ ಈ ದಿಬ್ಬ ನನಗೆ ಅತ್ಯಂತ ಪ್ರಿಯವಾಗಿದೆ. ಇದಕ್ಕೂ ಜೀವವಿದೆ; ಉಸಿರಿದೆ; ವ್ಯಕ್ತಿತ್ವವಿದೆ. ನಮ್ಮ ವ್ಯಕ್ತಿತ್ವವನ್ನು ಸೆಳೆದು ಸೆರೆಗೈದು ಬೆಳಕೂಡುವ ಶಕ್ತಿಯಿದೆ ಇದಕ್ಕೆ. ಆದುದರಿಂದ ನಾನೂ ಈ ದಿಬ್ಬದ ವಿಷಯದಲ್ಲಿ ಅತ್ಯಂತ ಆಸಕ್ತಿಯನ್ನೂ ಅನುಕಂಪವನ್ನೂ ತಾಳುತ್ತೇನೆ. ಯಾವಾಗಲೋ ಒಮ್ಮೆ ಬೇರೆಯವರಾರೋ ಆಕಸ್ಮಿಕವಾಗಿ ಅಲ್ಲಿ ಕುಳಿತಿರುತ್ತಾರೆ. ಮನಸ್ಸು ಏಕೋ ತಳಮಳಿಸುತ್ತದೆ—ಅದು ನಮ್ಮ ದಿಬ್ಬ ಎಂಬುದು ನೆನಪಾಗಿ! ಯಾವ್ಯಾವುದಕ್ಕೋ ಆಕಸ್ಮಿಕವಾಗಿ ಗಂಟುಹಾಕಿಕೊಂಡು, ಅದು

ತನ್ನದು ಎಂದುಕೊಳ್ಳುವ ಅಹಂಕಾರದ ಲೀಲೆಗೆ ಬೆರಗಾಗಿ, ಮರುಕ್ಷಣವೇ ಸುಮ್ಮನೆ ಬಾಯಿಮುಚ್ಚಿಕೊಂಡು ಆ ದಿಬ್ಬದ ಬದಿಯಲ್ಲಿ ಹಾದು ಮುಂದಕ್ಕೆ ಹೋಗುತ್ತೇನೆ. ಆದರೆ ಅಲ್ಲಿ ಕೂತ ಹೊಸಬರು ಬೇಸರವನ್ನು ನೀಗಲು ಮಾತ್ರ ಇಂತಹ ಕಡೆಗೆ ಬಂದವರು—ದಿಬ್ಬದ ತಲೆಗೆ ಒಂದೊಂದೇ ಕಲ್ಲಿನಿಂದ ಗುರಿಹೊಡೆಯುತ್ತಲೋ, ಅಥವಾ ಉಗಿಯುತ್ತಲೋ ಕುಳಿತಿದ್ದರಂತೂ ನನಗೆ ತುಂಬ ಕೋಪಬರುತ್ತದೆ. ಆದರೆ ಅನಿವಾರ್ಯವಾಗಿ ನುಂಗಿಕೊಂಡು ಸುಮ್ಮನಾಗುತ್ತೇನೆ. ಒಮ್ಮೊಮ್ಮೆ ಬೇಸಗೆಯ ಬಿಸಿಲಿನ ಬೇಗೆಯನ್ನು ತಾಳಲಾರದೆ, ನನ್ನ ಮನೆಯಲ್ಲಿ ನಾನು ತಳಮಳಿಸುತ್ತಿರುವಾಗ ಬಿಸಿಲಿನಲ್ಲೇ ಬೇಯುತ್ತಿರುವ ನಮ್ಮ ದಿಬ್ಬವನ್ನು ನೆನೆದು ಸುಯ್ಯಲಿಡುತ್ತೇನೆ. ಸಂಜೆ ಇದ್ದಕ್ಕಿದ್ದಹಾಗೆಯೇ ಮುಗಿಲು ಕನಲಿ ಕಣ್ ಕೆರಳಿಸಿ ಬಿರುಮಳೆಯನ್ನು ಸುರಿಸಿದಾಗ, ದಿನವೆಲ್ಲಾ ಬಿಸಿಲ ಬೇಗೆಯಲ್ಲಿ ಬೆಂದ ದಿಬ್ಬಕ್ಕೆ ತಂಪಾಗಿರಬೇಕು ಎಂದುಕೊಂಡರೂ, ಆ ಮಳೆಯ ರಭಸವನ್ನು ನೆನೆದು ಅಯ್ಯೋ ಎಂದಿದ್ದೇನೆ. ಆ ದಿಬ್ಬ ಆ ವಿಶಾಲವಾದ ಬಯಲಿನಲ್ಲಿ ತಾರೆಗಳ ತಂಬೆಳಗಿನ ರಾತ್ರಿಯಲ್ಲಿ ನಕ್ಷತ್ರಗಾನವನ್ನಾಲಿಸುತ್ತಾ ಎಷ್ಟು ಕಾಲ ಕಳೆದಿದೆಯೋ; ಮುಗಿಲು ನೆಲದೊಡನೆ ಬೆಳುದಿಂಗಳ ಭಾಷೆಯಲ್ಲಿ ಮಾತನಾಡಿದಾಗ, ಅದನ್ನು ಕೇಳುತ್ತಾ ತಿಂಗಳ ಚಲುವನ್ನು ಮಿಂದು ಎಷ್ಟು ರಾತ್ರಿ ಮೈಮರೆತಿದೆಯೋ; ಎನಿತೆನಿತು ಮಳೆಗಾಲದ ಮಹಾದ್ಭುತದ ಬಲ್ಸರಿಯಲ್ಲಿ ನೆನೆದು ನಿಂತಿದೆಯೋ; ಎನಿತೆನಿತು ಉದಯಾಸ್ತಗಳ ಪೆಂಪನ್ನುಂಡು ಭವ್ಯಮೌನಿಯಾಗಿದೆಯೋ, ಬಲ್ಲವರು ಯಾರು? ಈ ಮೌನರಸಋಷಿಗೆ ಇದ್ದಕ್ಕಿದ್ದಹಾಗೆಯೇ ಬರೆಯುವ ಶಕ್ತಿ ಬಂದರೆ ವ್ಯಾಸ ವಾಲ್ಮೀಕಿಗಳನ್ನು ಇದು ಮೀರಿಸೀತು. ಆದರೆ ಬರೆಯುವುದಕ್ಕಿಂತಲೂ ಬರೆಯದಿರುವುದೆ ಲೇಸು ಎಂಬುದನ್ನು ಅರಿತುಕೊಂಡು ಮೌನವಾಗಿ, ತಪಸ್ವಿಯಾಗಿ, ಬಹು ಕರ್ಮಮಯವಾದ ಜಗದ ಜೀವನದ ದಿನದಿನದ ಮೂಕಸಾಕ್ಷಿಯಾಗಿ, ಅನಂತ ನಿರೀಕ್ಷಕನಂತೆ ಕುಳಿತಿದೆ ನಮ್ಮ ದಿಬ್ಬ!

ಇಂತಹ 'ನಮ್ಮ ದಿಬ್ಬ'ಕ್ಕೆ ಏನಾದರೂ ಅಮಂಗಳ ಒದಗಿದರೆ ಸಹಿಸೀತೆ ನಮ್ಮ ಚೇತನ?

* * * *

ಆ ದಿಬ್ಬ ಅಲ್ಲಿಂದ ಹಾರಿಹೋಗಿ ಅದೃಶ್ಯವಾಗಿದ್ದರೂ ನನಗಷ್ಟು ನೋವಾಗುತ್ತಿರಲಿಲ್ಲ. ಬಹುಕಾಲದ ಅಗಲಿಕೆಯಿಂದ ಅದರೆಡೆಗೆ ಧಾವಿಸಿದ ನನಗೆ, ಅದರ ಸಜೀವ ದೇಹದ ಮೇಲೆ ದೊಡ್ಡ ದೊಡ್ಡ ಬರೆಯಂತಿರುವ ಪಟ್ಟಿಗಳನ್ನು ಕಂಡಾಗ ಅಯ್ಯೋ ಎನಿಸಿತು. ಈ ಊರಿನ ನಗರಸಭೆಯವರು ತಮ್ಮ ನಗರದ ಭವಿಷ್ಯದ ಬೆಳೆವಣಿಗೆಯ ರೇಖಾಚಿತ್ರದ ಬರೆಗಳನ್ನು ಆ ದಿಬ್ಬದ ಮೇಲೆ ಎಳೆದಿದ್ದರು. ಆ ದಿಬ್ಬದ ಪ್ರದೇಶವೆಲ್ಲವೂ ಮುಂದೆ ನಿರ್ಮಾಣವಾಗಬೇಕಾಗಿರುವ ಮನೆಗಳ "ಸೈಟು" ಗಳಾಗಿವೆ! ಯಾವ

ಮೌನದ ದಿಬ್ಬ ನಮ್ಮ ಪವಿತ್ರತೆಗೆ ಪಾತ್ರವಾಗಿತ್ತೋ, ಅದು ಮುಂದೆ ದೊಡ್ಡ ರಸ್ತೆಯಾಗಿ ಸೂರಾರು ಯಂತ್ರನಾಗರಿಕತೆಯ ವಾಹನಗಳು ಚಲಿಸುವ ಗಲಿಬಿಲಿಯ ನೆಲೆಯಾಗುತ್ತದೆ ಎಂಬುದನ್ನು ನೆನೆದು ಕಣ್ಣು ಹನಿಗೂಡಿತು. ಯಾವ ಈ ದಿಬ್ಬ ದೂರದ ನಗರದಿಂದ ಬೇರೆಯಾಗಿ ಶಾಂತರಮ್ಯವಾಗಿತ್ತೋ ಅಲ್ಲಿ ಮುಂದೊಮ್ಮೆ ನೂರಾರು ಮನೆಗಳಿಂದ ತುಂಬಿದ ಊರಾಗುತ್ತದೆ. ದೂರದ ಆ ನಗರ ಮೆಲ್ಲಮೆಲ್ಲನೆ ತನ್ನ ನಾಲಿಗೆಯನ್ನು ಚಾಚುತ್ತಾ ಇಲ್ಲಿಯವರೆಗೂ ಬಂದು ಮಲಗುತ್ತದೆ. ಆಗ . . . ಆಗ ಯಾರಿಗಾದರೂ ಅನಿಸೀತೆ, ಈ ಸುಂದರವಾದ ಸ್ಥಳದಲ್ಲಿ ಕೆಲವು ಕಾಲದ ಹಿಂದೆ ಯಾರೋ ಇಬ್ಬರು ರಸಿಕಮಿತ್ರರು ಸಂಜೆಯ ಹೊತ್ತು ಇಲ್ಲಿ ಕಳಿತು ಸೌಂದರ್ಯಾರಾಧನೆ ಮಾಡುತ್ತಿದ್ದರು, ಎಂದು? ನಮ್ಮ ಕಣ್ಣೆದುರಿಗೇ ಈ ನಗರ ಬೆಳೆದು, ಆಗ ನಾವು ಆ ದಿಬ್ಬವಿದ್ದ ಕಡೆ ನಿಂತ ಮನೆಗಳನ್ನು ನೋಡಿ ಸುಯ್ದು ಆ ನೋವನ್ನು ಸಹಿಸುವುದು ಹೇಗೆ? ನಮಗೆಲ್ಲಾದರೂ 'ಶಾಪ' ಕೊಡುವ ಶಕ್ತಿ ಇದ್ದಿದ್ದರೆ—ಈ ನಗರ ಈಗಿರುವ ಗಡಿಯಿಂದ ಒಂದು ಅಡಿಯೂ ಮುಂದೆ ಬೆಳೆಯದಿರಲಿ, ಎಂದೋ; ಬೆಳೆದರೆ ಹಾಳಾಗಲಿ ಎಂದೋ ಶಪಿಸುತಿದ್ದೆವು. ಆದರೆ ಈ ಕಲಿಯುಗದಲ್ಲಿ ಆ ಶಕ್ತಿ ನಮಗೆಲ್ಲಿಯದು—ಎಂದುಕೊಂಡು ಪರಿತಪಿಸುತ್ತಾ ಆ ದಿಬ್ಬದ ಹತ್ತಿರವೇ ಹನಿಗಣ್ಣಾಗಿ ನಿಂತಿದ್ದೆ. ಆದರೆ ಆ ದಿಬ್ಬ ಮಾತ್ರ ತನಗೆ ಏನೂ ಆಗಿಲ್ಲವೆಂಬಂತೆ ಎಂದಿನಂತೆ ಹಸನ್ಮುಖಿಯಾಗಿತ್ತು. ಸಂಜೆಯ ಹೊಂಬೆಳಗು ಅದರ ಮೇಲೆ ಹರಡಿತ್ತು. ದಿಬ್ಬದ ಬದಿಯಿಂದ ಅಲ್ಲಲ್ಲಿ ದೂರದೂರದವರೆಗೂ ನಸುಹಸಿರು ಪಸರಿಸಿತ್ತು. ದೂರದ ಕೆರೆ ಎಂದಿನಂತೆ ಉಜ್ವಲವಾಗಿತ್ತು. ಮೇಲಿನ ಆಕಾಶದಲ್ಲಿ ಹಲವಾರು ಮೋಡಗಳು ಉನ್ಮತ್ತವಿಲಾಸದಿಂದ ಚರಿಸುತಿದ್ದುವು. ಪ್ರಕೃತಿಯಲ್ಲಿ ಯಾವುದೂ, ಈ ದಿಬ್ಬಕ್ಕಾಗಿರುವ ಅಪಘಾತವನ್ನು ಗಮನಿಸದಂತೆ, ಗಮನಿಸಿದರೂ ಅದು ಹೊಸದಲ್ಲವೆಂಬಂತೆ ತಮಗೆ ತಾವೇ ನಲಿಯುವಂತೆ ತೋರಿತು. ಆದರೆ ನಾನು ಮಾತ್ರ ಯಾವುದೋ ಭವಿಷ್ಯ ದುಃಖದ ಜಂಜಡದಲ್ಲಿ ನಿಮಗ್ನನಾಗಿದ್ದೆ. ಆಗ ನಸುನಗುತ್ತಾ 'ನಮ್ಮ ದಿಬ್ಬ' ನುಡಿಯಿತು.—'ಮಗೂ, ಹೀಗೆಲ್ಲಾ ಚಿಂತಿಸಬಾರದು. ಏನಾಗಬೇಕೋ ಅದು ಆಗಲೇಬೇಕು. ನಡೆಯುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಕೆಲವು ಕಾಲ ಕಳೆಯಲಿ. ಆಗ ನಿನಗೆ ಅರ್ಥವಾದೀತು. ಜಗತ್ತು ಚೆನ್ನಾಗಿ ಅರ್ಥವಾದಾಗ ಯಾವುದು ಮಂಗಳ, ಯಾವುದು ಅಮಂಗಳ ಎಂಬುದು ತಿಳಿಯುತ್ತದೆ. ಎಲ್ಲವೂ ಒಳಿತಕ್ಕೇ'—ಎಂದು ನಕ್ಕಿತು. ನಾನು ಬೆಪ್ಪಾಗಿ, ಮೂಕವಿಸ್ಮಿತನಾಗಿ ಅದನ್ನೇ ನೋಡುತ್ತಾ, ಅದು ಹೇಳಿದ ಮಾತಿನ ಮಾಧುರ್ಯಕ್ಕೆ, ತೂಕಕ್ಕೆ, ಎದೆಸೋತು ನಿಂತಿದ್ದೆ. ಸಂಜೆಯ ಸೂರ್ಯ ನನ್ನನ್ನು ನೋಡಿ ನಸುನಗುತ್ತಾ ಅಸ್ತಾದ್ರಿಗೆ ಅವತರಿಸುತ್ತಿದ್ದ.

ಜಿ. ಎಸ್. ಶಿವರುದ್ರಪ್ಪ.

ಕಣಿವೆಯಾಚೆ

ಗೆಳೆಯ ಸತ್ಯನಾಥ ತನ್ನೂರಿಗೆ ಎರಡು ಮೂರು ಸಲ ಒತ್ತಾಯಪಡಿಸಿ ಕರೆದರೂ ನಡುವೆ ಬಂದ ಯಾವ ರಜೆಗೂ ಅವರೂರಿಗೆ ಹೋಗುವುದಾಗಿರಲಿಲ್ಲ. ಮಲೆನಾಡಿನ ಒಳಸೆರಗಿನಲ್ಲಿ ಅವರ ಊರಂತೆ. ಯಾವಾಗ ನಾವಿಬ್ಬರೇ ಸಂಧ್ಯಾವಿಹಾರಕ್ಕೆ ಹೊರಡಲಿ ಸತ್ಯ ತನ್ನ ಊರನ್ನು ಬಾಯ್ತುಂಬ ಬಣ್ಣಿಸದಿದ್ದರೆ, ಕೊನೆಗೆ ಅವರೂರ ಹೆಸರನ್ನಾದರೂ ಹೇಳದಿದ್ದರೆ ಅಂದಿನ ನಮ್ಮ ಸಂಭಾಷಣೆ ಪೂರ್ಣತೆ ಪಡೆಯು ತ್ತಿರಲಿಲ್ಲ. ಹೆಮ್ಮೆಯ ಮುಖಭಾವದಿಂದ, ಕಣ್ಣು ಮತ್ತೊಮ್ಮೆ ಹುಟ್ಟಿ ದೂರ ಚಲುವಿನ ನೆನಪನ್ನು ಚಿತ್ರಿಸಿಕೊಂಡು ನೋಡುತ್ತಿವೆಯೋ ಎಂಬಂತಿರುವ ಹೊಳಪಿ ನಿಂದ ಸಕ್ಕರೆಯ ತೊರೆಹರಿಯಿಸುವ ಮಾತಿನಿಂದ ಅವರೂರು ನನ್ನ ಕಲ್ಪನೆಯಲ್ಲಿ ಬೇರೊಂದು ಗಂಧರ್ವ ಉದ್ಯಾನ ನಗರಿಯನ್ನೇ ಮೂಡಿಸುತ್ತಿತ್ತು. ಅವರೂರ ಹೆಸರನ್ನೇ ಹೇಳಲಿಲ್ಲವಲ್ಲ !

ಮುದ್ದಾದ ಹೆಸರು ! ಹೂವಳ್ಳಿ.

ಬೇಸಗೆಯ ರಜೆಯ ಮೊದಲ ಕೆಲಭಾಗ ಸಂತೋಷದಲ್ಲಿ ಗೆಳೆಯರ ಹೊಸ ಕೂಟದಲ್ಲಿ ಬಹಳ ದಿನ ಕಟ್ಟಿಟ್ಟ ಮಾತುಕತೆಯ ಬಿಚ್ಚಿನಲ್ಲಿ ಗೊತ್ತೇ ಆಗದಂತೆ ಕಳೆಯಿತು. ಅನಂತರ ಬೇಸರದ ದಿನಗಳು ಬಂದು ಒಂದು ನವೀನತೆಯ ಆಸೆಗೆ ಹೂವಳ್ಳಿ ನೆನಪಾಯಿತು. ಗೆಳೆಯನಿಗೆ ಕಾಗದ ಬರೆಯದೆಯೇ ಹೋಗುವುದು ನವೀನತೆಗೆ ಒಂದು ವಿಶೇಷ ಕಳೆ ಕೊಡುವುದೆಂದು ಯೋಚಿಸಿಯೇ ಹೊರಟೆ. ಹಗುರವಾದ ಆವಶ್ಯಕ ಸಾಮಾನುಗಳನ್ನೊಳಗೊಂಡ ಪ್ರವಾಸದ ಕೈಚೀಲ ಕೈಯಲ್ಲಿ. ಒಬ್ಬನೇ ಕಾಣದ ಸೀಮೆಯ ಕಡೆ ಪಯಣ ಹೊರಡುವುದು ಒಂದು ಮೋಜು. ಒಂದು ತರದ ರೋಮಾಂಚಕ ಸಂಭ್ರಮ. ಎಲ್ಲ ಹೊಸದು ! ಹೊಸ ಮಾತು, ಹೊಸ ನಾಡು, ಹೊಸಜನ, ಹೊಸ ಅನುಭವ—ಮುಂದೆ ಹೇಗೆಹೇಗೆ ಆದೀತೆಂಬ ನಾನಾ ಭಾವನಾತಿನಿಸುಗಳನ್ನು ಮೆಲಕುಹಾಕುತ್ತ ತೂಕಡಿಕೆ ಬಂದಿತು. " ಕಡೂರು, ಕಡೂರು " ಎಂದು ಕನಸಿನಲ್ಲಿ ಕೂಗಿದಂತಾಯಿತು. ಬೆಚ್ಚಿಬಿದ್ದು ಎದ್ದೆ. ರೈಲು ನಿಂತಿತ್ತು. ಸಣ್ಣ ಪ್ರಪಂಚದಂತೆಯೇ ಇದ್ದ ಕಂಪಾರ್ಟಮೆಂಟನ್ನು ಬಿಟ್ಟು ಇಳಿದೆ. ಕೂತು ಕೂತೂ, ಇಳಿದ ಕೂಡಲೇ, ಮೈಯೆಲ್ಲ ಅತಿ ಹಗುರವಾದಂತಾಗಿ ಹತೋಟಿಯೇ ತಪ್ಪಿತ್ತು. ತೂರಾಡುತ್ತ ಬಸ್ಸಿನೆಡೆ ಹೋದೆ. ಪುಣ್ಯಕ್ಕೆ ಚಿಕ್ಕಮಗಳೂರ ಕಡೆ ಹೊರಡುವ ಬಸ್ಸು ಸಿದ್ಧವಾಗಿ ಇನ್ನೂ ನಿಂತಿತ್ತು. ಟಿಕೆಟ್ಟೂ ಸಿಕ್ಕಿತು. ಬಸ್

ಹತ್ತಿದೆ. ಕೈಯಲ್ಲಿನ 'ಹಿಂದೂ' ಪತ್ರಿಕೆ ಕೆಲವು ವಿದ್ಯಾವಂತರ ಕಣ್ಣನ್ನು ಸೆಳೆಯಿತು. ನನ್ನ ಪಕ್ಕದಲ್ಲಿ ಕುಳಿತಿದ್ದವನೊಬ್ಬ ಪೂರ್ಣ ಆಧುನಿಕ ಸಂಸ್ಕೃತಿಯಲ್ಲದ್ದಿ ತೆಗೆದಿಟ್ಟ ಯುವಕ. ಒಂದು ಕಾರ್ಡರಾಯ್ ಪ್ಯಾಂಟ್ ಹಾಕಿ ಬರೀ ಷರಟು ಧರಿಸಿದ್ದ. ಕೊರಳಲ್ಲಿ ಸಿಲ್ಕಿನ ವರ್ಣರಂಜಿತ ಮಫ್ಲರ್. ಕೆದರಿದ ಕೂದಲು, ಸಿಗರೇಟು ಸೇದಿ ಕರ್‍ರಗೆ ಕಂದಿದ್ದ ತುಟಿಗಳು ದೀರ್ಘ ಪ್ರವಾಸದ ಸಂಕೇತವಾಗಿದ್ದವು. ಆದರೂ ಅಂದೇ ನುಣ್ಣಗೆ ಕ್ಷೌರಿಸಲ್ಪಟ್ಟ ಗದ್ದ—ಮೇಲ್ತುಟಿ. "ಎಲ್ಲಿಗೆಸ್ವಾಮಿ" ಎಂದ ಇಂಗ್ಲಿಷಿನಲ್ಲಿ. ಬಹಳ ದಿನದ ಪರಿಚಯಸ್ಥನ ಸಲುಗೆಯಲ್ಲಿ. ನನಗಿಂತ "ಹಿಂದೂ" ಅವನಿಗೆ ಹೆಚ್ಚು ಪರಿಚಿತ ಗೆಳೆಯನಿರಬೇಕು ಎಂದೆನಿಸಿತು.

ಮಾತನಾಡಲಿಷ್ಟವಿಲ್ಲದೆಯೋ, ಮಾತು ಅನವಶ್ಯಕವೆಂದೋ ನಾನು ಏನೂ ಉತ್ತರ ಕೊಡದೆ ಪೇಪರ್ ಅವನ ಕೈಗಿತ್ತೆ. ಪೇಪರ್ ತೆಗೆದುಕೊಂಡವನೇ ಸುಮ್ಮನಾದ. ತನ್ನ ಮೊದಲ ಪ್ರಶ್ನೆಗೆ ಉತ್ತರ ಬಾರದಿದ್ದರೂ ಮುಂದೆ ಹಾಕಬೇಕೆಂದಿದ್ದ ಪ್ರಶ್ನೆಗೆ ಉತ್ತರ ಬೇಗನೆ ಸಿಕ್ಕಿದ್ದೇ ಸಾಕಾಯಿತೆಂದು ತೋರುತ್ತೆ. ಎಲ್ಲರ ದೃಷ್ಟಿಯನ್ನೂ ನಿವಾರಿಸಿಕೊಂಡು ಸಮಾಧಾನದಿಂದ ಕುಳಿತೆ. ಡ್ರೈವರನಿಗೆ ಮೊದಲೇ ಹೇಳಿದ್ದೆ, ಹೂವಳ್ಳಿಗೆ ಹೋಗಬೇಕು ಇಳಿಯಬೇಕಾದ ಕಡೆ ದಯವಿಟ್ಟು ತಿಳಿಸು ಎಂದು. ಯಾವುದೋ ಹಳ್ಳಿಯ ಬಳಿ ಬಸ್ ನಿಂತಿತು. ಹಿಂದೆ ಬಿಟ್ಟುಹೋಗುತ್ತಿದ್ದ ಧೂಳಿಯಾವರಣ ಬಸ್ಸನ್ನೆಲ್ಲ ಮುಸುಕಿತು, ಬಸ್ಸಿಳಿದು ಬೀಡಿ ಹಚ್ಚಿ ಹೊಗೆ ಬಿಡುತ್ತ ಹೇಳಿದ ಡ್ರೈವರ್! "ಇಲ್ಲೇ ಇಳೀಬೇಕು ಸಾರ್. ಈಕಡೆ ಈ ಕಾಲ್‌ಹಾದಿಲೇ ಹೋಗಿ. ಒಂದು ಸಣ್ಣ ರಸ್ತೆ ಸಿಕ್ಕುತ್ತೆ. ಅಲ್ಲಿಂದ ಬಲಕ್ಕೆ ತಿರುಗಿ ಎರಡು ಮೂರು ಫರ್ಲಾಂಗ್ ಹೋದರೆ ಸಾಕು ಹೂವಳ್ಳಿ ಸಿಕ್ಕುತ್ತೆ." ಕೈಚೀಲ-ಸೂಟಕೇಸ್-ಹಿಡಿದು ಕೆಳಕ್ಕಿಳಿದೆ. ಸಂಜೆ ಐದುಘಂಟೆ ತೋರಿಸುತ್ತಿತ್ತು ಕೈಗಡಿಯಾರ. ಹೆಚ್ಚುಕಡಿಮೆ ಬೆಟ್ಟಗಳ ನಡುವೇ ನಿಂತಿದ್ದೆ. ಕಾಲುದಾರಿ ಒಂದು ಗುಡ್ಡದ ಮೇಲೆ ಹೋಗುತ್ತ ಕೆಂಪು ಬೈತಲೆಯಂತೆ ಕಾಣುತ್ತಿತ್ತು. ಏನು ಚೆಲುವಿನ ಸಿರಿ? ಸಂಜೆಯ ರಮ್ಯೋಜ್ವಲ ಸೂರ್ಯಾಸ್ತಕ್ಕೆ ಆಗಲೇ ಸಿದ್ಧತೆಯಾಗುತ್ತಿತ್ತು. ಇನ್ನು ಹೂವಳ್ಳಿಯೋ? ಅಂತೂ ಭಾದಕವಿಲ್ಲ. ಕಣ್ಣಿಗೆ ರಸದೂಟ ಕೆಲವು ದಿನ ಎಂದುಕೊಂಡು ಹೊಸ ಹುರುಪಿನಿಂದ ಕಾಲು ಹಾಕಿದೆ. ಎರಡು ಕಡೆಗೂ ನೋಡು ನೋಡುತ್ತ ಅನೇಕ ಸಲ ದಾರಿಬಿಟ್ಟು ಅಡ್ಡಾದಿಡ್ಡಿ ಹೋಗುತ್ತಿದ್ದು ಮತ್ತೆ ಎಚ್ಚೆತ್ತು ನನಗೆ ನಾನೇ ನಗುತ್ತ ದಾರಿ ಹಿಡಿಯುತಿದ್ದೆ. ಎಷ್ಟು ದೂರ ಹೋದೆನೋ ಅರಿವೇ ಇಲ್ಲ. ಹೊಂಬಣ್ಣದ ಕಾಂತಿಯನ್ನೊಮ್ಮೆ ಕೊನೆಗೆ ಚಿಮ್ಮಿಸಿ ಸೂರ್ಯ ಬೆಟ್ಟದ ಮರೆಗಿಳಿದು ಕಾಣದಾದ. ಕತ್ತಲಾಯಿತೆಂದು ದಾಟುಗಾಲು ಜೋರುಮಾಡಿದೆ. ಚೆಲುವಿನ ನೋಟ ತುಸು ಭಯ ಶಂಕೆಗಳಿಂದ

ಕೂಡಿತು. ಒಂದು ಕಡೆ ಏರುತ್ತಿದ್ದ ಬೆಟ್ಟದ ಕಾಡು, ಮರ ಪೊದೆಗಳ ದಟ್ಟಣಿ. ಇನ್ನೊಂದು ಕಡೆ ಕ್ರಮೇಣ ತಗ್ಗಾಗಿ ಹೋಗುತ್ತಿದ್ದ ಇಳಿಜಾರು, ಬತ್ತದ ಹಸಿರು ಪೈರಿನಿಂದ ಹಬ್ಬಿತ್ತು. ಕತ್ತಲಾಗುತ್ತಾ ನಾನಾ ಹುಳುಗಳ ಜಿರ್ರೆಂಬ ಸದ್ದು ನೀರವ ವಾತಾವರಣವನ್ನು ತುಂಬಿತ್ತು. ದೂರದಲ್ಲೆಲ್ಲೋ ಜನರ ಕೂಗು ಆಗಾಗ ಕೇಳು ತ್ತಿತ್ತು. ಹೊಲದಲ್ಲಿ ಕೆಲಸಮಾಡುತ್ತಿದ್ದ ರೈತರದಿರಬೇಕು. ದಾರಿಯೇನಾದರೂ ತಪ್ಪಿದ್ದೀತೇ ? ಏನೇನೋ ಸಾಹಸ ಮಾಡಹೋಗಿ ಏನೋ ಆಯಿತಲ್ಲ. ನನ್ನ ಶಂಕೆಗೆ ಸರಿಯಾಗಿ ನನ್ನ ಕಾಲಹಾದಿ ಬೆಟ್ಟವನ್ನೇರಲಾರಂಭಿಸಿತು ಸರಿ. ದಾರಿಯಲ್ಲಿ ಎಲ್ಲೋ ಕವಲು ಬಂದಿತೊ ವಿಚಾರಿಸದೆ ಯಾವ ಕವಲನ್ನು ಹಿಡಿದು ಬಂದೆನೊ ? ಹುಂ. ಆದುದಾಗಲಿ ಎಂದು ಮುನ್ನಡೆದೆ, ಕತ್ತಲು ! ಕಣಿವೆಯಲ್ಲಿ ಕೇಳಬೇಕೆ !—ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು, ಚಿಂತಾಭಯಗಳು ನನ್ನ ಮನಸ್ಸಿನಲ್ಲಿ ಹೆಚ್ಚುತ್ತಿದ್ದುವು. ಸುಮ್ಮನೆ ಕಾಗದ ಬರೆದಿದ್ದರೆ, ಹೋಗಲಿ ಬಸ್ ನಿಂತ ಊರಿನವರ ಪೈಕಿ ಯಾರ ನ್ನಾದರೂ ಸರಿಯಾಗಿ ಕೇಳಿ ಬಂದಿದ್ದರೆ—ಎಲ್ಲ 'ರೆ' ಸಾಮ್ರಾಜ್ಯ. ಆದರೆ ಯಾವ 'ರೆ'ಯೂ ಸಹಾಯ ಮಾಡುವಂತಿರಲಿಲ್ಲ. ಕಲ್ಪಿಸಿಕೊಳ್ಳುತ್ತಿದ್ದ ಧೈರ್ಯವೆಲ್ಲ ಸುತ್ತಲಿನ ನೋಟದಿಂದ ಕರಗಿಹೋಗುತ್ತಿತ್ತು. ಚೆಲುವೆಂದು ನೋಡಲು ಬಂದರೆ ಅದರ ಹೊಟ್ಟೆಯಲ್ಲಿ ಈ ಭೀಕರತೆಯೇ. ನಡುವೆ ಯಾರಾದರೂ ಕಳ್ಳರು ಬಂದರೆ! ಕೈಲಿ ವಾಚು, ಜೇಬಿನಲ್ಲಿ ಹಣವಿದೆ. ತುಸು ಆದರೂ ಹೆದರಿಕೆಯಲ್ಲವೆ. ಅವರನ್ನು ಹೇಗೋ ಸುಧಾರಿಸಬಹುದು. ದುಷ್ಟಮೃಗ!! ವಿಷಜಂತುಗಳು!!! ನೆನಕೆಯೇ ನವಿರೆಬ್ಬಿಸಿತು. ನಡುಕ ಒಮ್ಮೆ ಕಿವಿಯಿಂದ ಕಾಲವರೆಗೆ ಮಿಂಚಿನಂತೆ ಹರಿಯಿತು. ಅಷ್ಟರಲ್ಲಿ ಹೊಲದ ಕಡೆಯಿಂದ ಸಿಳ್ಳುದನಿ ಕೇಳಿಸಿತು. ಒಂದುಕಡೆ ಭಯ ; ಒಂದುಕಡೆ ಧೈರ್ಯ. ಆ ದನಿ ಸಮೀಪವಾಗುತ್ತ ಕೊನೆಗೆ ಆ ಮಂದ ಬೆಳಕಿನಲ್ಲಿ ಒಂದು ಕಂಬಳಿ ಹೊದ್ದ ವ್ಯಕ್ತಿ ಕಬ್ಬಿನ ಗದ್ದೆಕಡೆಯಿಂದ ಹೊರಬಂದಿತು. ಹಿಂದೆಯೇ ಇನ್ನೊಂದು ವ್ಯಕ್ತಿ. ಮಸಕು ಬೆಳಕಿನಲ್ಲಿ ಅವರು ಯಾರೆಂದು ಗೊತ್ತಾಗಲಿಲ್ಲ. ಅಷ್ಟರಲ್ಲಿ ನನ್ನನ್ನು ನೋಡಿದ ಅವರು ಆಶ್ಚರ್ಯಪಟ್ಟಿರಬೇಕು. ಕುತೂಹಲಾವಿಷ್ಟರಾಗಿರಬೇಕು. ಅದೇ ದನಿಯಲ್ಲಿ ಕೇಳಿದ ಹಿಂದಿದ್ದವನು "ಯಾರು ಸ್ವಾಮಿ ನೀವು. ಇತ್ತ ಎಲ್ಲಿಗೆ ಹೊರಟಿರಿ ಈ ಕತ್ತಲಲ್ಲಿ ?" ನಾನು ಹೇಳುವುದೋ ಬೇಡವೋ ಎಂದು ಅಂಜಿ ಹಿಂಜರಿದೆ. ಕಳ್ಳರಾಗಿದ್ದರೆ ಎಂಬ ಭಯ. ಛೇ ಮಲೆನಾಡಿನ ರೈತರೊ ಏನೊ. ಪಾಪ ಕೇಳಿಕೆಯಲ್ಲೇ ಎಷ್ಟು ಸೌಜನ್ಯ ವಿನಯ ತುಂಬಿದೆ ಎಂದುಕೊಂಡು ಹೇಳಿದೆ. "ನಾವು ಪರಸ್ಥಳದವರಪ್ಪ. ಇತ್ತ ಹೂವಳ್ಳಿಗೆಂದು ಹೊರಟೆ, ದಾರಿ ತಪ್ಪಿತೊ ಏನೋ ನಿಮಗೇನಾದರೂ ದಾರಿಗೊತ್ತೆ ?"

"ಹೋ ಸರೀಸ್ವಾಮಿ, ದಾರಿಯೇನೋ ಪೂರಾತಪ್ಪಿದೆ. ಹೂವಳ್ಳಿ ಎತ್ತ—

ಬಾಸಳ್ಳಿ ಎತ್ತ. ನೀವು ಹೊರಟಿರೋದು ಸಮ್ಮೂರಿಗೆ. ಈಗ ತಿರುಗಿ ಹೂವಳ್ಳಿಗೆ ಹೋಗೋದೆಂದರೆ ನೀವು ಬಂದಿರುವಷ್ಟು ದೂರ ಮತ್ತೆ ನಡೆಯಬೇಕು.'' ನನಗೆ ತುಂಬ ಯೋಚನೆಗೀಡಾಯಿತು. ಈ ಕತ್ತಲಲ್ಲಿ ಛಳಿಯಲ್ಲಿ ಗೊತ್ತುಪರಿಚಯವಿರದ ಕಾಡಿನಲ್ಲಿ ಹೇಗಪ್ಪ ರಾತ್ರಿ ಕಳೆಯೋದು; ಊಟ ಇಲ್ಲದಿದ್ದರೂ ಚಿಂತೆಯಿಲ್ಲ. ಬೆಚ್ಚಗೊಂದುಕಡೆ ಮಲಗಲು ಜಾಗಸಿಕ್ಕರೆ ಸಾಕು ಎಂದುಕೊಂಡೆ. ಇಷ್ಟುಮಾತು ಯೋಚನೆ ನಡೆಯುವಾಗ ಮೆಲ್ಲಗೆ ಕಾಲು ಹಾಕುತ್ತಲೇ ಇದ್ದೆವು. ನಾನು ಯೋಚಿಸುತ್ತಿದ್ದಂತೆಯೇ ಅವರಿಬ್ಬರೂ ಏನೋ ಮಾತಾಡಿಕೊಳ್ಳುವಂತೆ ಕಂಡಿತು. ಇನ್ನೊಬ್ಬನು—ಸ್ವಲ್ಪ ದಣಿದ ಆದರೆ ಕಂಚುಬಡಿದಂತಹ ದನಿಯಲ್ಲಿ—"ಹಾಗಾರೆ ನೀವೆಲ್ಲಿ ಹೋಗ್ತೀರಿ ಈ ಕಾಣದ ಕಾಡಿನಲ್ಲಿ? ಬನ್ನಿ ಈ ರಾತ್ರಿ ನಮ್ಮ ಬಡ ಗುಡಿಸಲಲ್ಲಿದ್ದು ಬೆಳಗಾಗಿ ಹೋಗುವಿರಂತೆ, ನಮ್ಮ ಹುಡುಗ ದಾರಿ ತೋರಿಸ್ತಾನೆ ಬೇಕಾರೆ" ಎಂದ. ಬೇರೆ ದಾರಿಯಿರಲಿಲ್ಲ. ರೋಗಿ ಬಯಸಿದ್ದೇ ವೈದ್ಯ ಹೇಳಿದಹಾಗಾಯಿತು ನನ್ನ ಸ್ಥಿತಿ. ಹ್ಞೂಗುಟ್ಟಿ ಅವರ ಹಿಂದೆಯೇ ಹೋದೆ. ಅನತಿದೂರದಲ್ಲಿ ಲಾಟೀನಿನ ಬೆಳಕು ಚಿಮ್ಮಿ ಕಿಟಕಿ ಬಾಗಿಲುಗಳ ಸ್ಥಳ, ಆಕಾರಗಳನ್ನು ನಿರ್ದೇಶಿಸುತ್ತಿತ್ತು. ಹೊರಜಗುಲಿಯ ಬಳಿ ಹೋಗುತ್ತಿದ್ದಹಾಗೆ ಒಳಗಿನಿಂದೊಬ್ಬ ಹೆಂಗಸು ಬಂದು "ಎಷ್ಟೊತ್ತು ಚಿರೋದು. ಕೆಳಬೇಗಾರಿನ ಅನುಮಣ್ಣ ನಿಮಗಾಗಿ ಕಾದೂ ಕಾದೂ ನಾಲ್ಕಾರುಸಲ ಎಲೆ ಅಡಿಕೆ ಮುಗಿಸಿ ಇದೇ ಈಗ ತೋಟದ ಮನೆಗೆ ಹೋದ ಮಲಗಾಕೆ. ಭತ್ತಕ್ಕೆ ನೀರು ಕಟ್ಟಾಕೆ ಎರಡಾಳು ಸಿಕ್ಕಾವಂತೆ . . ." ಎಂದು ಇನ್ನೂ ಏನೇನೋ ಹೇಳುತ್ತಿದ್ದವಳು ನನ್ನನ್ನು ನೋಡಿ ಹಾಗೇ ಸುಮ್ಮನಾದಳು. "ಬನ್ನಿ ಸ್ವಾಮಿ ಒಳಕ್ಕೆ. ಚಾಪೆ ಹಾಸ ಇಲ್ಲ." ಒಳಕ್ಕೆ ಹೋದೆ. ಆ ಮಿಣುಕು ದೀಪದ ಬೆಳಕೇ ಆ ಕದ್ದಿಂಗಳಿರುಳಲ್ಲಿ ವಿದ್ಯುದ್ದೀಪವಾಗಿತ್ತು. ನನ್ನನ್ನು ಮಾತಾಡಿಸಿದ್ದ ವ್ಯಕ್ತಿಗಳ ರೂಪ ಕಾಣಿಸಿತು. ಒಬ್ಬ—ಮೊದಲು ಮಾತನಾಡಿಸಿದವನಿರಬೇಕು—ಮಧ್ಯವಯಸ್ಸಿನವ. ಶುದ್ಧ ಮಲೆನಾಡಿನ ಅತಿ ಸಂಸ್ಕೃತಿಯ ರೈತ. ಹೊಸದೂ ಹಳೆಯದೂ ಸಂಗಮವಾಗಿತ್ತವನಲ್ಲಿ. ಇನ್ನೊಬ್ಬ ಮುದುಕ ಬಿಳಿಯ ಕೂದಲು ತಲೆ ಗಡ್ಡ ಮೀಸೆಗಳಲ್ಲಿ ಕಾಣುತ್ತಿದ್ದವು. ವಯಸ್ಸು ಮೀರಿದ್ದರೂ ಕಲ್ಲಿನಂತಹ ದೇಹ. ಹೊಳೆವ ಹಲ್ಲು. ಕುಗ್ಗದ ಧ್ವನಿ. ಹೊಳೆಯುವ ಕಣ್ಣುಗಳಲ್ಲಿ ಸ್ಥಿರತೆ. ಕಠೋರತೆ ತುಂಬಿದಂತೆ ಗಂಭೀರತೆ ಇದ್ದರೂ ವಿನಯಯುಕ್ತವರ್ತನೆ. ಮನೆಗೆ ಹೊಸಬ—ಅತಿಥಿ—ಬಂದಿದ್ದೇನೆಂದು ದಣಿದ ಮುಖದಲ್ಲೂ ಉತ್ಸಾಹ ತೋರುತ್ತ ಅತ್ತಿತ್ತ ಓಡಾಡುತ್ತಿದ್ದ. ಮನೆಯ ಮೊದಲು ನೋಡಿದ ಹೆಣ್ಣುಮಗಳು ಬಂದಳು. ಅಷ್ಟರಲ್ಲಿ ನಾನು ಕುಳಿತಿದ್ದ ಪುಟ್ಟ ವರಾಂಡದ ಎಲ್ಲ ಭಾಗವನ್ನೂ ನೋಡಿ ಮುಗಿಸಿದ್ದ ನನ್ನ

ದೃಷ್ಟಿ ಅವಳ ಕಡೆ ಹೋಯಿತು. ಆ ಮುದುಕನ ಹೆಂಡತಿಯೆಂದೂ ಆಕೆಯ ವಯೋರೂಪಿತ ಮುಖದ ಗೆರೆಗಳಿಂದ ಊಹಿಸಿದೆ. ಮುಂದಿನೆರಡು ಹಲ್ಲು ಉದುರಿಹೋಗಿದ್ದವು. ಮುಪ್ಪು ತನ್ನ ಛಾಯೆಯನ್ನು ಬೀಸಿತ್ತು. ಆ ಮುದುಕನಿಗಿಂತ ವಯಸ್ಸಾದವಳಂತೆ ಕಂಡಳು. ಕಣ್ಣು ಒಂದು ತರದ ನಿರ್ಮಲತೆಯನ್ನೂ, ಶಾಂತತೆಯನ್ನೂ ಸೂಚಿಸುತ್ತಿದ್ದರೂ ಯಾವುದೋ ಚಿಂತೆಯಿಂದ ಬಳಲಿದಂತಿದ್ದುವು. ಹೊಸಬನೊಬ್ಬ—ನೋಡಲು ಅಚ್ಚ ನಾಗರಿಕನಾದವನು—ಪರವೂರಿಂದ ಆಕಸ್ಮಿಕವಾಗಿ ಮನೆಗೆ ಬಂದುದು ಅವರೆಲ್ಲರಿಗೂ ವಿಶೇಷ ಸಂತೋಷವನ್ನುಂಟುಮಾಡಿದ್ದಂತೆ ಅವರ ನಡವಳಿಕೆಗಳಿಂದ ಸ್ಪಷ್ಟವಾಯಿತು. ಆ ಮುದುಕಿಯಂತೂ ಬಹಳ ಉತ್ಸಾಹ ಸಂತೋಷಗಳಿಂದ ಅತಿಥಿಸತ್ಕಾರಕಾರ್ಯದಲ್ಲಿ ತೊಡಗಿದ್ದಳು. ಕಟ್ಟಿಗೆ ಒಯ್ದಳೊಮ್ಮೆ, ಇನ್ನೊಮ್ಮೆ ಪಾತ್ರೆಯಲ್ಲೇನೋ—ಹೀಗೇ ಅವಳು ಓಡಾಡುವ ಗಡಿಬಿಡಿಯನ್ನು ಮೂಕನಂತೆ ನೋಡುತ್ತ ಕುಳಿತಿದ್ದೆ. ಬೆಳ್ಳಿಯ ಗುಂಗುರು ಕೂದಲು ಹಿಂದಿನ ಆಕೆಯ ಚೆಲುವಿನ ಸ್ಮಾರಕವಾಗಿತ್ತು. ಆ ಹಣೆಯ ವಿಶಾಲತೆಯಲ್ಲಿ ರಾರಾಜಿಸುತ್ತಿದ್ದ ಬಟ್ಟಕುಂಕುಮ ಹಿಂದೊಮ್ಮೆ ಒಲವಿನ ಚೆಲುವಿನ ಬಿಂದುವಾಗಿತ್ತೇನೋ. ಈಗ ಒಂದು ರೀತಿಯ ಗೌರವತೆಯನ್ನೂ, ತಾಯ್ತನದ ಚೆಲುವನ್ನೂ ಮೀರಿದ ಕಳೆಯನ್ನೂ ಮುಖಕ್ಕೆ ತಂದಿತ್ತು. ಅಷ್ಟರಲ್ಲಿ ಆ ಮುದುಕ ಬಂದು ಸಲುಗೆಯಿಂದ ಸ್ನಾನಕ್ಕೆಳೆದೊಯ್ದ.

ಬಲವಂತದಲ್ಲಿ ಬಿಸಿನೀರಿನ ಹಿತವಾದ ಸ್ನಾನ. ಮೇಲೆ ಸವಿಯೂಟ ಆದವು. ಉದ್ದಕ್ಕೂ ಮಾತುಕತೆ ನಡೆದಿತ್ತು. ರಾತ್ರಿ ಮಲಗುವ ವೇಳೆಗೆ ಇಬ್ಬರಿಗೂ ಒಬ್ಬರೊಬ್ಬರ ಸ್ಥೂಲ ಪರಿಚಯವಾಗಿತ್ತು. ಮುದುಕನಂತೂ ಸಲುಗೆಯ ಅಜ್ಜನಾಗಿಬಿಟ್ಟಿದ್ದ. ನನ್ನ ಮಿತಮಾತು, ಗಂಭೀರತೆ, ತಿಳಿಹಾಸ್ಯ ಅವನಿಗೆ ಬಹಳ ಒಪ್ಪಿತೆಂದು ಹೇಳುತ್ತಿದ್ದ. ಆತನ ಹೆಸರು ಸೋಮಣ್ಣ. ಅವನ ಮಗ ಆ ಇನ್ನೊಬ್ಬ ಮಧ್ಯವಯಸ್ಕ. ಆಕೆ ಸೋಮಣ್ಣನ ಹೆಂಡತಿ. ಮೂವರೇ ಮನೆಯತುಂಬ. ಮೂವರೂ ಒಂದುತರದ ಶಾಂತಿಯಲ್ಲಿ, ತೃಪ್ತಿಯಿಂದ ಸುಖವಾಗಿದ್ದಂತೆ ಕಂಡಿತು. ಅವರ ಬಯಕೆ ಅವರಿಗಿದ್ದುದಕ್ಕಿಂತ ಹೆಚ್ಚಿರಲಿಕ್ಕಿಲ್ಲ.

ಹೊರ ಕೋಣೆಯೊಂದರಲ್ಲಿ, ಸಣ್ಣ ಮಂಚದ ಮೇಲೆ ಮಲಗಲು ಹೇಳಿದರು. ದಪ್ಪನೆಯ ಕಂಬಳಿ ಛಳಿಯನ್ನೇ ಹೆದರಿಸುವಂತಿತ್ತು. ಸೋಮಣ್ಣನ ಹೆಂಡತಿ ಲಲಿತಮ್ಮ ಇನ್ನೂ ಮಾತಾಡಬೇಕೆಂದಿದ್ದಳು. ಯಾವೂರವರೆಂದು ಕೇಳಬೇಕೆಂಬ ಆಸೆ. ಒಂದೆರಡುಸಲ ಮಾತಿನಲ್ಲಿ ಕೇಳಿದರೂ ಸೋಮಣ್ಣ ಇನ್ನೊಂದು ಪ್ರಶ್ನೆಗಳ ಮಾಲಿಕೆಯನ್ನೇ ಕೋದು ಉತ್ತರವನ್ನು ಬೇರೆ ಮಾಡುತ್ತಿದ್ದ. ಆತನಿಗೆ ಸ್ನಾನಮಾಡುವಾಗಲೇ ಹೇಳಿದ್ದೆ. ನಾನು ದಾವಣಗೆರೆಯವನೆಂದು. ಆತ ತುಸುಹೊತ್ತು ಮೌನ

ವಾಗಿ ಅನಂತರ ಬೇರೆ ಮಾತೆತ್ತಿದ. ನನಗೊಂದೂ ಅರ್ಥವಾಗಲಿಲ್ಲ. ಮೇಲಾಗಿ ಎಲ್ಲವೂ ಸಹಜವಾಗಿಯೇ ಕಂಡಿತು. ಎಲೆ ಅಡಿಕೆ ಹಾಕುತ್ತ ಕೊನೆಗೊಮ್ಮೆ ಲಲಿತಮ್ಮ ಕೇಳಿದಳು ನಿಮ್ಮ ಊರಾವುದೆಂದು ಹೇಳಲೇ ಇಲ್ಲವಲ್ಲ? ಎಲೆ ಅಡಿಕೆ ಉಗುಳ ಹೋಗಿದ್ದ ಸೋಮಣ್ಣ ಧಾವಿಸಿ ಬಂದು—"ಇನ್ನು ಸಾಕು. ಪಾಪ. ದಿನವೆಲ್ಲ ಪಯಣಮಾಡಿ ನಡೆದು ದಣಿದಿದ್ದಾರೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲಿ ಬೆಚ್ಚಗೆ ನಿದ್ದೆಮಾಡಿ" ಎಂದು ನನ್ನ ಕೈಹಿಡಿದೆಬ್ಬಿಸಿ ಕೋಣೆಗೆ ಕರೆದೊಯ್ದು ಮಲಗಿಸಿದ. ನನಗೆ ಆತನ ಆಕ್ಕರೆ—ಬಂದು ಕೆಲವು ಘಂಟೆಗಳು ಕಳೆದಿಲ್ಲ ಆಗಲೇ ನಾನು ಮನೆಯವ ರಲ್ಲೊಬ್ಬನೆಂದು ತಿಳಿದು ಮಾಡಿದ ಉಪಚಾರ—ಅಚ್ಚರಿಯ ಮುಗ್ಧತೆಯನ್ನುಂಟು ಮಾಡಿತು.

ದೀಪ ಸಣ್ಣದುಮಾಡಿ ಮಲಗಿದೆ. ನಿದ್ದೆ ಹತ್ತಲಿಲ್ಲ. ಹೊರಗೆ ಅವರಿನ್ನೂ ಮಾತಾಡುತ್ತಿದ್ದರು.

ಬೆಳಿಗ್ಗೆ ಎದ್ದಾಗ ಸೂರ್ಯ ಹುಟ್ಟಿದ್ದ. ಸೋಮಣ್ಣ ಆಗಲೇ ತನ್ನ ಅವಿಶ್ರಾಂತ ಗಡಿಬಿಡಿಯಲ್ಲಿ ಮುಳುಗಿದ್ದ. ಕೆಲಸವೇ ಅವನ ಮುಖ್ಯ ಪ್ರಾಣವಾಗಿದ್ದಂತೆ ಕಾಣು ತ್ತದೆ. ಸುಮ್ಮನೆ ಬಂದುಕಡೆ-ಕುಳಿತುಕೊಳ್ಳುವ ಜೀವಿಯಲ್ಲ. ನನ್ನನ್ನಾಗಲೇ ಸ್ನಾನಕ್ಕೆ ಕರೆದೊಯ್ದು ನಾನು ಸ್ನಾನಮಾಡುತ್ತಿರುವಾಗ ಬಂದು "ದಯವಿಟ್ಟು ಕ್ಷಮಿಸಿ. ಗದ್ದೆಯ ಕೂಲಿಗಳು ಬಂದಿದ್ದಾರೆ. ಇವತ್ತು ನಾನು ಹೋಗದಿದ್ದರೆ ಕೆಲಸ ಸಾಗುವುದೇ ಇಲ್ಲ. ನೀವು ಇವೊತ್ತಿಂದಿನ ಇರುವ ಉಪಕಾರಮಾಡಬೇಕು. ನಮ್ಮ ಮನೆಯವರು ಎಲ್ಲ ನೋಡಿಕೊಳ್ಳುವರು. ನಾನಿಲ್ಲದಿದ್ದರೂ ನಿಮಗಾವ ಉಪಚಾರ ದಲ್ಲೂ ಕಡಿಮೆಯಾಗುವುದಿಲ್ಲ. ನಾನು ಅವರಿಗೆ ಕೆಲಸಮಾಡುವ ರೀತಿ ಹೇಳಿ ಮಧ್ಯಾಹ್ನ ಊಟದ ಹೊತ್ತಿಗೆ ಬಂದುಬಿಡುತ್ತೇನೆ. ಬರಲೇ?" ವಿನಯವೇ ಮೈವೆತ್ತು ಹೇಳಿದಂತೆ ಹೇಳಿದಮೇಲೆ ಆವೊತ್ತೂ ಅವರ ಮನೆಯ ಆತಿಥ್ಯಕ್ಕೆ ಸಿಕ್ಕಿಕೊಂಡೆ. ಸೋಮಣ್ಣ ಹೋದಮೇಲೆ ಸ್ನಾನ, ತಿಂಡಿ ಎಲ್ಲ ಆಯಿತು. ಆಗಂತೂ ಲಲಿತಮ್ಮನ ಬಾಯಿ ಸ್ವತಂತ್ರವಾಯಿತು. ಮನಸ್ಸಿನ ಭಾರವನ್ನೆಲ್ಲ ಹಗುರಮಾಡಿಕೊಳ್ಳುವಂತೆ ಸ್ವಚ್ಛಂದವಾಗಿ ಮಾತನಾಡಲಾರಂಭಿಸಿದಳು. ಪಾಪ, ತಮ್ಮದೇ ಆದ ಈ ಲೋಕ ದಲ್ಲಿರುವ ಮಾನವಜೀವಿಗೆ ಹೊರಗಣ ಪ್ರಪಂಚದಿಂದ ಒಬ್ಬ ಸುಸಂಸ್ಕೃತಜೀವಿ ಬಂದರೆ ಎಷ್ಟು ಆನಂದವಾಗಬೇಡ. ಮಲೆನಾಡ ಒಳಸೆರಗಿನಲ್ಲಿ ಕಾಡಿನ ನೀರವತೆಯ ಮಡಿಲಿನಲ್ಲಿ ಎರಡೊ ಮೂರೊ ಮನೆಯ ಹಳ್ಳಿ. ಅಲ್ಲಿಗೆ ಯಾರೂ ಬಯಲುಸೀಮೆಯ ಕಡೆಯುವರು ಹೋಗುವುದಿಲ್ಲ. ಅಲ್ಲಿನವರಾರೂ ಹೆಚ್ಚಾಗಿ ಪಟ್ಟಣಕ್ಕೆ—ಹೋಗಲಿ— ಬಯಲುಸೀಮೆಗೇ ಬರುವುದಿಲ್ಲ. ಎಷ್ಟೋವರ್ಷ ನಮ್ಮ ಜಗತ್ತಿನ ಸಮಾಚಾರವೇ

ಆ ಮಲೆನಾಡ ಋಷಿಗಳಿಗೆ ಹತ್ತಿರುವುದಿಲ್ಲ. ಎಂತಹ ಭೀಕರ ಏಕಾಂತಜೀವನ! ಅದನ್ನು ನೆನಸಿದುದಕ್ಕೆ ಜೀವ ತಲ್ಲಣಿಸಿತು. ದಿನವೆಲ್ಲ ಅವರು ಮಾತನಾಡುವ ಅವಕಾಶವೇ ಕಡಿಮೆ. ಅದರಲ್ಲೂ ಒಂದೊಂದುದಿನ ಪೂರ್ಣ ಮೂಗರಾಗೇ ಇರಬೇಕು. ಕೆಲಸ—ಕೆಲಸ, ಬೈಗೂ ಬೆಳಗಣ ನಡುವೆ ಬೇಕಾದಾಗ ಒಂದೊ ಎರಡೋ ಮಾತು. ಎಲ್ಲವನ್ನೂ ಲಲಿತಮ್ಮ ಒಂದೊಂದಾಗಿ ತಮ್ಮ ಅಲ್ಲಿಯ ಬಾಳಿನ ಚಿತ್ರಗಳನ್ನು ಕೊಟ್ಟಳು. ಎಂತಹ ಹೃದಯ ದ್ರಾವಕರೀತಿಯಲ್ಲಿ ಹೇಳಿದಳು! ನನ್ನ ಮನಸ್ಸು ತುಂಬಾ ನೊಂದಿತು. ನಮ್ಮೂರು ದಾವಣಗೆರೆ ಎಂದು ಗೊತ್ತಾದಕೂಡಲೇ ಅವಳ ಮಾತಿನ ಓಟ ಗಕ್ಕನೆ ನಿಂತಿತು. ಮುಖದಲ್ಲೊಂದು ವಿಲಕ್ಷಣಕಾಂತಿ ಮೂಕವೇದನೆಯೊಂದನ್ನು ಎತ್ತಿ ಬೆಳಗಿತು. ಕಣ್ಣು ಯಾವುದೋ ಆಳವಾದ ವಿಷಯವನ್ನು ಚಿಂತಿಸುವಂತೆ ಸ್ಥಿರವಾದವು. ಸ್ಮೃತಿಸಾಗರದ ತಳಕ್ಕೇ ಹೋದವೊ? ಲಲಿತಮ್ಮ ಮತ್ತೆ ಮೌನಮುರಿದು ಮಾತಾಡಿದಳು.—

"ಅಲ್ಲಿ ಚಂದ್ರಶೇಖರಯ್ಯನೆಂಬುವರು ಗೊತ್ತೆ? ವಕೀಲರು?" ಕಣ್ಣಿನಲ್ಲಿ ಯಾವುದೋ ಆಸೆ ಮೂಡಿತು. ಅವರು ಈಕೆಗೆ ಪರಿಚಯಸ್ಥರೇನೊ. "ಇಲ್ಲ ನನಗೆ ಗೊತ್ತಿಲ್ಲ." ನನಗೆ ಗೊತ್ತಾಗಿರುವ ಅಥವ ಇಲ್ಲದಿರುವ ವಿಷಯ ಆಕೆಗೆ ಬೇಕಾಗಿಲ್ಲ. ಏನನ್ನೊ ಹೇಳಬೇಕೆಂದು ಆ ಮಾತು ಎತ್ತಿದಳೇನೊ ಎನ್ನಿಸಿತು. ಏಕೆಂದರೆ ಆಕೆ ನನ್ನ ಮಾತಿನಕಡೆ ಲಕ್ಷ್ಯಕೊಡದೆ—"ಮಗೂ, ನಾನೂ ಒಮ್ಮೆ ದಾವಣಗೆರೆಯಲ್ಲಿದ್ದವಳು. ಒಂದು ಕಾಲದಲ್ಲಿ ಅದು ನನ್ನ ಊರೇ ಆಗಿತ್ತು" ಹೇಳುತ್ತ ಕಣ್ಣು ಹೊಳೆಯುತ್ತಿದ್ದವು. ಬಹಳ ಹಿಂದಿನ ನೆನಪನ್ನು ಹುಡುಕುವಂತೆ ಕಂಡವು. "ಯಾವ ಪಾಪಕ್ಕೊ ಇನ್ನೂ ಆ ತಾಯೂರನ್ನು ಮತ್ತೆ ನೋಡುವ ಭಾಗ್ಯ ಲಭಿಸಿಲ್ಲ." ನನಗೆ ಕುತೂಹಲ ಹೆಚ್ಚಾಯಿತು. ಯಾವುದೋ ಚಿಂತೆಯಿಂದ ಕೂಡಿದ್ದರೂ ಉತ್ಸಾಹ ತಂದುಕೊಂಡು ಅದನ್ನು ಮರೆಮಾಚುತ್ತಿದ್ದ ಅವಳ ಮುಖ ಭಾವ ನನಗೆ ಮೊದಲೇ ಕುತೂಹಲವನ್ನುಂಟುಮಾಡಿತ್ತು. ಈಗ ಆಕೆ ಮಾತಾಡಿದ ವಿಷಯ ಆ ನಿಗೂಢ ಚಿಂತೆಯ ವಿಷಯಕ್ಕೇ ಬಂದು ನಿಂತಂತಾಗಿತ್ತು. ಚಿಂತೆಯ ವಿಷಯವನ್ನೇ ಹೇಳುತ್ತಿರುವಾಗ ಚಿಂತೆಯ ಮುಖಮುದ್ರೆ ಇರುವುದಿಲ್ಲ. ಒಂದು ರೀತಿಯ ಉತ್ಸಾಹದಿಂದ ಆರಂಭಿಸಿದಳು ಅಜ್ಜಿ. ಹೊರಗಿನಿಂದೊಬ್ಬರಾದರೂ ಬಂದು ಆ ಏಕಾಂತ ಜೀವನದ ಅಸಹ್ಯತೆ—ಬೇಸರವನ್ನು ಮರೆಸುವುದೊಂದು ಸಂತೋಷ. ಅದರಲ್ಲಿ ತನ್ನ ಪ್ರಿಯ ತೌರೂರಿನವನೇ ಬಂದಿರುವಾಗ ತೌರೂರ ಕನಸನ್ನು ಕಾಣು ತ್ತಿರುವ ಆ ಹೆಂಗರುಳಿಗೆ ಹೇಗಾಗಿರಬೇಕು ಮನಸ್ಸು? ಬಹಳದಿನ ಕಟ್ಟಿಕಟ್ಟಿದಂತಿದ್ದ ಮನದ ಆಸೆ—ಕಷ್ಟಸುಖಗಳನ್ನು ಇನ್ನೊಬ್ಬರ ಮುಂದೆ ತೋಡಿ ಹಗುರಮಾಡ

ಬೇಕೆಂದಿರುವಾಗ, ತಾಳ್ಮೆಯಿಂದ ಕೇಳಿ ಅನುತಪಿಸುವವರು ಸಿಗುವುದೆಲ್ಲಿ ? ಆ ಕಾನನದಲ್ಲಿ ಅದರಲ್ಲೂ ತನ್ನ ಊರಿನವನೇ. ನನ್ನ ಕುತೂಹಲ ಉತ್ಸಾಹಗಳನ್ನೂ ತೋರಿಸಿದೆ "ಅಜ್ಜೀ ನೀನು ನಮ್ಮೂರಿನವಳೇ ? ಅಲ್ಲಿ ಯಾವಾಗ ಇದ್ದೆ ? ಏನೋ ತುಂಬ ನೊಂದಂತಿರುವೆಯಲ್ಲ ನೀನು ?"

ಇಷ್ಟು ಕೇಳುವ ಅನುಕಂಪವೇ ಸಾಕಾಯ್ತು. ಅಜ್ಜಿಯ ಕಣ್ಣೀರು ತುಂಬಿ ಆ ಸುಕ್ಕಿನ ಕೆನ್ನೆಯ ಮೇಲೆರಡುಮಣಿ ಕಟ್ಟಿದವು. ಅದರಲ್ಲೂ ವಿಲಕ್ಷಣ ಶಾಂತಿಯ ಮುಗುಳುನಗೆ ಬೀರಿ ತನ್ನ ಹಿಂದಿನ ಜೀವನದ ದಾರುಣ ಕಥೆಯನ್ನೆಲ್ಲ ಹೇಳತೊಡಗಿದಳು. ಎವೆಯಿಕ್ಕದೆ ತದೇಕಚಿತ್ತನಾಗಿ ಕೇಳುತ್ತ ಕುಳಿತೆ. ಬೆಟ್ಟದ ಪೊದೆಗಳ ನಡುವೆ ಕಣ್ಣಿಗೆ ಕಾಣಿಸದೆ ಅಂತರ್ಯದಲ್ಲೇ ಮೊರೆದು ಹರಿಯುವ ಝರಿಯಂತೆ ಆ ಜೀವನಕತೆ ಸಾಗಿತ್ತು.

"ಚಂದ್ರಶೇಖರಯ್ಯನವರು ವಕೀಲರು ಎಂದೆನಲ್ಲ ಮಗೂ ಅವರೇ ನನ್ನ ತಂದೆ. ಬೆಂಗಳೂರ ಕಡೆಯಿಂದ ದಾವಣಗೆರೆಗೆ ಬಂದು ನೆಲಸಿದಾಗ ನಾನು ಬಹಳ ಸಣ್ಣವಳು. ಆ ಊರು ನಮಗೆ ತುಂಬ ಒಗ್ಗಿ ನಮ್ಮೂರೇ ಆಗಿಬಿಟ್ಟಿತು. ಅಲ್ಲಿಯೇ ಶಾಲೆಗೆ ಹೋಗುತ್ತಿದ್ದೆ. ನಮ್ಮ ತಂದೆ ತುಂಬ ಗುಣಶಾಲಿಗಳು—ಸರಳಸ್ವಭಾವದವರು. ಆದರೆ ಅವರಲ್ಲಿದ್ದ ಒಂದೇ ಒಂದು ಅವಗುಣವೆಂದರೆ ಹಟ—ಛಲ. ತಾವು ಹಿಡಿದದ್ದೇ ನಡೆಯಬೇಕು. ನಮ್ಮ ತಾಯಿ ಅವರಿಗೆ ಈ ಒಂದು ಅವಗುಣದಲ್ಲಿ ಹೊರತು ಉಳಿದೆಲ್ಲ ವಿಷಯದಲ್ಲೂ ತಕ್ಕ ಹೆಂಡತಿ. ದಾವಣಗೆರೆಯಲ್ಲೇ ನನ್ನ ಚಿಕ್ಕ ತಮ್ಮ ತಂಗಿ ಹುಟ್ಟಿದ್ದು. ಎಷ್ಟು ಮುದ್ದಾದ ಮಕ್ಕಳು. ನಾನು ಹನ್ನೆರಡು ವರ್ಷದವಳಿದ್ದಾಗಲೇ ಬೆಂಗಳೂರಿನಲ್ಲಿ ಕಚೇರಿಯಲ್ಲಿ ಕೆಲಸಮಾಡುತ್ತಿದ್ದ ಇವರಿಗೆ ಮದುವೆ ಮಾಡಿಕೊಟ್ಟರು. ಒಂದೆರಡು ವರ್ಷ ತೌರುಮನೆಗೆ ಬಂದು ಹೋಗುತ್ತ ಬೆಂಗಳೂರಲ್ಲೇ ಇದ್ದು ಸುಖವಾಗಿ ನಮ್ಮ ಬಾಳು ಕಳೆಯಿತು. ಆಮೇಲೇನು ಗ್ರಹ ವಕ್ರಿಸಿತೊ. ಇವರು ಚಾಕರಿ ಕೆಲಸಕ್ಕೆ ಬೇಸರಗೊಂಡು ಮಲೆನಾಡಿನ ಈ ಪಿತ್ರಾರ್ಜಿತ ಗದ್ದೆ ಸಾಗುವಳಿ ಮಾಡಿದರೆ ಸಾಕೆಂದು ಹಳ್ಳಿಯಲ್ಲಿ ನೆಲಸಿದರು. ಆಗ ನಮ್ಮ ತಂದೆ "ಆ ಕಾಡಿಗೆ ನನ್ನ ಮಗಳನ್ನು ಕಳಿಸುವುದೇ. ಜನಗಳ ಮಧ್ಯೆ ಮುದ್ದು ಮುದ್ದಾಗಿ ಮಾತಾಡಿ ನಲಿದ ಕೂಸು ಅಲ್ಲಿ ಮೂಕಿಯಾಗಿ ಕೊರಗಿಹೋದೀತು" ಎಂದು ನೊಂದರು. ಅದೇನೋ ನಿಜ. ನಾನು ತುಂಬ ಜನ ಬಳಕೆಯವಳು. ಮಾತಿನಲ್ಲಿ ನನ್ನ ಬಾಯ ಚಪಲಕ್ಕೆ ಸಾಟಿ ಇರಲಿಲ್ಲ. ಮಲೆನಾಡಕಡೆ ಹಳ್ಳಿ ಎಂದರೆ ಒಂದೇ ಮನೆ ಎಂಬುದನ್ನು ಕೇಳಿದ ನಾನೂ ಹೇಗಪ್ಪ ಎಂದು ಚಿಂತೆಗೊಳಗಾಗಿದ್ದೆ. ಆದರೆ ಅವೆಲ್ಲ ಕ್ಷಣಮಾತ್ರ. ಅವರಲ್ಲಿ—ನನ್ನ ಕೈಹಿಡಿದವರಲ್ಲಿ—ನಾನಿಟ್ಟ ಪ್ರೀತಿ

ಅವೆಲ್ಲವನ್ನೂ ಹಿಂದೂಡುತ್ತಿತ್ತು. ಪ್ರೇಮ ಎನ್ನುವುದಕ್ಕಿಂತ ಭಕ್ತಿ ಎಂದರೆ ಸರಿಯಾಗಬಹುದು. ಅವರಿಗಾಗಿ ಮೂಕಿಯಾಗಿರು ಎಂದರೂ ಮಾತಿನ ಚಾಪಲ್ಯ ಅಡಗಿಸಿಟ್ಟುಕೊಳ್ಳಲೆತ್ನಿಸುತ್ತಿದ್ದೆ.

ತಂದೆಯವರದು ತುಂಬ ಹಟ. ಇವರೂ ಅದರಲ್ಲಿ ಕಡಿಮೆಯಿರಲಿಲ್ಲ. ಈ ಎರಡು ಛಲಗಳ ಮಧ್ಯೆ ನನ್ನ ಸುಖ ಶಂಕೆಯ ಏರಿಯಮೇಲೆ ತೂಗಾಡುತ್ತಿತ್ತು. ತಂದೆಯವರಿಗೆ ನಾನೇ ಕೊನೆಗೆ ಸಮಾಧಾನ ಹೇಳುತ್ತ "ನಾನಿಲ್ಲಿ ಉಳಿದರೂ ನಿಮಗೇ ಚಿಂತೆಯು ಮುಳ್ಳಾದೇನು.' ಅವರದಂತೂ ಹಟ. ನೀವೂ ಹಾಗೇ ಮಾಡಿದರೆ ನನ್ನ ಗತಿ? ಈಗ ಅವರು ಕರೆದಕಡೆ ಹೋಗುತ್ತೇನೆ. ಅನಂತರ ಸಿಟ್ಟು ತಣಿದ ಮೇಲೆ ಮತ್ತೆ ನಿಮ್ಮ ಬಳಿ ಬಂದು ಹೋಗುವಂತೆ ಮಾಡಿಕೊಳ್ಳುತ್ತೇನೆ" ಎಂದೆ. ಅವರ ಮಮತೆ ನನ್ನ ಮೇಲೆ ಬಹಳ, ನನ್ನ ಮಾತು ಕೇಳುತ್ತ ಅವರ ಕರಳು ಕರಗಿ, ದುಃಖ ಉಮ್ಮಳಿಸಿ ಕಣ್ಣೀರುತುಂಬಿದರು. ಒಲ್ಲದ ಮನಸ್ಸಿನಲ್ಲಿ ಕಳಿಸುತ್ತಾ, "ಎಲ್ಲಿಯಾದರಾಗಲಿ ಸುಖವಾಗಿರಮ್ಮ; ದೇವರು ಕೃಪೆಯಿಟ್ಟರೆ ಮತ್ತೊಮ್ಮೆ ನಿನ್ನನ್ನು ನೋಡುವಂತಾಗಲಿ. ನಾನೇನೊ ಸಿಟ್ಟಿನಲ್ಲಿ ನಿನ್ನ ಮನೆಗೆ ಕಾಲಿಕ್ಕುವುದಿಲ್ಲ ಎಂದಿದ್ದೇನೆ ಸೋಮಣ್ಣನಿಗೆ." ಎಂದು ಕಣ್ಣೀರನ್ನೊರಸಿಕೊಂಡರು. ತಾಯಿಯ ಗೋಳಂತೂ ಹೇಳತೀರದು. ರೈಲು ಬಿಟ್ಟಿತು. ಬಾನಳ್ಳಿಯ ಮನೆ ಕಾದಿತ್ತು. ಬಂದಮೇಲೆ ಕೆಲವು ದಿನಗಳು ಕಳೆಯುವುದೇ ದುಸ್ತರವಾಯಿತು. ಮತ್ತೆ ಮತ್ತೆ ಮನೆಯ ನೆನಪು. ತಮ್ಮ, ತಂಗಿ, ಅಪ್ಪ ಎಂದು ನೆನೆನೆನೆದು ಒಬ್ಬಳೆ ಮರೆಗೆ ಹೋಗಿ ತಡೆಯಲಾಗದ ದುಃಖದಿಂದ ಅತ್ತುಬಿಡುತ್ತಿದ್ದೆ. ಆದರೆ ಕ್ರಮೇಣ ತೌರೂರನ್ನು ಬಿಟ್ಟುಬಂದ ದುಃಖ ಮಾಸುತ್ತ ಬಂದಿತು. ನಾಲ್ಕಾರು ವರ್ಷ ಕಳೆದರೂ ಊರ ವಿಷಯ—ತಂದೆಯ ವಿಷಯ ಎತ್ತಿದರೇ ಇವರು ಕೆಂಡವಾಗುತ್ತಿದ್ದರು. ಅದೊಂದು ಬಿಟ್ಟರೆ ಮಿಕ್ಕಹಾಗೆ ನನ್ನ ದೇವರು ಅವರು. ನಾನಿಷ್ಟಪಟ್ಟುದೆಲ್ಲವನ್ನೂ ನಡೆಸುತ್ತಿದ್ದರು. ಆ ಎಲ್ಲ ಸುಖಗಳಿಗೆ ನಾನು ತೌರ ಹಂಬಲಬಿಡಬೇಕಾಗಿತ್ತು. ಹೆಣ್ಣಿನ ಕೊರಗು—ತೌರ ಹಂಬಲ ಗಂಡಸರಿಗೇನು ಗೊತ್ತು? ಹೀಗೆ ಜೀವ ಕೊರಗುತ್ತಿತ್ತು. ಚೊಚ್ಚಿಲ ಮಗುವಾಯಿತು. ಆಗಲಾದರೂ ತಂದೆಯವರನ್ನು ಕರೆಸುವ ಎಂದರೆ "ಈ ಜನ್ಮದಲ್ಲಿಯೇ?" ಎಂದು ಸಿಡಿ ನುಡಿದರು. ಆದರೂ ಬರುವ ದಿನಗಳಲ್ಲೆಲ್ಲ ಒಮ್ಮೆಯಾದರೂ ಆ ತಂಗಿ, ತಮ್ಮ, ತಂದೆ—ತಾಯಿಯರನ್ನು ನೋಡುವೆನೆಂಬ ಆಸೆ ಬಳಲಲಿಲ್ಲ. ಆಸೆಯ ಹಣತೆ ಉರಿಯುತ್ತಲೇ ಇತ್ತು. ಈ ವರ್ಷ ಇಲ್ಲ ಮುಂದಿನ ವರ್ಷ ಹೋಗಬಹುದು. ಆಗಲಾದರೂ ಇವರ ಕೋಪ ಮರೆಯಬಹುದು. ತಂದೆಯವರಾದರೂ ಕರಗಿ ಬಂದಾರು ಎಂಬ ಒಂದಲ್ಲ ನೂರು ಸಮಾಧಾನಗಳು ನನ್ನ ಕರುಳಿನ

ನಿರಾಸೆಯನ್ನು ಮುಚ್ಚುತ್ತಿದ್ದವು. ಕಾಗದ ಬರೆಯುವಂತಿದೆಯೇ? ಹೀಗೆ ದಿನದ ಮೇಲೆ ದಿನ ಉರುಳಿಹೋದವು. ಎರಡನೇ ಮೂರನೇ ಮಕ್ಕಳಾದವು. ಆದರೆ ಅವೆಲ್ಲ ಮಲೆನಾಡಿನ ಮಣ್ಣಿಗೇ ತಿರುಗಿದವು. ಹಿರಿಯ ಮಗ ಮಾತ್ರ ಉಳಿದುಕೊಂಡ. ನಾನು ತಂದೆಯನ್ನು ಬೀಳ್ಕೊಟ್ಟಾಗಿನ ಮಾತು—ಕರುಳು ಕಿವಿಚುವ ಆ ನೋಟ ಮೊನ್ನೆ ಮೊನ್ನೆ ನಡೆದಂತಿದೆ. ಅವರ ಮುಖವನ್ನಾದರೂ ಇಷ್ಟು ನೋಡುವುದಕ್ಕಾಗಿ ಕಾದ ಕಾತರವೆಷ್ಟು. ಹೇಗೆ ಕಳೆದೆನೊ ಇಷ್ಟು ದಿನಗಳನ್ನು. ಹಾಳು ಆಸೆ ಇನ್ನೂ ಹೋಗಿಲ್ಲ. ನನ್ನ ಮಗನ ಮದುವೆಯಾಯಿತು. ಅವನ ಹೆಂಡತಿ ಮಲೆಜ್ವರಕ್ಕೆ ತಡೆಯಲಿಲ್ಲ. ಕೂಸೂ ಕೆಲವರ್ಷ ಪಿಚಗುಂಟಲಿಯಾಗಿ, ರೋತೆಯಾಗಿ, ಅರ್ಧ ಸತ್ತು ಅರ್ಧ ಬದುಕಿ ಇದ್ದು ಕೊನೆಗೆ ತಾಯ ಹಾದಿ ಹಿಡಿಯಿತು. ಮಗನ ಮದುವೆಗೆಂದು ಚಿಕ್ಕಮಗಳೂರಿಗೆ ಹೋಗಿದ್ದೆ—ಆಗ ಮಾತ್ರ ನಮ್ಮೂರ ದಾರಿಯೆಂದು ಅದನ್ನೆ ನೋಡಿ ಅಲ್ಲಿನ ಧೂಳಿ ತಲೆಗೆ ಹಚ್ಚಿಕೊಂಡು ಹಿಂತಿರುಗಿದೆ. ಅಯ್ಯೋ . . . ಮಗೂ ನನ್ನ ಕರುಳು ಸುಟ್ಟುಹೋಗಿದೆ. ಕಷ್ಟ ಸುಖಗಳಿಗಳುಕದೆ ಜೀವಿಸಿದರೆ ದೇವರು ಮೆಚ್ಚಿ ನಮ್ಮಿಷ್ಟದಂತಹ ಜೀವನ ಕೊಡುತ್ತಾನಂತೆ. ಅವರು ಯಾವಾಗಾದರೊಮ್ಮೆ ಇಂತಹ ಪುರಾಣ ಪುಣ್ಯಕಥೆ ಹೇಳುತ್ತಿರುತ್ತಾರೆ. ಎಲ್ಲ ನಿರಾಸೆಯನ್ನೂ ಕೆಲಸದಲ್ಲಿ ಮರೆಯುವುದನ್ನು ಕಲಿತಿದ್ದೇನೆ. ಆದರೂ ತೌರ ನೆನಪು ಆಗಾಗ ಬಂದು ಆಸೆಯನ್ನು ಕೆರಳಿಸುತ್ತದೆ. ಆ ತಂಗಿ—ತಮ್ಮಂದಿರೊಡನೆ ನಲಿದ ಆ ಮನೆ ಕಣ್ಣಿಗಟ್ಟುವುದು. ಈಗ ಅಪ್ಪ-ಅಮ್ಮ ಇದ್ದಾರೊ ಇಲ್ಲವೊ. ತಂಗಿ ಎಲ್ಲೊ—ತಮ್ಮ ಎಲ್ಲೊ. ನನ್ನ ನೆನಪಿದ್ದೀತೆ ಅವರಿಗೆ. ಇದೆಲ್ಲ ನೆನೆದು ಅತ್ಯಂತ ಸಂಕಟವಾಗುತ್ತದೆ. ಕಸಿವಿಸಿಯಾಗುತ್ತದೆ. ಇದೋ ಇಷ್ಟೆಲ್ಲ ಹೇಳಿದ್ದೂ ಈಗಲೇ—ನಿನ್ನ ಮುಂದೆ. ಮಗೂ—ಈಗ ಅದೇನೊ ತುಸು ಮನ ಹಗುರಾಗುತ್ತಿದೆ. ನಿನ್ನನ್ನು ಮೊದಲು ನೋಡಿದ ಕೂಡಲೇ ಏಕೊ ಊರ ನೆನಪಾಯಿತು. ನೀನು ದಾವಣಗೆರೆ ನಮ್ಮೂರು ಎಂದಾಗ ನನ್ನ ತಂದೆಯೇ ಎದುರಿಗೇ ಬಂದಿದ್ದಾರೆ ಎಂಬ ಭ್ರಾಂತಿಯಾಯಿತು. ಅದಕ್ಕೆ ಎಲ್ಲ ಬಿಚ್ಚಿ ಹೇಳಿಬಿಡುವ ಮನಸ್ಸಾದುದು. ಇಷ್ಟು ಮಾತಾಡಿದ್ದೂ ಈಗಲೆ. ಮಲೆನಾಡಿದು. ಮಾತಿಗೆಲ್ಲಿ ಜನ? ಅವರೋ ನೀವು ಬಂದಿರುವುದರಿಂದಿಷ್ಟು ಮಾತಾಡುತ್ತಾರೆ. ಉಳಿದ ದಿನ ಅತೀ ಮೌನ. ಮಗನೊಬ್ಬನಿರುವುದರಿಂದಿಷ್ಟು ಮಾತಾಡಿ ನನ್ನ ಜೀವ ಹರುಷಗೊಳ್ಳುತ್ತದೆ. ಏನು ಸುದ್ದಿ ಮಾತಾಡೇವು? ಇಲ್ಲಿ ಮಗನಿಗೂ ಈಗ ಎರಡನೆ ಮದುವೆ ಮಾಡಬೇಕೆಂದಿದ್ದಾರೆ. ಇಂದೊ ನಾಳೆಯೋ ಎಂದುಕೊಂಡಿರುವ ಮುದುಕರು ನಾವು. ಸಾವು ನೆಚ್ಚಿನದಲ್ಲ. ನಮ್ಮನಂತರ ಮನೆಯ ದೀಪ ಉರಿಸುವವರೊಬ್ಬರು ಬೇಕಲ್ಲ.

ಹ್ಞೂ,ಅಾ ಐವತ್ತು ವರ್ಷ ! ಐವತ್ತು ವರ್ಷ ಹೇಗೆ ಕಳೆಯಿತೋ ಮಗೂ ! ಈಗ ಆ ತಂದೆ ತಾಯಿಯರನ್ನು ನೋಡುವ ಆಸೆ ಬಯಲಾಸೆ. ನನ್ನ ತಮ್ಮ ಇಲ್ಲ ಅವನ ಮಗು—ಯಾರನ್ನಾದರೂ ನೋಡಿದರೆ ಸಾಕು ನನ್ನ ಬೆಂದೆದೆಗೆ ಅದೇ ತೃಪ್ತಿ. ಇಷ್ಟು ದಿನ ಕಾದಿದ್ದಕ್ಕೂ ಅದೇ ಫಲ ಸಾಕು.—ಕಣ್ಣಿನಲ್ಲಿ ಹೊಳೆವ ಮುತ್ತು ತುಂಬಿದ್ದವು. ಮುಖ ಕೆಂಪಾಗಿ ಕಾಂತಿಯುಕ್ತವಾಗಿತ್ತು. ಇಬ್ಬರೂ ನಿಟ್ಟುಸಿರು ಬಿಟ್ಟು ಎದ್ದೆವು.

ಅಂದು ಸಂಜೆ ಅತ್ಯಂತ ರಮ್ಯವಾಗಿತ್ತು. ಮಲೆನಾಡ ಕಣಿವೆಯಲ್ಲಿ ಹೊಂಬಣ್ಣದ ಇಳಿಬಿಸಿಲು ಎಲ್ಲವನ್ನೂ ಬೆಳಗಿ ಮೋಹಕವಾಗಿ ಮಾಡಿತ್ತು. ಎಂತಹ ಚೆಲುವು ! ಈ ಚೆಲುವಿನ ಹೊಟ್ಟೆಯಲ್ಲಿ ಹೆಂಗರುಳೊಂದು ತೌರ ಹಂಬಲದಿಂದ ಬೇಯುತ್ತಿದೆ ಎಂಬ ನೆನಪು ಬಂದು ಮತ್ತೆ ನನ್ನ ಮನ ಕದಡಿತು. ಅಂದೆಲ್ಲ ಮನಸ್ಸು ವಿಕಲ್ಪ ವಾಗಿತ್ತು. ಐವತ್ತು ವರ್ಷ !! ಅರ್ಧ ಶತಮಾನ !! ಹೇಗೆ ಕಳೆದಿರಬೇಕು ಈ ಹೆಣ್ಣು ಜೀವ. ಒಲವಿನ ತಾಯಿ, ತಂದೆ, ತಮ್ಮ ತಂಗಿಯರನ್ನು ನೋಡುವ ಆಸೆ, ಶಂಕೆ— ಆತುರಗಳಿಂದ ಎಷ್ಟು ತವಕದಲ್ಲಿ ದಿನಗಳೆದಿರಬೇಕು. ಈ ಕಾಡಿನ ಮಧ್ಯೆ ಒಂದೇ ಒಂದು ಪುಟ್ಟ ಮನೆಯಲ್ಲಿ—ನಿತ್ಯ ಅದೇ ಥಾಟಿಯ ದಿನಚರಿಯಿಂದ ಐವತ್ತು ವರ್ಷ ಕಳೆದಿರಬೇಕಾದರೆ—! ಅಬ್ಬ—ಆ ಅಗಲಿಕೆ ಮೊನ್ನೆ ನಡೆದಂತಿದೆಯಂತೆ. ಅಂದರೆಷ್ಟು ಅದರದೇ ಯೋಚನೆ ಇರಬೇಕು ! ಸೋಮಣ್ಣನ ಕಠೋರತೆಗಾಗಿ ಅವನ ಮೇಲೆ ಸಿಟ್ಟುಬಂದಿತು. ಹೊರಗಿನ ಚೆಲುವೆಲ್ಲ ಒಳಗಿನ ಈ ದಾರುಣ ವೇದನೆಯನ್ನು ಅಣಕಿಸು ತ್ತಿದ್ದಂತಿತ್ತು. ತಡೆಯಲಾರದೆ ಒಳಗೆ ಹೋದೆ. ಅಜ್ಜಿ ಕಾಫಿ ಕಾಯಿಸುತ್ತಿದ್ದಳು. ಕೆಂಪಗಿನ ಉರಿ ಅವಳ ಮುಖವನ್ನು ಇನ್ನಿಷ್ಟು ಕೆಂಪಗೆ ಪ್ರಕಾಶಮಾನವಾಗಿ ಮಾಡಿತ್ತು. ಮುಖದಲ್ಲಿ ಮೊದಲಿದ್ದ ಚಿಂತೆಯ ಮ್ಲಾನತೆ ಇರಲಿಲ್ಲ. ಅದಕ್ಕೆ ಬದಲು ಒಂದು ತರಹೆ ಪವಿತ್ರಶಾಂತಿ ಒಡೆದು ಕಾಣುತ್ತಿತ್ತು. "ಅಜ್ಜೀ" ಎಂದೆ. "ಬಾ. ಮಗೂ. ತಿರುಗಾಡಿದ್ದಾಯಿತೇ ಆಗಲೇ. ಕಾಫಿ ಮಾಡುತ್ತಿದ್ದೆ" ಎಂದು ಎದ್ದು ಬಂದಳು. ಅದುವರೆಗೆ ಕುತೂಹಲಪಡಿಸುತ್ತಿದ್ದೊಂದು ಪ್ರಶ್ನೆ ಕೇಳುವ ಎಂದೆನಿಸಿತು. "ಅಜ್ಜೀ ಚಂದ್ರಶೇಖರಯ್ಯನವರು ನಿಮ್ಮ ತಂದೆ ಎಂದೆಯಲ್ಲ? ಅವರ ಮನೆ ಹೆಸರೇನು ಎಂತಹ ಚಂದ್ರಶೇಖರಯ್ಯ?" ದಾವಣಗೆರೆಗೆ ಹೋದಾಗ ಅವರ ವಂಶದವರಾರಾದರೂ ಇದ್ದರೆ ಅವರಿಗೆ ಈ ಲಲಿತಮ್ಮನ ಆಸೆ ತಿಳಿಸುವ ಅಭಿಪ್ರಾಯ ದಿಂದ ಕೇಳಿದೆ.

"ಮತ್ತೆ ನೆನಪೇಕೆ ಮಗೂ ಅದು ನನ್ನೆದೆಯನ್ನು ಸುಡುತ್ತದೆ. ಜೀವಕ್ಕೆ ನಾಶವಿಲ್ಲ ಎನ್ನುತ್ತಾರೆ. ಆದರೆ ಅದರ ನರಳಿಕೆ, ಕೊರಗು ನಾಶಕ್ಕಿಂತ ಹೆಚ್ಚಲ್ಲವೇ ? ಈ

ನೋವಿನುರಿಯಿಂದ ಕರುಳೆಲ್ಲ ಸುಟ್ಟುಹೋಗಿರುವಾಗ ನಿನ್ನ ಕುತೂಹಲವನ್ನೇಕೆ ಸಂದಿಸಬೇಕು. ಅವರೇ ಶಿವನೇರು ಜೋಡಿದಾರ್ ಮನೆಯವರು ಎನ್ನುತ್ತಿದ್ದರು."

ನಾನು ಹೌಹಾರಿದೆ. ಆದರೂ ತೋರ್ಪಡಿಸದೆ "ಅವರ ಮಗನ ಹೆಸರು ?" ಎಂದೆ "ಯಾರು. ನನ್ನ ತಮ್ಮನೇ—ವಿಶ್ವನಾಥ. ನಾವು ಮುದ್ದಿಗೆ ವಿಶೂ ಎನ್ನುತ್ತಿದ್ದೆವು. ಅವರಕ್ಕ ಸುಶೀಲ ಅಯ್ಯೋ ಲಂಗವುಟ್ಟು ಚಂದವಾಗಿ ಓಡಾಡುತ್ತಿದ್ದಳು. ಅಕ್ಕ ಎಂದರೆ ಬಿಟ್ಟಿರುತ್ತಿರಲಿಲ್ಲ. . ."

ಐವತ್ತು ವರ್ಷದ ಹಿಂದಿನ ದಿನವೊಂದರ ಮನೋಹರ ಚಿತ್ರವನ್ನು ನೆನೆಸಿಕೊಂಡು ಆಕೆಯ ಮುಖ ಪ್ರಫುಲ್ಲವಾಗಿತ್ತು.

ನನ್ನ ಮನಸ್ಸಿನ ಶಂಕೆ ಹರಿಯಿತು. ಏನು ವಿಧಿಯ ವಿಚಿತ್ರ—ವಿಲಕ್ಷಣ ಸೂತ್ರಧಾರಿಕೆ ಎಂಥ ಸನ್ನಿವೇಶ ಕಲ್ಪಿಸಿದೆಯಲ್ಲ. ಒಬ್ಬ ಕಾದಂಬರೀಕಾರ ಇಂಥ ಸನ್ನಿವೇಶ ಬರೆದರೆ ಜನ ಸಹಜವೋ ಅಸಹಜವೋ ಎಂಬ ಚರ್ಚೆಯಲ್ಲಿ ಕೂಡುತ್ತಿದ್ದರು. ಅರ್ಧಶತಮಾನ ಪ್ರಿಯಜನರನ್ನು ಕಾಣುವ ಹಂಬಲಿನ ನೋವಿನಿಂದ ಕಳೆದರೂ ದಿನದಿನಕ್ಕೂ ತತ್ವಜ್ಞಾನಿಗಳ ಶಾಂತತೆಯನ್ನು ರೂಪಿಸಿಕೊಳ್ಳುತ್ತಿದ್ದ ಈ ಮಹಾಜೀವಿ ನನ್ನ ಅಜ್ಜಿಯೇ! ಕನಸೋ—ಎಚ್ಚರವೋ—ಎನ್ನಿಸಿತು. ಐವತ್ತು ವರ್ಷದ ನಿರಂತರ ಏಕಧಾರೀ ಮೌನತಪಸ್ಸು ನನ್ನನ್ನಿಲ್ಲಿಗೆಳೆತಂದಿರಬಹುದೇ. "ಅಜ್ಜೀ" ಎಂದೆ ಎಲ್ಲವನ್ನೂ ಬಿಡಿಸಿ ಹೇಳಿಬಿಡಬೇಕೆಂದು. ಮನ ಏಕೊ ತಡೆಯಿತು. ಕಾಫಿ ಸೋಸುತ್ತ "ಏನು ಮಗೂ" ಎಂದು ಸ್ವಲ್ಪತಡೆದು "ಏಕೋ ನೋಡು ನಿನ್ನನ್ನು ನೋಡಿದರೆ ಒಂದು ತರಹೆ ತೃಪ್ತಿಯಾಗುತ್ತದೆ. ಇಂದಿನವರೆಗೂ ಬರದ ಒಂದು ರೀತಿಯ ಸಮಾಧಾನವಾಗುತ್ತಿದೆ. ನಿನ್ನಂತಹ ಒಬ್ಬ ಮೊಮ್ಮಗ ಇದ್ದಿದ್ದರೆ! ಉಳಿದ ಜೀವನ ಎಷ್ಟು ಮಧುರವಾಗಿರುತ್ತಿತ್ತು. ಹ್ಞೂಂ ಈ ಅಭಾಗಿನಿಗಿನ್ನೂ ಅರಿವಿನ ಕಣ್ಣು ತೆರೆಯಲಿಲ್ಲ. ನನ್ನ ಮನಸ್ಸು ಕಲ್ಲಾಗಿಬಿಟ್ಟಿದೆಯಪ್ಪ. ಪ್ರೀತಿ-ಅಗಲಿಕೆಗಳದನ್ನು ಈಗ ಕೊರೆಯಲಾರವು. ಅವರನ್ನು ಪ್ರೀತಿಸಿ ಎಲ್ಲ ಆಸೆಗಳನ್ನೂ ತ್ಯಾಗಮಾಡಿದೆ. ಮುಂದೆಯೂ ಅವರ ಪ್ರೀತಿಯೇ ಗತಿ. ದೇವರು ನನ್ನ ಎಲ್ಲ ಆಸೆಗಳನ್ನೂ ಮುರಿದು ಹಾಕಿದ್ದರೂ ಅವರಿಗೆ ಮುಂಚೆ ಅವರ ತೊಡೆಯಮೇಲೆ ಈ ಜೀವ ಹೋದರೆ ನನಗದು ಸೌಭಾಗ್ಯ. ನನ್ನ ನೊಂದ ಮನಕ್ಕಿನ್ನು ಯಾವ ಹೆಚ್ಚಿನ ಆಸೆಯೂ ಇಲ್ಲ."

ಕಣ್ಣರಿಯದಿದ್ದರೂ ಕರುಳರಿಯದೇ ಎಂಬುದು ಸುಳ್ಳಲ್ಲ. ನನ್ನ ತಂದೆ ಅಜ್ಜಿ ಹೇಳಿದ ಮನೆಯವರೇ—ಡಾಕ್ಟರು ಈಗ—ನಾಗಭೂಷಣರಾಯರು. ಚಿಕ್ಕವನಿದ್ದಾಗ. ಅಜ್ಜ ಮುತ್ತಜ್ಜರ ಕತೆಗಳನ್ನು ಕುತೂಹಲದಿಂದ ಕೇಳುತ್ತಿದ್ದೆ. ನಮ್ಮ ಅಜ್ಜ ವಿಶ್ವನಾಥಯ್ಯ. ಅವರ ತಂದೆಯೇ ಅಜ್ಜಿಯ ತಂದೆ ಜೋಡಿದಾರ್ ಚಂದ್ರಶೇಖರಯ್ಯ.

ಈ ಲಲಿತಮ್ಮ—ಮುದುಕಿಯೆಂದು ಮಾತ್ರ ಅಜ್ಜಿಯೆನ್ನುತ್ತಿದ್ದೆ.—ಈಗ ನಿಜವಾಗಿಯೂ ನನ್ನ ಅಜ್ಜಿಯೇ! ಲಲಿತಜ್ಜಿ! ಎಲ್ಲ ಹೇಳಿಬಿಡಲೇ ಹೇಳಿದರೆ ಮತ್ತೆ ನೋವು ಮರುಕಳಿಸುವುದೋ—ಈ ತೃಪ್ತಿ ಭಂಗವಾಗುವುದೋ ಏನೋ. ಅಜ್ಜ ಸತ್ತು ನಾಲ್ಕು ವರ್ಷವಾಗಿತ್ತು. ಸುಶೀಲಜ್ಜಿ ಹಾವೇರಿಯಲ್ಲಿದ್ದಳು.

ಕಾಫಿ ಕುಡಿಯುತ್ತ ಅಜ್ಜಿಯ ಮುಖ ನೋಡಿದೆ. ಕಾಫಿ ಕುಡಿಯುವಾಗ ಅದು ಅತಿಥಿಯಾಗಿ ಸ್ವೀಕರಿಸುವ ಉಪಚಾರವಾಗಿರದೆ ಒಂದು ರೀತಿಯ ಬರಬೇಕಾದ ಪಾಲಿನಂತೆ ತೋರಿತು. ಅಜ್ಜಿಯ ಮುಖ ಹೊಂಬಣ್ಣದ ಬಿಸಿಲಿನಲ್ಲಿ ಪ್ರಶಾಂತವಾಗಿತ್ತು. ತೃಪ್ತಿ ಸಮಾಧಾನಗಳ ನಗೆ ಮಿಂಚಿತ್ತು. ಅಷ್ಟರಲ್ಲಿ ಹೊರಗೆ ಗೊರಸು, ಗಂಟೆಗಳ ದನಿ, ಮನುಷ್ಯರ ಹೆಜ್ಜೆಯ ಸಪ್ಪಳ—ಕೆಮ್ಮಿನ ಸದ್ದು ಕೇಳಿಸಿತು. ಸೋಮಣ್ಣಾ ಒಳಕ್ಕೆ ಬಂದ. ನನ್ನ ಕಡೆ ನೋಡಿ, ನಗೆಮೊಗದಿಂದ "ಏನು ಕಾಫಿ ಆಗುತ್ತಿದೆಯಾ ನಿದ್ದೆಗಿದ್ದೆ ಮಾಡಿದಿರೋ ಎಲ್ಲೋ ಬಹಳ ಬಳಲಿದ್ದೀರಿ. . . ಲಲ್ತಾs ನನಗೊಂದು ಲೋಟಾ ಶಿವೂಗೊಂದು ಲೊಟಾ ಕಾಫಿ ತರ್ತೀಯಾ. . . ."

ಹೊಸದರಲ್ಲೆಷ್ಟು ಪ್ರೇಮಹಾಸ್ಯದಿಂದ ಗಂಡ ತನ್ನ ನಲ್ಲೆಗೆ ಕಾಫಿ ತರ ಹೇಳುವನೊ ಅದನ್ನೂ ಮೀರಿಸಿತ್ತು ಅವನ ದನಿಯ ಧಾಟಿ.

ಲಲಿತಜ್ಜಿ ಕಣ್ಣಿನ, ತುಟಿಗಳ ತುದಿಯ ಕುಡಿ ನಗುವಿನಲ್ಲಿ ಒಲವನ್ನು ತುಳುಕಿಸುತ್ತ ಐವತ್ತು ವರ್ಷದ ಹಿಂದಿರಬಹುದಾದ ತುಂಟತನದ ಅಕ್ಕರತೆಯಿಂದಲೇ ಕಾಫಿ ತುಂಬಿ ಗಂಡನಿಗೂ ಮಗನಿಗೂ ಕೊಟ್ಟಳು. ಮನೆ ಒಂದು ಶಾಂತಿನಿಕೇತನವಾಗಿತ್ತು. ಎಲ್ಲರ ಮುಖದಲ್ಲೂ ತೃಪ್ತಿ ಹರುಷ ಚಿಮ್ಮುತ್ತಿದ್ದವು. ಹೊರಗೆ ಚೆಲುವಿನ ಗಭೀರತೆ ಕಣಿವೆಯಲ್ಲಿ ಅಡಗಿತ್ತು. ಪಡುವಲಲ್ಲಿ ಮುಳುಗುವ ನೇಸರ ಕಟ್ಟಕಡೆಯ ಕೆಂಗದಿರಿನ ಕುಂಚ ಕೊನೆಯ ವರ್ಣರೇಖೆಗಳನ್ನೆಳೆಯುತ್ತಿತ್ತು.

ಒಳಗೆ ಈ ಪುಟ್ಟ ಗುಡಿಸಲಲ್ಲಿ ಹೊರಗಿನ ಚೆಲುವಿಗೂ ಮಿಗಿಲಾದ ಒಲುಮೆ; ಜಗತ್ತನ್ನೆ ಸಾಲದಾಗಿಸುವಷ್ಟು ಒಲುಮೆ! ಅದಕ್ಕಾಗಿಯೇ ಇಷ್ಟುದಿನ ನಿರಾಶೆಯ ನೋವನ್ನು ಅಜ್ಜಿ ತಡೆಯಲು ಶಕ್ತಳಾಗಿದ್ದಾಳೆ.

ಆ ಇಬ್ಬರಿಗೂ ನನ್ನ ನಂಟತನದ ಗುಟ್ಟುಹೇಳಿಬಿಡಲು ಮನಸ್ಸು ತವಕಿಸುತ್ತಿತ್ತು. ಮದ್ಯಾಹ್ನದಿಂದ ತಡೆದುಕೊಂಡಿದ್ದೆ. ಅಜ್ಜನ ಮನಸ್ಸು ಈಗಲು ಹೇಗಿದೆಯೋ ಎಂಬ ಶಂಕೆ ಹಾಗೆ ಮಾಡಿಸಿತ್ತು. ಸಂಜೆ ಕಾಫಿ ಕುಡಿಯುವಾಗ ನೋಡಿದ ಮೇಲೆ ಅಜ್ಜನ ಮಾರ್ದವತೆಯ ಪೂರ್ಣ ನಂಬುಗೆಯಾಯಿತು. ಇನ್ನು ಇದ್ದ ವಿಷಯ ತಿಳಿಸಿ ಅವರ ವಿಮಲಾನಂದದ ಬಾಳಿನ ಕೊರತೆಯನ್ನು ನೀಗಿಸುವ ಎಂದು ನಿರ್ಧರಿಸಿಕೊಂಡೆ.

ಕತ್ತಲಾಯಿತು. ಒಳಗೆ ಸಣ್ಣ ದೀಪ ಬೆಳಗಿತು. ದನದ ಮನೆಗೆ ಏನೊ ಸರಿಪಡಿಸ ಹೋಗಿದ್ದ ಅಜ್ಜ ಒಳಗೆ ಬಂದಕೂಡಲೆ ಹೇಳುವುದು ಎಂದು ಕೊಂಡೆ. ಅಜ್ಜ ಬಂದ. ಮತ್ತೇನೇನೊ ಮಾತೆತ್ತಿ ಬದಿಗೆ ಕುಳಿತ. ಈಗ ಹೇಳುವುದು—ಈಗ ಎಂದು ಎಂದು ಹೇಳುವುದಾಗಲೇ ಇಲ್ಲ. ಬಾಯೇ ಬರದು. ಕಾಲ ಹೇಗೆ ಕಳೆಯಿತೊ! ನಂತರ ಎರಡುಮೂರು ಸಂದರ್ಭಗಳನ್ನು ಕಲ್ಪಿಸಿಯೂ ಹೇಳಲಾಗದೆಹೋಯಿತು. ಊಟವಾಯಿತು. ನನ್ನ ಮನಸ್ಸಿನೊಳಗೆ ಹೋರಾಟ ನಡೆದು ಗಜಿಬಿಜಿಯಾಗಿತ್ತು. ಊಟವಾಗುವಾಗಿನ ಹಾಸ್ಯದ ಮಾತುಗಳ ಕಡೆ ಲಕ್ಷ್ಯವೇ ಇಲ್ಲ. ನೆಪಕ್ಕೆ ನಗುತ್ತಿದ್ದೆ. ಹೇಗೆ ಆರಂಭಿಸಬೇಕು ಎಂಬುದೇ ನನ್ನ ಮನಸ್ಸಿನಲ್ಲಿ ಕಡೆಯುತ್ತಿದ್ದ ವಿಷಯ. ಆಗ ಅವರ ಉಪಚಾರಗಳನ್ನೆಲ್ಲ ಯಾಂತ್ರಿಕವಾಗಿ ಸ್ವೀಕರಿಸಿದಂತೆ ಮಾಡಿ ರಾತ್ರಿ ಮಲಗಿದೆ. ಬೇಸರ ಬರುವಷ್ಟು, ತಲೆ ಚಿಟ್ಟೆನ್ನುವಷ್ಟು ಯೋಚನೆಗಳ ತುಮುಲದಲ್ಲಿ ಅತ್ತ ಇತ್ತ ಹೊರಳಿದ್ದೊಂದೇ ಹಾಸಿಗೆಯ ಮೇಲೆ ನೆನಪು. ಯಾವಾಗ ನಿದ್ದೆ ಹತ್ತಿತೊ.

ಬೆಳಗಾಯಿತು. ಗಂಡಹೆಂಡಿರಿಬ್ಬರ ವಾತ್ಸಲ್ಯದ ಉಪಚಾರಗಳಿಗೆ ತಡೆಯಿರಲಿಲ್ಲ. ಇಬ್ಬರೂ ಒಮ್ಮನಸ್ಸಿನಿಂದ, ಅಕ್ಕರೆಯಿಂದ ಸ್ನಾನಮಾಡಿಸಿದರು. ಬಾಯಿಬಿಟ್ಟು ಹೇಳದಿದ್ದರೂ ಇಬ್ಬರ ಮನಸ್ಸಿನಲ್ಲೂ ನನ್ನನ್ನು ನೋಡಿದಾಗಿನಿಂದ ತಮ್ಮ ಮೊಮ್ಮಗನೇ ಇದ್ದಿದ್ದರೆ ತಾವು ಮಾಡಬೇಕೆನ್ನುವ ಅಕ್ಕರೆಯ ಪೋಷಣೆ, ಅವನ ನಲಿವುನಗುವಿನಲ್ಲಿ ಎಲ್ಲವನ್ನೂ ಮರೆಯಬೇಕೆನ್ನುವ ನಿರ್ವ್ಯಾಜವಾತ್ಸಲ್ಯ ಎಲ್ಲ ನೆವಿಗನಸೂ ಮೂಡಿದಂತಾಗಿತ್ತು. ಹೂವಳ್ಳಿಗೆ ಅಂದು ನಾನು ಹೊರಡಬೇಕಾಗಿತ್ತು.

ಸ್ನಾನವಾಗಿ ತಿಂಡಿ ತಿನ್ನುವಾಗ ಮಾತು ಮೆಲ್ಲನೆ ಮತ್ತೆ ನಮ್ಮೂರ ಕಡೆ ತಿರುಗಿತು. ಈಸಲ ಅಜ್ಜನ ಕಣ್ಣು ಕುತೂಹಲದಿಂದ ನನ್ನ ಕಡೆ ನೋಡುತ್ತಿದ್ದಂತೆ ಕಂಡಿತು. ನನ್ನ ತಂದೆ ಯಾರೋ ಎಂದು ಬಹುಶಃ ತಿಳಿಯುವ ಕುತೂಹಲವಿರಬಹುದು. ಒಮ್ಮೆಗೇ ನಾನು "ಅಜ್ಜಾ ನಮ್ಮೂರಿಗೆ ಯಾವಾಗ ಬರುವಿರಿ ಮತ್ತೆ ಅಜ್ಜೀನೂ ಕರೆದುಕೊಂಡು ಬರಬೇಕು ಮತ್ತೆ" ಎಂದೆ. ಅಜ್ಜ ನಗುತ್ತಾ "ಓಹೊ ನೀವು ಯಾವಾಗ ಕರೆಯುವಿರೊ ಆಗ" ಎಂದುಬಿಟ್ಟ. ಅದುವರೆಗೆ ಸೋಮಣ್ಣ ಎನ್ನುತ್ತಿದ್ದೆ. ಅಜ್ಜ ಎಂದ ಕೂಡಲೆ ಆನಂದ—ನೋವು ಎರಡೂ ಒಂದಾದ ಮೇಲೊಂದು ಅವನ ಮುಖದಲ್ಲಿ ಮೂಡಿ ಮರೆಯಾಗುತ್ತ ಮತ್ತೆ ಚಿರಶಾಂತತೆಗೆಡೆ ಕೊಟ್ಟವು. ಹೊತ್ತು ನೋಡಿ "ಅಜ್ಜಾ ಹಾಗೆಲ್ಲಾ ಹಾರಿಸಿ ಮಾತಾಡಿದರಾಗದು. ಮುಂದಿನ ರಜೆಗೆ ನಾನು ಊರಿಗೆ ಹೋಗುವಾಗ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ" ಪಕ್ಕದಲ್ಲೇ ಬಂದು ನಿಂತಿದ್ದ ಅಜ್ಜಿ ಅಚ್ಚರಿ-ಸಂತಸಗಳಿಂದ ಏನೂ ತೋಚದೆ ನಮ್ಮ ಮಾತಿನ ಕಡೆಯೇ ಚಿತ್ತವಿಟ್ಟು ಕೇಳುತ್ತಿದ್ದಳು.

"ಯಾಕಜ್ಜಾ—ನೀವೇನು ನನಗೆ ಹೊರಗಿನವರೇ. ಎಷ್ಟೊಂದು ಆದರೋಪಚಾರಮಾಡಿ ನಿಮ್ಮ ಮೊಮ್ಮಗನಂತೇ ಕಂಡಿದ್ದೀರಿ. ಅದರಲ್ಲಿ ನನಗೆಲ್ಲ ಗೊತ್ತಾಗಿದೆ ಬಿಡಿ ಹಿಂದಿನ ಕತೆಯೆಲ್ಲ. ಅಜ್ಜಿ ಎಲ್ಲಾ ಹೇಳಿದ್ದಾಳೆ. ದೈವವೈಚಿತ್ರ್ಯಕ್ಕೆ ಸರಿಯಾಗಿ ನಾನು ನಿಜಕ್ಕೂ ನಿಮ್ಮ ಮೊಮ್ಮಗನೇ ಆಗಿಬಿಡಬೇಕೆ?

ಕ್ಷಣಕ್ಷಣಕ್ಕೂ, ಮಾತುಮಾತಿಗೂ ಅಜ್ಜನ ಮುಖದ ವರ್ಣರೇಖೆಗಳು ರಹಸ್ಯವನ್ನೊಡೆಯುತ್ತಿರುವ ಪತ್ರವನ್ನು ಓದುವವನ ಮುಖದಂತೆ ಬದಲಾಗುತ್ತ ಬಂದವು. ಅಜ್ಜಿಯಂತೂ ಮೂಕವಿಸ್ಮಿತಳಾಗಿ ಕಲ್ಲಿನಂತೆ ನಿಂತುಬಿಟ್ಟಿದ್ದಳು. ನನ್ನ ತಂದೆ ಅಜ್ಜಂದಿರ ವಿಚಾರದ ವಿವರಗಳನ್ನೆಲ್ಲ ತಿಳಿಸಿದೆ ನಿಧಾನವಾಗಿ. ಅವರಿಗಾದ ಅಚ್ಚರಿ ಸಂತೋಷವನ್ನು ವರ್ಣಿಸಲಸದಳ. ಸಂಕ್ಷೇಪವಾಗಿ ಹೇಳುವುದಾದರೆ—ನನ್ನ ಪ್ರಯಾಣ ಎರಡು ದಿನಕ್ಕೆ ಮಾತ್ರ ಅದೂ ಪ್ರಯಾಸಕರವಾಗಿ ಕಡಿಮೆ ಮಾಡಿಸಿ ಮುಂದೂಡಲ್ಪಟ್ಟಿತು. ಮನೆಯ ಸಂಭ್ರಮ, ಅಜ್ಜಿಯ ಓಡಾಟ ಆಗ ಕೇಳಬೇಕೆ. ಮಧ್ಯೆ ಮಧ್ಯೆ, ತನ್ನ ತಂದೆ, ತಮ್ಮ, ತಂಗಿಯರ ವಿಚಾರ ಕೇಳಿ ದುಃಖಿತಳಾದರೂ ಅಜ್ಜಿಗೆ ಅಂತೂ ತನ್ನ ಬಾಳಿನ ತಪಸ್ಸು ವ್ಯರ್ಥವಾಗಲಿಲ್ಲವಲ್ಲ ಎಂಬ ತೃಪ್ತಿ ಬಂದು ಎಲ್ಲವನ್ನೂ ಮರೆಮಾಡುತ್ತಿತ್ತು.

ಕಡೆಗೂ ಹೂವಿನಹಳ್ಳಿಗೆ ಹೊರಡುವ ದಿನ ಬಂದೇ ಬಂದಿತು. ಮುಂದಿನ ರಜೆಯಲ್ಲಿ ತಪ್ಪಿಸದೆ ಖಂಡಿತ ಬರಬೇಕೆಂದು ನನ್ನಿಂದ ಪ್ರಮಾಣವಚನ ತೆಗೆದುಕೊಂಡರು. ಅದಕ್ಕೆ ಷರತ್ತನ್ನು ಹಾಕದೆ ನಾನೂ ಬಿಡಲಿಲ್ಲ. ಅಂತೂ ಅಜ್ಜಿ ಮುಂದಿನ ರಜೆಗೆ ತನ್ನ ತೌರೂರನ್ನು ನೋಡಬೇಕೆಂದಾಯಿತು. ಮನೆಯವರೆಲ್ಲ ಕಳಿಸಲು ಮನೆಯಿಂದ ಕೂಗಳತೆ ದೂರದವರೆಗೆ ಬಂದರು. ಅನುಮಣ್ಣ ನನ್ನ ಮಾರ್ಗದರ್ಶಿಯಾಗಿದ್ದ.

ಆ ಅಗಲಿಕೆಯ ದುಃಖ ಹೇಳಲಾಸಲ್ಲ. ಅಜ್ಜಿ ಕಣ್ಣೀರು ತುಂಬಿಕೊಂಡು ಬಲಾತ್ಕಾರದ ನಗೆನಗುತ್ತ—ತಲೆಸವರಿ—ಮೈದಡವಿ, "ಹೋಗಿ ಬರ್‍ತೀಯಾಮಗೂ. ಮರೆಯಬೇಡಪ್ಪ ನಿನ್ನ ಈ ಬಡ ಅಜ್ಜಿಯನ್ನು; ಮುಂದಿನ ರಜೆಗೆ ಬರದೆ ಬಿಟ್ಟೀಯೆ. ದಾವಣಗೆರೆಯನ್ನು ನೋಡುತ್ತೇನೋ ಇಲ್ಲವೊ—ನಿನಾದರೂ ಬಂದರೆ ತೌರನ್ನು ನೋಡಿದ ಸಂತಸವಾದರೂ ಬಂದೀತು. ಏನೋಪ್ಪಾ—ಅವರು—ಅಪ್ಪ ಮರೆತಂತೆ ಮರೆತರೆ . . ." ನನಗೂ ತಡೆಯಲಾಗಲಿಲ್ಲ. ಅಜ್ಜಿ ಎಲ್ಲ ಹೇಳಿ ಹಗುರವಾಗಿದ್ದರೆ ನಾನು ಎಲ್ಲ ಹೊತ್ತು ಸಾಗಿರುವ ಭಾರದ ಹಡಗಿನಂತಿದ್ದೆ. ಅಜ್ಜಿಯು ಮಾತ್ರ ಎಷ್ಟು ಸರಳ—ಅಷ್ಟು ಗೂಢ—ಅಷ್ಟು ತೀಕ್ಷ್ಣ. "ಇಲ್ಲಜ್ಜೀ ಮರೆತರೆ ಕೃತಘ್ನನಾದೇನು. ಹಾಗೇ ಮುಂದಿನಸಲ ನನ್ನೊಡನೆ ಊರಿಗೆ ಬರದಿದ್ದರೆ ನಾನೇನು ಕೇಳವವನಲ್ಲ. ನಿಮ್ಮಾಶೀರ್ವಾದವೊಂದಿರಲಿ ಎಲ್ಲ ಒಳಿತಾಗುವುದು" ಎನ್ನುತ್ತ ಕಾಲಿಗೆರಗಿ ಶಿವಪ್ಪ

ನವರಿಗೂ ನಮಸ್ಕಾರ ಹೇಳಿದೆ. ಏನೂ ಅರಿಯದ ಜೀವಿ, ನಿಶ್ಚಿಂತೆಯಿಂದ ಬೀಳ್ಕೊಟ್ಟ. ಈ ಮಧ್ಯೆ ಎಲ್ಲೋ ನುಸಳಿಹೋಗಿದ್ದ ಅಜ್ಜ ಬಂದು ಸೇರಿದ. ಮರೆತು ಬಂದಿದ್ದ ಬಾಳೆಗೊನೆ ಕೊಡುತ್ತ ಚಂದ್ರೂ ಈ ಬಾಳೆಗೊನೆ ಹಿಡಿ—ಮರೆತುಬಿಟ್ಟಿದ್ದೆ. ಮರೆತೀಯ ಅಪ್ಪಾ ಈ ಬಡ ಮುದುಕನನ್ನು. ನನ್ನ ಮನಸ್ಸಿನ ಶೂನ್ಯತೆಯನ್ನು ತುಂಬಿದ್ದೀಯೆ. ಇನ್ನೆಂಟು ದಿನವಿದ್ದಿದ್ದರೂ ನಮಗೆ ಸಾಕೆನಿಸುತ್ತಿರಲಿಲ್ಲ. ಹ್ಞೂ. . . ಹೋಗಿ—ಬಾಪ್ಪಾ."

ಇದೇ ಮೊದಲು ಈ ಕಠೋರತೆಯನ್ನು ರೂಪಿಸುತ್ತಿದ್ದ ಕಣ್ಣುಗಳಲ್ಲಿ ದುಃಖಾಶ್ರು ಬಂದುದನ್ನು ನಾನು ನೋಡಿದ್ದು. ಆ ಶಾಂತ ಗಂಭೀರತೆ ಬದಲಿಸಿ ಮೌನದ ಕೊರಗು ಮೂಡಿತ್ತು. ಕಲ್ಲಿನ ಹೃದಯ ಕರಗಿದಂತೆ ಆ ಕಠೋರ ಹಟ ಮುಖಭಾವ ದೈನ್ಯವಾಗಿತ್ತು. ಮೊಮ್ಮಗನ ಹಂಬಲ ತೀರಿ ತೃಪ್ತಿಯನ್ನು ತಂದಿದ್ದರೂ ಮತ್ತೆ ಅವನನ್ನಗಲುವ ದುಃಖ ಆ ಸಂತಸವನ್ನೆಲ್ಲ ಅಡಗಿಸಿ ವಿಬುಧವಾಗಿತ್ತು. ನೋಡನೋಡುತ್ತ ನನ್ನ ಕಣ್ಣು ಮಂಜಾದವು.

" ಇಲ್ಲಜ್ಜಾ ಮರೆಯೆ . . ." ಎಂದಿಷ್ಟೇ ಹೇಳಿದೆ.

ಮೌನವೇ ಹಿತವೆನಿಸಿತ್ತು. ಎದೆಯೆಲ್ಲ ನೋವಿನಿಂದ ತುಂಬಿತ್ತು.

ಆ ಕಣಿವೆ ದಾಟಿ ಮತ್ತೊಂದು ಕಣಿವೆಯಕಡೆ ಇಳಿಯಲಾರಂಭಿಸಿದೆವು. ಆ ಕಣಿವೆ ಕ್ರಮೇಣ ಮರೆಯಾಗುತ್ತಿತ್ತು.

—" ಜಯದೇವ ".

ಅಂತರಗಂಗೆ*

ನೀರು ಪ್ರಾಣಿಗಳಿಗೆ ಬಹು ಆವಶ್ಯಕ. ಜೀವಿ ಉದ್ಭವಿಸಿ ವಿಕಾಸವಾದುದು ನೀರಿನಲ್ಲಿ; ನೀರಿನಿಂದಲೇ ಉಸಿರಾಡುವುದು; ರಕ್ತಚಲನೆ ನಡೆಯುವುದು. ಸತ್ತ ಪ್ರಾಣಿಗಳಲ್ಲಿ ರಕ್ತ ಸಹ ನೀರಿನಂತಿರದೆ ಹೆಪ್ಪುಗಟ್ಟಿ ಗಡ್ಡೆಯಾಗುತ್ತದೆ. ಈ ಕಾರಣ ದಿಂದಲೇ ಪುರಾತನರು ನೀರನ್ನು ದೇವರೆಂದು ಪೂಜಿಸುತ್ತಿದ್ದರು. ವೇದಗಳ ಕಾಲದ ಆರ್ಯರು ನೀರನ್ನು ಪಂಚಮಹಾಭೂತಗಳಲ್ಲಿ ಒಂದು ಎಂದು ಎಣಿಸಿದ್ದರು. ನೀರೇ ಜೀವಾಧಾರ ಎಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಬೆಳೆ ಬೆಳೆಯಲು ಸಹ ನೀರುಬೇಕು, ಮಳೆ ಬಂದರೆ ಬೆಳೆ, ತಂಪಾದ ವಾತಾವರಣ, ಜೀವಕ್ಕೊಂದು ಇಂಪು.

ಭೂಮಿ ಗೋಳಾಕಾರವಾಗಿದೆಯೆಂದು ಭೂವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಅದು ಚಕ್ಕೋತದ ಹಣ್ಣಿನಂತೆ—ನಮ್ಮ ಊಹೆಗೆ ಮೀರಿದ ಗಾತ್ರ— ಇದೆ. ಈ ಭೂಮಿಗೆ ಸೀರೆ ಉಡಿಸಿದಂತೆ ನೀರು ಅದರ ಮುಕ್ಕಾಲು ಭಾಗವನ್ನು ಆವರಿಸಿಕೊಂಡಿದೆ. ಈ ಮುಕ್ಕಾಲುಭಾಗವೆಲ್ಲಾ ಸಾಗರಗಳು. ಉಳಿದ ಕಾಲುಭಾಗ ಮಾತ್ರ ಭೂಭಾಗಗಳು.

ಭೂಮಿಯ ಮೇಲುಗಡೆ ತಗ್ಗಾದ ಕೊರಕಲುಗಳಲ್ಲಿ ಆಕಾಶದಿಂದ ಬಿದ್ದ ಮಳೆಯ ನೀರು ನದಿಯಂತೆ, ತೊರೆಯಂತೆ ಹರಿಯುವುದನ್ನು ನೋಡಿದ್ದೇವೆ. ಈ ನದಿಗಳೆಲ್ಲಾ ಒಂದು ದೊಡ್ಡ ಸಮುದ್ರವನ್ನೋ, ಸಾಗರವನ್ನೋ ಸೇರುತ್ತವೆ. ಅನೇಕಕಡೆ ಭೂಮಿಯ ಮಧ್ಯದಲ್ಲೂ, ದೊಡ್ಡದಾದ ತಗ್ಗಾದ ಪ್ರದೇಶದಲ್ಲಿ ನೀರು ಶೇಖರವಾಗಿ ಸಣ್ಣ ಸಮುದ್ರವಿರುತ್ತದೆ. ಇವನ್ನೇ ಸಾಗರಗಳೆನ್ನುತ್ತೇವೆ. ಈ ತೆರನಾದ ಪ್ರಕೃತಿದತ್ತವಾದ ಅನುಕೂಲಗಳಿಲ್ಲದ ಕಡೆ ಮನುಷ್ಯ ಕೊಳವನ್ನೋ, ಕೆರೆಯನ್ನೋ ಕಟ್ಟಿಕೊಂಡು ನೀರನ್ನು ಶೇಖರಿಸಿಟ್ಟುಕೊಳ್ಳುತ್ತಾನೆ.

ಬಿಸಿಲ ಬೇಗೆಗೆ ನೀರು ಕಾದು ಆವಿಯಾಗಿ ಮೇಲಕ್ಕೆ ಹೋಗಿ ಮೋಡವಾಗು ತ್ತದೆ. ಬೇಗೆ ಹೆಚ್ಚಿದಂತೆ ಹೆಚ್ಚು ಹೆಚ್ಚು ನೀರೂ ಮಾಯವಾಗುತ್ತದೆ. ಕಡೆಗೆ ಉರಿಬೇಸಗೆಯಲ್ಲಿ ಕೆರೆ ಬತ್ತಿಹೋಗುವುದೂ ಉಂಟು. ಹೀಗಾದರೆ ನೀರನ್ನೇ ನಂಬಿದ ಜನಗಳ ಗತಿ ಏನು? ದೂರದ ಸಮುದ್ರಕ್ಕೆ ಹೋಗಿ ನೀರನ್ನು ತುಂಬಿಕೊಂಡು ಬರಲು ಸಾಧ್ಯವೆ? ಅದೂ ಉಪ್ಪುನೀರು! ಒಂದೆರಡು ಬಿಂದಿಗೆಯನ್ನು ತಂದರೆ ಸಾಕೆ? ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗುತ್ತದೆ ನಮ್ಮ ಗತಿ.

---

* **Underground Water.**

ಇಂಥ ಕಷ್ಟಕಾಲದಲ್ಲಿ ಭೂತಾಯಿಯನ್ನಲ್ಲದೆ ಮತ್ತಾರನ್ನು ನಾವು ಮರೆ ಹೊಗಬೇಕು. ನಮ್ಮನ್ನು ಹೆತ್ತು ಸಾಕಿ ಸಲಹುವವಳು ಅವಳೇ. ಸತ್ತಾಗ ಸಹ ನಮ್ಮ ದೇಹ ಒಂದು ಹಿಡಿ ಮಣ್ಣಾಗಿ ತಾಯ ಮಡಿಲನ್ನು ಸೇರುತ್ತದೆ. ವಿಶ್ವಸಂಸಾರದ ತಾಯಿ ಭೂಮಿ. ಈ ಭೂಮಿಯಲ್ಲಿ ಕೆಲವು ಅಡಿಗಳ ಆಳಕ್ಕೆ ಹೋದರೆ ನೀರು ಚಿಮ್ಮಿಬರುತ್ತದೆ. ನಮ್ಮ ಕಷ್ಟ ನಿವಾರಣೆಯಾಗುತ್ತದೆ. ಹೀಗೆ ನೀರಿಗಾಗಿ ತೋಡಿದ ಕೂಪಗಳನ್ನು ಭಾವಿ ಎನ್ನುತ್ತೇವೆ. ಸಾವಿರಾರು ಬಿಂದಿಗೆಗಳಷ್ಟು ನೀರನ್ನು ಸೇದಿದರೂ ಭಾವಿಯಲ್ಲಿ ನೀರು ಇದ್ದೇ ಇರುತ್ತದೆ. ಭಾವಿ ನಮಗೊಂದು ದೇವರು ಕೊಟ್ಟ ಅಕ್ಷಯಪಾತ್ರೆ. ಭಾವಿಯಿದ್ದರೆ ದೂರದ ನದಿಯಾಗಲೀ, ಕೆರೆಯಾಗಲೀ ನಮಗೆ ಬೇಡವೇಬೇಡ.

ಮಳೆರಾಯ ಮಳೆಹುಯ್ಯಿಸುತ್ತಾನೆ. ಈ ರೀತಿ ಧಾರಾಕಾರವಾಗಿ ಭೂಮಿಯ ಮೇಲೆ ಸುರಿದ ನೀರು ತಗ್ಗುಗಳಲ್ಲಿ, ಇಳಿಜಾರುಗಳಲ್ಲಿ ಸಣ್ಣ ಕಾಲುವೆಗಳಂತೆ ಹರಿದು ಹತ್ತಿರದ ಹಳ್ಳವನ್ನೋ, ನದಿಯನ್ನೋ ಆಶ್ರಯಿಸಿ ಕಟ್ಟಕಡೆಗೆ ಸಾಗರವನ್ನು ಸೇರುತ್ತದೆ. ಕೊಂಚಭಾಗ ಆವಿಯ ರೂಪದಲ್ಲಿ ಆಕಾಶಕ್ಕೆ ಹೋಗಿ ಮತ್ತೆ ಮೋಡವಾಗುತ್ತದೆ. ಇನ್ನುಳಿದಭಾಗ ಭೂಮಿಯಲ್ಲಿ ಇಮರಿಹೋಗುತ್ತದೆ. ಮಣ್ಣು ನೀರನ್ನು ಹೀರಿಕೊಳ್ಳುತ್ತೆಂಬುದನ್ನು ಎಲ್ಲರೂ ಬಲ್ಲರು. ನಮ್ಮ ಹಿತ್ತಲಿನ ಗಿಡಗಳಿಗೆ ಬಿಂದಿಗೆ ನೀರನ್ನು ಸುರಿದರೂ ಕೇವಲ ಕೆಲವು ನಿಮಿಷಗಳಲ್ಲಿ ನೀರೆಲ್ಲಾ ಇಂಗಿಹೋಗಿ ಕೇವಲ ಒದ್ದೆಯಾದ ನೆಲ ಮೇಲೆ ಕಾಣಿಸಿಕೊಳ್ಳುತ್ತದೆ. ಈ ರೀತಿ ಭೂಮಿಯ ಒಳಕ್ಕೆ ಹೋದ ನೀರು ಮಣ್ಣಿನ ಹೆಂಟೆಗಳ ಮೂಲಕ, ಸಣ್ಣ ಕಣಗಳಲ್ಲಿ ಹಾದು ಜಿನುಗಿ ಆಳದಲ್ಲಿ ಶೇಖರವಾಗುತ್ತದೆ. ಮಳೆ ಬರುತ್ತಿರುವುದು ಇಂದು ನಿನ್ನೆಯ ಮಾತಲ್ಲ. ಭೂಮಿ ಬ್ರಹ್ಮಾಂಡದಲ್ಲಿ ಆದ ದಿವಸದಿಂದ ಬರುತ್ತಲೇ ಇದೆ. ಅಂದಿನಿಂದಲೂ ಭೂಮಿಯ ಒಳಗೆ ನೀರಿನ ಶೇಖರಣೆ ತಡೆಯಿಲ್ಲದೆ ನಡೆಯುತ್ತಲೇ ಇದೆ. ಈ ತೆರನಾದ ರೀತಿಯಲ್ಲೇ ಅಲ್ಲದೆ ಇತರ ವಿಧಗಳಲ್ಲೂ ನೀರಿನ ಶೇಖರಣೆ ನಡೆಯುತ್ತಲೇ ಇದೆ.

ಭೂಮಿಯ ಮೇಲೆ ಒಂದು ಸುರಂಗವನ್ನು ಕೊರೆದು ಹಾಗೇ ಹೋಗಿ ಗೋಳದ ಮತ್ತೊಂದು ಭಾಗದಲ್ಲಿ ಬರಲು ಸುಮಾರು ಎಂಟು ಸಾವಿರ ಮೈಲಿಗಳಾಗುತ್ತವೆ. ಈ ಅಗಲವನ್ನು 'ವ್ಯಾಸ' ಎನ್ನುತ್ತೇವೆ. ಅಂದರೆ ಭೂಮಿಯ ಮೇಲ್ಭಾಗದಿಂದ ಭೂಗರ್ಭದ ಕೇಂದ್ರಕ್ಕೆ ಹೋಗಬೇಕಾದರೆ ಇದರರ್ಧದಷ್ಟು—ನಾಲ್ಕು ಸಾವಿರ ಮೈಲಿಗಳಾಗುತ್ತವೆ. ಇದುವರೆವಿಗೆ ಭೂವಿಜ್ಞಾನಿಗಳು ಕೇವಲ ಎರಡು-ಮೂರು ಮೈಲಿ ಆಳದಷ್ಟು ಮಾತ್ರ ಒಳಹೊಕ್ಕಿದ್ದಾರೆ.

ನಮ್ಮ ದೇಶದ ಕೋಲಾರದ ಚಿನ್ನದಗಣಿಗಳು ಪ್ರಪಂಚದಲ್ಲೇ ಅತ್ಯಂತ ಆಳವಾದ

ಗಣಿಗಳು. ಇಲ್ಲಿ ಚಿನ್ನ ತೆಗೆಯಲು ತೋಡ್ಡಿರುವ ಕೂಪದ ಆಳ ಎರಡು ಮೈಲಿಗಳು! ಹೀಗೆಯೇ ನೂರಾರು ಮೈಲಿ, ಸಾವಿರಾರು ಮೈಲಿ ಒಳಕ್ಕೆ ಹೋದರೆ ಶಾಖ ಹೆಚ್ಚಾಗಿ ಗಟ್ಟಿಯಾದ ಕಲ್ಲೆಲ್ಲವೂ ಕರಗಿ ನೀರಾಗುತ್ತದೆ. ಎಂಥ ಚಳಿಗಾಲದಲ್ಲೂ ಭಾವಿಯ ನೀರು ಬೆಚ್ಚಗಿರುವುದಿಲ್ಲವೆ? ಪಂಡಿತರ ಅಭಿಪ್ರಾಯದಂತೆ ಅರವತ್ತು ಅಡಿ ಆಳಕ್ಕೆ ಒಂದು ಡಿಗ್ರಿಯಷ್ಟು ಉಷ್ಣ ಹೆಚ್ಚಾಗುತ್ತದೆ. ಸಾವಿರಾರು ಮೈಲಿ ಆಳವೆಂದರೆ ಲಕ್ಷಾಂತರ ಅಡಿಗಳು. ಶಾಖ ಯಾವ ಪ್ರಮಾಣದಲ್ಲಿ ಕ್ರಮೇಣ ಹೆಚ್ಚುತ್ತಾ ಹೋಗುತ್ತೆಂಬುದನ್ನು ನೀವೇ ಊಹಿಸಿಕೊಳ್ಳಿ. ಆದರಿಂದಲೇ ಅಂಥ ಆಳದಲ್ಲಿ, ಪಾತಾಳದಲ್ಲಿ ಕಲ್ಲು ಕರಗಿ ನೀರಾಗಿ ಬರಿಯ ದ್ರವವೇ ಅಲ್ಲಿರುವ ಶಿಲಾರಸದ ಜತೆಯಲ್ಲಿ ನೀರಿನ ಆವಿಯೊಡನೆ ಸೇರಿರುತ್ತದೆ.

ಹೆಪ್ಪುಗಟ್ಟಿದಂತಿರುವ ಭೂಮಿಯ ಮೇಲ್ಹೊದಿಕೆಯಲ್ಲಿ ಆಗಾಗ ಕೆಲವು ದೊಡ್ಡ ಬಿರುಕುಗಳುಂಟಾಗುತ್ತವೆ. ಇದರಿಂದ ಒತ್ತಡವೂ ವ್ಯತ್ಯಾಸಹೊಂದಿ ಪಾತಾಳದಲ್ಲಿರುವ ಶಿಲಾರಸ ನೀರಿನ ಆವಿಯೊಡನೆ ಹೊರಕ್ಕೆ ಚಿಮ್ಮಿಬರುತ್ತದೆ. ಈ ತೆರನಾದ ಬಿರುಕುಗಳನ್ನು ಅಗ್ನಿಪರ್ವತ ಅಥವಾ ಜ್ವಾಲಾಮುಖಿ ಎನ್ನುತ್ತೇವೆ. ಅಂದರೆ ಭೂಮಿಯ ಪಾತಾಳದಲ್ಲಿಯೂ ಸಹ ಜಲವಿದೆ ಎನ್ನುವುದು ಸಿದ್ಧವಾಯಿತು. ಇದನ್ನೇ ಮೂಲ ಜಲವೆಂದೂ ಕರೆಯುತ್ತಾರೆ. ಅನೇಕ ಸಂದರ್ಭಗಳಲ್ಲಿ ಭೂಮಿಯ ಮೇಲ್ಹೊದಿಕೆಯ ಒಳಗೇ ಕೆಲವು ಸಣ್ಣ ಬಿರುಕುಗಳುಂಟಾಗಿ ಮೇಲಕ್ಕೆ ಬಂದ ನೀರಿನ ಆವಿ ತಣ್ಣಗಾಗಿ ನೀರಾಗುವುದೂ ಉಂಟು. ಈ ತೆರನಾಗಿಯೂ ಸಹ ಭೂಮಿಯ ಒಳಗೆ ನೀರು ಶೇಖರವಾಗುತ್ತಾ ಹೋಗುತ್ತದೆ. ಭಾವಿಗಳನ್ನು ತೋಡಿದಾಗ ಈ ನೀರು ನಮಗೆ ದೊರೆಯುತ್ತದೆ. ಯಾವ ಕೊರತೆಯೂ ಇಲ್ಲದೆ ಸದಾಕಾಲದಲ್ಲಿಯೂ ನೀರು ಬರುತ್ತದೆ. ಹೀಗೆ ನೀರು ಶೇಖರವಾಗಿರುವ ಜಾಡನ್ನು 'ಜಲಮಟ್ಟ' ಎನ್ನುತ್ತೇವೆ. ಜಲಮಟ್ಟವನ್ನು ಮುಟ್ಟಿದ ಹೊರತು ಭಾವಿಯಲ್ಲಿ ನೀರು ಬರುವುದೇ ಇಲ್ಲ.

ನಮ್ಮ ಊರಿನಲ್ಲಿರುವ ಎಲ್ಲ ಭಾವಿಗಳ ಆಳ ಒಂದೇ ಸಮನಾಗಿಲ್ಲ. ಕೆಲವು ಬಹು ಆಳವಾಗಿರುತ್ತವೆ. ಮತ್ತೆ ಕೆಲವು ಭಾವಿಗಳಲ್ಲಿ ಜಲ ಬಹು ಮೇಲೆಯೇ ಸಿಗುತ್ತದೆ. ಈ ಆಳದ ವ್ಯತ್ಯಾಸಕ್ಕೆ ಕಾರಣ ಜಲಮಟ್ಟದ ಏರುತಗ್ಗುವಿಕೆ. ಭೂಮಿ ತಗ್ಗಾಗಿದ್ದರೆ ಆ ಪ್ರದೇಶದಲ್ಲಿ ಅಷ್ಟು ಆಳವಾಗಿ ಭಾವಿಯನ್ನು ತೋಡಬೇಕಾಗಿಲ್ಲ. ಭೂಮಿ ಎತ್ತರವಾಗಿದ್ದರೆ ಭಾವಿಯೂ ಆಳವಾಗಿರಬೇಕಾಗುತ್ತದೆ. ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದ ಏರುತಗ್ಗುಗಳಿಗನುಸಾರವಾಗಿ ಭೂಮಿಯ ಒಳಗೂ ಜಲಮಟ್ಟ ಏರುತಗ್ಗಾಗಿರುತ್ತದೆ. ಅಲ್ಲದೆ ಒಂದು ಪ್ರದೇಶದಲ್ಲಿ ಆಗುವ ಮಳೆಯ ಪ್ರಮಾಣ ಸಹ ಜಲಮಟ್ಟದ ನಿರ್ಧಾರದಲ್ಲಿ ಬಹು ಉಪಯುಕ್ತವಾದುದು. ಮರಳುಕಾಡಿನಲ್ಲಿ

ಮಳೆಬರುವುದೇ ಅಪರೂಪ, ಬಂದರೂ ಅತ್ಯಲ್ಪ. ಈ ತೆರನಾದ ಬೆಂಗಾಡು ಪ್ರದೇಶ ಗಳಲ್ಲಿ ಜಲಮಟ್ಟವೂ ಸಹ ನೂರಾರು ಅಡಿಗಳ ಆಳದಲ್ಲೇ ಇರುತ್ತದೆ. ಮಳೆ ಹೆಚ್ಚಾಗಿ ಬೀಳುವ ಮಲೆನಾಡಪ್ರದೇಶಗಳಲ್ಲಿ ಅದು ಕೇವಲ ಕೆಲವು ಅಡಿ ಆಳದಲ್ಲೇ ಇರುತ್ತದೆ. ಸಾಧಾರಣ ಮಳೆಯಾಗುವ ಬಯಲುಸೀಮೆಯಲ್ಲಿ ಐವತ್ತರಿಂದ ನೂರೈವತ್ತು ಅಡಿಗಳ ಆಳದಲ್ಲಿ ಜಲಮಟ್ಟವಿರುತ್ತದೆ.

ಜಲಮಟ್ಟದ ನಿರ್ಧಾರದಲ್ಲಿ ಮತ್ತೊಂದು ಅಂಶವನ್ನೂ ನಾವು ಪರಿಶೀಲಿಸಬೇಕು. ಭೂಮಿಯ ಮೇಲುಮೈ ಲಕ್ಷಣ ಮತ್ತು ಭೂಮಿಯ ಒಳರಚನೆ. ಭೂಮಿ ಕಲ್ಲು ನೆಲವಾಗಿದ್ದರೆ, ಬಹು ಗಡುಸಾಗಿದ್ದರೆ ನೂರಾರು ಅಡಿಗಳೇ ಇರಬೇಕು ಭಾವಿಯ ಆಳ. ನೆಲ ಮರಳು ಭೂಮಿಯಾಗಿದ್ದರೆ ಜಲಮಟ್ಟವೂ ಮೇಲೆಯೇ ಇರುತ್ತದೆ.

ಜಲಮಟ್ಟ ಮೇಲಿರುವ ಪ್ರದೇಶಗಳಲ್ಲಿ ಭೂಮಿಗೆ ಪಚ್ಚೆಗಂಬಳಿ ಹೊದಿಸಿದಂತೆ ಸಸ್ಯಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಬೆಂಗಾಡು ಪ್ರದೇಶದಲ್ಲಿ ಜಲಮಟ್ಟ ಬಹು ಆಳವಾಗಿರುವುದರಿಂದ ಪಚ್ಚೆಯ ಪಯಿರಿನ ತುಂಬು ಬೆಳೆ ಕಂಡುಬರುವುದೇ ಅಪರೂಪ. ಕೇವಲ ದೊಡ್ಡ ಮರಗಳು, ಈಚಲು, ಖರ್ಜೂರ, ಮೊದಲಾದ ಜಾತಿಯ ಸಸ್ಯಗಳು, ಅಲ್ಲೊಂದು ಇಲ್ಲೊಂದರಂತೆ ಮಾತ್ರ ಬೆಳೆಯುತ್ತವೆ.

ಭೂಮಿಯ ಒಳಗೆ ಜಲಮಟ್ಟ ಆಗಾಗ ವ್ಯತ್ಯಾಸಹೊಂದುತ್ತಿರುತ್ತದೆ. ಕೆಲವು ಭಾವಿಗಳಲ್ಲಿ ಬೇಸಗೆ ಬಂದಂತೆ ನೀರು ಬತ್ತಿಹೋಗುತ್ತದೆ. ಮಳೆಗಾಲ ಬಂದರೆ ಮಾತ್ರ ಮತ್ತೆ ಜಲಬರುತ್ತೆಂಬುದನ್ನು ನಾವು ಕೇಳಿದ್ದೇವೆ. ಇದಕ್ಕೆ ಮುಖ್ಯಕಾರಣ ಜಲಮಟ್ಟದ ವ್ಯತ್ಯಾಸ. ಬೇಸಗೆಯಲ್ಲಿ ಮೇಲ್ಭಾಗದಿಂದ ಜಿನುಗಿಬರುವ ನೀರಿನ ಪ್ರಮಾಣ ಕಡಮೆಯಾಗಿರುವುದರಿಂದ ಜಲಮಟ್ಟ ಬಹು ಆಳಕ್ಕೆ ಹೋಗುತ್ತದೆ. ಮಳೆಗಾಲದಲ್ಲಿ ನೀರು ಸಮೃದ್ಧಿಯಾಗಿ ಜಿನುಗಿ ಬರುವ ಕಾರಣ ಒಳಹುದುಗಿದ ಜಲಮಟ್ಟ ತಾನೇತಾನಾಗಿ ಮೇಲಕ್ಕೆ ಬರುತ್ತದೆ. ಕೆಲವು ಪ್ರದೇಶಗಳಲ್ಲಿ ಒತ್ತಡದ ವ್ಯತ್ಯಾಸಗಳಿಂದಲೂ ಹೀಗಾಗುವುದುಂಟು. ಅಲ್ಲದೆ ಭಾವಿಗಳ ಸಮೀಪದಲ್ಲಿ ಸದಾ ನೀರಿರುವ ಕೆರೆ, ನದಿ, ಸಮುದ್ರ—ಇವಿದ್ದರೆ ಆಗಲೂ ಸಹ ಜಲಮಟ್ಟ ಮೇಲೆಯೇ ಇರುತ್ತದೆ.

ಭೂಮಿಯ ಮೇಲ್ಭಾಗವನ್ನು ಕೆಲವು ಅಡಿ ತೋಡಿದರೆ ಬರಿಯ ಮಣ್ಣೇ. ಇನ್ನೂ ಆಳಕ್ಕೆ ಹೋದರೆ ನುರುಜುಗಲ್ಲುಗಳೂ, ಮತ್ತೂ ಆಳಕ್ಕೆ ಹೋದರೆ ಕೇವಲ ಕಲ್ಲೂ ಸಿಗುತ್ತದೆ. ಬಂಡೆಯ ಮೇಲೆ ಕೊಡಗಟ್ಟಲೆ ನೀರು ಸುರಿದರೆ ತಾನೆ ಕಲ್ಲು ನೀರನ್ನು ಹೀರಿಕೊಳ್ಳುತ್ತದೆಯೆ? ಗೋರ್ಕಲ್ಲ ಮೇಲೆ ನೂರ್ಕಾಲ ಮಳೆ ಸುರಿದರೂ ಆ ಕಲ್ಲು ನೀರ್ಕೊಂಬುದೇನೋ? ಎಂದು ಸರ್ವಜ್ಞ ಹಾಡಿದ್ದಾನೆ. ಅಂದರೆ ಎಲ್ಲ

ಕಲ್ಲುಗಳೂ ಹೀಗೆಯೇ ಇರುವುದಿಲ್ಲ. ಕೆಲವು ಕಲ್ಲುಗಳಲ್ಲಿ ಅನೇಕ ರಂಧ್ರಗಳಿರುತ್ತವೆ. ಈ ರಂಧ್ರಗಳು ಬಹು ಸೂಕ್ಷ್ಮವಾಗಿದ್ದು ಸಾಮಾನ್ಯವಾಗಿ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಇವು ಇರುವುದರಿಂದ ಮೇಲೆ ಬಿದ್ದು ಇಂಗುವ ಮಳೆಯ ನೀರು ಸುಲಭವಾಗಿ ಜಿನಗುತ್ತದೆ. ನೀರು ತಡೆಯಿಲ್ಲದೆ ಕ್ರಮೇಣ ಕಲ್ಲನ್ನೆಲ್ಲಾ ವ್ಯಾಪಿಸಿ ಕೊಳ್ಳುತ್ತದೆ. ಆದುದರಿಂದ ಈ ತೆರನಾದ ಶಿಲೆಗಳನ್ನು ಸರಂಧ್ರಶಿಲೆ ಅಥವಾ ಸಚ್ಛಿದ್ರ ಶಿಲೆ ಎನ್ನುತ್ತೇವೆ. ಇವನ್ನು ವ್ಯಾಪ್ಯಶಿಲೆಗಳು ಎಂದೂ ಸಹ ಕರೆಯುತ್ತೇವೆ. ಮರಳುಕಲ್ಲು, ಕಣಶಿಲೆ ಮುಂತಾದುವು ಈ ಜಾತಿಯವು. ಇವು 'ಜಲವಾಹಕ' ಶಿಲೆಗಳು. ಇನ್ನು ಕೆಲವು ಶಿಲೆಗಳಲ್ಲಿ ಈ ತೆರನಾದ ರಂಧ್ರಗಳಿರುವುದಿಲ್ಲ. ಇವನ್ನು ಅರಂಧ್ರ ಶಿಲೆಗಳೆನ್ನುತ್ತೇವೆ. ಸುಣ್ಣಕಲ್ಲು ಈ ಜಾತಿಯದು. ಕೆಲವು ಸರಂಧ್ರವಾಗಿದ್ದರೂ ನೀರಿನ ಪಸರಣೆಯೇ ಆಗುವುದಿಲ್ಲ. ಇವು ಅವ್ಯಾಪ್ಯಶಿಲೆಗಳು. ಜೇಡುಕಲ್ಲು ಈ ತೆರನಾದುದು. ಇವೆರಡೂ ಸಾಮಾನ್ಯವಾಗಿ 'ಜಲವಾಹಕ'ಗಳಲ್ಲ.

ಆದರೆ ಅನೇಕ ಅರಂಧ್ರಶಿಲೆಗಳಲ್ಲಿ ನಾನಾಕಾರಣಗಳಿಂದ ಬಿರುಕುಗಳುಂಟಾಗುತ್ತವೆ. ಕೆಲವು ಸಲ ಜೇಡುಕಲ್ಲು ರೂಪಾಂತರಹೊಂದಿ ಪದರುಶಿಲೆಯಾಗುತ್ತದೆ. ಕಡಪಕಲ್ಲು ಈ ಜಾತಿಯದು. ಹಾಳೆ ಹಾಳೆಯಾಗಿ ಬಿಟ್ಟುಕೊಳ್ಳುತ್ತದೆ. ಈ ಹಾಳೆಗಳ ಮಧ್ಯೆ ಮತ್ತು ಬಿರುಕುಗಳಲ್ಲಿ ನೀರು ಶೇಖರವಾಗುತ್ತದೆ. ಸುರುಜುಕಲ್ಲು, ಮರಳು— ಈ ಶಿಲೆಗಳಲ್ಲಿ ನೂರಕ್ಕೆ ಮೂವತ್ತಾರು ಭಾಗ ರಂಧ್ರಗಳಿರುತ್ತವೆ. ಮರಳುಶಿಲೆಯಲ್ಲಿ ಸಾಧಾರಣವಾಗಿ ನೂರಕ್ಕೆ ಹತ್ತು-ಹದಿನೈದರಷ್ಟು ರಂಧ್ರಗಳಿರುತ್ತವೆ. ಹತ್ತು ಅಡಿ ದಪ್ಪದ ಒಂದು ಎಕರೆ ವಿಸ್ತೀರ್ಣವನ್ನಾಕ್ರಮಿಸಿಕೊಳ್ಳುವ ಮರಳುಶಿಲೆಯ ರಂಧ್ರಗಳಲ್ಲೆಲ್ಲಾ ನೀರು ತುಂಬಿಕೊಂಡರೆ ಸುಮಾರು ಮೂರು ಲಕ್ಷ ಗ್ಯಾಲನ್ ಗಳಷ್ಟಿರುತ್ತದೆ. ಇದು ಸರಂಧ್ರವೇ ಅಲ್ಲದೆ ನೀರು ಸಹ ಸುಲಭವಾಗಿ ಪಸರಿಸಲು ಸಹಾಯಮಾಡುತ್ತದೆ. ಜೇಡುಕಲ್ಲಿನಲ್ಲೂ ಸಹ ನೂರಕ್ಕೆ ಐವತ್ತೆರಡು ಭಾಗ ರಂಧ್ರಗಳಿದ್ದು ನೀರನ್ನು ಹೀರಿಕೊಳ್ಳುತ್ತದೆ. ಆದರೆ ಇಮರಿದ ನೀರು ಪಸರಿಸಲು ಸಾಧ್ಯವೇ ಇಲ್ಲ. ಕಲ್ಲು ಅವ್ಯಾಪ್ಯ ಜಾತಿಯದು. ನೆಲ ಈ ಜಾತಿಯ ಕಲ್ಲುಗಳಿಂದ ಕೂಡಿದ್ದರೆ ನೀರಿನ ಸರಬರಾಯಿ ಆಗುವುದೇ ದುರ್ಲಭ.

ಭೂಮಿಗೆ ಆಕರ್ಷಣಶಕ್ತಿ ಇದೆ ಎಂಬುದನ್ನು ಎಲ್ಲರೂ ಬಲ್ಲರು. ಒಂದು ಕಲ್ಲನ್ನು ಅಥವಾ ಒಂದು ಪದಾರ್ಥವನ್ನು ಮೇಲೆ ಎಸೆದರೆ ಮತ್ತೆ ಭೂಮಿಯ ಕಡೆಗೇ ಬರುವುದು ಈ ಕಾರಣದಿಂದಲೇ. ಮೇಲೆ ಬಿದ್ದ ನೀರೂ ಸಹ ಒಳಗೆ ಜಿನುಗುವುದೂ ಇದರಿಂದಲೇ. ಪ್ರತಿಯೊಂದು ವಸ್ತುವೂ ಅಣುಗಳ ಸಂಗ್ರಹದಿಂದ ಉಂಟಾಗಿದೆ. ಈ ಕೋಟ್ಯಂತರ ಅಣುಗಳು ಪರಸ್ಪರ ಆಕರ್ಷಣಶಕ್ತಿಯನ್ನು

ಹೊಂದಿವೆ. ವ್ಯಾಪ್ಯಶಿಲೆಗಳಲ್ಲಿ ಕಣಗಳು ದೂರದೂರವಾಗಿರುವುದರಿಂದ ಈ ತೆರನಾದ ಆಕರ್ಷಣಶಕ್ತಿ ಅಷ್ಟು ಹೆಚ್ಚಾಗಿರುವುದಿಲ್ಲ. ಇದರಿಂದ ಜಿನುಗಿದ ನೀರೂ ಸಹ ಸುಲಭವಾಗಿ ಪ್ರವಹಿಸುತ್ತದೆ. ಜೇಡುಕಲ್ಲು ಮುಂತಾದ ಗಡುಸಾದ ಅವ್ಯಾಪ್ಯ ಶಿಲೆಗಳಲ್ಲಿ ಅಣುಗಳು ಬಹು ಹತ್ತಿರವಾಗಿದ್ದು, ಪರಸ್ಪರ ಆಕರ್ಷಣಶಕ್ತಿಯೂ ಹೆಚ್ಚಾಗಿರುತ್ತದೆ. ನೀರಿನ ಪಸರಣೆ ಅಷ್ಟು ಸುಲಭವಾಗಿರುವುದಿಲ್ಲ. ಭೂಮಿಯ ಗುರುತ್ವಾಕರ್ಷಣ ಶಕ್ತಿಗಿಂತ ಈ ಅಣು ಆಕರ್ಷಣಶಕ್ತಿ ಬಹು ಮುಖ್ಯವಾದುದು.

ಭೂಮಿಯ ಒಳಗೆ ಒಂದೇ ತೆರನಾಗಿ ನೀರು ಪ್ರವಹಿಸುವುದಿಲ್ಲ. ಎತ್ತರದ ಮಟ್ಟದಿಂದ ಕೆಳಮಟ್ಟಕ್ಕೆ ಬೇಗನೆ ಹರಿಯುತ್ತದೆ. ಈ ರೀತಿಯ ಪ್ರವಾಹಕ್ಕೆ ಅನೇಕ ತಡೆಗಳೂ ಉಂಟಾಗಬಹುದು. ಆಗ ವೇಗ ಕಡಮೆಯಾಗುತ್ತದೆ. ಕಲ್ಲಿನ ಕಣಗಳ ಗಾತ್ರ ಸಹ ಈ ವೇಗವನ್ನು ನಿರ್ಧರಿಸುತ್ತದೆ. ಕಣಗಳು ದಪ್ಪಗಿದ್ದರೆ, ಭೂಮಿ ನುರುಜುಗಲ್ಲಿನಿಂದ ಕೂಡಿದ್ದರೆ ನೀರು ಬಹು ಸುಲಭವಾಗಿ, ವೇಗವಾಗಿ ತಡೆಯಿಲ್ಲದೆ ಇಳಿಜಾರಿನ ಕಡೆ ಪ್ರವಹಿಸುತ್ತದೆ. ಕಣಗಳು ಬಹು ಸಣ್ಣಗಿದ್ದರೆ, ಮರಳು ಅಥವಾ ಜೇಡಿಮಣ್ಣಿನ ಭೂಮಿಯಲ್ಲಿ ಇಷ್ಟು ಸುಲಭವಾಗಿ, ವೇಗವಾಗಿ ಪ್ರವಹಿಸಲಾರದು. ಮರಳುಶಿಲೆಯಲ್ಲಿ ಗಂಟೆಗೆ ಎಂಟರಿಂದ ಹದಿನಾಲ್ಕು ಇಂಚುಗಳ ಆಳಕ್ಕೆ ಜಿನಗುತ್ತದೆ. ಜೇಡುಶಿಲೆಯಲ್ಲಿ ಗಂಟೆಗೆ ಒಂದೂವರೆ ಅಂಗುಲ ಆಳಕ್ಕೆ ಮಾತ್ರ. ಸುಣ್ಣಶಿಲೆಯಲ್ಲಿ ಗಂಟೆಗೆ ಕೇವಲ ಮುಕ್ಕಾಲು ಅಂಗುಲ ಆಳಕ್ಕೆ ಮಾತ್ರ ಇಮರಿಹೋಗುತ್ತದೆ.

ಭೂಮಿಯ ಒಳಗೆ ಸರಂಧ್ರಶಿಲೆಗಳಲ್ಲಿ ನೀರು ಸುಲಭವಾಗಿ ಜಿನುಗುತ್ತಿರುತ್ತದೆ. ಈ ರೀತಿ ಆಗುತ್ತಿರುವಾಗ ತನ್ನ ಮಾರ್ಗದಲ್ಲಿ ಬಂದ ಗಡಸುಕಲ್ಲಿನ ಮೂಲಕ ಜಿನುಗಲಾರದೆ ಅಲ್ಲೇ ಶೇಖರವಾಗುತ್ತದೆ. ಶೇಖರವಾದಂತೆಲ್ಲಾ ಒತ್ತಡವೂ ಸಹ ಹೆಚ್ಚುತ್ತದೆ. ಭೂಮಿಯಲ್ಲಿ ಆಗಾಗ ಉದ್ಭವಿಸುವ ಕೆಲವು ಬದಲಾವಣೆಗಳಿಂದ ಕಲ್ಲಿನ ಪದರಗಳಲ್ಲಿ ಬಿರುಕುಗಳುಂಟಾಗಿ ಒತ್ತಡವು ಸಡಲಿಸಿ ನೀರು ಬುಗ್ಗೆಯಂತೆ ಮೇಲಕ್ಕೆ ಚಿಮ್ಮುತ್ತದೆ. ಇದನ್ನು ಚಿಲುಮೆ, ನೀರ ಬುಗ್ಗೆ ಅಥವಾ ಊಟೆಗಳೆನ್ನುತ್ತಾರೆ. ಈ ತೆರನಾದ ಊಟೆಗಳನ್ನು ಅನೇಕ ವೇಳೆ ಬೆಟ್ಟಗುಡ್ಡಗಳ ಅಕ್ಕಪಕ್ಕಗಳಲ್ಲಿಯೂ, ಕಣಿವೆಗಳಲ್ಲಿಯೂ ನೋಡಬಹುದು.

ಒಂದು ಇಳಿಜಾರಾದ ಪ್ರದೇಶದಲ್ಲಿ ಗಡಸುಕಲ್ಲು, ಅದರ ಮೇಲೆ ಸರಂಧ್ರ ಶಿಲೆ ಮತ್ತೂ ಮೇಲೆ ಗಡಸುಕಲ್ಲು ಇದೆ ಎಂದು ಊಹಿಸೋಣ. ಆ ಪ್ರದೇಶದಲ್ಲಿ ಬಿದ್ದ ಮಳೆಯ ನೀರಿನಲ್ಲಿ ಬಹು ಭಾಗ ಮೇಲೆಯೇ ಹರಿದುಹೋಗುತ್ತದೆ. ಉಳಿದಭಾಗ ಭೂಮಿಯ ಒಳಕ್ಕೆ ಇಮರಿ ಸರಂಧ್ರಶಿಲೆಯಲ್ಲೆಲ್ಲಾ ವ್ಯಾಪಿಸಿಕೊಳ್ಳುತ್ತದೆ. ನೀರಿನ ಶೇಖರಣೆ ಕ್ರಮೇಣ ಹೆಚ್ಚುತ್ತಲೇ ಹೋಗುತ್ತದೆ. ಕಡೆಗೆ ರಂಧ್ರಗಳಲ್ಲೆಲ್ಲಾ ನೀರು

ತುಂಬಿಕೊಂಡು ಒತ್ತಡವೂ ಹೆಚ್ಚಾಗುತ್ತದೆ. ಮೇಲೆ ಮತ್ತೆ ಕೆಳಗೆ ಗಡಸುಕಲ್ಲಿನ ಪದರಗಳಿರುವುದರಿಂದ ಹೀಗೆ ಶೇಖರವಾದ ನೀರು ಆವಿಯಾಗಿ ಮೇಲೆ ಹೋಗುವುದಾಗಲೀ, ಜಿನುಗಿ ಇಮರುವುದಾಗಲೀ ಆಗುವುದಿಲ್ಲ. ಭೂಗರ್ಭದಲ್ಲಿ ಆಗಾಗ ಉಂಟಾಗುವ ಕಂಪನಗಳು, ಹೊರಬರುವ ಜ್ವಾಲಾಮುಖಿಗಳು—ಈ ತೆರನಾದ ಕಾರ್ಯಗಳಿಂದ ಬಿರುಕುಗಳುಂಟಾಗಿ ಒತ್ತಡವು ಸಡಿಲವಾಗುತ್ತದೆ. ಹೀಗಾದಾಗ ಶೇಖರವಾದ ನೀರೆಲ್ಲವೂ ಬಿರುಕಿನ ಮೂಲಕ ಮೇಲಕ್ಕೆ ಚಿಮ್ಮಿಬರುತ್ತದೆ. ಹೀಗೆ ಚಿಮ್ಮುವ ಚಿಲುಮೆ ನೂರಾರು ಅಡಿ ಎತ್ತರಕ್ಕೆ ಹೋಗಬಲ್ಲುದು. ಕೆಲವು ಚಿಲುಮೆಗಳು ನೀರಿನ ಸರಬರಾಯಿ ಮುಗಿದೊಡನೆ ತಣ್ಣಗಾಗುವುದೂ ಉಂಟು ಮತ್ತೆ ಕೆಲವು ತಡೆಯಿಲ್ಲದೆ ವರ್ಷಾನುಗಟ್ಟಲೆ ಚಿಮ್ಮುತ್ತಲೇ ಇರುತ್ತವೆ.

ಕೆಲವು ಚಿಲುಮೆಗಳ ನೀರು ಬಿಸಿಯಾಗಿರುತ್ತದೆ. ಈ ತೆರನಾದ ಬಿಸಿನೀರಿನ ಚಿಲುಮೆಗಳನ್ನು 'ಗೈಸರ್ಸ್' ಎಂದು ಕರೆಯುತ್ತಾರೆ. ಅಮೆರಿಕದ ಎಲ್ಲೋಸ್ಟೋನ್ ಪಾರ್ಕ್ ಎಂಬ ಪ್ರದೇಶದಲ್ಲಿ ನೂರಾರು ಗೈಸರ್ಸ್‌ಗಳಿವೆ, ಸೂರಾರು ಅಡಿ ಎತ್ತರಕ್ಕೆ ಹಾರುತ್ತಾ ನೋಡಲು ಮನೋಹರವಾಗಿವೆ. ಅಲ್ಲಿನ ಒಂದು ಚಿಲುಮೆ ತಡೆಯಿಲ್ಲದೆ ನೂರಾರು ವರ್ಷಗಳಿಂದ ಒಂದೇಸಮನೆ ಚಿಮ್ಮುತ್ತಿರುವುದರಿಂದ ಅದಕ್ಕೆ 'Old Faithful' ಎಂದು ಅನ್ವರ್ಥನಾಮಕರಣ ಮಾಡಿದ್ದಾರೆ. ನೀರು ಶಾಖವಾಗಿರುವುದರಿಂದ ಈತೆರನಾದ ಚಿಲುಮೆಗಳು ಬಹು ಆಳದಿಂದ ಬರುತ್ತವೆ.

ಸಾಮಾನ್ಯವಾಗಿ ಚಿಲುಮೆಗಳ ನೀರು ಆಳದಿಂದ ಉಕ್ಕಿಬರುವ ಕಾರಣ ಅನೇಕ ಖನಿಜಾಂಶಗಳೂ ಇರುತ್ತವೆ. ಇಂಥ ನೀರಿಗೆ ಅನೇಕ ರೋಗಗಳನ್ನು ವಾಸಿಮಾಡಬಲ್ಲ ಶಕ್ತಿ ಇರುತ್ತದೆ. ನಮ್ಮ ದೇಶದ ಬಿಹಾರ, ಒರಿಸ್ಸ, ಹಿಮಾಚಲ ಪ್ರದೇಶಗಳು, ಪಶ್ಚಿಮ ಕರಾವಳಿಯ ಕೆಲವು ಜಿಲ್ಲೆಗಳಲ್ಲಿ ಇಂಥ ಚಿಲುಮೆಗಳಿವೆ. ಈ ಖನಿಜಾಂಶಯುಕ್ತ ಚಿಲುಮೆ ಗಳ ವಿಚಾರವಾಗಿ ಶ್ರೀಯುತ ಪಿ. ಕೆ. ಘೋಷ್ ಅವರು ವಿಶೇಷ ಅಧ್ಯಯನಮಾಡಿ ಸುಮಾರು ಒಂದು ನೂರು ಇಪ್ಪತ್ತನ್ನು ಪತ್ತೆ ಮಾಡಿದ್ದಾರೆ. ನಮ್ಮ ದೇಶದ ಅನೇಕ ಚಿಲುಮೆಗಳ ನೀರು ಔಷಧಗುಣಗಳಿಂದ ಕೂಡಿ ಚರ್ಮವ್ಯಾಧಿ, ವಾಯು, ಕುಷ್ಟ ಮೊದಲಾದ ರೋಗಗಳಿಗೆ ರಾಮಬಾಣವಾಗಿದೆ. ಅನೇಕ ಪಾಶ್ಚಿಮಾತ್ಯ ದೇಶಗಳವರು ಈ ತೆರನಾದ ನೀರನ್ನು ಸೀಸೆಗಳಲ್ಲಿ ತುಂಬಿ ಹೊರದೇಶಗಳಲ್ಲಿ ಮಾರಾಟಮಾಡಿ ಸಂಪಾದನೆ ಮಾಡುತ್ತಾರೆ. ಕೆಲವು ವರ್ಷಗಳ ಹಿಂದೆ ನಮ್ಮ ದೇಶದಲ್ಲಿಯೂ ಇಂಥ ಉದ್ಯಮವನ್ನು ಪ್ರಯತ್ನಿಸಲಾಯಿತು. ವರ್ಷವೊಂದಕ್ಕೆ ಸುಮಾರು ಐದು ಲಕ್ಷ ಸೀಸೆಗಳನ್ನು ತಯಾರಿಸಬಹುದಾಗಿತ್ತು. ನಾನಾ ಕಾರಣಗಳಿಂದ ಉದ್ಯಮ ಅಲ್ಲಿಗೇ ನಿಂತುಹೋಯಿತು. ಅಲ್ಲದೆ

ಪಾಶ್ಚಿಮಾತ್ಯದೇಶಗಳಲ್ಲಿರುವಂತೆ ಚಿಲುಮೆಗಳ ಬಳಿ ಉದ್ಯಾನವನ, ಫಲಹಾರ, ಮತ್ತು ಭೋಜನಮಂದಿರಗಳನ್ನು ಏರ್ಪಡಿಸಿ ಸಾಮಾನ್ಯರಿಗೂ, ರೋಗಿಗಳಿಗೂ ಉತ್ತಮ ವಿಹಾರಸ್ಥಾನಗಳನ್ನು ಮಾಡಬಹುದು.

ಅನೇಕ ಪ್ರದೇಶಗಳಲ್ಲಿ ನೀರು ಚಿಮ್ಮಿ ಬರದೆ, ಒಂದೇ ಸಮನೆ ಜಿನುಗಿ ಬರುತ್ತಿರುತ್ತದೆ. ಆಗ ಚಿಲುಮೆಗಳನ್ನು 'ಊಟೆ' ಗಳೆಂದು ಕರೆಯುತ್ತಾರೆ. ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ ಮತ್ತು ಪಾವಗಡ ಪ್ರಾಂತಗಳಲ್ಲಿ ಇಂಥ ನೂರಾರು ಊಟೆಗಳಿವೆ. ಇದಕ್ಕೆ ಮುಖ್ಯಕಾರಣ ಭೂಮಿಯಮಟ್ಟ ಜಲಮಟ್ಟಕ್ಕಿಂತ ತಗ್ಗಿನಲ್ಲಿರುವುದು. ಹೀಗಿರುವುದರಿಂದ ನೀರು ಒಂದೇ ಸಮನೆ ಹರಿದು ಬರುತ್ತಿರುತ್ತದೆ. ಇದರಿಂದ ವ್ಯವಸಾಯಕ್ಕೆ ಆಗುವ ಉಪಯೋಗ ಅಷ್ಟಿಷ್ಟಲ್ಲ.

ಇನ್ನು ಕೆಲವು ಪ್ರದೇಶಗಳಲ್ಲಿ ಶಿಲಾಪ್ರಸ್ತರಗಳು ಬಾಂಡಲಿಯಂತೆ ಇರುತ್ತವೆ. ಮೇಲಿನ ಪ್ರಸ್ತರಗಳು ಅವ್ಯಾಪ್ಯ. ಮಧ್ಯಶಿಲೆ ಮಾತ್ರ ಸರಂಧ್ರ ಮತ್ತು ವ್ಯಾಪ್ಯ. ಕೆಳಗಿನ ಪ್ರಸ್ತರ ಮತ್ತೆ ಅವ್ಯಾಪ್ಯ. ಪ್ರಸ್ತರಗಳು ಕೆಳಮುಖನಾಗಿರುವುದರಿಂದ ಮೇಲೆ ಬಿದ್ದ ನೀರೆಲ್ಲಾ ಜಿನುಗಿ ವ್ಯಾಪ್ಯಶಿಲೆಯಲ್ಲಿ ಶೇಖರವಾಗುತ್ತಾ ಹೋಗುತ್ತದೆ. ಇಂಥ ಪ್ರದೇಶಗಳಲ್ಲಿ ಬಾವಿಯನ್ನು ತೋಡಿದರೆ ವ್ಯಾಪ್ಯಶಿಲೆಯ ಮಧ್ಯದಲ್ಲಿ ತಂಗಿದ್ದ ನೀರು ಮೇಲಕ್ಕೆ ಉಕ್ಕಿ ಬರುತ್ತದೆ. ಇವನ್ನು ಆರ್ಟೀಸಿಯನ್ ಭಾವಿಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಸದಾಕಾಲದಲ್ಲಿಯೂ ನೀರು ವಿಶೇಷವಾಗಿ ದೊರೆಯುವುದರಿಂದ ಬೇಸಾಯಕ್ಕೆ ಬಹು ಅನುಕೂಲವಾಗಿವೆ. ಇವನ್ನು ಮೊದಲಿಗೆ ಫ್ರಾನ್ಸ್ ದೇಶದ 'ಆರ್ಟಾಯ್ಸ್' ಪ್ರಾಂತದಲ್ಲಿ ಕಂಡುಹಿಡಿದುದರಿಂದ ಇವಕ್ಕೆ ಆರ್ಟೆಸಿಯನ್ ಭಾವಿಗಳೆನ್ನುತ್ತಾರೆ. ದಕ್ಷಿಣ ಹಿಂದೂಸ್ಥಾನದ ಪಾಂಡಿಚೇರಿಯಲ್ಲಿ ಇಂಥ ಅನೇಕ ಭಾವಿಗಳಿವೆ. ಸಹರಾ ಮರುಭೂಮಿಯ ಅನೇಕ ಓಯಸಿಸ್‌ಗಳು ಈ ಜಾತಿಗೆ ಸೇರಿದುವೇ.

ಭೂಮಿಯೊಳಕ್ಕೆ ಜಿನುಗಿದ ನೀರು ಶಿಲೆಗಳ ಪದರುಗಳಲ್ಲಿಯೂ ಬಿರಿತಗಳಲ್ಲಿಯೂ ಮತ್ತು ರಂಧ್ರಗಳಲ್ಲಿಯೂ ಸೇರಿ ಅನೇಕ ಬದಲಾವಣೆಗಳನ್ನುಂಟುಮಾಡುತ್ತದೆ. ಭೂಪ್ರದೇಶ ಸುಣ್ಣಶಿಲೆಗಳಿಂದ ಕೂಡಿದ್ದರೆ ಅದು ಬಹು ಬೇಗನೆ ಕರಗಿಹೋಗುತ್ತದೆ. ಮಳೆಯ ನೀರು ಭೂಮಿಯಮೇಲೆ ಬೀಳುವಾಗ ವಾಯುಮಂಡಲದಲ್ಲಿರುವ ಇಂಗಾಲಾಮ್ಲದ ಕೊಂಚಭಾಗವನ್ನು ಕರಗಿಸಿಕೊಳ್ಳುತ್ತದೆ. ಈತೆರನಾದ ನೀರು ಸುಣ್ಣಕಲ್ಲುಗಳ ಮೂಲಕ ಹರಿದರೆ ಹೆಚ್ಚುಹೆಚ್ಚು ಭಾಗ ಕರಗಿಹೋಗುತ್ತದೆ. ಈ ಕಾರಣದಿಂದ ಅನೇಕ ವೇಳೆ ನೂರಾರು ಅಡಿಗಳ ಆಳದ ಕೂಪಗಳು, ಕಂದರಗಳು ನಿರ್ಮಿತವಾಗುತ್ತವೆ. ಬ್ರಿಟನ್ನಿನ 'ಗೇಪಿಂಗ್ ಹಿಲ್' ಎಂಬ ಪ್ರದೇಶದಲ್ಲಿ ಇಂಥ ಒಂದು ಕೂಪದ

ಆಳ ಮುನ್ನೂರ ಅರವತ್ತೈದು ಅಡಿಗಳು ಕೆಳಗೆ ಇದು ಬೃಹದಾಕಾರದ ೪೮೦ ಅಡಿ ಉದ್ದ ೧೧೦ ಅಡಿ ಎತ್ತರದ ಗುಹೆಯೊಂದನ್ನು ನಿರ್ಮಿಸಿದೆ. ಫ್ರಾನ್ಸ್ ದೇಶದ ಕಂದರ ಒಂದರ ಆಳ ೧,೫೬೬ ಅಡಿಗಳು. ಕೆಂಟುಕಿ ಪ್ರಸ್ತಭೂಮಿಯ ಬಹುಭಾಗ ಸುಣ್ಣಶಿಲೆಗಳಿಂದ ಕೂಡಿದೆ. ಈ ಪ್ರದೇಶದಲ್ಲಿ ಸುಮಾರು ೬,೦೦೦ ಕೂಪಗಳು, ಬೃಹದಾಕಾರದ ಗವಿಗಳೂ ನಿರ್ಮಿತವಾಗಿವೆ. ಇಲ್ಲಿಯ 'ಗ್ರೇಟ್ ಮಾಮತ್ ಕೇವ್' ಎಂಬ ಗುಹೆಯ ಒಳಗಡೆ ಸುಮಾರು ಮೂವತ್ತು ಮೈಲಿಯಷ್ಟು ಓಡಾಡಬಲ್ಲ ರಸ್ತೆಗಳನ್ನೂ ನಿರ್ಮಿಸಿದೆ. ನ್ಯೂ ಮೆಕ್ಸಿಕೋ ಪ್ರದೇಶದ 'ಕಾರ್ಲ್ಸ್‌ಬಾಡ್' ಎಂಬ ಗವಿಯಲ್ಲಿ ೪೦೦೦ ಅಡಿ ಉದ್ದ, ೬೦೦ ಅಡಿ ಅಗಲ, ೩೦೦ ಅಡಿ ಎತ್ತರದ ಭವ್ಯವಾದ ಕೊಠಡಿಯೊಂದು ನಿರ್ಮಿತವಾಗಿದೆ.

ನೀರಿನಲ್ಲಿ ಇಂಗಾಲಾಮ್ಲದ ಭಾಗ ಹೆಚ್ಚಿದಂತೆಲ್ಲಾ ಆ ನೀರು ಕಲ್ಲಿನಲ್ಲಿರುವ ಸುಣ್ಣಪದಾರ್ಥವನ್ನು ಹೆಚ್ಚಾಗಿ ಕರಗಿಸಿಕೊಳ್ಳಬಲ್ಲುದು. ಇದಕ್ಕೂ ಒಂದು ಪರಿಮಿತಿ ಇದೆ. ಈ ಹದ್ದು ಮೀರಿದಾಗ, ಇಂಗಾಲಾಮ್ಲದ ಭಾಗ ಕಡಮೆಯಾದಾಗ ಕರಗಿದ ಸುಣ್ಣಪದಾರ್ಥ ಹೊರಬೀಳುವುದು. ನೀರಿಗೆ ಈ ವಿಶೇಷ ಗುಣವಿರುವುದರಿಂದ ಗುಹೆಗಳ ಮೇಲುಭಾಗದಿಂದ ಜಿನುಗುವ ನೀರಿನ ಹನಿಗಳು ಒಸರಿ ಅಲ್ಲಿಯೇ ಇಂಗಿ ಸುಣ್ಣಪದಾರ್ಥ ಆಲದಮರದ ಬಿಳಲಿನಂತೆಯೂ, ದ್ರಾಕ್ಷಿಗೊಂಚಲಿನಂತೆಯೂ ವಿಚಿತ್ರಾಕಾರಗಳಲ್ಲಿ ಗುಹೆಯ ಚಾವಣಿಯಿಂದ ಒಟ್ಟುಗೂಡುತ್ತಾ ಬರುವುದು. ನೀರು ಹೆಚ್ಚಾಗಿ ಹರಿದಾಗ ಬಿಂದುಗಳು ಗುಹೆಯ ತಳಕ್ಕೂ ಬಿದ್ದು ಅಲ್ಲಿ ಶೇಖರವಾದಾಗಲೆಲ್ಲಾ ಗೋಪುರಗಳಂತಿರುವ ಕಂಬಗಳು ಉಂಟಾಗುತ್ತವೆ. ಅನೇಕವೇಳೆ ಬಿಳಲುಗಳೂ, ಗೋಪುರಗಳೂ ಸೇರಿ ಚಿತ್ರವಿಚಿತ್ರಾಕಾರದ ಕಂಬಗಳು ಗುಹೆಯ ಒಳಗೆ ಆಗುತ್ತವೆ. ಈ ರೀತಿ ಮನೋಹರವಾದ ಚಿತ್ರವಿಚಿತ್ರ ಕಲಾಕೃತಿಗಳು ಪ್ರಕೃತಿಯ ಕಲಾಮಂದಿರದಲ್ಲಿ ನಿರ್ಮಿತವಾಗುತ್ತವೆ.

ಭೂವಿಜ್ಞಾನಿಗಳು ಶಿಲೆಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಭೂಗರ್ಭದಲ್ಲಿ ಶಿಲಾರಸವಿದೆಯೆಂಬುದನ್ನು ಹಿಂದೆಯೇ ತಿಳಿಸಿದೆ. ಈ ಶಿಲಾರಸ ಬಿರುಕುಗಳ ಮೂಲಕ, ಕೂಪಗಳ ಮೂಲಕ ಹೊರಬಂದು ಆರಿ ತಣ್ಣಗಾದಾಗ ಶಿಲೆಗಳು ಉಂಟಾಗುತ್ತವೆ. ಇಂಥ ಶಿಲೆಗಳನ್ನು ಅಗ್ನಿಶಿಲೆಗಳು ಅಥವಾ ಮೂಲಶಿಲೆಗಳೆನ್ನುತ್ತಾರೆ. ಸಾಮಾನ್ಯವಾಗಿ ಇವು ಗುಂಡಾಗಿ ದೊಡ್ಡದೊಡ್ಡ ಬಂಡೆಗಳಂತಿರುತ್ತವೆ. ಕ್ಲೋಸ್‌ಪೇಟೆ ಸುತ್ತಲಿನ ಬೆಟ್ಟಗಳೆಲ್ಲವೂ ಈ ಜಾತಿಯವು. ಅನೇಕವೇಳೆ ಈ ಬೆಟ್ಟಗಳು ಹೊರಬರದೆ ಭೂಮಿಯ ಒಳಗೇ ಹುದುಗಿಕೊಂಡಿರುತ್ತವೆ. ಕ್ರಮೇಣ ಗಾಳಿಯ ಹೊಡೆತದಿಂದ ಮೇಲುಮಣ್ಣೆಲ್ಲವೂ ಕೊಚ್ಚಿ ಮಾಯವಾಗಿ ನಮ್ಮ ಕಣ್ಣಿಗೆ ಬೀಳುತ್ತವೆ.

ಶಿಲೆಗಳು ಸೂರ್ಯನ ಶಾಖಕ್ಕೆ ಕಾದಾಗ ಹಿಗ್ಗಿ ಅರಳುತ್ತವೆ. ಸೂರ್ಯ ಮುಳುಗಿದಾಗ, ತಣ್ಣನೆಯಗಾಳಿ ಬೀಸುತ್ತಿರುವಾಗ, ಹಿಮ ಬೀಳುತ್ತಿರುವಾಗ, ಮಳೆ ಸುರಿಯುತ್ತಿರುವಾಗ ಹಿಗ್ಗಿದ ಕಲ್ಲು ಮತ್ತೆ ಕುಗ್ಗಿ ಸಂಕುಚಿತವಾಗುತ್ತದೆ. ಹೀಗಾಗು ವುದರಿಂದ ಕಲ್ಲಿನಲ್ಲಿ ಅನೇಕ ಬಿರುಕುಗಳುಂಟಾಗುತ್ತವೆ, ಕೆಲವು ವೇಳೆ ಬಿರುಕುಗಳಲ್ಲಿ ಗಾಳಿ ಮಣ್ಣನ್ನು ಕೂಡಿಹಾಕುತ್ತದೆ. ಈ ಮಣ್ಣಿನಲ್ಲಿ ಸಸ್ಯಗಳೂ ಬೆಳೆಯುವುದುಂಟು. ಇವುಗಳ ಬೆಳವಣಿಗೆಯಿಂದಲೂ ಬಿರುಕುಗಳು ಹೆಚ್ಚು ಅಗಲವಾಗಿ ದೊಡ್ಡ ಬಂಡೆ ಪುಡಿಯಾಗಿ ಮರಳಾಗುತ್ತದೆ. ಈ ರೀತಿ ಉಂಟಾದ ಮರಳನ್ನು ಹರಿಯುವ ನೀರೋ, ಬೀಸುವ ಗಾಳಿಯೋ ಹೊತ್ತು ದೂರಕ್ಕೆ ಸಾಗಿಸುತ್ತದೆ. ಪ್ರವಾಹಕ್ಕೆ ತಡೆಯುಂಟಾ ದಾಗ ಈ ಮರಳು ಕಣಗಳೆಲ್ಲವೂ ಅದೇ ಸ್ಥಳದಲ್ಲಿ ತಂಗಿ ಶೇಖರವಾಗುತ್ತವೆ. ಪ್ರಶಾಂತವಾದ ಸಾಗರತಳದಲ್ಲಿ ಇಂತಹ ಸಂಚಯನಕಾರ್ಯ ನಡೆಯುತ್ತಲೇ ಇರು ತ್ತದೆ. ಹೀಗೆಯೇ ಮುಂದುವರಿದರೆ ಹೊಸದಾಗಿ ಬರುತ್ತಲಿರುವ ಕೋಟಿಗಟ್ಟಲೆ ಕಣಗಳ ಭಾರದಿಂದಲೂ, ನೀರಿನ ಒತ್ತಡದಿಂದಲೂ ಶೇಖರವಾದ ಕಣಗಳೆಲ್ಲವೂ ಮತ್ತೆ ಶಿಲೆಯಾಗಿ ಮಾರ್ಪಡುತ್ತವೆ. ಇವನ್ನು ಜಲಜಶಿಲೆಗಳೆನ್ನುತ್ತಾರೆ. ಇವು ಒಂದರಮೇಲೊಂದು ಹಾಸಿದಂತೆ ಪದರ ಪದರಗಳಾಗಿರುತ್ತವೆ. ಕಾಲಾನುಕ್ರಮದಲ್ಲಿ ಹೆಚ್ಚು ಜಲಜಶಿಲೆಗಳಾದಾಗ ಕೆಲವು ಭೂಬದಲಾವಣೆಗಳಿಂದ ಈ ಶಿಲೆಗಳೆಲ್ಲವೂ ಭೂಮಿಯ ಮೇಲಕ್ಕೆ ಬರುತ್ತವೆ.

ಹೀಗೆ ಬಂದ ಜಲಜಶಿಲೆಗಳೂ, ಮೂಲಶಿಲೆಗಳೂ ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ಶಾಖ ಮತ್ತು ಒತ್ತಡಕ್ಕೆ ಸಿಕ್ಕಿಬಿದ್ದು ರೂಪಾಂತರ ಹೊಂದುತ್ತವೆ. ಇವೇ ರೂಪಾಂತರ ಶಿಲೆಗಳು. ಇವು ಹಾಳೆಹಾಳೆಯಾಗಿ ಬಿಟ್ಟುಕೊಳ್ಳುತ್ತವೆ. ಕೆಲವುವೇಳೆ ಈ ಹಾಳೆಗಳು ಎರಡೂಕಡೆ ಒತ್ತಲ್ಪಟ್ಟು ಮಡಿಕೆ ಬೀಳುತ್ತವೆ. ಪುಸ್ತಕದ ಹಾಳೆ ಗಳನ್ನು ಎರಡು ಕಡೆಯಿಂದಲೂ ಒತ್ತರಿಸಿದರೆ ಸುಕ್ಕು ಸುಕ್ಕು ಆಗುವುದಿಲ್ಲವೇ ? ಅದೇರೀತಿ. ಭೂಮಿ ಈ ಶಿಲಾಪುಸ್ತಕವನ್ನು ಮಡಿಸುತ್ತದೆ ಎನ್ನಬಹುದು. ಆಗ ದೊಡ್ಡ ಸುಕ್ಕುಗಳೇ ಆಗಬೇಕಲ್ಲವೆ? ಕೆಲವು ಮಡಿಕೆಗಳು ಗೋಪುರದಂತೆ ಮೇಲು ಮುಖವಾಗಿರುತ್ತವೆ. ಮತ್ತೆ ಕೆಲವು ಬಾಣಲೆಯಂತೆ ಕೆಳಮುಖವಾಗಿರುತ್ತವೆ. ಅಂತರಗಂಗೆ ಬಾಣಲೆಯ ತಳಭಾಗದಲ್ಲಿ ಶೇಖರವಾಗಲು ಬಹು ಸುಲಭ.

ಅಲ್ಲದೆ ಈ ರೂಪಾಂತರಶಿಲೆಗಳು ಪದರು ಪದರುಗಳಾಗಿರುತ್ತವೆ. ಹಾಳೆ ಹಾಳೆಯಾಗಿ ಬಿಟ್ಟುಕೊಳ್ಳುತ್ತವೆ. ಅನೇಕ ಬಿರುಕುಗಳೂ ಇರುತ್ತವೆ. ಈ ಬಿರುಕು ಗಳಲ್ಲೂ, ಹಾಳೆಗಳ ಮಧ್ಯದ ಸಂದುಗಳಲ್ಲೂ ಅಂತರಗಂಗೆ ಪ್ರವಹಿಸಿ ಶೇಖರವಾಗಲು ಬಹು ಅನುಕೂಲವಾಗಿರುತ್ತದೆ. ಈ ಕಾರಣಗಳಿಂದ ಅಪ್ಯಾಪ್ಯಶಿಲೆಗಳೂ ಸಹ ಅನೇಕ ಸಂದರ್ಭಗಳಲ್ಲಿ ನೀರನ್ನು ಒದಗಿಸುತ್ತವೆ.

ನುರುಜುಕಲ್ಲು ಮತ್ತು ಪೆಂಟಿಕಲ್ಲಿನ ಭೂಮಿಯಲ್ಲಿ ನೀರಿನ ಸರಬರಾಯಿ ಯಾವ ತೊಂದರೆಯೂ ಇಲ್ಲದೆ ಸಾಗುತ್ತದೆ. ನುರುಜುಕಲ್ಲಿನಲ್ಲಿ ರಂಧ್ರಗಳು ಹೆಚ್ಚಿಗಿದ್ದು ನೀರಿನ ಪಸರಣೆಗೂ ಸಹ ಯಾವ ಅಡ್ಡಿಯೂ ಇರುವುದಿಲ್ಲ. ಮೇಲಿನಿಂದ ಬಿದ್ದ ಮಳೆಯ ನೀರನ್ನೂ ಬೇಗನೆ ಹೀರಿಕೊಂಡು ತನ್ನಲ್ಲಿ ಒಟ್ಟುಗೂಡಿಸಿಡುವ ವಿಶೇಷ ಗುಣ ಈ ಜಾತಿಯ ಶಿಲೆಗಳಿಗಿದೆ. ಇವು ಉತ್ತಮ ಜಲವಾಹಕಗಳು. ನುರುಜುಕಲ್ಲು ಭೂಮಿಯಲ್ಲಿ ಕೇವಲ ಒಂದು ಅಡಿ ವ್ಯಾಸವುಳ್ಳ ಭೂಮಿಯನ್ನು ತೋಡಿದರೂ ಸಹ, ನಿಮಿಷಕ್ಕೆ ಒಂದು ಸಾವಿರ ಗ್ಯಾಲನ್ ನೀರನ್ನು ಒದಗಿಸಿಕೊಳ್ಳಬಹುದು. ಆದರೆ ನುರುಜುಕಲ್ಲುಗಳನ್ನು ಪರಸ್ಪರ ಬಂಧಿಸುವ ಪದಾರ್ಥ ಗಡುಸಾಗಿದ್ದರೆ ಅಂಥ ಪ್ರದೇಶದಲ್ಲಿ ನೀರು ಸುಲಭವಾಗಿ ಬರಲಾರದು. ನುರುಜು ಶಿಲೆಯ ಕಣಗಳು ದಪ್ಪನಾಗಿದ್ದರೆ ನೀರು ಹೆಚ್ಚಾಗಿ ಶೇಖರವಾಗಲು ಅನುಕೂಲಗಳಿರುತ್ತವೆ.

ನೀರಿನ ಉತ್ಪನ್ನದ ದೃಷ್ಟಿಯಲ್ಲಿ ಮರಳು, ಮರಳುಶಿಲೆ, ಮತ್ತು ರೂಪಾಂತರ ಶಿಲೆಗಳು ಎರಡನೆಯ ದರ್ಜೆಯವು. ಇವು ನುರುಜುಕಲ್ಲಿನಷ್ಟು ಅಧಿಕ ಪ್ರಮಾಣದಲ್ಲಿ ನೀರನ್ನು ಒದಗಿಸಲಾರವು. ಈ ಜಾತಿಯ ಶಿಲೆಗಳು ಸಾಮಾನ್ಯವಾಗಿ ಬಹು ವಿಸ್ತಾರವಾಗಿ ಹರಡಿಕೊಂಡಿರುತ್ತವೆ. ಇವುಗಳಲ್ಲಿ ಸುಮಾರು ನೂರಕ್ಕೆ ೩೦ ರಿಂದ ೪೦ ಭಾಗ ರಂಧ್ರಗಳಿರುತ್ತವೆ. ಕಣಗಳು ನುರುಜುಕಲ್ಲಿನಂತೆ ದಪ್ಪನಾಗಿರದೆ ಸಣ್ಣನಾಗಿರುವುದರಿಂದ ನೀರು ಸುಲಭವಾಗಿ ಜಿನುಗಲಾರದು. ಇಂತಹ ಕೆಲವು ಪ್ರದೇಶಗಳಲ್ಲಿ ಅಂತರ್ಜಲ ಹರಿಯುವಾಗ ಸಣ್ಣಮರಳು ಕಣಗಳನ್ನೂ ಹೊತ್ತುಕೊಂಡು ಹೋಗುವುದರಿಂದ ಭಾವಿಗಳನ್ನು ಮುಚ್ಚುವ ಪ್ರಮೇಯ ಬಂದರೂ ಬರಬಹುದು. ಮರಳು ಶಿಲೆ ಮರಳಿನ ರೂಪಾಂತರದಿಂದ ಉಂಟಾದುದು. ಹೆಚ್ಚಿನ ಮಟ್ಟದ ರೂಪಾಂತರವಾಗಿದ್ದರೆ ಶಿಲೆಯಲ್ಲಿ ಅಷ್ಟಾಗಿ ರಂಧ್ರಗಳಿರುವುದಿಲ್ಲ. ಅಂದರೆ ನೀರೂ ಸಹ ಸುಲಭವಾಗಿ ಜಿನುಗಲಾರದು. ಅಲ್ಲಿ ತೋಡಿದ ಭಾವಿಯಲ್ಲೂ ಸಹ ಅಷ್ಟಾಗಿ ಹೆಚ್ಚು ನೀರು ಬರಲಾರದು. ಸಾಮಾನ್ಯವಾದ ಅಥವಾ ಕಡಿಮೆ ಪ್ರಮಾಣದಲ್ಲಿ ರೂಪಾಂತರವಾಗಿದ್ದರೆ ಶಿಲೆಯಲ್ಲಿ ಹೆಚ್ಚು ರಂಧ್ರಗಳಿದ್ದು ಹೆಚ್ಚು ನೀರು ಪ್ರವಹಿಸುತ್ತದೆ. ಈ ಪ್ರದೇಶಗಳಲ್ಲಿ ತೋಡಿದ ಭಾವಿಗಳಲ್ಲಿ ನೀರು ಹೆಚ್ಚು ತೊಂದರೆಯಿಲ್ಲದೆ ದೊರೆಯುತ್ತದೆ.

ಜೇಡಿಮಣ್ಣು, ಜೇಡುಶಿಲೆ ಮತ್ತು ಕಡಪಕಲ್ಲು—ನಯವಾದ ಮಣ್ಣಿಗೆ ಜೇಡಿಮಣ್ಣೆನ್ನುತ್ತೇವೆ. ಕಣಗಳು ಬಹು ಸೂಕ್ಷ್ಮವಾಗಿರುತ್ತವೆ. ಅವುಗಳ ಮಧ್ಯೆ ಅಷ್ಟು ಹೆಚ್ಚಾದ ಸ್ಥಳವಿರುವುದಿಲ್ಲ. ಈ ಕಾರಣದಿಂದ ಭೂಮಿ ಜೇಡುಭೂಮಿಯಾಗಿದ್ದರೆ ಅಂತರಗಂಗೆಯ ಜಿನುಗುವಿಕೆಗೆ ಬಹು ತೊಂದರೆಯಾಗಿ ನೀರು ಸುಲಭವಾಗಿ ದಕ್ಕಲಾರದು. ಜೇಡುಶಿಲೆ ಮತ್ತು ಕಡಪಕಲ್ಲು ಜೇಡಿಮಣ್ಣಿನ ರೂಪಾಂತರಶಿಲೆಗಳು.

ಇವುಗಳಲ್ಲಿ ನೂರಕ್ಕೆ ೧೭ ರಿಂದ ೫೨ ಭಾಗ ರಂಧ್ರಗಳಿದ್ದರೂ ನೀರು ಸುಲಭವಾಗಿ ವ್ಯಾಪಿಸಿಕೊಳ್ಳಲಾರದು. ಈ ತೆರನಾದ ಅವ್ಯಾಪ್ಯಜಾತಿಯ ಶಿಲೆಗಳು ಉತ್ತಮ ಜಲವಾಹಕಗಳಲ್ಲ. ಇಂತಹ ಮಣ್ಣಿನ ಭೂಮಿಯಲ್ಲಿ ತೋಡಿದ ಭಾವಿಗಳಲ್ಲಿ ನೀರು ಬರುವುದೇ ಕಷ್ಟ. ನಮ್ಮ ಸೀಮೆಯ ಶಿವಮೊಗ್ಗಾ ಪ್ರಾಂತ ಈ ತೆರನಾದುದು.

ಸುಣ್ಣಶಿಲೆ—ಅಮೃತಶಿಲೆ ಈ ಜಾತಿಗೆ ಸೇರಿದೆ. ನಾನಾ ಬಣ್ಣಗಳ ಅಮೃತ ಶಿಲೆಗಳೂ ಇರುತ್ತವೆ. ಇವನ್ನು 'ಡಾಲೊಮೈಟ್' ಎಂದು ಕರೆಯುತ್ತಾರೆ. ಸುಣ್ಣ ಶಿಲೆಗಳೂ ಸಹ ರೂಪಾಂತರಶಿಲೆಗಳು. ಹೆಚ್ಚು ಪ್ರಮಾಣದಲ್ಲಿ ರೂಪಾಂತರವಾಗಿದ್ದರೆ ಶಿಲೆಯ ಕಣಗಳು ಬಹು ಒತ್ತಾಗಿದ್ದು ರಂಧ್ರಗಳು ಕಡಮೆಯಾಗಿರುತ್ತವೆ. ರೂಪಾಂತರ ಸಾಮಾನ್ಯವಾಗಿ ಕಡಮೆ ದರ್ಜೆಯಾಗಿದ್ದರೆ ಅಂತಹ ಶಿಲೆಗಳಲ್ಲಿ ಹೆಚ್ಚು ರಂಧ್ರಗಳಿದ್ದು ನೀರಿನ ಹೀರುವಿಕೆ ಸಹ ಹೆಚ್ಚಾಗಿರುತ್ತದೆ. ಇದೂ ಅಲ್ಲದೆ ಭೂಮಟ್ಟದಿಂದ ಕೆಳಭಾಗದಲ್ಲಿರುವ ಸುಣ್ಣಶಿಲೆಗಳಲ್ಲಿ ಅನೇಕ ಬಿರುಕುಗಳೂ, ಸಂದುಗಳೂ ಹೇರಳವಾಗಿದ್ದು ನೀರು ಶೇಖರವಾಗುತ್ತದೆ. ಒಟ್ಟಿನಲ್ಲಿ ಸುಣ್ಣಶಿಲೆಯಿಂದ ಆವೃತವಾದ ಭೂಮಿಯಲ್ಲಿ ಕೊಂಚ ಹೆಚ್ಚು ಆಳಕ್ಕೆ ಹೋದರೆ ಜಲವಸತಿಗೆ ಅಷ್ಟು ತೊಂದರೆಯಾಗಲಾರದು.

ನಮ್ಮ ಸೀಮೆಯ ಬಹುಭಾಗ ಕಣಶಿಲೆಯಿಂದ ಕೂಡಿದೆ. ಭೂಮಿಯ ಮೇಲೆ ಗುಡ್ಡಬೆಟ್ಟಗಳಂತೆ ಕಾಣುತ್ತದೆ. ಉಳಿದಕಡೆ ಒಳಗೇ ಹುದುಗಿರುತ್ತದೆ. ಇದು ಅಗ್ನಿಶಿಲೆ. ಪದರುಪದರುಗಳಾಗಿರುವುದಿಲ್ಲ. ಸಣ್ಣಸಣ್ಣ ಕಣಗಳಿಂದ ಕೂಡಿಕೊಂಡು ದೊಡ್ಡ ಬಂಡೆಗಳೋಪಾದಿಯಲ್ಲಿರುತ್ತದೆ. ಶಿಲೆಯ ಕಣಗಳು ದಪ್ಪನಾಗಿದ್ದರಂತೂ ನೀರು ಅಷ್ಟಾಗಿ ಇರುವುದಿಲ್ಲ. ಕೊಂಚ ಆಳಕ್ಕೆ ಹೋದರೆ ಬರುವ ಅಲ್ಪಸ್ವಲ್ಪ ನೀರೂ ನಿಂತುಹೋಗುವ ಪ್ರಮೇಯಗಳೇ ಹೆಚ್ಚು. ಇಂತಹ ಕಲ್ಲುಭೂಮಿಯಲ್ಲಿ ಭಾವಿ ತೋಡದಿರುವುದೇ ಲೇಸು. ಆದರೆ ಇವು ಸೂರ್ಯನ ಶಾಖ, ಗಾಳಿ, ಮಳೆಗಳ ಹಾವಳಿಗೆ ಒಳಗಾಗುವುದರಿಂದ ಅನೇಕ ಬಿರುಕುಗಳು ಹುಟ್ಟುತ್ತವೆ. ಭೂಮಿಯ ಒಳಗೂ ನಾನಾ ಕಾರಣಗಳಿಂದ ಈ ತೆರನಾದ ಲೆಕ್ಕವಿಲ್ಲದಷ್ಟು ಬಿರುಕುಗಳೂ ಉಂಟಾಗುತ್ತವೆ. ಇಂಥ ಕಣಶಿಲೆಗಳಿಂದ ಕೂಡಿದ ಜಲಾನಯನ ಪ್ರದೇಶದಲ್ಲಿ ಮಳೆ ಚೆನ್ನಾಗಿ ಬೀಳುತ್ತಿದ್ದರೆ ತೋಡಿದ ಭಾವಿಗಳಲ್ಲೂ ಸಹ ನೀರೂ ಯಾವ ತೊಂದರೆಯೂ ಇಲ್ಲದೆ ದೊರೆಯುತ್ತದೆ. ಅಲ್ಲದೆ ದೊರೆಯುವ ನೀರೂ ಸಹ ಬಹು ಆರೋಗ್ಯಕಾರಿ. ಕಣಶಿಲೆಯ ಬೆಟ್ಟಗಳಲ್ಲೂ ಸಹ ಅನೇಕ ಚಿಲುಮೆಗಳು ಕಂಡುಬಂದಿವೆ. ಅಂದರೆ ಕಣಶಿಲೆ ಅವ್ಯಾಪ್ಯವಾಗಿದ್ದರೂ, ಅದರಲ್ಲಿ ಬಿರುಕುಗಳಿರುವುದರಿಂದ, ಗಾಳಿಯ ಮತ್ತು ನೀರಿನ ಹೊಡೆತಕ್ಕೆ ಸಿಕ್ಕಿ ಮಾರ್ಪಡುತ್ತಿರುವುದರಿಂದ ಅಂತರ್ಜಲ ಸುಲಭವಾಗಿ ಪಸರಿಸಿ ನೀರು ದೊರಕುತ್ತದೆ.

ಇಂಥ ಕಲ್ಲುಭೂಮಿಯಲ್ಲಿ ಅತಿ ಆಳವಾಗಿ ತೋಡುವುದರಿಂದ ನೀರು ಬರಲಾರದು. ಭಾವಿಗಳ ಆಳ ೨೦೦ ಅಡಿಗಳಿಗೆ ಮೀರಬಾರದು. ಈ ಆಳದವರೆಗೂ ಹೋಗಬಹುದು.

ಭೂಮಿಯಲ್ಲಿ ನೀರನ್ನು ಕಂಡುಹಿಡಿಯುವ ವಿಚಾರ ವೇದ, ಉಪನಿಷತ್ತುಗಳಲ್ಲಿ ಕೂಡ ಬರೆದಿದೆ. ಈ ವಿಚಾರ ಸಾಧನೆ ಮಾಡಿದವರಿಗೆ ಮೋಕ್ಷ ಉಂಟೆಂದು ಉಪನಿಷತ್ತುಗಳು ಹೇಳುತ್ತವೆ. ಬಹು ಪುರಾತನ ಬರಹ ವರಾಹಮಿಹಿರನದು. ಇವನು ಉಜ್ಜಯಿನಿ ಸಂಸ್ಥಾನದ ದೊಡ್ಡ ಪಂಡಿತ, ಖಗೋಲಶಾಸ್ತ್ರಜ್ಞ. ಸುಮಾರು ೨,೦೦೦ ವರ್ಷಗಳ ಹಿಂದಿದ್ದವನು. ಈತನು ತನ್ನ 'ಸಂಗ್ರಹಾರ್ಥ ಸೂಚಿಕೆ'ಯ ಎರಡು ಅಧ್ಯಾಯಗಳಲ್ಲಿ ಸಾರಸ್ವತಮುನಿ ಮೊದಲಾದವರು ಈ ವಿಷಯದಲ್ಲಿ ಪಟ್ಟ ಅಭಿಪ್ರಾಯವನ್ನು ವಿವರಿಸಿದ್ದಾನೆ. ಜ್ಯೋತಿಷ್ಯದಿಂದಲೂ ನೀರನ್ನು ಗುರುತಿಸಬಹುದೆಂದು ಹಲವರು ಅಭಿಪ್ರಾಯಪಡುತ್ತಾರೆ. ಇವರಲ್ಲನೇಕರು ವರಾಹಮಿಹಿರನ 'ಸಂಗ್ರಹಾರ್ಥ ಸೂಚಿಕೆ'ಯನ್ನೇ ಆಧಾರವಾಗಿಟ್ಟುಕೊಂಡಿದಾರೆನ್ನಬಹುದು. ಅಲ್ಲದೆ ನಮ್ಮ ದೇಶದಲ್ಲಿ ವಿಜ್ಞಾನದ ವಿಚಾರಗಳಿಗೆ ಅಷ್ಟಾಗಿ ಮನಸ್ಸು ಕೊಡದೆ ಕುರುಡುಗುರುತಿನಿಂದಲೋ, ದೈವಿಕ ಪ್ರೇರಣೆಯಿಂದಲೋ ಬಹುಮಂದಿ ಜಲವನ್ನು ಭೂಮಿಯ ಒಳಗೆ ಪತ್ತೆಹಚ್ಚಿದ್ದಾರೆ. ಯೂರೋಪಿನಲ್ಲಿ ಸಹ ಕ್ರಿ.ಶ. ೧೬ನೆ ಶತಮಾನದಿಂದೀಚೆಗೆ ಇಂಥ ಪವಾಡ ಪುರುಷರ ಮಾತು ಕೇಳಿಬರುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಸಹ ಇಂಥ ಅದ್ಭುತ ಸುದ್ದಿ ಕೇಳುತ್ತಲೇ ಇರುತ್ತೇವೆ. ಕೆಲವು ವರ್ಷಗಳ ಹಿಂದೆ ಸತಾರ ಜಿಲ್ಲೆಯಲ್ಲಿ ನೀರನ್ನು ಹುಡುಕುತ್ತಿದಾಗ ಒಬ್ಬ ಹುಡುಗಿ ಬಂದು ಒಂದು ಸ್ಥಳವನ್ನು ತೋರಿಸಿದಳಂತೆ. ಅಲ್ಲಿ ಯಂತ್ರವಿಟ್ಟು ನೋಡಲಾಗಿ ಮಿಕ್ಕ ಕಡೆಗಳಿಗಿಂತ ಚೆನ್ನಾಗಿ ನೀರಿರುವುದು ಕಂಡುಬಂತು. ಹುಡುಗಿಯನ್ನು ವಿಚಾರಿಸಲು 'ಏನೋ ನನಗೆ ಅಲ್ಲಿ ನೀರಿದೆ ಎನ್ನಿಸಿತು' ಎಂದಿಷ್ಟೇ ಹೇಳಿದಳು.

ಕೆಲವು ತಿಂಗಳ ಹಿಂದೆ ದೆಹಲಿ ಪ್ರಾಂತದಲ್ಲಿನ ನಿರಾಶ್ರಿತರ ಶಿಬಿರ ಒಂದರಲ್ಲಿ ನೀರಿಗೆ ಬಹು ತೊಂದರೆಯಾಯಿತಂತೆ. ಯಾವ ಯಂತ್ರಗಳಿಂದಲೂ ಫಲಕಾರಿಯಾಗಲಿಲ್ಲ. ಜನ ಹುಯ್ಯಲಿಟ್ಟರು. ಆಗ ಗೋಸಾವಿಯೊಬ್ಬನು ಬಂದು ಒಂದು ಸ್ಥಳವನ್ನು ತೋರಿಸಿದನಂತೆ. ಭಾವಿ ತೊಡಲು ನೀರು ಯಥೇಷ್ಟವಾಗಿ ದೊರಕಿ ಜನರ ಕಷ್ಟ ನಿವಾರಣೆಯಾಯಿತು. ರಾಜಾಸ್ಥಾನ್, ಸೌರಾಷ್ಟ್ರ ಈ ಸರ್ಕಾರಗಳು ಸಹ ಈ ತೆರನಾದ 'ಪಾನಿದಾದಾ,' 'ಪಾನಿಮಹರಾಜ್'ಗಳ ಆಶ್ರಯ ಪಡೆಯಿತು ಎಂಬುದನ್ನು ವೃತ್ತಪತ್ರಿಕೆಗಳಲ್ಲಿ ಓದಿದ ಜ್ಞಾಪಕ.

ಆಫ್ರಿಕಾಖಂಡದಲ್ಲಿ ಹದಿನಾಲ್ಕು ವರ್ಷದ ಬಾಲಕನಿದ್ದಾನೆ. ಅವನ ಕಣ್ಣಿಗೆ ಸಾಮಾನ್ಯರ ದೃಷ್ಟಿಗೆ ಅಗೋಚರವಾದ ಭೂಮಿಯಲ್ಲಿನ ಜಲವಸತಿ, ಖನಿಜಸಂಪತ್ತು

ಬಹು ಸ್ಪಷ್ಟವಾಗಿ ಕಂಡುಬರುತ್ತದಂತೆ. ಈತ ಅನೇಕ ಗಣಿ ಕಂಪೆನಿಗಳಿಗೆ ಖನಿಜಗಳನ್ನು ಹುಡುಕಿಕೊಟ್ಟಿದ್ದಾನೆ. ನೂರಾರು ಭಾವಿಗಳ ದಾತನಾಗಿದ್ದಾನೆ.

ಇನ್ನು ಕೆಲವರು ಒಂದು ಬಗೆಯ ಕವಲುಗೋಲನ್ನು ಹಿಡಿದುಕೊಂಡು ಅದರ ಸಹಾಯದಿಂದ ನೀರನ್ನು ಪತ್ತೆಹಚ್ಚುತ್ತಾರೆ. ಪ್ರೊ॥ ಜೆ. ಡಬ್ಲ್ಯು. ಗ್ರಿಗರಿ ಅವರು ಈ ವಿಚಾರವಾಗಿ ಹೆಚ್ಚು ಅಧ್ಯಯನಮಾಡಿ ದೊಡ್ಡ ಗ್ರಂಥವನ್ನೇ ಬರೆದಿದ್ದಾರೆ. ಪುರಾತನಕಾಲದಿಂದ ಈ ವಿಧಾನ ಯೂರೋಪಿನಲ್ಲಿತ್ತಂತೆ. ಸುಮಾರು ಐವತ್ತು ವರ್ಷಗಳ ಹಿಂದೆ ಇದರ ಅಧ್ಯಯನಕ್ಕೆ ಜರ್ಮನ್ ಸರ್ಕಾರ ವಿಶೇಷ ಪ್ರೋತ್ಸಾಹವನ್ನಿತ್ತಿತು. ಕವಲುಗೋಲು ಹತ್ತರಿಂದ ಹದಿನಾಲ್ಕು ಇಂಚು ಉದ್ದವಾಗಿಯೂ ಕಾಲು ಅಂಗುಲ ದಪ್ಪನಾಗಿಯೂ ಒಂದು ತುದಿಯಲ್ಲಿ ಕವಲಾಗಿ (ಕೆಲವು ಅಂಗುಲದಷ್ಟು) ಒಡೆದಿರುತ್ತದೆ. ಸಾಮಾನ್ಯವಾಗಿ ಹೇಸಲ್ (Hazel twig) ಎಂಬ ಜಾತಿಯ ಬಳ್ಳಿಯಿಂದ ಇದನ್ನು ಮಾಡುತ್ತಾರೆ. ಇದು ಇಲ್ಲದಿದ್ದ ಪಕ್ಷದಲ್ಲಿ ಮತ್ತಾವುದಾದರೂ ಜಾತಿಯ ಬಳ್ಳಿಯಿಂದ ಕವಲುಗೋಲನ್ನು ಮಂತ್ರವಾದಿ ಮಾಡುತ್ತಾನೆ. ಕೋಲು ಮಾತ್ರ ಹೊಸದಾಗಿಯೇ ಇದ್ದು ಸುಲಭವಾಗಿ ಬಗ್ಗುವಂತಿರಬೇಕು. ತುದಿಯನ್ನು ಮೇಲಕ್ಕೆ ಎತ್ತಿ ಕವಲುಗೋಲನ್ನು ಭದ್ರವಾಗಿ ಹಿಡಿದು ಮಂತ್ರವಾದಿಯು ಓಡಾಡಿದರೆ ಅಂತರ್ಜಲ ಹುದುಗಿರುವ ಕಡೆಗೇನೇ ಅದು ಬಗ್ಗುತ್ತದೆ. ಅಂತರ್ಜಲ ಮಾಯವಾದಾಗ ಅದು ಮೊದಲಿನಂತೆ ನೆಟ್ಟಗಾಗುತ್ತದೆ.

ಕೆಲವು ಮಂತ್ರವಾದಿಗಳು ತಂತಿಯನ್ನೋ, ಗಡಿಯಾರದ ಸ್ಪ್ರಿಂಗ್ ಅನ್ನೋ ಉಪಯೋಗಿಸುತ್ತಾರೆ. ಇದನ್ನು ಹಿಡಿದು ಓಡಾಡುವಾಗಲೂ ಸಹ ಅವು ಭೂಮಿಯಲ್ಲಿ ಜಲ ಸೇರಿಕೊಂಡಿರುವ ಕಡೆ ಮಾತ್ರ ಸೂಚ್ಯಾರ್ಥವಾಗಿ ಬಗ್ಗುತ್ತವಂತೆ. ಯೂರೋಪಿನ ಅನೇಕ ದೇಶಗಳಲ್ಲಿ ಮಧ್ಯಶತಮಾನಗಳಲ್ಲಿ ಈ ತೆರನಾದ ಸೂಚಿಗಳ ಸಹಾಯದಿಂದ ಭೂಮಿಯಲ್ಲಿನ ನೀರು, ಖನಿಜ, ಹಣ, ಸಂಪತ್ತು, ಕೊಲೆಮಾಡಿದವರನ್ನೂ ಸಹ ಪತ್ತೆಹಚ್ಚುತ್ತಿದ್ದರಂತೆ.

ಇನ್ನು ಕೆಲವುಮಂದಿಗೆ ಭೂಮಿಯ ಮೇಲೆ ನಿಂತುಕೊಂಡಮಾತ್ರ ಜಲ ಹುದುಗಿರುವುದು ಭಾಸವಾಗುತ್ತಂತೆ. ಭೂಮಿಯಲ್ಲಿ ನೀರಿದ್ದರೆ ಅಂಥವರ ದೇಹದಲ್ಲಿ ಒಂದುಬಗೆಯ ಕಂಪನವಾಗುತ್ತದಂತೆ. ಖನಿಜವಿದ್ದರೆ ಮತ್ತೊಂದು, ಹಣವಿದ್ದರೆ ಮಗದೊಂದು ತೆರನಾದ ಕಂಪನ. ಹೀಗೆ ಹಲವರು ಬರಿಗೈಯಲ್ಲೇ ಭೂಮಿಯ ಮೇಲೆ ಓಡಾಡಿ ಹೇಳುತ್ತಾರೆ.

ಪ್ರಾಣಿಗಳು ಯಾವಾಗಲೂ ಜಲವಸತಿ ಇರುವ ಕಡೆ ವಾಸಿಸುತ್ತವೆ. ನಮ್ಮಂತೆ ಅವು ನೀರನ್ನು ಶೇಖರಿಸಿಟ್ಟುಕೊಳ್ಳಲಾರವು. ಈ ಕಾರಣದಿಂದ ನೀರು

ಎಷ್ಟೇ ದೂರವಿದ್ದರೂ ಅವು ಪತ್ತೆಹಚ್ಚಬಲ್ಲವು. ಜಿರಾಫೆ, ಎಮ್ಮೆ, ಕುದುರೆ, ಕುರಿ ಮೊದಲಾದವು ಸುಮಾರು ಎಂಟು ಮೈಲಿ ದೂರದಲ್ಲಿರುವ ಜಲಾಶಯವನ್ನು ತಿಳಿಯಬಲ್ಲವು. ಈ ಅಂಶವನ್ನು ಉಪಯೋಗಿಸಿಕೊಂಡು ಇಂಡಿಯಾದೇಶದ ಕೆಲವು ಜನರು ಅಂತರಗಂಗೆಯನ್ನು ಪತ್ತೆಹಚ್ಚುತ್ತಾರಂತೆ. ಭಾವಿ ತೋಡಬೇಕಾದ ಪ್ರದೇಶದಲ್ಲಿ ಕುರಿಮಂದೆಯೊಂದನ್ನು ಕೂಡಿಹಾಕುತ್ತಾರೆ. ಎಷ್ಟು ದಿನಗಳಾದರೂ ಅವುಗಳಿಗೆ ನೀರನ್ನೇ ಕೊಡುವುದಿಲ್ಲ. ಬಾಯಾರಿ ಬಸವಳಿದ ಆ ಪ್ರಾಣಿಗಳು ನೀರಿಗೆ ಅಲೆದಾಡಿ ಭೂಮಿಯನ್ನೆಲ್ಲಾ ಮೂಸಿನೋಡುತ್ತಾ ಕೊನೆಗೆ ಯಾವುದಾದರೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಮೂತಿಯನ್ನು ಊರಿ ಗುಂಪುಕಟ್ಟಿಕೊಳ್ಳುತ್ತವಂತೆ! ಆಗ ಅಲ್ಲಿ ಭಾವಿ ತೋಡಿದರೆ ಜಲ ಬರುತ್ತದಂತೆ. ಇನ್ನು ಕೆಲವರು ನೀರುಹಕ್ಕಿಗಳು ವಾಸಿಸುವ ಕಡೆ ಜಲವನ್ನು ಪತ್ತೆಹಚ್ಚುತ್ತಾರೆ. ಕಪ್ಪೆ ಗೂಡುಮಾಡಿಕೊಂಡಿದ್ದರೆ ಜಲವಿದ್ದೇ ಇರುತ್ತದಂತೆ! ಭಾವಿಯನ್ನು ತೋಡುವಾಗ ಕಪ್ಪೆ ಕಂಡುಬಂದರೆ ನೀರು ಇದ್ದೇ ಇದೆ ಎಂಬುದನ್ನು ನಾವು ಅನೇಕ ಸಲ ಕೇಳಿದ್ದೇವೆ. ಅಲ್ಲದೆ ತಂಪಿರುವ ಸ್ಥಳಗಳಲ್ಲಿ ಕೆಲವು ಇರುವೆಗಳು ದೊಡ್ಡ ಹುತ್ತಗಳನ್ನು ಕಟ್ಟುತ್ತವಂತೆ. ಇದು ಸಹ ಅನೇಕವೇಳೆ ಭೂಮಿಯಲ್ಲಿನ ಜಲವನ್ನು ಕಂಡುಹಿಡಿಯುವುದಕ್ಕೆ ಸಹಕಾರಿಯಾಗುತ್ತದೆ.

ನೀರಿನ ವಸತಿಗನುಗುಣವಾಗಿ ಬಗೆಬಗೆಯ ಸಸ್ಯಗಳು ಬೆಳೆಯುತ್ತವೆ. ವರಾಹಮಿಹಿರನಪ್ರಕಾರ ನೇರಿಳೆ, ಅತ್ತಿ, ಬೋರೆ ಮುಂತಾದ ಗಿಡಗಳಿಗೂ ಜಲಕ್ಕೂ ಸಂಬಂಧವುಂಟು. ಇವುಗಳು ಬಹು ಆಳಕ್ಕೆ ಬೇರುಬಿಟ್ಟು ಜಲವನ್ನು ಹೀರಿಕೊಳ್ಳುತ್ತವೆ. ಬಹುಶಃ ಮಾರವಾರ ಪ್ರಾಂತವನ್ನು ಅಧ್ಯಯನಮಾಡಿ ಇದನ್ನು ಬರೆದಂತೆ ತೋರುತ್ತದೆ. ಹುಲ್ಲು, ಜೊಂಡು ಮುಂತಾದ ತಂಪನ್ನು ಬಯಸುವ ಸಸ್ಯಗಳ ವಿಚಾರವನ್ನೂ ಬರೆದಿದ್ದಾನೆ. ಇಂಥ ಪ್ರದೇಶಗಳಲ್ಲಿ ಭಾವಿಯನ್ನು ಅಷ್ಟು ಆಳಕ್ಕೆ ತೋಡಬೇಕಾದ ಪ್ರಮೇಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾನೆ.

ಇದೇ ಅಲ್ಲದೆ ಸಸ್ಯಗಳು ಎಷ್ಟು ಆಳದಲ್ಲಿ ಜಲ ಸಿಕ್ಕಬಹುದೆಂಬುದನ್ನೂ ಸಹ ಸೂಚಿಸುತ್ತವೆ. ಇವುಗಳ ಬೇರು ಜಲಮಟ್ಟ ದೊರೆಯುವವರೆಗೂ ಬೆಳೆಯುತ್ತಾ ಹೋಗಿ ಅದನ್ನು ಮುಟ್ಟುತ್ತದೆ. ನಮ್ಮ ದೇಶದ ತೇಗ ಈ ಜಾತಿಗೆ ಸೇರಿದುದು. ತೇಗದ ಮರದ ಬೇರು ಸರಿಯಾದ ನೀರಿನ ಆಸರೆಯನ್ನು ತಂಗುವವರೆಗೂ ಗಿಡದ ಬೆಳವಣಿಗೆಯೇ ಆಗುವುದಿಲ್ಲ. ಬೇರು ಜಲಮಟ್ಟವನ್ನು ಹೊಕ್ಕಕೂಡಲೇ ಕಾಂಡ ದಪ್ಪನಾಗಿ ಬೆಳೆದು ಮರ ದೊಡ್ಡದಾಗುತ್ತದೆ. ಸಾಧಾರಣವಾಗಿ ಐವತ್ತು ಅಡಿ ಆಳದಲ್ಲಿರುವ ಜಲಮಟ್ಟವನ್ನು ಸಸ್ಯಗಳು ಮುಟ್ಟಬಲ್ಲವು. ಒಂದು ಸುಣ್ಣಶಿಲೆಯ ಭೂಭಾಗವನ್ನು ಶೋಧಿಸಿದಾಗ ಅಲ್ಲಿಯ ಮರ ತನ್ನ ಮುಖ್ಯಬೇರನ್ನು ನೂರು

ಅಡಿಯ ಆಳದವರೆಗೂ ಬೆಳೆಸಿಕೊಂಡು ಜಲಮಟ್ಟವನ್ನು ಮುಟ್ಟಿದುದು ಕಂಡುಬಂತು. ಹೀಗೆ ಸಸ್ಯವರ್ಗಗಳ ಬೇರುಗಳ ಉದ್ದವನ್ನು ಗೊತ್ತುಮಾಡಿ—ಜಲಮಟ್ಟದ ಆಳವನ್ನೂ ಕಂಡುಹಿಡಿಯಬಹುದು.

ಮೆಯಿನ್‌ಸ್ಟರ್ ಎಂಬುವರು ಅಮೆರಿಕದ ಸಸ್ಯವರ್ಗಗಳನ್ನು ವಿಶೇಷವಾಗಿ ಅಧ್ಯಯನಮಾಡಿ, ಅವು ಹೇಗೆ ಜಲವನ್ನು ಕಂಡುಹಿಡಿಯುವುದರಲ್ಲಿ ಸಹಕಾರಿಯಾಗಿವೆ ಎಂಬುದನ್ನು ಪತ್ತೆಹಚ್ಚಿದ್ದಾರೆ.

ಜೇಲಿಗಳು ಮತ್ತು ಪೊದೆಗಳು (Rushes and Sedges)—ಇವು ಇರುವ ಕಡೆ ಭೂಮಿಯ ಮೇಲ್ಭಾಗದಲ್ಲೇ ನೀರಿನ ವಸತಿ ಇರುತ್ತದೆ. ಸುಮಾರು ಎಂಟು ಅಡಿಗಳ ಆಳದಲ್ಲಿ ಜಲಮಟ್ಟವನ್ನು ಗುರುತಿಸಬಹುದು.

Giant Wild Rye—ಜಲಮಟ್ಟದ ಆಳ ಸುಮಾರು ಹನ್ನೆರಡು ಅಡಿಗಳು.

Salt Grass—ಆಳ ಸುಮಾರು ಹದಿನೈದು ಅಡಿ.

Arrow Weed—ಎಂಬ ಬಳ್ಳಿ—ಹತ್ತರಿಂದ ಇಪ್ಪತ್ತೈದು ಅಡಿ ಆಳದಲ್ಲಿ ಜಲಮಟ್ಟವಿರುತ್ತದೆ.

'ಅಕೇಸಿಯಾ' (Acacia) ಎಂಬ ಜಾತಿಯ ಸಸ್ಯವರ್ಗದ ಸಹಾಯದಿಂದ ಆಫ್ರಿಕಾಖಂಡದ ಅನೇಕ ಮರುಭೂಮಿಗಳಲ್ಲಿ ನೀರನ್ನು ಕಂಡುಹಿಡಿಯಲು ಬಹು ಸಹಾಯವಾಗಿದೆ. ಅಲ್ಲದೆ ಮರುಭೂಮಿಯಲ್ಲಿ ಬೆಳೆಯುವ ಒಂದು ಜಾತಿಯ ಹುಲ್ಲೂ ಸಹ ಉತ್ತಮ ಸೂಚಿಯಾಗಿದೆ.

ಈ ತೆರನಾಗಿ ಸಸ್ಯವರ್ಗಗಳು ಭೂಮಿಯಲ್ಲಿನ ಅಂತರಗಂಗೆಯನ್ನು ಕಂಡುಹಿಡಿಯಲು ಬಹು ಉಪಯುಕ್ತವಾಗಿವೆ.

ಈಚಿನ ವರ್ಷಗಳಲ್ಲಿ ವಿಜ್ಞಾನಿಗಳು ಜಲವನ್ನು ಗುರುತುಹಿಡಿಯಲು ಯಂತ್ರಗಳನ್ನು ತಯಾರಿಸಿದ್ದಾರೆ. ಈ ಯಂತ್ರಗಳನ್ನು ಉಪಯೋಗಿಸುವ ಮೊದಲು ಆ ಪ್ರದೇಶದಲ್ಲಿ ಬೀಳುವ ಮಳೆ, ಅದರ ಪ್ರಮಾಣ, ಹರಡಿರುವ ವಿಸ್ತಾರ ಮಳೆಗಾಲದ ಅವಧಿ—ಈ ಅಂಶಗಳನ್ನೂ ಪರಿಶೀಲಿಸಬೇಕು. ಇದಕ್ಕಿಂತ ಮುಖ್ಯವಾಗಿ ಉಪಯೋಗಿಸುವವನಿಗೆ ಭೂವಿಜ್ಞಾನದ ಪರಿಚಯ ಸಾಕಷ್ಟು ಆಗಿರಬೇಕು. ಇದರಿಂದ ಭೂಮಿಯ ಮೇಲುಮೈ ಲಕ್ಷಣ, ಭೂವಿನ್ಯಾಸ, ಇಳಿಜಾರೇ ಅಥವಾ ಮಟ್ಟವೇ, ಭೂಮಿಯೊಳಗಿನ ಮಣ್ಣಿನ ಕಲ್ಲಿನ ಸ್ವಭಾವವೇನು—ಎಂಬುದನ್ನು ಅರಿಯಬೇಕು. ಈ ಯಂತ್ರಗಳನ್ನು ಜವುಗುಪ್ರದೇಶದಲ್ಲಿ, ಮರಗಳ ಹತ್ತಿರ, ದೊಡ್ಡ ಕಟ್ಟಡಗಳ ಸಮೀಪದಲ್ಲಿ ಇಡಬಾರದು. ಇವುಗಳ ಮೂಲಕ ವಿದ್ಯುತ್ತನ್ನು ಭೂಮಿಯ ಒಳಕ್ಕೆ ಕಳುಹಿಸುತ್ತಾರೆ. ವಿದ್ಯುತ್‌ಶಕ್ತಿಯ ಅಲೆಗಳು ಬಂದ ತಡೆಗಳನ್ನು ದಾಟಿಕೊಂಡು

ಹೋಗಬೇಕಾಗುವುದು. ಹೀಗಾದಾಗ ಕಂಪನಗಳುಂಟಾಗುತ್ತವೆ. ಕಂಪನಗಳನ್ನೆಲ್ಲಾ ಯಂತ್ರದ ಮೂಲಕ ಅಳೆದು ಗುರುತಿಸುತ್ತಾರೆ. ಆದಕಾರಣ ಸಲಕರಣೆ ವಿದ್ಯುತ್ತಿನ ಪ್ರವಾಹದಿಂದಲೂ, ಕಬ್ಬಿಣದ ಕಂಬ ಮೊದಲಾದ ಪದಾರ್ಥಗಳಿಂದಲೂ ದೂರ ವಾಗಿರಬೇಕು. ಅಲ್ಲದೆ ಮಣ್ಣಿನ ಶಾಖ ಸಹ ಇದರ ಕೆಲಸದಲ್ಲಿ ಅಡ್ಡಿ ತಂದೊಡ್ಡು ತ್ತದೆ. ದಖನ್ ಪ್ರಸ್ಥಭೂಮಿಯಲ್ಲಿ ಶ್ರೀ ಎನ್. ಡಿ. ಆಪ್ಟೆಯವರು ಪ್ರಯೋಗ ಗಳನ್ನು ನಡೆಸಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. 'ಫ್ಯಾರನ್ ಹೀಟ್ ೧೦೦° ಅಥವಾ ಸೆಂಟಿಗ್ರೇಡ್ ೩೮°ಗಿಂತ ಶಾಖವು ಹೆಚ್ಚಾಗಿದ್ದರೆ ಯಂತ್ರ ಸರಿಯಾಗಿ ಕೆಲಸಮಾಡುವುದಿಲ್ಲ. ಫ್ಯಾರನ್ ಹೀಟ್ ೮೫° ಅಥವಾ ಸೆಂಟಿಗ್ರೇಡ್ ೨೯°ಗಿಂತ ಕಡಮೆಯಾದರೂ ಅಷ್ಟೇ' ಸಾಧಾರಣವಾಗಿ ನೀರನ್ನು ಕಂಡುಹಿಡಿಯಲು 'ಮ್ಯಾನ್ಸ್ ಫೀಲ್ಡ್' ಮತ್ತು 'ಸ್ಮಿತ್' ಎಂಬ ಎರಡು ಬಗೆಯ ಸಲಕರಣೆಗಳನ್ನು ಉಪಯೋಗಿಸುತ್ತಾರೆ. ಈ ಎರಡು ಯಂತ್ರಗಳೂ ಭೂಮಿಯಲ್ಲಿನ ಶಕ್ತಿಪ್ರವಾಹಗಳ ಆಧಾರದ ಮೇಲೆ ರಚಿತವಾಗಿವೆ. ಒಟ್ಟಿನಲ್ಲಿ ಇವನ್ನು ಉಪಯೋಗಿಸುವವನಿಗೆ ನಿರ್ದಿಷ್ಟವಾದ ಭೂವಿಜ್ಞಾನಶಾಸ್ತ್ರ ಮತ್ತು ಭೌತಶಾಸ್ತ್ರದ ಪರಿಚಯವಿರಬೇಕಾದುದು ಅತ್ಯಾವಶ್ಯಕ.

ಈ ತತ್ವಗಳ ಆಧಾರದಮೇಲೆ ಮೈಸೂರು ಭೂವಿಜ್ಞಾನಶಾಖೆಯವರೂ ಸಹ ದೇಶದ ಅನೇಕ ಕಡೆ ಜಲವನ್ನು ಪತ್ತೆಹಚ್ಚಿ 'ಬೋರ್ ವೆಲ್'ಗಳನ್ನು ತೋಡಿಸಲು ಸಹಾಯಮಾಡಿದ್ದಾರೆ. ಚಿತ್ರದುರ್ಗ, ಮಾಲೂರು ಮುಂತಾದ ಊರುಗಳಲ್ಲಿ ನೀರಿಗಿದ್ದ ಕಷ್ಟವನ್ನು ನಿವಾರಣೆಮಾಡಿದ್ದಾರೆ.

ಭೂಮಿಯ ಒಳಗೆ ನಿಧಿಯಂತೆ ಹೂತಿಟ್ಟಿರುವ ನೀರನ್ನು ಮನುಷ್ಯ ತನ್ನ ಉಪಯೋಗಕ್ಕಾಗಿ ಹೊರತೆಗೆಯಲೇಬೇಕು. ಹೀಗೆ ತೋಡಿದ ಕೂಪಗಳಿಗೆ ಭಾವಿ ಎನ್ನುತ್ತೇವೆ. ಭಾವಿಗಳು ಸಾಮಾನ್ಯವಾಗಿ ಗುಂಡಾಗಿರುತ್ತವೆ. ಕೆಲವು ಚಚ್ಚೌಕ ವಾಗಿರುವುದೂ ಉಂಟು. ಈ ರೀತಿ ತೋಡುವ ಮೊದಲು ಭೂವಿನ್ಯಾಸ, ಮೇಲುಮೈ ಲಕ್ಷಣ, ಕಲ್ಲುಮಣ್ಣಿನ ಗುಣವಿಶೇಷಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ನೀರು ದೊರೆಯಲಿಲ್ಲವೆಂದು ಸುಮ್ಮನೆ ಬಹು ಆಳಕ್ಕೆ ಭಾವಿಯನ್ನು ತೋಡುವು ದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಅಲ್ಲದೆ ಭಾವಿಯಲ್ಲಿನ ನೀರಿನ ಆಳ ಸಹ ಒಂದೇ ಸಮನಾಗಿರುವುದಿಲ್ಲ. ನಾನಾ ಕಾರಣಗಳಿಂದ ಜಲಮಟ್ಟದಲ್ಲಿ ಏರುತಗ್ಗುಗಳಾಗುತ್ತಿರುತ್ತವೆ. ಸಾಮಾನ್ಯವಾಗಿ ಬೇಸಗೆಯಲ್ಲಿ ಮಳೆ ಕಡಮೆಯಾಗಿ ಜಲಮಟ್ಟ ಬಹು ಆಳಕ್ಕೆ ಕುಗ್ಗಿಹೋಗುತ್ತದೆ. ಅನೇಕ ವೇಳೆ ಭೂಕಂಪಗಳಾಗುವು ದರಿಂದ ಜಲಮಟ್ಟ ಸಂಪೂರ್ಣವಾಗಿ ಮಾಯವಾಗುತ್ತದೆ. ಇದೇ ರೀತಿ ಮಳೆ

ಚೆನ್ನಾಗಿ ಬಂದ ಕಾಲದಲ್ಲಿ ಕುಗ್ಗಿಹೋದ ಜಲಮಟ್ಟ ತಾನೇ ತಾನಾಗಿ ಮೇಲಕ್ಕೆ ಬರುತ್ತದೆ. ಇಂತಹ ವ್ಯತ್ಯಾಸಗಳಲ್ಲಿ ಭೂಮಿಯಲ್ಲಿನ ಕಲ್ಲುಮಣ್ಣುಗಳು ವಿಶೇಷ ಪಾತ್ರವನ್ನು ವಹಿಸುತ್ತವೆ. ಭೂಮಿ ಸರಂಧ್ರ ಮತ್ತು ವ್ಯಾಪ್ಯಶಿಲೆಗಳಿಂದ ಕೂಡಿದ್ದರೆ ಏರುತಗ್ಗುವಿಕೆಗೆ ಅಷ್ಟುಕಾಲ ಬೇಕಾಗಲಾರದು. ಕಲ್ಲು ಗಡುಸಾಗಿದ್ದು ಅವ್ಯಾಪ್ಯವಾಗಿದ್ದರೆ ಬದಲಾವಣೆಯಾಗಲು ಕೊಂಚ ಹೆಚ್ಚುಕಾಲವೇ ಬೇಕಾಗುತ್ತದೆ. ಈ ಕಾರಣದಿಂದ ಕೆಲವು ಭಾಗಗಳಲ್ಲಿ ಬೇಸಗೆಯಲ್ಲಿ ನೀರು ಸಮೃದ್ಧಿಯಾಗಿದ್ದು ಮಳೆಗಾಲ ಬಂದಂತೆ ಕಡಮೆಯಾಗುತ್ತದೆ.

ಅಲ್ಲದೆ ವಾಯುಮಂಡಲದ ಒತ್ತಡದಲ್ಲಿ ಆಗಾಗ ಉಂಟಾಗುವ ಬದಲಾವಣೆಗಳು, ಹವಾಗುಣ, ಸಮುದ್ರದ ಏರಿಳಿತಗಳೂ ಸಹ ಜಲಮಟ್ಟದ ಏರುತಗ್ಗುವಿಕೆಗೆ ಕಾರಣವಾಗುತ್ತವೆ. ಸುತ್ತಮುತ್ತಲ ಸಸ್ಯವರ್ಗಗಳೂ ಸಹ ವಿಶೇಷ ಪರಿಣಾಮವನ್ನುಂಟುಮಾಡಬಲ್ಲವು.

ಒಂದೇ ಜಲಾಸಯನ ಪ್ರದೇಶದಲ್ಲಿ ಭಾವಿಗಳನ್ನು ಹತ್ತಿರ ಹತ್ತಿರ ತೋಡಲೇ ಬಾರದು. ಅವು ದೂರವಿದ್ದಷ್ಟೂ ಒಳ್ಳೆಯದು, ನೀರು ಸಮೃದ್ಧಿಯಾಗಿ ದೊರೆಯುತ್ತದೆ. ಕಾರಣ ಆ ಪ್ರದೇಶದ ಎಲ್ಲ ಭಾವಿಗಳಿಗೂ ಒಂದೇ ಜಲಮಟ್ಟದಿಂದ ನೀರು ಬರುತ್ತಿರುತ್ತದೆ. ಭಾವಿಗಳ ಪರಸ್ಪರ ದೂರ ೨೫-೫೦ ಅಡಿಗಳಾದಲ್ಲಿ ನೀರು ಅಷ್ಟು ಹೆಚ್ಚಾಗಿ ಸರಬರಾಯಿ ಆಗಲಾರದು. ಕಡೆಯ ಪಕ್ಷ ೩೦೦-೪೦೦ ಅಡಿಗಳಷ್ಟಾದರೂ ದೂರದಲ್ಲಿರಬೇಕು. ಭಾವಿಗಳನ್ನು ತೋಡುವ ಮೊದಲೇ ಈ ಅಂಶವನ್ನು ನಿರ್ಧರಿಸುವುದು ಕೊಂಚ ಕಷ್ಟವೇ.

ಭಾವಿಯ ಒಳಗೆ ಬೆಳೆದುಕೊಳ್ಳುವ ಗಿಡಗೆಂಟೆಗಳನ್ನು ಆಗಾಗ ತೆಗೆಯದೆ ಹಾಗೇ ಬಿಟ್ಟಲ್ಲಿ ನೀರಿನ ಉತ್ಪನ್ನ ಬಹುಮಟ್ಟಿಗೆ ಕಡಮೆಯಾಗುವ ಸಂಭವವೂ ಉಂಟು.

ಅನೇಕ ವೇಳೆ ನೀರಿಗೆ ತೊಂದರೆಯಾದಾಗ ಆಳವನ್ನು ಕೊಂಚ ಹೆಚ್ಚು ಮಾಡುವುದರಿಂದ ನೀರು ಸರಾಗವಾಗಿ ಬರುತ್ತದೆ. ಕೆಲವು ಪ್ರದೇಶಗಳ ಭಾವಿಗಳಲ್ಲಿ ಮೇಲುಭಾಗ ಮಾತ್ರ ವ್ಯಾಪ್ಯಶಿಲೆಗಳಿಂದ ಕೂಡಿದ್ದು ಕೆಳಕ್ಕೆ ಹೋದಂತೆಲ್ಲಾ ಗಟ್ಟಿ ಕಲ್ಲು ಸಿಕ್ಕುತ್ತದೆ. ಇಂತಹ ಭಾವಿಗಳಲ್ಲಿ ನೀರು ಕಡಮೆಯಾದಾಗ ಆಳವನ್ನು ಹೆಚ್ಚಿಸಿದರೆ ಏನೂ ಪ್ರಯೋಜನವಾಗಲಾರದು. ಅದರ ಬದಲು ಬಾವಿಯ ಅಗಲವನ್ನು ಹೆಚ್ಚಿಸಿದಲ್ಲಿ ನೀರಿನ ಉತ್ಪನ್ನ ಹೆಚ್ಚುತ್ತದೆ.

ಗಟ್ಟಿನೆಲದಲ್ಲಿ ಭಾವಿಗಳನ್ನು ತೋಡಲು ಡೈನಮೈಟ್ ಮೊದಲಾದ ಸಾಧನಗಳನ್ನು ಉಪಯೋಗಿಸಬೇಕು. ಈ ರೀತಿ ತೋಡಿದ ಭಾವಿಗಳ ಒಳಗಡೆ ಸುತ್ತಲೂ ಇಟ್ಟಿಗೆ

ಗಾರೆಗಳಿಂದಾಗಲೀ, ಕಲ್ಲಿನಿಂದಾಗಲೀ, ಸಿಮೆಂಟು ಕಾಂಕ್ರೀಟಿನಿಂದಾಗಲೀ ಸರಿಯಾಗಿ ಭದ್ರಪಡಿಸಬೇಕು. ಇದರ ಬದಲು ಮರದ ತೊಲೆಗಳನ್ನೂ, ದಿಮ್ಮಿಗಳನ್ನೂ ಸಹ ಉಪಯೋಗಿಸಬಹುದು.

ಅನೇಕ ಭಾವಿಗಳಲ್ಲಿ ದುರ್ನಾತ ಬರುತ್ತದೆ. ಇದಕ್ಕೆ ಭೂಗರ್ಭದಲ್ಲಿನ ಕೆಟ್ಟ ಅನಿಲಗಳು, ಮುಖ್ಯವಾಗಿ ಇಂಗಾಲಾಮ್ಲವೇ ಕಾರಣ. ಈ ವಾಸನೆಯನ್ನು ಹೋಗಲಾಡಿಸಲು ಭಾವಿಗೆ ಯಥೇಚ್ಛವಾದ ಗಾಳಿ ಬೆಳಕು ಬರುವಂತೆ ಮಾಡಬೇಕು. ಭಾವಿಯನ್ನು ಮೈದಾನದಲ್ಲಿ ತೋಡಿದರಂತೂ ಅತ್ಯುತ್ತಮ. ಅಲ್ಲಿಗೂ ಹೋಗದಿದ್ದರೆ ಶುದ್ಧವಾದ ವಾಯುವನ್ನು ಪಂಪುಗಳ ಮೂಲಕ ಒಳಕ್ಕೆ ಕಳುಹಿಸಬೇಕು.

ಪೊಳ್ಳುನೆಲದಲ್ಲಿ ಭಾವಿಗಳನ್ನು ತೋಡುವ ಕ್ರಮವೇ ಬೇರೆ. ನೆಲ ಅಷ್ಟು ಗಟ್ಟಿಯಾಗಿಲ್ಲದಿರುವುದರಿಂದ ಸಾಮಾನ್ಯದ ಭಾವಿಗಳಂತೆ ತೋಡಿದರೆ ಗೋಡೆಗಳು ಸುಲಭವಾಗಿ ಕುಸಿದುಬಿದ್ದು ಪ್ರಾಣಾಪಾಯವಾಗುವ ಸಂಭವಗಳೂ ಉಂಟು. ಇಂತಹ ಕಡೆ ಭಾವಿ ಕಲ್ಯಾಣಿಯಂತೆ ಮೆಟ್ಟಲುಮೆಟ್ಟಲಾಗಿರಬೇಕು. ಈ ರೀತಿ ಕಟ್ಟಿದ ಮೇಲೂ ಗೋಡೆಗಳನ್ನೆಲ್ಲಾ ಹಿಂದೆ ತಿಳಿಸಿದಂತೆ ಇಟ್ಟಿಗೆ, ಗಾರೆ, ಮರದ ದಿಮ್ಮಿಳಿಂದ ಭದ್ರಪಡಿಸಬೇಕು.

ಇವೆಲ್ಲಕ್ಕಿಂತ ಮುಖ್ಯವಾಗಿ ಭಾವಿಯನ್ನು ಎತ್ತರವಾದ ಮತ್ತು ನಿರ್ಮಲವಾದ ಪ್ರದೇಶದಲ್ಲಿ ತೋಡಬೇಕು. ಗೊಬ್ಬರದ ಗುಂಡಿ, ಬಚ್ಚಲು ಮುಂತಾದ ಅನಾರೋಗ್ಯಕರವಾದ ಸ್ಥಳಗಳಿಂದ ಆದಷ್ಟು ದೂರವಿರಬೇಕು. ಗಾಳಿ, ಬೆಳಕು ಯಥೇಚ್ಛವಾಗಿ ಬೀಳುತ್ತಿರಬೇಕು. ಮರದ ಎಲೆಗಳು, ಇತರ ಕಸಕಡ್ಡಿಗಳು ಒಳಗೆ ಬೀಳದಂತೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಆಗಾಗ್ಯೆ ಕ್ಲೋರಿನ್, ಪೊಟಾಸಿಯಂ ಪರ್ಮಾಂಗನೇಟ್ ಮೊದಲಾದ ವಿಷಾಪಹಾರಿವಸ್ತುಗಳನ್ನು ನೀರಿಗೆ ಬೆರಸುತ್ತಿರಬೇಕು. ಹೀಗೆ ಮಾಡುವುದರಿಂದ ವಿಷಕ್ರಿಮಿಗಳು ಸುಲಭವಾಗಿ ನಾಶವಾಗುತ್ತವೆ. ನೀರು ಆರೋಗ್ಯಕರವಾಗಿರುತ್ತದೆ.

ಇವಲ್ಲದೆ ಅನೇಕ ಊರುಗಳಲ್ಲಿ 'ಬೋರ್‌ವೆಲ್'ಗಳನ್ನು ಸಹ ತೋಡಿರುತ್ತಾರೆ. ಇವು ಸಾಮಾನ್ಯವಾಗಿ ನೂರಾರು ಅಡಿಗಳ ಆಳವಿದ್ದು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಒದಗಿಸುತ್ತವೆ. ಇವುಗಳ ವ್ಯಾಸ ಕೇವಲ ಎರಡು ಅಂಗುಲದಿಂದ ಮೂರು ಅಡಿಯ ವರೆಗೂ ಇರಬಹುದು. ಈ ಕಾರಣದಿಂದ ನೀರು ಬಹು ಆರೋಗ್ಯಕಾರಿ. ಇವನ್ನು ನದಿ ಮುಖಜಭೂಮಿ, ಕಣಿವೆಗಳು, ಮರಳುಭೂಮಿಯ ಪ್ರದೇಶಗಳಲ್ಲಿ ತೋಡಿದರೆ ನೀರು ಸುಗಮವಾಗಿ ದೊರೆಯುತ್ತದೆ.

ನಮ್ಮನ್ನು ಹೆತ್ತು ಹೊತ್ತಿರುವ ತಾಯಿ ವಸುಂಧರೆ ನಮ್ಮ ಆರೈಕೆಗಾಗಿ ಎಷ್ಟು ಶ್ರಮವಹಿಸಿ ತನ್ನ ಮಡಿಲಲ್ಲಿ ನೀರನ್ನು ಹುದುಗಿಸಿದ್ದಾಳೆ. ಆಕೆಯ ಮಮತೆ, ಪ್ರೀತಿ ಅವರ್ಣನೀಯವಾದುದು. 'ಇಳೆಯೆಂದರೆ ಬರಿ ಮಣ್ಣಲ್ಲ, ನಮಗೋ ನೋಡುವ ಕಣ್ಣಿಲ್ಲ' ಎಂಬ ಕವಿವಾಣಿ ದಿಟವಾದುದು. ನೋಡುವ ಕಣ್ಣನ್ನು ಬೇಗನೆ ಬೆಳಸಿಕೊಳ್ಳಬೇಕಾದುದು, ತಾಯಿಯನ್ನು ಸ್ಮರಿಸಬೇಕಾದುದು ಮಕ್ಕಳಾದ ನಮ್ಮೆಲ್ಲರ ಕರ್ತವ್ಯ.

—ಬಿ. ವಿ. ಗೋವಿಂದರಾಜುಲು.

(ಅಚ್ಚಿಗೆ ಸಿದ್ಧವಾದ ಲೇಖನವನ್ನು ಓದಿನೋಡಿ ಸೂಕ್ತಸಲಹೆಗಳನ್ನಿತ್ತ ಶ್ರೀ ಬಿ. ಪಿ. ರಾಧಾಕೃಷ್ಣ ಅವರಿಗೆ ವಂದನೆಗಳು.)

ಜನಪದ ಸಾಹಿತ್ಯದಲ್ಲಿ ಹಾಸ್ಯ

ಜನಪದ ಸಾಹಿತ್ಯ ಅಕ್ಷಯ ನಿಧಿಯಿದ್ದಂತೆ. ಸಂಗ್ರಹಿಸಿದಷ್ಟೂ, ಇನ್ನೂ ಇದೆ ಯೆಂದು ತೋರಿಸಿಕೊಳ್ಳುವ ಪ್ರಮಾಣವುಳ್ಳದ್ದು. ಈಗ ಸಂಗ್ರಹವಾಗಿರುವುದು ಆಗಬೇಕಾದುದರ ಸಹಸ್ರಾಂಶವೂ ಇಲ್ಲ. ಕರ್ನಾಟಕ (ಹಾಗುಭಾರತೀಯ) ಜೀವನ ಸಂಸ್ಕೃತಿಯ ಮೂಲಸ್ಥಾಯಿಯಾದ ಗ್ರಾಮಗಳ ರೈತರು ನಡೆಸಿದ ತುಂಬುಜೀವನದ ಪ್ರತಿಬಿಂಬ ಜನಪದ ಸಾಹಿತ್ಯ. ವಿವಿಧಮಟ್ಟದ ಭಾವ ಭಾವನೆಗಳಿರುವಂತೆ, ಎಲ್ಲ ರಾಗ ರಸಗಳೂ ಇದರಲ್ಲಿ ರೂಪುಗೊಂಡಿವೆ. ಕರ್ನಾಟಕದ ನೇಗಿಲಯೋಗಿಯ ಹಾಸ್ಯಪ್ರವೃತ್ತಿಯನ್ನೂ ಪ್ರದರ್ಶಿಸುವ ಪದಗಳೂ ಲೆಕ್ಕವಿಲ್ಲದಷ್ಟು ಇವೆ. ಮಾದರಿ ಗಾಗಿ ಕೆಲವನ್ನು ನೋಡೋಣ.

ಹಳ್ಳಿಯ ಹೆಣ್ಣೊಬ್ಬಳಿಗೆ ಸೋದರಿಕೆಯ ಸಂಬಂಧವಾಗಿ ಚೆಲುವನಾದ ಗಂಡ ದೊರೆತಿರಲು, ಅವಳ ಜಂಬ ಹೇಳತೀರದು. ಗಂಡನ ಸ್ವಭಾವ ಕೊಂಚ ಪುಕ್ಕಲೆಂಬುದು ತಿಳಿದುಬರಲು, ಊರಿನ ಇತರ ಹುಡುಗಿಯರಿಗೆ ಈ ಜಂಬಗಾತಿಯನ್ನು ಮೂದಲಿ ಸಲು ಅವಕಾಶ ಸಿಗುತ್ತದೆ. ಹುಡುಗಿಯರು ಜಂಬಗಾರ್ತಿಯ ಬಳಿಹೋಗಿ

'ಹುಡುಗೀ ನಿನ ಗಂಡ ಏನು ಧೈರ್ಯವಂತನೆ, ಏನು ಶೌರ್ಯವಂತನೆ'

ಎನ್ನುತ್ತಾರೆ. ಜಂಬಗಾರ್ತಿಯ ಬುದ್ಧಿ ಅಷ್ಟು ಸೂಕ್ಷ್ಮವಲ್ಲ. ನಿಜವಾಗಿ ತನ್ನ ಗಂಡನನ್ನು ಹೊಗಳುವ ಮಾತು ಅವು, ಎಂದುಕೊಂಡು ಅವಳ ಮುಖ ಅರಳುತ್ತದೆ. ಊರ ಹುಡುಗಿಯರಿಗೆ ಜಂಬಗಾರ್ತಿಯನ್ನು ಗುಂಡಿಯಲ್ಲಿ ಕೆಡವಿದೆವೆಂದು ಉಲ್ಲಾಸ ಪುಕ್ಕುವುದು. ಮುಂದೆ ಹೇಳುತ್ತಾರೆ.

ಕುರುಬರ್ಹಟ್ಟೀಗ್ ಹೋದನೆ
ಕುರಿ ಮರಿ ಕಂಡನೆ
ಕರಡೀ ಬಂದ್ಯೆತಂತ್ ಹೆದರಿ ಓಡಿ ಬಂದನೆ || ಹುಡುಗಿ . . .

ಜಂಬಗಾರ್ತಿಯ ಮುಖ ಇಳಿಯುವುದು ಆದರೆ ಊರ ಹುಡುಗಿಯರು ಅಷ್ಟಕ್ಕೇ ಬಿಡುವುದಿಲ್ಲ.

ಒಕ್ಕಲಟ್ಟೀಗ್ ಹೋದನೆ
ಚಿಕ್ಕಿನ್ ಮರಿ ಕಂಡನೆ
ಹುಲಿಯೇ ಬಂದೀತಂತ್ ಹಿಂದೆ ಓಡಿ ಬಂದೆನೆ || ಹುಡುಗೀ . . .

ಕೊರಮರಟ್ಟೀಗ್ ಹೋದನೆ
ಕುನ್ನಿ ಮರಿ ಕಂಡನೆ
ಕಿರುಬ ಬಂದೀತಂತ್ ಹಿಂದೆ ಓಡಿ ಬಂದನೆ|| ಹುಡುಗೀ . . .

ಜಂಬಗಾರ್ತಿಯ ಮೊಗದಲ್ಲಿ ಸೀರಿಳಿಯಲು ಊರ ಹುಡುಗಿಯರು ಹಿಗ್ಗಿ ಹಿಂದೆರಳುವರು.

ಗಂಡು ಹೆಣ್ಣಿಗೆ ಮಾತಿನ ಪೈಪೋಟಿ ಬೀಳುವುದು. ಚಮತ್ಕಾರದ ಈ ಸಂವಾದದಲ್ಲಿ ಕಲ್ಪನೆಯು ಎತ್ತರ ಪ್ರಶಂಸನೀಯವಾದುದು.

ಚಿತ್ತಾರ್ದ ಗೊಂಬೆ ನೀ, ಎತ್ತ ಮುಖನಾದೆಯೆ

ಎಂದು, ಗಂಡು ಹೆಣ್ಣಿನ ನಿರಾಸಕ್ತಿಯನ್ನು ಸೂಚಿಸಿ, ಅವಳನ್ನು ಕೆಣಕುತ್ತಾನೆ. ಹೆಣ್ಣಿನ ಉತ್ತರ ಅವನ ಬಾಯಿ ಮುಚ್ಚಿಸುವಂತಹುದು. –

ಎತ್ತ ಮುಖನಾದರೇನು, ಚಿತ್ತ ನಿನ್ನ ಮೇಲಿಯೆ,

ಗಂಡು ತನ್ನ ಸೋಲನ್ನೊಪ್ಪಿಯಾನೆಯೆ? ಮತ್ತೆ ಕೆಣಕುತ್ತಾನೆ:

ಹಲಸೀನ ಹಣ್ಣೀನ
ಹೊಲಸು ನೋಡಬಾರದೆ?

ಹೆಣ್ಣಿಗೆ ನಾಲಿಗೆ ಎಂದಿಗೂ ಹರಿತ:

ಹೊಲಸು ಗಿಲಸು ಏನ್ ನೋಡ್ತಿ
ಸುಲಿಸಿ ನೋಡು ಬಾರದೆ

ಎನ್ನುತ್ತಾಳೆ ಸರಿ, ಮಾತಿಗೆ ಮಾತು ಮೊದಲಿಡುತ್ತದೆ:

"ಬಾಳೀಯ ಹಣ್ಣಿನಾ
ಹೊಂಗು ನೋಡಬಾರದೆ"
"ಹೊಂಗು ಗಿಂಗು ಏನ್ ನೋಡ್ತಿ
ನುಂಗಿ ನೋಡಬಾರದೆ"

"ಉತ್ತುತ್ತೆ ಹಣ್ಣಿನಾ
ಸುಕ್ಕು ನೋಡಬಾರದೆ"
"ಸುಕ್ಕು ಗಿಕ್ಕು ಏನ್ ನೋಡ್ತಿ
ಮುಕ್ಕಿ ನೋಡಬಾರದೆ"

"ಕಡಲೇಯ ಕಾಳಿನಾಗೆ
ಕಲ್ಲು ನೋಡಬಾರದೆ"
"ಕಲ್ಲು ಗಿಲ್ಲು ಏನ್‌ನೋಡ್ತಿ
ಕಡಿದು ನೋಡಬಾರದೆ"

ಇಂತಹ ಸಂವಾದಮಾಡಬಲ್ಲ ಗಂಡುಹೆಣ್ಣಿನ ಸಂಸ್ಕೃತಿಯ ಮಟ್ಟ ಹೆಚ್ಚಿನದೆ ಸರಿ.

ಮುದ್ದಿನ ಹೆಂಡತಿಯ ಮಾತಿಗೆ ಸಿಕ್ಕು, ರೈತ ಅವಳ ತಮ್ಮನನ್ನು ಮನೆಗೆ ಕರೆತಂದು ಇಟ್ಟುಕೊಳ್ಳುತ್ತಾನೆ. ಇಬ್ಬರು ದುಡಿದುದು ಇಬ್ಬರ ಹೊಟ್ಟೆಗೇ ಸಾಲದಿರುವಾಗ, ನೆಂಟನೊಬ್ಬ ಖಾಯಂ ಆಗಿ ಅತಿಥಿಯಾದರೆ ಗತಿಯೇನು! ಭಾವಮೈದುನನಾದರೂ ದುಡಿದೇ ತಿನ್ನಬೇಕು. ಆದರೆ ಈ ಭಾವಮೈದ ಶುದ್ಧ ಸೋಮಾರಿ, ಅಲ್ಲದೆ ಕೂಳುಬಡಕ. ರೈತ ಮುಂಜಾನೆ ಎದ್ದು ಕೊಟ್ಟಿಗೆ ಕೆಲಸವನ್ನು ಪೂರೈಸಿ, ದನ ಹಿಂಡಿ, ಊಟ ಮುಗಿಸಿ, ಗದ್ದೆಗೆ ಹೋಗಲು ಸಿದ್ಧನಾದರೂ ಭಾವಮೈದ ಇನ್ನೂ ಹಾಸಿಗೆ ಬಿಟ್ಟಿದ್ದಿಲ್ಲ. ರೈತ ಕೋಪಗೊಂಡು ಅನ್ನುತ್ತಾನೆ.

ಎಬ್ಬಿರ್ಸಲೊ ಭಾಡ್ಕೋವ್ನ್, ಗದ್ದೇಗ್ಹೋಗಲಿ ||
ಗದ್ದೇಯ ಗೇಯಲಾರ
ಬದುವಾನ ಹಾಕಲಾರ
ಬಾನಾವ ಮಾಡಿದವ್ರ ಮನೆಗೆ ಬಾಂಡ್ಲಿ ತಕೊಂಡ್ ಹೋಗತಾನ|| ಎಬ್ಬಿರ್ಸಲೊ . . .

ಮೂರು ಮುದ್ದೆ ಉಣ್ಣುತಾನ
ಮೂಲೆ ಹಿಡಿದು ಮಲಗತಾನ
ಎಬ್ರಿಸಾಕೆ ಹೋದಾರೆ ಗಬ್ಬುಹೂಸು ಬಿಡುತಾನ|| ಎಬ್ಬಿರ್ಸಲೊ . . .

ಹಳ್ಳಿಯ ಪದಗಳನ್ನು ಕೇಳಿದಾಗ ಆಗುವ ಹಿತ ಓದಿದಾಗ ಇಲ್ಲ. ಅವನ್ನು ಕೇಳಿಯೆ ಸವಿಯಬೇಕು. ಭಾಡ್ಕೋವ್ನ್, ಗಬ್ಬುಹೂಸು ಈ ಶಬ್ದಗಳು ಓದಿದಾಗ ಬೇಸರವುಂಟುಮಾಡುವುವು. ಕಂಚಿನ ಕಂಠದ ಸುಕಾಲಿ ಲಚುಮ ಹಾಡಿದಾಗ ಈ ಎರಡು ಶಬ್ದಗಳು ಕಳೆಗೂಡಿದಂತೆ ಮಿಕ್ಕವು ಸೊಗಸಲಿಲ್ಲ.

* * *

ಕೋಲನ್ನ ಕೋಲನ್ನ ಕೋಲು, ಕೋಲನ್ನ ಕೋಲನ್ನ ಕೋಲು
ಕೋಲನ್ನ ಕೋಲನ್ನ ಕೋಲು, ಕೋಲನ್ನ ಕೋಲನ್ನ ಕೋಲು

ಎಂದು ಆರಂಭವಾದಮೇಲೆ ಇದು ಕೋಲಾಟದ ಪದ, ಎಂದು ಹೇಳುವುದು ಅನವಶ್ಯಕ. ಬೇರೆ ಬೇರೆ ಊರುಗಳಲ್ಲಿ ಕಂಡ ವೈಚಿತ್ರ್ಯಗಳನ್ನು ಒಂದೊಂದು ನುಡಿಯಲ್ಲಿ ಹೇಳಿದೆ ಈ ಪದದಲ್ಲಿ:

ಹಗ್ಗಾ ಹನ್ನೆರಡು ಮಾರು
ಬಗಲಾಗೆ ಬಾರಿಕೋಲು
ಬಾಗಿಬಾಗಿ ನೋಡುತಾರೆ
ಸುಮ್ಮನ್ ಕೊಪ್ಪಾಗೆ

ಮೊಳದುದ್ದದ ಬಾರಿಕೋಲಿಗೆ (ಚಾಟಿಯ ಕೋಲಿಗೆ) ತೋಳುದ್ದದ ಹಗ್ಗವಿರುವುದು ಸಹಜ. ಆದರೆ ಸುಮ್ಮನ್‌ಕೊಪ್ಪದ ಬಾರಿಕೋಲುಗಳಿರುವ ಹಗ್ಗ 'ಮೂಗಿಗಿಂತ ಮೂಗತಿ ಭಾರ'ವಾಗಿದ್ದಂತೆ.

ತೆಗ್ಗಿನಾಗೆ ಮನೇಕಟ್ಟಿ
ದಿಬ್ಬದ್‌ಮೇಲೆ ಬಾವಿ ತೆಗಿಸಿ
ಕಜ್ಜ ಹತ್ತಿ ಸಾಯಿತಾರೆ
ಕುಂಜಾನ್ನಳ್ಳ್ಯಾಗೆ

ಆರೋಗ್ಯವೆಂದು ದಿಬ್ಬದಮೇಲೆ ಮನೆಕಟ್ಟಿ, ತೋಡುವ ಕೆಲಸ ಕಡಿಮೆಯಾಗಲೆಂದು ತಗ್ಗಿನಲ್ಲಿ ಭಾವಿ ತೆಗೆಯುವುದು ವಾಡಿಕೆಯಾದರೆ ಕುಂಜನಹಳ್ಳಿಯಲ್ಲಿ ಅದು ತಿರುಗ ಮುರುಗ.

ಹರ್ಕ ಸೀರಿ ಉಟ್ಕ ಕೊಂಡು
ಶರ್ಕ ತಲೆ ಬಿಟ್ಟು ಕೊಂಡು
ಅಡ್ಕೆ ಕೊಟ್ರೆ ಬರ್ತಾರಣ್ಣ
ಮಡ್ಕೇಚಿಗುರಾಗೆ

ಜಗತ್ತಿನ ಯಾವುದೇ ಊರಿನಲ್ಲಿ ಅಡಿಕೆ ಕೊಟ್ಟರೆ ಸಿಗುವ ಹೆಣ್ಣುಂಟೆ !

* * *

ತನಗೆ ಗೊತ್ತಾದ ಹೆಣ್ಣನ್ನು ಬೇರೊಬ್ಬ ಹೆಚ್ಚು ತೆರಕೊಟ್ಟು ಮದುವೆಯಾಗಲು ಮೊದಲನೆಯವನಿಗೆ ಹೊಟ್ಟೆಕಿಚ್ಚು ಬಾರದಿದ್ದೀತೆ! ಸರಿ, ಒಂದು ಪದ ಕಟ್ಟಿದ:

ಎಂಥ ಮದಿವೆ ಮಾಡಿಕೊಂಡೆ, ಕೇಳಿರೊ ಕಣಿಯ
ಕುಂಟುಕುರುಡರೆಂಟುಮಂದಿ ನೆಂಟರ್ ಬಂದರ್ ಉಣ್ಣಲಿಕ್ಕೆ
ಮೂರ್‌ಮಂದಿ ಮಾವಗಳು ಕಾಲ್‌ಜಾರಿ ಕೀಲ್‌ತಪ್ಪಿ ಜಾರಿಬಿದ್ದು, ಹುಡದದ್ದಿ.

(ಹುಡದದ್ದಿ ಎಂಬ ಪದವನ್ನು ಪಯೋಗಿಸುವುದು ಕೋಲಾಟದ ಹಾಡು ಮುಗಿದುದನ್ನು ಸೂಚಿಸಲು)

* * *

ಬಿನ್ನಾಣಗಿತ್ತಿಯೊಬ್ಬಳು ತನ್ನನಾಶಿಸಿ ಬಂದ ಗಂಡಿಗೆ ಆಸೆತೋರಿಸಿ ಕೊನೆಗೆ ನಡುನೀರಿನಲ್ಲಿ ಬಿಡುವ ಮೋಜನ್ನು ನೋಡೋಣ.

ಮಾವನ ಮಗಳೇ ನೀನು
ಕೆಂದಾವ್ರೆ ಮುಖದೋಳೆ
ತಾವರೆ ಮೊಗ್ಗೆ ಮೊಲೆಯೋಳೆ
ಬಾಯಾರಿ ಬಂದೆ ಕೊಡು ನೀರ

ಅವನಿಗೆ ನೀರೂ ಬೇಕಿಲ್ಲ. ಸುಮ್ಮನೆ ಮಾತನಾಡಲು ನೆವ ಅಷ್ಟೆ. ಮಾವನಮಗಳೆಂಬ ಸಂಬಂಧ ಯಾವ ಜನಕ್ಕೂ ಇದ್ದಿರಲಾರದು. ವಿಶ್ವಾಸವನ್ನು ನಟಿಸಲು ಹಾಗೆನ್ನು ತ್ತಾನೆ. ಆದರೆ ಆ ಸೊಕ್ಕಿನ ಬೆಡಗಿ ಕನಲಿ ಬೆದರಿಸುತ್ತಾಳೆ.

ನೀರನೆ ಕೊಡವ್ರುದ್ಕೆ ನಾನ್ಯಾರೊ ನೀನ್ಯಾರೊ
ಹೋಗಯ್ಯ ಹರಿವೊ ಹೊಳೆಕಾಕೆ

ಅಷ್ಟಕ್ಕೇ ಬೆದುರಿಬಿಟ್ಟರೆ ಅವನು ಗಂಡುಸೆ!

"ಹರಿವೋ ನೀರ್ ಹಚ್ಚ್ಯಗೆ
ಭಾವೀ ನೀರ್ ಬೆಚ್ಚ್ಯಗೆ
ನೀ ಕೊಟ್ಟ ನೀರು ಬಹುರುಚಿ"

ಎನ್ನುತ್ತಾನೆ.

ನಾನು ಕೊಟ್ಟ ನೀರು
ಬಹು ರುಚಿಯ್ಯಾದಾದರ
ನಂ ಮನೆಗೆ ದಂಡ ತೆರುಹೋಗೊ

ನಾ ಕೊಡುವ ನೀರನ್ನು ಕುಡಿಯಬೇಕಾದರೆ, ನಮ್ಮಪ್ಪನಿಗ ತೆರತೆತ್ತು ನನ್ನನ್ನು ಮದವೆ ಯಾಗು ಎನ್ನುತ್ತಾಳೆ. ಮದುವೆಯ ಮಾತಿಗೆ ಹೆದರಿ ಅವನು ಓಡಿಹೋಗುತ್ತಾನೆಂದು ಅವಳ ಎಣಿಕೆ. ಆದರೆ ಆ ಭಂಡ ಅಷ್ಟಕ್ಕೆ ಸಗ್ಗುವವನಲ್ಲ. ಎಲ್ಲದಕ್ಕೂ ಸಿದ್ಧನೆನ್ನು ತ್ತಾನೆ.

"ದಂಡವ ತೆತ್ತನೆ
ಹಿಂಡೆಮ್ಮೆ ಕಟ್ಟನೆ
ಬಂಡೀ ಕಟ್ಟಿ ಸರಕ ಅಡಿಕೇನೆ
ಬಂಡೀಯನೇ ಕಟ್ಟಿ
ಸರಕ ನಾನಡಕಿದರೆ
ಬಂದೀಯ ತೋಳ ಬಿಡಲಾರೆ"

ಇವನಿಂದ ತಪ್ಪಿಸಿಕೊಳ್ಳುವ ಮಾರ್ಗ ಹುಡುಕತೊಡಕುತ್ತಾಳೆ:

ಬಂದಿಯನೇ ತೋಳ
ಬಿಡಲಾರದಿದ್ದರೆ
ನಡಿಯಯ್ಯ ಕಂಚಿವನಕಾಗಿ

ಅವಳ ಮಾತನ್ನು ನಂಬಿ, ಅವಳ ಹಿಂದೆಯೆ ಹೋಗುತ್ತಾನೆ. ಕಂಚಿವನವೂ ಸಿಕ್ಕಿತು. ಅವಳಿನ್ನೇನು ಮಾಡಬೇಕು? ನೆವದ ಮೇಲೆ ನೆವಹೇಳಿ ಸ್ಥಳದಿಂದ ಸ್ಥಳಕ್ಕೆ ಅವನನ್ನು ಸುತ್ತಾಡಿಸುವುದು:

ಕಂಚೀಯ ವನದಾಗೆ
ಕೆಂಚೀರಡ್ಡಾ ಭಾಳ
ನಡಿಯಯ್ಯ ನಿಂಬೇ ವನಕಾಗಿ . . .

ನಿಂಬೆಯ ವನದಾಗೆ
ರಂಬೇರಡ್ಡಾ ಭಾಳ
ನಡಿಯಯ್ಯ ಅತ್ತಿ ವನಕಾಗಿ . . .

ಅತ್ತಿಯ ವನದಾಗೆ
ಅತ್ತೇರಡ್ಡಾ ಭಾಳ
ನಡಿಯಯ್ಯ ಮಾವಿನ್ ವನಕಾಗಿ . . .

ಮಾವಿನ ವನದಾಗೆ
ಮಾವರಡ್ಡಾ ಭಾಳ
ನಡಿಯಯ್ಯ ಬಾಳಿ ವನಕಾಗಿ . . .

ಇಷ್ಟು ಸುತ್ತು ಹೊರಿಸಿದರೂ ಬೆನ್ನ ಹತ್ತಿದ, ಭೇತಾಳನಂತೆ ಅವನು ಬಂದೇ ಬಂದ. ಇನ್ನೇನು ಮಾಡಬೇಕು ? ಅವನಿಗೆ ಅಸಾಧ್ಯವಾದೊಂದು ಕೆಲಸ ಹೇಳಿದರಾಯಿತು.

ಬಾಳೆಯ ಬಲಕೊತ್ತಿ
ಸೀಗೆಯ ಎಡಕೊತ್ತಿ
ನಾಗಸಂಪಿಗೆ ನಡಕೊತ್ತಿ

ನಾಗಸಂಪಿಗೆಯ
ನಡಕೊತ್ತಿ ಮದುಮಗನೆ
ಹಾಸಯ್ಯ ನಿನ್ನ ದಸರಿಯ

ಹೊಸ ಬಟ್ಟೆಯನ್ನು ನೆಲದ ಮೇಲೆ ಹಾಸು ಎಂದಕೂಡಲೆ ಅವನಿಗೆ ಗಾಬರಿ :

ನಿನ್ನೇನೆ ಕೊಂಡಿದ್ದೆ
ಹೊನ್ನೂರು ಸಂತಾಗೆ
ಹೊನ್ನೂರ್ ಹೊಳೆಯಾಗೆ ಒಗೆದಿದ್ದೆ

ಹೊನ್ನೂರ ಹೊಳೆಯಾಗೆ
ಒಗದಿದ್ದು ಮಾಸಿದ್ರೆ
ನಮ್ಮ ಮನೆಯಾಗೆ ಬೈದಾರೆ

ಅಂತೂ ಅವಳ ತಂತ್ರ ಫಲಿಸಿತು, ಅವನು ತಾನೆಂದುದಕ್ಕೆ ತಪ್ಪಲು, ತನಗೂ ತಪ್ಪಿಕೊಳ್ಳಲು ಅವಕಾಶ ಸಿಕ್ಕಿತು :

ಕಾಸ್ ತಿಂದ ಕರಿಹಲ್ಲು
ಸುಣ್ಣ ತಿಂದ ಬಿಳಿಹಲ್ಲು
ಎಣ್ಣೆ ನೀರುಂಡ ಒಳದೊಡೆ

ಎಣ್ಣೀನ ನೀರುಂಡ
ಒಳದೊಡೆ ಮಾಸಿದ್ರೆ
ನಮ್ಮ ಮನೆಯಾಗೆ ಜೈದಾರೆ.

ತಪ್ಪಿಸಿಕೊಳ್ಳಲು ಕೊಡುವ ಕಾರಣದಿಂದಲೆ ಅವಳೆಂತಹ ಬಜಾರಿಯೆಂಬುದು ತಿಳಿಯುತ್ತದೆ. ಇಷ್ಟು ಹೊತ್ತು ಅವಳು ಸತಾಯಿಸಿ ಈಗ ಬೇಡವೆನ್ನಲು ಅವನಿಗೆ ತುಂಬ ಸಿಟ್ಟು ಬರುತ್ತದೆ.

ಕಬ್ಬಾರ ಹುಡುಗಿ ನೀನು
ಗಬ್ಬಿನ್ ಬಡ್ಡೀ ಮಗ್ಳೆ
ಚಿಬ್ಲಾಲೊ ಮೋರೆ ಕರಿಮೀನೆ

ಎಂದು ಅವಳನ್ನು ನಿಂದಿಸಿ ನಿರಾಸೆಯಿಂದ ಹಿಂದಿರುಗುತ್ತಾನೆ.

ವಸುದೇವಭೂಪಾಲಂ.

ಚಂದ್ರಿಕಾ

ನವನವೋನ್ಮೀಲಿತಾ ಪೂರ್ಣಿಮಾದಿನಂ. ಚೈತ್ರಲಕ್ಷ್ಮೀಸ್ಪರ್ಶ ಪ್ರಫುಲ್ಲಿತಂ ವಿಪಿನಪ್ರದೇಶಂ. ಅರೆ ಬಂಡೆಗಳ ನಡುನಡುವೆ ನುಸುಳಿ ಪರಿಯುವ ನೊರೆಯುಗುವ ತೆರೆತೆರೆಯ ತೊರೆಯ ತೋಯಂ ತೋಯುತಿಹ ಚಂದ್ರಿಕಾಪುಲಿನ ಪರಿಸರದಿ ಪವಡಿಸಿದೆ ಕಮನೀಯ ಕಲ್ಪನಾಕನಸುಗಳ ಕಾಣುತಲಿ! ಜೊನ್ನದಿಂಗಳಂ ತವೆ ಪೀರ್ದು ಮದಿರೋನ್ಮತ್ತ ಚಕೋರಚಯಂ ನರ್ತಿಸಿವೆ ನಲವಿನುಲ್ಲಸದಿ ಪುಲಿನವೇಲಾ ಪ್ರಸರದೊಳ್. ಜಳಜಳನಿನದ ಜಳಜಳಕಾಟದಲಿ ಕೊನೆದಾಡುತಿವೆ ಸರಸಸಾರಸ ಪಂತಿ ಇನಿತಳ್ಕಿಯೊಳು ತೇಲಿ. ನಿಶೆಯ ನಿಸರ್ಗರಮಣಿಯು ಹಿಮಮಣಿಯಕೋದಿಹ ಳಲ್ಲಿ ತೃಣಸುಂದರಿಯ ಮೂಗುತಿಯ ಮುತ್ತುಪನಿಯಂತೆ. ಅಮರ ನಂದನದ ಸಿದ್ಧರಸ ತಟಾಕತಟದಲಿ ದಟ್ಟೈಸಿ ಬೆಳೆದಿರ್ದ ಎಳೆಹುಲ್ಲ ಪಚ್ಚೆವಾಸಿನಲಿ ಒಲವಿನಿಂ ನಲಿವ ಗಂಧರ್ವ ದಂಪತಿಗಳಂತೆ! . . . . ತಳಿತ ಚೂತದ ತನಿಕಾಂಡ ತನುವಂ ನಲವಿನಿಂದನುವರದೊಳಪ್ಪಿ ದಾಂಗುಡಿವರಿದಿರುವುದಲ್ಲೊಂದು ಮಲ್ಲಿಕಾವಲ್ಲರಿ. ಮಳಲ ಮೇಗಡೆಯಲ್ಲಿ ವರ್ಣವರ್ಣಾಂತರದ ಸ್ವಾತಿಪನಿಮುತ್ತುಗಳ ವಿವಿಧಾಕೃತಿಯ ಶಂಕುಗಳ ಗಡಣಂ. ಚಂದ್ರಚಂದ್ರಿಕಾಸ್ರೋತದಲಿ ನನೆದು ನಲವೇರ್ದು ವಿಪಿನ ವಿಸ್ತೃತಪ್ರದೇಶಂ ಮನಕೆ ಬೀಸಿತು ಮದನಪುರ್ಷಂ, ಹೃದಯಾಂತರಾಳದಲಿ ಕುದಿವೇಕಾಂತ ತಾಪಮಂ ಬೆದಕಿ ಬೇಗುದಿಗೊಳಿಸಿ. ಪಾಲ್ಚೆಲ್ಲಿದಾನಂದ ಪಸರಿಸಿರೆ ಪುಲಿನ ಪರಿಸರದಿ ರಮಿಸುತಿವೆ ಪ್ರಣಯಿ ಹಂಸಗಳ್, ಚಾಟುಚಕೋರಿಗಳಂತೆ!

ಹೃದಯ ಎಬ್ಬಿತು ಹೃದಯಮಂ ಬಯಸಿ ರತಿಯೊರ್ವಳಾ. ಅಧರವದುರಿತು ಅಧರ ಸಾರಮಂ ಪೀರ್ದೆಳಸಿ ಅಮರಿಯಾ. ತೋಳಲುಗಿದವು ನೀಳ್ದು, ರತಿಸುಖದ ಇನಿತಳ್ಕಿಯಂ ಬಯಸಿ. ರೋಮ ಕಂಚುಕಿತ ಗಾತ್ರವಾಯಿತು ತನುವತನು ಮೋಹಿನಿಯ ಎದೆದುಂಬಲೆಳಸಿ. ಬಾಹ್ಯತಾಶೂನ್ಯನಾದೆನರೆನಿಮಿಷವ ನಿಮಿಷ ಸ್ವಪ್ನ ಸಾಮ್ರಾಜ್ಯದಲಿ . . . ಮರುಗಿದೆನು ಮಾಧುರ್ಯ ಸ್ವಪ್ನಭಿನ್ನತೆಗೆ!

'ವೆಂಕಟಾಚಲ'

ಜೈನರ ಪರಿಗ್ರಹಪರಿಮಾಣವ್ರತ ಮತ್ತು ಸಮಾಜವಾದ

ಇಂದು ಯುದ್ಧರೂಪಿ ದಾವಾನಲದ ಕೆಳಗೆ ಅಮರ್ಯಾದಿತ ರಕ್ತಪಾತ ಹಾಗೂ ಅತ್ಯಾಶೆಯ ತೀಕ್ಷ್ಣವಾದ ಬೆಂಕಿಯು ಜೋರಾಗಿ ಉರಿಯುತ್ತಿದೆ. ಈ ಭಯಂಕರವಾದ ಹಿಂಸೆಯನ್ನು ತಡೆಯುವ ಸುಲಭವಾದ ಉಪಾಯಗಳಲ್ಲಿ ಜೈನರ ಪರಿಗ್ರಹ ಪರಿಮಾಣವ್ರತವು ಒಂದು. ಇಷ್ಟೇ ಅಲ್ಲ, ಪ್ರಪಂಚದ ಆರ್ಥಿಕ ಅಸಮಾನತೆಯನ್ನು ದೂರಮಾಡುವ ಸಹಜ ಉಪಾಯವೂ ಇದೇ ಮಾಹಾವೀರರ ಪರಿಗ್ರಹಪರಿಮಾಣ ವ್ರತವಾಗಿದೆ. ಅತಿತೃಷ್ಣೆಯಿಂದಾಗಿ ಈಗ ಪ್ರಪಂಚದಲ್ಲಿ ನಡೆಯುತ್ತಿರುವ ಭೀಷಣ ಹತ್ಯಾಕಾಂಡವನ್ನು ತಡೆಯುವ ಅಮೋಘವಾದ ಶಕ್ತಿಯು ಜೈನಾಚಾರ್ಯರ ಪಂಚ ಮಹಾವ್ರತಗಳಲ್ಲಡಗಿದೆ. ವರ್ತಮಾನಯುಗದಲ್ಲಿ ನಡೆಯುತ್ತಿರುವ ಮಹಾ ಯುದ್ಧಗಳ ವಿಷಯದಲ್ಲಿ ಆಳವಾಗಿ ವಿಚಾರಮಾಡಿದರೆ ಈ ಸಂಗ್ರಾಮಗಳ ಮೂಲ ಕಾರಣ ಸ್ವಾರ್ಥಪರಾಯಣತೆ ಮತ್ತು ಅಮರ್ಯಾದಿತ ಅಧಿಕಾರಲಾಲಸೆ ಇವುಗಳೇ ಆಗಿವೆಯೆಂದು ಸ್ಪಷ್ಟವಾಗಿ ತಿಳಿದುಬರುವುದು. ಇಂದಿನ ಯುದ್ಧಪ್ರಿಯ ರಾಷ್ಟ್ರಗಳ ರಾಕ್ಷಸೀ ತೃಷ್ಣೆಯು ಕೇವಲ ರಾಜ್ಯವಿಸ್ತಾರದಿಂದಲೇ ಶಾಂತವಾಗುವುದಿಲ್ಲ. ರಷ್ಯವು ಅಮೇರಿಕದಿಂದ ಹೆಚ್ಚು ರಾಜ್ಯವನ್ನು ಬೆಳೆಸಿಯೇ ಸಂತೋಷಹೊಂದುವುದಿಲ್ಲ. ಅಮೇರಿಕ, ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳೊಡನೆ ತನ್ನ ವ್ಯಾಪಾರವನ್ನು ಹೆಚ್ಚಿಸಿ ಔದ್ಯೋಗಿಕ ಕ್ಷೇತ್ರಗಳಲ್ಲಿ ಅನ್ಯರಾಷ್ಟ್ರಗಳ ಅಪೇಕ್ಷೆಯಿಂದ ಉನ್ನತಾಸನವನ್ನು ಪಡೆಯಬೇಕೆಂಬುದೇ ಇದರ ರಾಕ್ಷಸೀ ಮಹತ್ವಾಕಾಂಕ್ಷೆಗಳಾಗಿವೆ. ನ್ಯಾಯೋಪಾರ್ಜಿತವಾದ ಧನವನ್ನು ಸಂಪಾದಿಸುವ ಆದರ್ಶವು ಈಗಿನ ವ್ಯಾಪಾರಿಗಳಲ್ಲುಳಿಯಲಿಲ್ಲ.

ಇಂದು ಇಡೀ ಸಂಸಾರದಲ್ಲಿ ಅಶಾಂತಿಯೇ ವಿಶೇಷತಃ ದೃಷ್ಟಿಗೋಚರವಾಗುತ್ತಿದೆ. ವ್ಯಾಕುಲ ಪ್ರಪಂಚವು ಎಲ್ಲೆಲ್ಲಿಯೂ ಶಾಂತಿಯ ಮಡಲನ್ನು ಬಯಸುತ್ತಿದೆ. ಎರಡೂ ಮಹಾಯುದ್ಧಗಳ ಇತಿಹಾಸವನ್ನು ಎಲ್ಲರೂ ಬಲ್ಲರು. ಮೂರನೆಯ ಮಹಾ ಯುದ್ಧದ ಚರ್ಚೆಯು ನಡೆಯುತ್ತಿದೆ. ಅಣುಬಾಂಬಿನ ಪ್ರಯೋಗದಿಂದುಂಟಾದ ದುಷ್ಪರಿಣಾಮಗಳ ಭಯಂಕರವಾದ ಪರಿಣಾಮಗಳನ್ನು ಸಮಾಚಾರಪತ್ರಗಳಲ್ಲಿ ಓದಿ ಸಂಪೂರ್ಣ ಮಾನವಜಾತಿಯು ಭಯದಿಂದ ನಡುಗುತ್ತಿದೆ. ಈ ವೈಜ್ಞಾನಿಕ

ಯುಗದಲ್ಲಿ ಅನೇಕ ಪ್ರಕಾರವಾದ ಸಂಶೋಧನೆಗಳು ನಡೆದುವು. ಇವುಗಳಿಂದ ಮಾನವ ಸಮಾಜಕ್ಕೆ ಅಲ್ಪಸ್ವಲ್ಪ ಲಾಭ ದೊರೆತಿರುವುದೇನೋ ನಿಜ. ಆದರೆ ಈ ಯಾಂತ್ರಿಕ ಶಕ್ತಿಯು ಮಾನವ ಸಮಾಜಕ್ಕೆ ಸುಖಕ್ಕೆ ಬದಲಾಗಿ ಅಧಿಕ ಪರಿಮಾಣ ದಲ್ಲಿ ದುಃಖವನ್ನೇ ಪ್ರಧಾನ ಮಾಡಿತೆಂದು ಹೇಳದರೆ ತಪ್ಪಾಗಲಾರದು. ಈ ಭೀಷಣವಾದ ಸಾಂಕ್ರಾಮಿಕ ರೋಗವು ಹರಡಬಾರದೆಂಬ ಪವಿತ್ರ ಉದ್ದೇಶ ದಿಂದಲೇ ಗೃಹಸ್ತರೂ ಅಹಿಂಸಾದಿ ಐದು ವ್ರತಗಳನ್ನು ನಿರ್ದೋಷವಾಗಿ ಅಗತ್ಯ ಪಾಲಿಸಬೇಕೆಂದು ಜೈನಾಚಾರ್ಯರು ಅಪ್ಪಣೆ ಕೊಡಿಸಿರುವುದು. ಜೀವನಶುದ್ಧಿಯ ಉಪಾಯಗಳನ್ನು ಕಂಡುಹಿಡಿಯುವುದಕ್ಕೋಸ್ಕರ ಜೈನಾಚಾರ್ಯರು ತುಂಬಾ ದುಡಿದಿರುತ್ತಾರೆ. ಅವರು ಮನೋವಿಜಯ, ಆತ್ಮಸಂಯಮ, ನಿರ್ಲೋಭವೃತ್ತಿ ಮತ್ತು ತ್ಯಾಗಧರ್ಮ ಇವುಗಳ ಉಪದೇಶವನ್ನು ಸುಲಭ ಹಾಗೂ ಸುಂದರ ಶೈಲಿಯಲ್ಲಿ ಮಾಡಿರುವರು. ಇಷ್ಟೇಕೆ ಪ್ರಪಂಚದಲ್ಲಿ ಪ್ರತಿಯೊಬ್ಬ ಮಹಾತ್ಮನು ತ್ಯಾಗದಿಂದಲೇ ದೊಡ್ಡವನಾದನು. ವೈಯಕ್ತಿಕ ಭೋಗೋಪಭೋಗಗಳಲ್ಲಿ ವಿಶೇಷ ಮಗ್ನನಾಗಿರದೆ ಐಹಿಕವ್ಯಾಮೋಹದಲ್ಲಿ ಅನಾಸಕ್ತನಾಗಿ ವ್ಯಾಪ್ತಸುಖಸಾಮಗ್ರಿಗಳನ್ನು ಒಂದು ಮರ್ಯಾದಿತ ಸಂಖ್ಯೆಯಲ್ಲಿಟ್ಟುಕೊಂಡು ಸಂಯಮಭಾವವನ್ನು ಬೆಳೆಸುವುದಕ್ಕೇನೆ ಪರಿಗ್ರಹ ಪರಿಮಾಣವ್ರತವೆಂದು ಹೆಸರು. ಈ ಪರಿಗ್ರಹಪರಿಮಾಣವ್ರತವನ್ನು ನಿರತಿಚಾರವಾಗಿ ಪಾಲಿಸುವವನ ಮನಸ್ಸು ಎಂದೂ ಸಮಾಜವಾದದ ಕಡೆಗೆ ಹೋಗಲಾರದು. ಅಷ್ಟೇಕೆ, ಪ್ರತಿಯೊಬ್ಬ ಮನುಷ್ಯನೂ ತನ್ನ ಆವಶ್ಯಕ ವಸ್ತುಗಳ ಪರಿಮಾಣವನ್ನು ನಿರ್ಧರಿಸಿಕೊಂಡರೆ ಅಥವಾ ತನ್ನ ಸುಖಸಾಮಗ್ರಿಗಳನ್ನು ಒಂದು ಮರ್ಯಾದಿತ ಸಂಖ್ಯೆಯಲ್ಲಿಟ್ಟುಕೊಂಡು ಸಂಯಮಭಾವವನ್ನು ವೃದ್ಧಿಮಾಡಿ ಕೊಂಡರೆ ಅದೇ ನಿಜವಾದ ಸಮಾಜವಾದ.

ಹೆಂಡತಿ, ಮಕ್ಕಳು, ಮನೆ, ಆಳು, ಕಾಳು ಮೊದಲಾದ ವಸ್ತುಗಳಲ್ಲಿ 'ಇವು ನನ್ನವು' ಎಂಬ ಮಮತ್ವಬುದ್ಧಿಗೇನೇ ಪರಿಗ್ರಹವೆಂದು ಹೆಸರು. ಈ ಮಮತ್ವವನ್ನು ಕಡಿಮೆಮಾಡಿ ಆ ವಸ್ತುಗಳನ್ನು ಕಡಿಮೆಮಾಡಿಕೊಳ್ಳುವುದಕ್ಕೇನೇ ಪರಿಗ್ರಹ ಪರಿಮಾಣವ್ರತವೆಂದು ಹೆಸರು. ಯದ್ಯಪಿ ಲೋಕದಲ್ಲಿ ಹಣ, ಕಾಸು, ಆಸ್ತಿ, ಮನೆ, ಬೆಳ್ಳಿ, ಬಂಗಾರ ಮೊದಲಾದುವುಗಳನ್ನು ಪರಿಗ್ರಹವೆಂದೆನ್ನುವರು. ಆದರೆ ವಸ್ತುತಃ ಮನುಷ್ಯನ ಮಮತ್ವಪರಿಣಾಮವೇ ಪರಿಗ್ರಹವೆಂದು ಕರೆಯಲ್ಪಡುತ್ತದೆ. ಒಂದು ವೇಳೆ ಬಾಹ್ಯವಸ್ತುಗಳನ್ನೇ ಪರಿಗ್ರಹವೆಂದೆನ್ನುವುದಾದರೆ ಮನಸ್ಸಿನಲ್ಲಿ ದೊಡ್ಡ ದೊಡ್ಡ ಆಕಾಂಕ್ಷೆಗಳುಳ್ಳ ಪ್ರಕೃತ ಕೈಯಲ್ಲಿ ಏನೂ ಇಲ್ಲದಿರುವ ಅಸಂಖ್ಯ ಜನರನ್ನು ನಾವು ಅಪರಿಗ್ರಹಿಗಳೆಂದು ಕರೆಯಬೇಕಾದೀತು. ಆದರೆ ಹಾಗಿಲ್ಲ. ಯಾರ ಕೈಯಲ್ಲಿ

ಏನೂ ಇಲ್ಲವೋ ಮತ್ತು ಯಾರ ಮನಸ್ಸಿನಲ್ಲಿ ಯಾವುದೊಂದು ವಸ್ತುವಿನ ಇಚ್ಛೆಯೇ ಇಲ್ಲವೋ ಅಂತಹವನೇ ನಿಜವಾದ ಅಪರಿಗ್ರಹಿ. ಯಾಕಂದರೆ ಸಂಗ್ರಹೇಚ್ಛು ಮನುಷ್ಯನು ಪರಿಗ್ರಹವನ್ನು ಸಂಗ್ರಹಿಸಿಯೇ ಸಂಗ್ರಹಿಸುತ್ತಾನೆ. ಸಂಚಯವೃತ್ತಿಯಲ್ಲಿ ನ್ಯಾಯ-ಅನ್ಯಾಯ, ಯುಕ್ತ-ಅಯುಕ್ತ ಇವುಗಳ ವಿಚಾರವೇ ಲುಪ್ತವಾಗುವುದು. ಕೊನೆಗೆ ಅವನು ಹಣದ ಸ್ವಾಮಿಯಾಗಿರದೆ ಅದರ ದಾಸನಾಗುತ್ತಾನೆ. ತನ್ನದೆಂಬ ಬುದ್ಧಿಯು ಇಲ್ಲದೆಹೋದರೆ ವಸ್ತುಗಳ ಮಂಗಲ ಅಮಂಗಲಗಳಿಂದ ನಮ್ಮ ಚಿತ್ತದಲ್ಲಿ ಯಾವ ಪ್ರಕಾರವಾದ ರಾಗದ್ವೇಷಗಳು ಹುಟ್ಟುವುದಿಲ್ಲ. ನನ್ನದೆಂಬ ಭಾವನೆಯಿಂದಲೇ ಮನುಷ್ಯನಲ್ಲಿ ನಾನಾ ಪ್ರಕಾರವಾದ ಚಿಂತೆಗಳು ಹುಟ್ಟುತ್ತವೆ. ಹಣ, ಕಾಸು ಮೊದಲಾದ ಬಾಹ್ಯ ಪರಿಗ್ರಹಗಳಂತೆ ಕಾಮ, ಕ್ರೋಧ, ಮದ, ಮೋಹ ಮೊದಲಾದ ಭಾವಗಳು ಆಭ್ಯಂತರ ಪರಿಗ್ರಹಗಳಾಗಿವೆ. ಬಾಹ್ಯ ಪರಿಗ್ರಹಗಳಂತೆ ಈ ಆಭ್ಯಂತರ ಪರಿಗ್ರಹಗಳನ್ನು ಕಡಿಮೆ ಮಾಡಿಕೊಳ್ಳುವುದೂ ಅಗತ್ಯ. ಮನುಷ್ಯನು ತನ್ನ ಆವಶ್ಯಕತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಹಣ, ಕಾಸು, ಹೊಲ, ಮನೆ ಮೊದಲಾದ ಎಲ್ಲಾ ವಸ್ತುಗಳ ಒಂದು ಮರ್ಯಾದೆಯನ್ನು ನಿರ್ಧರಿಸಿಕೊಂಡು ಇದಕ್ಕಿಂತ ಹೆಚ್ಚು ನಾನು ಇಟ್ಟುಕೊಳ್ಳುವುದಿಲ್ಲವೆಂದು ನಿಯಮಮಾಡಿಕೊಳ್ಳುವುದೇ ಪರಿಗ್ರಹವನ್ನು ಕಡಿಮೆ ಮಾಡಿಕೊಳ್ಳುವ ಸಹಜವಾದ ಉಪಾಯ. ಹೀಗೆ ಮಾಡುವುದರಿಂದ ಅವನಲ್ಲಿ ಅನಾವಶ್ಯಕ ವಸ್ತುಗಳ ಸಂಗ್ರಹ ಆಗದಿರುವುದು ಮಾತ್ರವಲ್ಲ, ತನ್ನ ಆವಶ್ಯಕತೆಗಳ ಪೂರ್ತಿಗೆ ಬೇಕಾದ ವಸ್ತುಗಳು ತನ್ನಲ್ಲಿರುವುದರಿಂದ ಅವನಿಗೆ ಯಾವ ಪ್ರಕಾರವಾದ ಕಷ್ಟವೂ ಆಗಲಾರದು. ಇಷ್ಟೇ ಅಲ್ಲ, ಅವನು ನಿರರ್ಥಕವಾದ ಕಷ್ಟಗಳಿಗೆ ಒಳಗಾಗದೆ ತನ್ನ ಜೀವನವನ್ನು ಸುಖಮಯವಾಗಿ ಸಂತೋಷದಿಂದ ಕಳೆಯಬಹುದು. ಮನುಷ್ಯನ ಅನಾವಶ್ಯಕ ಸಂಚಯವೃತ್ತಿಯೇ ಪ್ರಪಂಚದ ಇಂದಿನ ಆರ್ಥಿಕ ವಿಷಮತೆಯ ಮೂಲಕಾರಣ. ಒಂದು ವೇಳೆ ಪ್ರತಿಯೊಬ್ಬನು ತನ್ನ ತನ್ನ ಆವಶ್ಯಕತೆಯ ಅನುಸಾರವಾಗಿ ವಸ್ತುಗಳನ್ನು ಸಂಗ್ರಹಿಸಿ ಅನಾವಶ್ಯಕ ವಸ್ತುಗಳನ್ನು ಆವಶ್ಯಕತೆಯುಳ್ಳ ಇತರರ ಪಾಲಿಗೆ ಬಿಟ್ಟುಕೊಟ್ಟರೆ ಇಂದೇ ಪ್ರಪಂಚದಲ್ಲಿ ಶಾಂತಿಯು ಸ್ಥಾಪಿತವಾಗಿ ಲೋಕವು ಸ್ವಲ್ಪಮಟ್ಟಿಗಾದರೂ ಸುಖಮಯವಾಗುವುದು. ಇಷ್ಟೇ ಅಲ್ಲ, ಇಂದು ಪ್ರಪಂಚದ ಮುಂದೆ ಉಪಸ್ಥಿತವಾದ ಸಂಪತ್ತಿಯ ವಿಭಜನೆಯ ಪ್ರಶ್ನೆಯೂ ಯಾವ ಕಾನೂನಿನ ಸಹಾಯವು ಇಲ್ಲದೆ ಬಹು ಅಂಶಗಳಲ್ಲಿ ತಾನಾಗಿಯೇ ಶಾಂತವಾಗುವುದು.

ಪ್ರಪಂಚದಲ್ಲಿ ಪ್ರತಿಯೊಬ್ಬನ ಆಶೆಗೆ ಮೇರೆಯಿಲ್ಲ. ವಿಶ್ವವೇ ಅವನಿಗೆ ಅಣುರೂಪವಾಗಿ ಕಾಣುವುದು. ಎಷ್ಟು ಸಂಗ್ರಹಮಾಡಿದರೂ ಅವನಿಗೆ ಇನ್ನೂ

ಬೇಕು. ಈ ಅನಿಯಂತ್ರಿತ ಇಚ್ಛೆಗೆ ಪಾರವೇ ಇಲ್ಲದಿರುವಾಗ ಈ ವಿಭಜನೆಯಿಂದವನಿಗೆ ತೃಪ್ತಿಯಾದೀತೇ? ಆದುದರಿಂದ ಇಚ್ಛಾನಿಯಂತ್ರಣವೇ ತೃಪ್ತಿಯ ಮೂಲ ಮಂತ್ರ. ಇದಕ್ಕಾಗಿಯೇ ಜೈನಾಚಾರ್ಯರು ಪ್ರತಿಯೊಬ್ಬ ಗೃಹಸ್ಥನು ಇಚ್ಛಾನಿಯಂತ್ರಣಕ್ಕೋಸ್ಕರ ಪರಿಗ್ರಹಪರಿಮಾಣವ್ರತವನ್ನು ಅವಶ್ಯ ಪಾಲಿಸಬೇಕೆಂದು ಅಪ್ಪಣೆ ಕೊಡಿಸಿರುವುದು. ಒಂದು ಮಾತು, ನ್ಯಾಯೋಪಾರ್ಜಿತವಾದ ಧನದಿಂದ ಮನುಷ್ಯನು ಧನಕುಬೇರನಾಗಲಾರ. ಅವನು ಧನಕುಬೇರನಾಗಬೇಕಾದರೆ ಅನ್ಯಾಯದಿಂದ ಸಂಪಾದಿಸಬೇಕು. ಮನುಷ್ಯನು ಅನ್ಯಾಯೋಪಾರ್ಜನೆಯನ್ನು ಬಿಡದ ಹೊರತು ಸುಖಿಯಾಗಲಾರ.

ಹೀಗಿರುತ್ತಾ ಮೇಲಿನ ಆದರ್ಶಮಾರ್ಗವು ಯಾವ ವಿವೇಕಿಗೆ ಸಮ್ಮತವಾಗಲಾರದು? ಲೋಭಕ್ಕೆ ವಶೀಭೂತನಾಗಿ ಪಶುಗಳಿಂದ ಶಕ್ತಿಮೀರಿ ಕೆಲಸಮಾಡಿಸಿಕೊಳ್ಳುವುದು; ಧಾನ್ಯವೇ ಮೊದಲಾದುವುಗಳಲ್ಲಿ ಅಧಿಕಲಾಭವನ್ನು ಪಡೆಯುವುದು, ಲೋಭದಿಂದ ಧಾನ್ಯಾದಿಗಳನ್ನು ಅಧಿಕಪರಿಮಾಣದಲ್ಲಿ ಸಂಗ್ರಹಿಸುವುದು; ತಾನು ಮಾಡಿದ ಧಾನ್ಯಾದಿಸಂಗ್ರಹದಲ್ಲಿ ಹೆಚ್ಚು ಲಾಭವು ಸಿಗದೆಹೋದರೆ ಅಥವಾ ತಾನು ಧಾನ್ಯಾದಿಸಂಗ್ರಹವನ್ನು ಮಾಡದೆ ಬಿಟ್ಟಿದ್ದರೆ ಅಥವಾ ಇತರರಿಗೆ ಈ ಪ್ರಕಾರವಾದ ಧಾನ್ಯಾದಿಸಂಗ್ರಹದಲ್ಲಿ ಹೆಚ್ಚಿನ ಲಾಭವು ದೊರೆತರೆ ಅದನ್ನು ನೋಡಿ ಖಿನ್ನನಾಗುವುದು; ಪರ್ಯಾಪ್ತಲಾಭ ದೊರೆತರೂ ಅದರಿಂದ ಹೆಚ್ಚು ಸಿಗಬೇಕಾಗಿತ್ತೆಂದು ಭಾವಿಸುವುದು; ಅಧಿಕಲಾಭ ಸಿಗುವ ಸಂದರ್ಭವನ್ನು ನೋಡಿ ತಾನು ಮಾಡಿಕೊಂಡಿರುವ ಮರ್ಯಾದೆಯನ್ನು ಉಲ್ಲಂಘಿಸುವುದು ಮೊದಲಾದುವು ಪರಿಗ್ರಹ ಪರಿಮಾಣವ್ರತದ ದೋಷಗಳು.

ಜೈನೇತರರ ಮಾತು ಹಾಗಿರಲಿ, ಈಗ ಜೈನರಲ್ಲಿಯೂ ಈ ವ್ರತವನ್ನು ನಿರ್ದೋಷವಾಗಿ ಪಾಲಿಸುವವರು ಎಷ್ಟು ಮಂದಿ ಸಿಗಬಹುದು? ಇದು ಜೈನಧರ್ಮಾವಲಂಬಿಗಳಿಗೆ ನಿಜವಾಗಿ ಕಲಂಕವನ್ನುಂಡುಮಾಡುವ ಮಾತು. ಈಗಿನ ಕಳ್ಳಸಂತೆಯಲ್ಲಿ ಭಾಗವಹಿಸದಿರುವ ಜೈನವ್ಯಾಪಾರಿಗಳು ಎಷ್ಟುಮಂದಿಗಳಿರುವರು? 'ಪರೋಪದೇಶೇ ಪಾಂಡಿತ್ಯಂ' ಎಂಬ ನಾಣ್ಣುಡಿಯು ಇಲ್ಲಿ ಚರಿತಾರ್ಥವಾಗುವುದಿಲ್ಲವೇ? ಈ ವಿಷಯವನ್ನು ಆಳವಾಗಿ ವಿಚಾರಮಾಡಬೇಕು.

ಕೆ. ಭುಜಬಲಶಾಸ್ತ್ರಿ

ಕಾವ್ಯಾವಲೋಕನ

೧. ಯುಗವಾಣಿ (ಕವನ ಸಂಗ್ರಹ)—ಪ್ರಕಾಶಕರು: ಆಸ್ಥಾನ ವಿದ್ವಾನ್ ಶ್ರೀ ಶಿವಮೂರ್ತಿ ಶಾಸ್ತ್ರಿಗಳು, ಶರಣಸಾಹಿತ್ಯ ಗ್ರಂಥಮಾಲಾ, ಬೆಂಗಳೂರು; ಬೆಲೆ, ರೂ. ೧—೦—೦.

ಇದೊಂದು 'ಕವನಸಂಗ್ರಹ' ಎಂದು ಪ್ರಕಾಶಕರು ಕರೆದಿದ್ದಾರೆ. ಆದರೆ ಇದರಲ್ಲಿ, ಕವನ, ವಚನ, ಕಥಾಚಿತ್ರ; 'ವಿಮರ್ಶೆ' ಗಳೂ ಇವೆ.

ಹೈದರಾಬಾದಿನ ತರುಣಲೇಖಕರ ಹಲವು ಬರಹಗಳನ್ನು ಆಯ್ದು 'ಈ ಸಂಗ್ರಹ' ದಲ್ಲಿ ಕಾಣಿಸಿದ್ದಾರೆ. ಈ ರೀತಿ ವಿವಿಧ ಲೇಖಕರ ವಿವಿಧ ಲೇಖನಗಳನ್ನು ಆಯ್ದು ಒಂದೆಡೆ ಸೇರಿಸಿ ಪ್ರಕಟಿಸುವುದು ಒಳ್ಳೆಯದು. ಆದರೆ 'ಆಯ್ಕೆ, ಯಲ್ಲಿ ತೊಡಗಿದಾಗ ಅತ್ಯುತ್ತಮವಾದುವನ್ನು ಮಾತ್ರ 'ಇಂಥ ಸಂಗ್ರಹ' ಗಳಲ್ಲಿ ಸಹೃದಯರಿಗೆ ಕೊಡುವುದು ಸೂಕ್ತ.

ಈ 'ಸಂಗ್ರಹ'ದಲ್ಲಿ ಹದಿನಾಲ್ಕು ಕವನಗಳು, ಹನ್ನೆರಡು ವಚನಗಳು ಆರು ವಿಚಾರಾತ್ಮಕ ಲೇಖನಗಳು; ನಾಲ್ಕು ಕಥಾಚಿತ್ರಗಳೂ ಇವೆ.

ಇರುವ ಹದಿನಾಲ್ಕು ಕವನಗಳಲ್ಲಿ, 'ಕಾವ್ಯಾನಂದರ' 'ಆತ್ಮ ಪಕ್ಷಿ' ಎಂಬ ಕವನವೊಂದನ್ನು ಹೊರತು ಉಳಿದುದೆಲ್ಲವನ್ನು ಕವನಗಳೆಂದು ಹೇಳುವಂತಿಲ್ಲ. ಗದ್ಯದಲ್ಲಿ ಸುಲಭವಾಗಿ ಹೇಳಬಹುದಾದ ಸಾಮಾನ್ಯ ಅಭಿಪ್ರಾಯವನ್ನು ಪ್ರಯತ್ನ ಪೂರ್ವಕವಾಗಿ ಪದ್ಯದ ಧಾಟಿಯಲ್ಲಿ ಹೇಳಿ ಅದನ್ನು 'ಕವನ' ಎಂದು ಕರೆಯುವುದು, 'ಪದ್ಯ' ಎಂಬುದು, ಯಾವುದೋ 'ಗತ್ತು' ನ್ನು ಹಿಡಿದು ಹೊಸೆಯಬಹುದಾದ 'ರಚನೆ' ಎಂದು ತಿಳಿದವರ ಭಾವನೆ. ತೀವ್ರವಾದ ಭಾವ ಅನಿವಾರ್ಯವಾಗಿಯೇ ಪದ್ಯವಾಗಿ ಮೂಡುತ್ತದೆ. ಅದಕ್ಕೆ ಪ್ರಯತ್ನ ವೂ ಬೇಕಾಗಿಲ್ಲ. ಇಲ್ಲಿರುವ ಕವನಗಳು ಪ್ರಯತ್ನ ಗಾಮಿನಿಗಳು; ಸ್ಫೂರ್ತಿ ವಾಹಿನಿಯಲ್ಲ ಎಂದು ಹೇಳಬೇಕಾಗಿದೆ. ಇನ್ನುಳಿದ, ವಚನ, ಗದ್ಯ, ಲೇಖನಗಳಲ್ಲಿ ಒಂದೆರಡನ್ನೆ ಹೊರತು ಉಳಿದವುಗಳಲ್ಲಿ ಅಸಮರ್ಪಕತೆ ತಲೆದೋರಿದೆ.

ತರುಣರ ಉತ್ಸಾಹವನ್ನು ಕಂಡು ಬೆನ್ನು ಚಪ್ಪರಿಸುವ ಹಿರಿಯರು ಬರೀ ಪ್ರೋತ್ಸಾಹಕರಾಗದೆ ಉತ್ತಮ ಮಾರ್ಗದರ್ಶಿಗಳೂ ಆಗಬೇಕಾಗುತ್ತದೆ. ಶ್ರೀ ಶಾಸ್ತ್ರಿಗಳ ಪ್ರಯತ್ನ ಸ್ತುತ್ಯವಾದುದು. ಮುಂದೆ ಅವರು ಉತ್ತಮವಾದ ಲೇಖಕರ ಉತ್ತಮ ಕೃತಿಗಳನ್ನು ಸಂಗ್ರಹಿಸಿ ಕೊಡುವರೆಂದು ಬಯಸುತ್ತೇವೆ.

***

೨. ನಿಸರ್ಗದುಡಿಯಲ್ಲಿ (ಕಥಾಚಿತ್ರಗಳ ಸಂಕಲನ)—ಸಂಪಾದಕರು: ಶ್ರೀ ಹಾ. ಮಾ. ನಾಯಕ, ಶಿವಮೊಗ್ಗ ; [ಪ್ರತಿಭಾಗ್ರಂಥಮಾಲೆ]; ಬೆಲೆ, ರೂ. ೧—೮—೦.

ಸಂಪಾದಕರಾದ ಹಾ. ಮ. ನಾಯಕರು, ವಿವಿಧ ಲೇಖಕರಿಂದ ಹನ್ನೆರಡು ಕತೆಗಳು ಸಂಪಾದಿಸಿ ಪ್ರಕಟಿಸಿದ್ದಾರೆ. 'ಚಿತ್ರದ ಚೌಕಟ್ಟು' 'ಶ್ರೀ ಪುರುಷೋತ್ತಮರ ಅಕಾಲ ನಿಧನ' ಎಂಬ ಕಥೆಗಳನ್ನು ಬಿಟ್ಟರೆ ಉಳಿದುವೆಲ್ಲ, ಸಂಕಲನಕ್ಕೆ ಇಟ್ಟಿರುವ ಹೆಸರನ್ನು ಸಾರ್ಥಕಗೊಳಿಸುತ್ತವೆ.

'ಚಿತ್ರದ ಚೌಕಟ್ಟು' ಎಂಬ ಕತೆಯಲ್ಲಿ, ಶ್ರೀ 'ಹೊಯ್ಸಳ'ರ ತಿಳಿಹಾಸ್ಯ ತುಳುಕಿದೆ ; ಅದರ ವಸ್ತು, ರೀತಿಯನ್ನು ನೋಡಿದರೆ ಅದು ಮಕ್ಕಳಿಗಾಗಿ ಬರೆದುದು ಎಂಬುದು ತಿಳಿಯುತ್ತದೆ. 'ನಾಗನೃತ್ಯ' ಎಂಬ ಕತೆ ಚೆನ್ನಾಗಿದೆ. ಮೊದಲಿನಿಂದ ಕಡೆಯುವರೆಗೂ ಓದುಗರನ್ನು ಹಿಡಿದಿಡುವ ಸಾಮರ್ಥ್ಯವಿದೆ ಆ ಕತೆಗೆ. 'ಮುಗಿಲಿನಿಂದ ಮಣ್ಣಿಗೆ' ಎಂಬುದರಲ್ಲಿ ವೈಶಿಷ್ಟ್ಯವೇನೂ ಇರದಿದ್ದರೂ ಶೈಲಿ ರಮ್ಯವಾಗಿದೆ; ಗ್ರಾಮಜೀವನದ ಚಿತ್ರ ನಮ್ಮ ಮುಂದೆ ಸ್ಪಷ್ಟವಾಗಿ ನಿಲ್ಲುತ್ತದೆ. 'ಗಿರಿಬಾಲೆ' ಎಂಬ ಕತೆ ಹಳ್ಳಿಯ ಪ್ರಣಯಿಗಳ ದುರಂತ ಕತೆ—ಇಂದಿನ ಸಿನಿಮಾ ಕತೆಗಳಂತೆ! ಹಳ್ಳಿಗರ ಬಾಳಿನ ಪ್ರಣಯದಲ್ಲಿ ತೋರುವ ಸ್ವಾಭಾವಿಕ ಮುಗ್ಧತೆಗೆ ಬದಲು ಅಸಹಜವಾದ ಪ್ರೌಢತೆ' ತಲೆದೋರಿದೆ. 'ಪುರುಷೋತ್ತಮರ ಅಕಾಲನಿಧನ' ಎಂಬುದು ಪಾಶ್ಚಾತ್ಯ ಕತೆಯೊಂದರಿಂದ ಪ್ರೇರಿತವಾದುದೆಂದು ಹೇಳಿಕೊಂಡಿದ್ದಾರೆ. ಬೇರೆಯ ದೇಶದಿಂದ ಒಂದು ವಸ್ತುವನ್ನು ತೆಗೆದುಕೊಂಡಾಗ ಅದನ್ನು ಬದಲಾಯಿಸದೆ ಭಾಷಾಂತರಿಸುವುದು, ಒಂದು ರೀತಿ; ಅಂತಹ ಘಟನೆಯನ್ನೇ ನಮ್ಮಲ್ಲಿ ತೆಗೆದುಕೊಂಡು ನಮ್ಮ ದೇಶಕ್ಕೆ ಹೊಂದಿಕೊಳ್ಳುವ ಹೊಸ ಕತೆಯನ್ನು ಸೃಜಿಸುವುದು ಇನ್ನೊಂದು ರೀತಿ. ಬೇರೆಯ ದೇಶದ ಒಂದು ಕತೆಯನ್ನು ತೆಗೆದುಕೊಂಡಾಗ, ಅದನ್ನು ನಮ್ಮದನ್ನಾಗಿ ಮಾಡಿಕೊಂಡಾಗ, ಅಲ್ಲಿನ ವ್ಯಕ್ತಿಗಳ ಹೆಸರನ್ನು ಬದಲಾಯಿಸಿ ನಮ್ಮ ದೇಶೀಯರ ಹೆಸರನ್ನಿಟ್ಟು ಸನ್ನಿವೇಶಗಳನ್ನು ಬದಲಾಯಿಸದೆ ಹಾಗೆಯೇ ತೆಗೆದುಕೊಂಡರೆ ಕಥೆ ವಿಚಿತ್ರವಾಗುತ್ತದೆ. ಏಕೆಂದರೆ ನಮ್ಮ ಸಮಾಜದ ರೀತಿನೀತಿಗಳಿಗೂ, ಬೇರೆಯ ದೇಶದ ಸಮಾಜದ ರೀತಿನೀತಿಗಳಿಗೂ ವ್ಯತ್ಯಾಸವಿದೆ. ಈ ಕತೆಯಲ್ಲಿ 'ಆಂಗ್ಲ' ಸಮಾಜದ 'ವಾಸನೆ' ಬರುತ್ತಿದೆ. 'ಸೀತಮ್ಮನ ಭಾಗ್ಯ'—ಎಲ್ಲ ಕುಡುಕರ ಕತೆಗಳಂತೆ ಒಂದು ಕತೆ. ಈ ಕತೆಯ ವ್ಯಕ್ತಿಗಳು, ಸೀತಮ್ಮ ; ಮಂಜಯ್ಯ ; ನಾಗು ; ಸುಬ್ಬಕ್ಕ ಇವರು ಯಾವ ಮಟ್ಟದ ಸಮಾಜದವರು ? ಹಾ. ಮ. ನಾಯಕರ, ಕತೆ. 'ಆಶಾವಾದಿ' ಚೆನ್ನಾಗಿದೆ. ಎದೆಯ ಕುದಿ ಚೆನ್ನಾಗಿ ಚಿತ್ರಿತವಾಗಿದೆ. ಉಳಿದ ಕತೆಗಳೂ ಓದಲರ್ಹವಾಗಿವೆ.

ತ

ಈ ಸಂಕಲನದ ಕತೆಗಳಲ್ಲಿ ವೈವಿಧ್ಯವಿದೆ ; ಜೀವವಿದೆ ; ಎಲ್ಲಿಯೂ ಬೇಸರವಾಗುವುದಿಲ್ಲ. ಇಂತಹ ಸಂಕಲನವನ್ನು ಕೊಟ್ಟ ಶ್ರೀಯುತ ನಾಯಕರು ಅಭಿನಂದನೀಯರು.

***

೩. ಅರೆಯಾಳು—ಲೇಖಕರು : ಶ್ರೀ ಕುಲಕರ್ಣಿ ಬಿಂದುಮಾಧವ ; ಪ್ರಕಾಶಕರು : ಶಾಂತಿಸಾಹಿತ್ಯಮಾಲೆ, ಧಾರವಾಡ.

ಇದು ಎರಡು ನೀಳ್ಗತೆಗಳ ಸಂಗ್ರಹ. ಮೊದಲನೆಯದು 'ಸೆರೆಯಾಳು'; ಇನ್ನೊಂದು 'ಅರೆಯಾಳು'.

'ಸೆರೆಯಾಳು' ಎಂಬ ನೀಳ್ಗತೆ 'ಬಾಳಿನಲ್ಲಿ ಸಮತೆ ಬೇಕು. ಸ್ವಾತಂತ್ರ್ಯ ಬೇಕು ಸಹಕಾರಬೇಕು' ಎಂಬುದನ್ನು ತಿಳಿಸುತ್ತದೆ. 'ಅರೆಯಾಳು' ಎಂಬ ಕತೆ ಹಳ್ಳಿಯ ಬಾಳಿನ ಸಂಸ್ಕೃತಿಯ ದರ್ಶನ ಮೂಡಿಸುತ್ತದೆ.

ಸೆರೆಯಾಳು ಎಂಬ ಕತೆ, ಎರಡು ಸಂಸಾರಗಳು, ತಮ್ಮ ಮಕ್ಕಳ ಮೇಲೆ ಮಾಡಿದ ಪರಿಣಾಮದ ಕತೆ. ಮದುವೆಯಾದ ಹೆಂಡತಿಯನ್ನು ಕಾಲಕಸಕ್ಕಿಂತ ಕಡೆಯಾಗಿ ಕಾಣುವ ದರ್ಪಿಷ್ಠ 'ರಾಯರ' ಸಂಸಾರ ಒಂದು ಕಡೆ, ಹೆಂಡತಿಯ ಆಡಳಿತಕ್ಕೆ ಸಿಕ್ಕಿ ಆಕೆಯ ಅಧಿಕಾರವಾಣಿಗೆ ತಲೆಬಾಗಿ ನಡೆಯುವ 'ಶಾಮರಾಯ'ರ ಸಂಸಾರ ಇನ್ನೊಂದು ಕಡೆ. ರಾಯರ ಮಗಳು 'ಶ್ಯಾಮಲೆ' ಯಲ್ಲಿ ತನ್ನ ತಂದೆಯ ದರ್ಪದಲ್ಲಿ ನೋಯುವ ತಾಯಿಯನ್ನು ಕಂಡು, "ಈ ಗಂಡಸರ ಕುಲವೇ ಹೀಗೆ : ಹೆಣ್ಣು ಕೇವಲ ಸೆರೆಯಾಳು" ಎಂಬ ಭಾವನೆ ಸಹಜವಾಗಿ ಮೂಡುತ್ತದೆ. ಆದರಿಂದ ಆಕೆ ತಾನು "ಏನಾದರೂ ಹೆಣ್ಣು ಗಂಡಿನ ಸೆರೆಯಾಳಾಗಿ ಜೀವಿಸಬಾರದು" ಎಂದು ನಿರ್ಧರಿಸುತ್ತಾಳೆ. ಅತ್ತ ಶಾಮರಾಯರ ಮಗ, ತನ್ನ ತಾಯಿಯ ದರ್ಪಕ್ಕೆ ಸಿಕ್ಕಿ ನರಳುವ ತಂದೆಯನ್ನು ಕಂಡು, 'ಕೊಂಚ ಸಲಿಗೆಯನ್ನಿತ್ತರೆ ಈ ಹೆಣ್ಣು ಜಾತಿಯೇ ಹೀಗೆ : ನಮ್ಮನ್ನೆ ಆಕ್ರಮಿಸಿ ನಿಂತು ಮೆಟ್ಟಿ ತುಳಿಯುತ್ತದೆ. "ಹೆಂಡತಿಯ ಸೆರೆಯಾಳಾಗಿ ನಾನೆಂದೂ ಬಾಳಲಾರೆ" ಎಂದು ನಿರ್ಧರಿಸುತ್ತಾನೆ. ಈ ಎರಡು ಸಂಸಾರಗಳಿಗೂ ಸಂಬಂಧ ಬರುತ್ತದೆ, ಕೃಷ್ಣ ಮತ್ತು ಶ್ಯಾಮಲೆಯರ ಮದುವೆಯಿಂದ. ಅನಂತರ ಈ ನೂತನ ದಂಪತಿಗಳು ಬೇರೆಯೊಂದು ಊರಿನಲ್ಲಿ ಬಾಳಬೇಕಾಗುತ್ತದೆ. ಅವರು ಜನಿಸಿ ಬೆಳೆದ ಆವರಣ ಅಜ್ಞಾತ್ತಿದ ಪರಿಣಾಮವಾಗಿ ಅವರು ಬೇರೆ ಬೇರೆಯಾಗಿ ಕಲ್ಪಿಸಿಕೊಂಡು ವಿಚಿತ್ರ 'ಧ್ಯೇಯ'ಗಳ ಪರಿಣಾಮವಾಗಿ ಸಂಸಾರದಲ್ಲಿ ವಿರಸ ಉಂಟಾಗುತ್ತದೆ. ಇಬ್ಬರೂ ತಮ್ಮ ತಮ್ಮ ದೋಷವನ್ನರಿಯದೆ ಅನ್ಯರ ತಪ್ಪುಗಳನ್ನೇ ಹಿರಿದುಮಾಡುತ್ತಾರೆ. ಅರ್ಥಮಾಡಿಕೊಂಡು ಬಾಳುವುದಕ್ಕಿಂತ ಅಪಾರ್ಥಮಾಡಿ

ಕೊಂಡು ಕಿತ್ತಾಡುವುದು ಸುಲಭ. ವಿಚಿತ್ರ ಪರಿಸ್ಥಿತಿಯ ತೂಗುಯ್ಯಲಾಗಿದ್ದ ಈ ದಂಪತಿಗಳು ದೀಪಾವಳಿ ಹಬ್ಬಕ್ಕಾಗಿ ಹಳ್ಳಿಗೆ ಬರುತ್ತಾರೆ. ಅಲ್ಲಿ ಸಾಮಾನ್ಯವಾದ ಬಡರೈತ ದಂಪತಿಗಳ ಸಮರಸಜೀವನದ ಸಂಸಾರ ಚಿತ್ರವೊಂದು ಇವರಿಗೆ ಪಾಠ ಕಲಿಸುತ್ತದೆ. ಗಂಡಹೆಂಡಿರು ಬಿಟ್ಟುಕೊಟ್ಟು ಬಾಳಬೇಕು. ಪ್ರೇಮವೆಂದರೆ ಪರಸ್ಪರ ತ್ಯಾಗ. ಯಾರು ಯಾರಿಗೂ ಸೆರೆಯಾಳಲ್ಲ. "ಒಬ್ಬರು ಇನ್ನೊಬ್ಬರನ್ನು ಸೆರೆಯಾಳೆಂದು ಭಾವಿಸುವುದು ಹುಚ್ಚುತನ" ಎಂಬುದು ಅರ್ಥವಾಗುತ್ತದೆ. ಅಂದಿನಿಂದ ಅವರ ಹೊಸಜೀವನ ಆರಂಭವಾಗುತ್ತದೆ.

'ಅರೆಯಾಳು' ಕತೆಯಲ್ಲಿ ಎರಡು ಸಂಸಾರದ ಚಿತ್ರವಿದೆ. ಹಳ್ಳಿಯ ಹುಡುಗಿ 'ಲೀಲೆ'ಯನ್ನು ಮದುವೆಯಾಗಿ, ನಗರನಾಗರಿಕತೆಯ ವ್ಯಾಮೋಹದಿಂದ, ನಾಗರಿಕ ಜೀವನವೇ 'ಸುಸಂಸ್ಕೃತ' ಜೀವನ ಎಂದು ಭಾವಿಸಿ, ತನ್ನ ಮಡದಿಯ ಸರಳ ನಿಷ್ಕಪಟ ಭಾವಗಳನ್ನು ಅಸಂಸ್ಕೃತ ಎಂದು ತಿಳಿದು, ತನ್ನ ಮಡದಿಗೆ ನಾಗರಿಕ ದೀಕ್ಷೆ ಕೊಡಲು ಯತ್ನಿಸಿ, ವಿಫಲವಾಗಿ ತೊಳಲಾಡುವ 'ರಾಘು' ಒಂದು ಕಡೆ; ವಿದ್ಯಾವಂತನಾದರೂ, ಹಳ್ಳಿಯ ಉದ್ಧಾರಕ್ಕೆ ಆಸೆಪಟ್ಟು, ಹಳ್ಳಿಯಲ್ಲೇ ನಿಂತು, ನಗರನಾಗರಿಕತೆಯನ್ನೇ ನಿಜವಾದ ಜೀವನ ಎಂದು ಭಾವಿಸಿ, ಹಳ್ಳಿಯ ಜೀವನದಿಂದ ಜಿಗುಪ್ಸೆಗೊಂಡ ಮಡದಿ 'ಸೀತೆ'ಯ ಜೊತೆಯಲ್ಲಿ ತಳಮಳಿಸುವ 'ರಾಮು' ಒಂದುಕಡೆ. ಒಂದುಸಲ 'ರಾಘು' ಪತ್ನಿಯೊಡನೆ 'ರಾಮು'ವಿನ ಹಳ್ಳಿಗೆ ಬರುತ್ತಾನೆ. ಆಗ ಈ ನಾಲ್ವರೂ ಹಳ್ಳಿಯ ಉತ್ಸವವೊಂದನ್ನು ನೋಡುತ್ತಾರೆ. 'ಸಾಮುದಾಯಿಕ ಉತ್ಸಾಹ ಸಂತೋಷದ ಸುದ್ದಿಗಳಲ್ಲಿ ಹೆಣ್ಣುಗಂಡು ಎಂಬ ಭೇದಭಾವವೂ ಕೂಡ ಅಳಿದು ಎಲ್ಲರೂ ಒಬ್ಬ ತಂದೆಯ ಮಕ್ಕಳು ಎಂಬಂತೆ ಉತ್ಸವಾದಿಗಳಲ್ಲಿ ಭಾಗವಹಿಸುತ್ತಿರುವ' ದೃಶ್ಯವನ್ನು ನೋಡಿ ರಾಘುವಿಗೆ ನಾವು ಸುಸಂಸ್ಕೃತರು, ಇವರು ಅಸಂಸ್ಕೃತರು ಎಂಬ 'ಪೂರ್ವಗ್ರಹ' ಮಾಯವಾಗುತ್ತದೆ. ಆಗ ಹಳ್ಳಿಯ ಬಾಳಿನಲ್ಲಿ ಜೀವವಿದೆ; ಇದು ನಿಜವಾದ ಸಂಸ್ಕೃತಿ ಎಂಬುದು ಅರಿವಾಗುತ್ತದೆ. 'ಬರಿಯ ನಗರದ ಬಾಹ್ಯಬೆಳಕೇ ಆತ್ಮಬೆಳಕೆಂದು' ತಿಳಿದ ಅವನ ನಂಬಿಕೆ ತಲೆಕೆಳಗಾಗುತ್ತದೆ. ತನ್ನ ಮಡದಿ ಹಳ್ಳಿಯ ಹುಡುಗಿಯಾದುದರಿಂದ ತಾನು ಇದುವರೆಗೂ ತೋರಿದ ತಿರಸ್ಕಾರವನ್ನು ನೆನೆದು, ಪಶ್ಚಾತ್ತಾಪಪಟ್ಟು, ಹೆಂಡತಿಯ ಕ್ಷಮೆಯನ್ನು ಬೇಡುತ್ತಾನೆ. ನಾಗರಿಕ ವ್ಯಾಮೋಹದಿಂದ, ಹಳ್ಳಿಗರನ್ನು ಅವಜ್ಞಿಸುತ್ತಿದ್ದ ಸೀತೆ'ಗೂ ಹಳ್ಳಿಗರ ಜೀವನದರ್ಶನದಿಂದ, ಕಣ್ತೆರೆಯುತ್ತದೆ. ಹಳ್ಳಿಯ ಜೀವನದಲ್ಲಿ ಆಸಕ್ತಿವಹಿಸಿದ್ದ ತನ್ನ ಗಂಡನನ್ನು ಅನಾದರಿಸಿದುದಕ್ಕಾಗಿ ಕ್ಷಮೆ ಕೇಳುತ್ತಾಳೆ.

ಭಾರತದ ನಿಜವಾದ ಸಂಸ್ಕೃತಿ ಗೋಚರಿಸುವುದು ಹಳ್ಳಿಗಳಲ್ಲಿ. ನಗರ ನಾಗರಿಕತೆಯಿಂದ 'ಅಂಧ'ರಾದ ವಿದ್ಯಾವಂತ ತರುಣರಿಗೆ ಹಳ್ಳಿಯ ಸಂಸ್ಕೃತಿ ದರ್ಶನದಿಂದ ನೂತನ ಸಂಸ್ಕಾರ ಲಭಿಸುತ್ತದೆ. ಬಹುವೇಳೆ, ಅಸಾಮಾನ್ಯತೆ ಸಾಮಾನ್ಯತಾವೇಷಿಯಾಗಿರುತ್ತದೆ. ಹಳ್ಳಿಗರ ಸಾಮಾನ್ಯ ಜೀವನದ ಆಳದಲ್ಲಿ ಭಾರತದ ಪ್ರಾಚೀನ ಸಂಸ್ಕೃತಿ ಗುಪ್ತವಾಗಿ ಹರಿಯುತ್ತಿದೆ. ಅದನ್ನು ದರ್ಶಿಸುವ ವರೆಗು ಮನುಷ್ಯ ಬರೀ 'ಅರೆಯಾಳು.'

'ಶ್ರೀ ಮಧುರಚನ್ನ'ರು ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ—"ಶ್ರೀ ಬಿಂದು ಮಾಧವರು ಇಂದು ತಮ್ಮ ಹೃದಯದ ಚಿಕ್ಕ ಕನ್ನಡಿಯಲ್ಲಿ ಹಳ್ಳಿಗರ ಜೀವನದ ಹಿಂಬದಿಗಿರುವ ಭವ್ಯ ವಿಶ್ವರೂಪದರ್ಶನವನ್ನು ಈ ಕತೆಯಲ್ಲಿ ಕಂಡಿದ್ದಾರೆ. ಇದನ್ನು ಕಾಣುವ ವರೆಗೆ ಮನುಷ್ಯನು ಪೂರ್ಣನೇ ಅಲ್ಲ" ಎಂದು ಹೇಳಿದ್ದಾರೆ.

ಕಥಾತಂತ್ರ ನವೀನವಾಗಿದೆ; ಬರೆವಣಿಗೆಯಲ್ಲಿ ಸರಳತೆಯಿರುವುದರಿಂದ ಸುಂದರವಾಗಿದೆ. ಸಹಜವಾದ ಸನ್ನಿವೇಶಗಳಿಂದ, ಕತೆ ಸಹೃದಯರ ಕುತೂಹಲವನ್ನು ಕೆರಳಿಸಿ, ಕಡೆಯವರೆಗೂ ಹಿಡಿದು ನಿಲ್ಲಿಸುವ ಕೌಶಲದಿಂದ ಕೂಡಿದೆ. ಲೇಖಕರು ಪ್ರತಿಪಾದಿಸಬೇಕೆಂದಿರುವ ತತ್ವಕ್ರಮವಾಗಿ ವಿಕಾಸಗೊಂಡು ಫಲಿಸಿದೆ. ಎರಡು ಕಥೆಗಳೂ ತತ್ವಪ್ರಕಾಶನೋದ್ದೇಶವಾಗಿ ರಚಿತವಾದಂತೆ ತೋರುವುದರಿಂದ, ರಚನೆ ಯಲ್ಲಿ ಒಂದು ಬಗೆಯ ಯಾಂತ್ರಿಕತೆ ಕಾಣದಿರುವುದಿಲ್ಲ.

ಒಟ್ಟಿನಲ್ಲಿ ಈ ಸಂಗ್ರಹದ ಕತೆ ಚೆನ್ನಾಗಿವೆ. ಈಚೆಗೆ ರಾಸಿರಾಸಿಯಾಗಿ ಬರುತ್ತಿರುವ ನೀರಸ ಕತೆಗಳನ್ನೋದಿ ಬೇಸರಗೊಂಡವರಿಗೆ, ಇಲ್ಲಿ ರಸದೊರತೆಯಿದೆ.

***

೪. ಕಂದ—ಶಿಶುಸಾಹಿತ್ಯ ಸಂಘ, ವನಿತಾಸದನ, ಜಯನಗರ, ಮೈಸೂರು.

'ಕಂದ' ಮಾಸಪತ್ರಿಕೆಯ ಪ್ರಥಮ ಸಂಪುಟದ ಹಲವು ಸಂಚಿಕೆಗಳು ಬಂದಿವೆ. ಮಕ್ಕಳ ಮನರಂಜನೆ ಹಾಗೂ ವಿಕಾಸಕ್ಕೆ ನೆರವಾಗುವ ಚಿತ್ರಗಳು, ಕಥೆಗಳು ತುಂಬಿ ಆಕರ್ಷಕವಾಗಿವೆ. ವನಿತಾಸದನದವರ ಈ ಪ್ರಯತ್ನ ಅಭಿನಂದನೀಯವಾದುದು.

ಜಿ. ಎಸ್. ಶಿ.

***

ಮೈಸೂರಿನ ಪ್ರಸಕ್ತವರ್ಷದ ವಿಷಯಸಂಗ್ರಹ ಮತ್ತು ಕೈಪಿಡಿ— Mysore Year Book and Directory, 1951.

ಬೆಂಗಳೂರಿನ ಕೇಸರಿ ಪ್ರಕಟಣಮಂದಿರದ ಚಾಲಕರಾದ ಶ್ರೀ ಆರ್. ಎಸ್. ನಾರಾಯಣರವರು ಶೇಖರಿಸಿ ಪ್ರಕಟಿಸಿರುವ ಮೈಸೂರಿನ ಪ್ರಸಕ್ತವರ್ಷ ವಿಷಯ

ಸಂಗ್ರಹ ಮತ್ತು ಕೈಪಿಡಿಯು ನಮ್ಮ ಕೈಸೇರಿದೆ. ಮೈಸೂರಿಗೆ ಸಂಬಂಧಪಟ್ಟಹಾಗೆ ಇಂತಹ ಪುಸ್ತಕ ಪ್ರಕಟವಾಗಿರುವುದು ಇದೇ ಮೊದಲು. (ಇದರಲ್ಲಿರುವ ಕೆಲವು ವಿಷಯಗಳು ಮೈಸೂರು ದಸರಾ ವಸ್ತುಪ್ರದರ್ಶನದ ಕೈಪಿಡಿಗಳಲ್ಲಿ ಆಗಾಗ ಪ್ರಕಟವಾಗುತ್ತಿವೆ.) ಪ್ರಕಾಶಕರು ಬಹು ಶ್ರಮಪಟ್ಟು ಇಂದಿನ ನಾಗರೀಕನಿಗೆ ಆವಶ್ಯಕವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಪುಸ್ತಕದ ಹೊರಮೈ ಒಳಗಿನ ವಿಷಯದಂತೆಯೇ ಬಹು ಆಕರ್ಷಕವಾಗಿದೆ. ಬೆಲೆ ಮೂರು ರೂಪಾಯಿ ಮಾತ್ರ. ಗ್ರಂಥವು ಐದು ಭಾಗಗಳಾಗಿವೆ. ಮೊದಲನೆಯ ಭಾಗವು ಪ್ರಪಂಚದ ಸಾಮಾನ್ಯ ವಿಷಯಗಳಿಗೆ ಸಂಬಂಧಪಟ್ಟದು. ಇಲ್ಲಿ ಪ್ರಪಂಚದ ಮುನ್ನಡೆ, ಪ್ರಸಕ್ತವರ್ಷದ ಪ್ರಸಿದ್ಧಸಂಗತಿಗಳು, ಸಂಯುಕ್ತಜನಾಂಗ, ಪಂಚಾಂಗ, ಪ್ರಜಾಸಂಖ್ಯೆ, ಜೀವನದ ಮಟ್ಟ ಮೊದಲಾದ ವಿಷಯಗಳು ತುಲನಾತ್ಮಕವಾದ ಅಂಕಿಅಂಶಗಳ ಸಹಾಯದಿಂದ ವಿಸ್ತರಿಸಲ್ಪಟ್ಟಿವೆ. ಎರಡನೆಯ ಭಾಗದಲ್ಲಿ ಭಾರತದ ಪ್ರಾಕೃತಿಕ ರಚನೆ, ರಾಜ್ಯಾಂಗ, ಸಂಸ್ಥಾನಗಳ ಭದ್ರತೆ, ಎ.ಬಿ.ಸಿ. ಪ್ರಾಂತಗಳು, ಪ್ರಸಕ್ತವಿಷಯದ ಪ್ರಮುಖ ಸಮಾಚಾರಗಳು, ಕೇಂದ್ರದ ವರಮಾನ, ಸರ್ಕಾರ ಮುಂತಾದ ವಿಷಯಗಳ ಸಂಗ್ರಹ ವರದಿಯಿದೆ. ಮೂರನೆಯ ಭಾಗವು ಮೈಸೂರಿಗೆ ಸಂಬಂಧಪಟ್ಟದು. ಈ ಭಾಗದಲ್ಲಿ ಪ್ರಾಕೃತಿಕರಚನೆ, ಇತಿಹಾಸ, ಆಧುನಿಕ ಮೈಸೂರು, ೧೯೫೦ ರಲ್ಲಿ ಸಚಿವ ಮಂಡಳಿಯ ಕಾರ್ಯಕಲಾಪಗಳು, ೧೯೫೦ ನೆಯ ವರ್ಷದ ಮುಖ್ಯ ಸಂಗತಿಗಳು, ವೈಜ್ಞಾನಿಕರ ಸಮ್ಮೇಳನ, ಪ್ರಜಾಸಂಖ್ಯೆ, ವ್ಯವಸಾಯ, ಭಾರತದ ಬಾನುಲಿಯ ಮೈಸೂರುಶಾಖೆ, ಪ್ರಾಚ್ಯಸಂಶೋಧನ, ಸಹಕಾರ, ವಿದ್ಯಾಭ್ಯಾಸ, ವಿದ್ಯುಚ್ಛಕ್ತಿ, ಅರಣ್ಯಗಳು, ವರಮಾನ, ಮಹಾರಾಜರ ಸ್ವಂತ ಆಸ್ತಿಯ ವಿಷಯವಾದ ಒಪ್ಪಂದ, ಭೂಮಿಯ ಅಳತೆ ಮತ್ತು ನಿರ್ಣಯ, ಆಹಾರ, ಉದ್ಯಾನ, ಉದ್ಯೋಗ, ನ್ಯಾಯಾಂಗ ಕಾರ್ಮಿಕರ ಪರಿಸ್ಥಿತಿ, ಕೇಂದ್ರ ಮತ್ತು ಪ್ರಾಂತಶಾಸನಾಂಗ, ಪಾನನಿರೋಧ, ವೈದ್ಯಸಹಾಯ, ವೃತ್ತಪತ್ರಿಕೆಗಳು, ಗ್ರಾಮಾಭಿವೃದ್ಧಿ, ವ್ಯಾಪಾರ, ರೇಷ್ಮೆಯ ಕೈಗಾರಿಕೆ, ಪ್ರವಾಸಿಗರ ಪರಂಧಾಮ, ಸರ್ಕಾರ, ಶಾಸನಸಭೆಯ ಸದಸ್ಯರು, ಬೆಂಗಳೂರು ನಗರ ಸಭೆ, ಸಂಸ್ಥೆಗಳು ಎಂಬ ಶಿರೋನಾಮೆಗಳಲ್ಲಿ ವಿಷಯಗಳು ಉಕ್ತವಾಗಿವೆ. ನಾಲ್ಕನೆಯ ಭಾಗವು ಮೈಸೂರಿನಲ್ಲಿರುವ ಗಣ್ಯವ್ಯಕ್ತಿಗಳ ಪರಿಚಯ ಸಂಬಂಧವಾದುದು. ಐದನೆಯ ಭಾಗವು ಉದ್ಯೋಗ ಮತ್ತು ವ್ಯಾಪಾರಗಳ ವಿವರಗಳನ್ನು ತಿಳಿಸುತ್ತದೆ.

ಈ ಗ್ರಂಥವನ್ನು ಸಿದ್ಧಪಡಿಸುವುದರಲ್ಲಿ ಸಂಗ್ರಾಹಕರು ವಿಶೇಷ ಶ್ರಮಪಟ್ಟಿದ್ದಾರೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕಾದ ಗ್ರಂಥವಿದು. ಆದರೂ ಕನ್ನಡದ

ಸಂಬಂಧವಾದ ವಿಷಯಗಳಿಗೆ ಇಲ್ಲಿ ಸೂಕ್ತಸ್ಥಾನ ದೊರೆತಿಲ್ಲ. ಕರ್ಣಾಟಕದ ಮತ್ತು ಕನ್ನಡಸಾಹಿತ್ಯದ ಸಂಕ್ಷಿಪ್ತ ಇತಿಹಾಸ, ಕರ್ಣಾಟಕದ ಪ್ರೇಕ್ಷಣೀಯ ಸ್ಥಳಗಳು, ಕನ್ನಡಕ್ಕಾಗಿ ದುಡಿಯುತ್ತಿರುವ ಸಂಸ್ಥೆಗಳು, ಪ್ರಸಿದ್ಧ ಕನ್ನಡಿಗರು, ವಿದ್ವಾಂಸರು, ಮತ್ತು ಕವಿಗಳು, ಕನ್ನಡದ ವೃತ್ತಪತ್ರಿಕೆಗಳು ಮತ್ತು ಪತ್ರಿಕಾಕರ್ತರು, ಕನ್ನಡದ ಪ್ರಕಟನಕಾರರು ಮತ್ತು ಮಾರಾಟಗಾರರು, ಪ್ರಸಕ್ತವರ್ಷದಲ್ಲಿ ರಚಿತವಾದ ಕನ್ನಡ ಗ್ರಂಥಗಳು ಮತ್ತು ಲೇಖನಗಳು ಮೊದಲಾದ ವಿಷಯಗಳನ್ನೊಳಗೊಂಡ ಮತ್ತೊಂದು ಭಾಗವಿದ್ದಿದ್ದರೆ ಬಹುಮಟ್ಟಿಗೆ ಪ್ರಯೋಜನಕಾರಿಯಾಗುತ್ತಿತ್ತು. ಈಗ ಇಂಥವು ಪೂರ್ಣವಾಗಿ ಬಿಟ್ಟುಹೋಗಿವೆಯೆಂದಲ್ಲ. ಬಹು ಅಪೂರ್ವವಾಗಿ ಅಲ್ಲೊಂದು ಇಲ್ಲೊಂದು ನುಸುಳಿಕೊಂಡು ಸೇರಿವೆ. ಅಷ್ಟೆ ಸಾಲದು. ಅಲ್ಲದೆ ಸಂಗ್ರಾಹಕರು ತಮ್ಮ ದೃಷ್ಟಿಯನ್ನು ಬೆಂಗಳೂರಿನಲ್ಲಿಯೇ ಕೇಂದ್ರೀಕರಿಸಿರುವಂತೆ ತೋರುತ್ತದೆ. ಸಂಸ್ಥಾನದ ಎಲ್ಲೆಡೆಗೂ ಪ್ರಸರಿಸಿ ವಿಷಯಗಳನ್ನು ಸಂಗ್ರಹಿಸಿದರೆ ಮತ್ತಷ್ಟು ಪ್ರಯೋಜನಕಾರಿಯಾಗುತ್ತದೆ. ಮುಂದಿನ ಸಂಚಿಕೆಗಳಲ್ಲಿ ಸಂಗ್ರಾಹಕರು ಮೇಲಿನ ಸೂಚನೆಗಳಿಗೆ ಗಮನಕೊಟ್ಟು ಕನ್ನಡದ ಮುನ್ನಡೆಗೆ ಸಹಾಯವಾಗುತ್ತಾರೆಂದು ನಂಬುತ್ತೇವೆ.

***

‘ಇಂಡಿಯಾನ’ ಅಥವಾ ‘ಪಂಜೀಪರಿಷತ್ತಿನ ಪತ್ರಿಕೆ’—

ಭಾರತದಲ್ಲಿ ಪ್ರತಿ ವರ್ಷವೂ ಪ್ರಕಟವಾಗುತ್ತಿರುವ ಎಲ್ಲ ಲೇಖನಗಳ ಮತ್ತು ಗ್ರಂಥಗಳ ಪರಿಚಯ ವಿದ್ವಾಂಸರಿಗೂ ಸಂಶೋಧಕರಿಗೂ ಎಷ್ಟು ಆವಶ್ಯಕವೆಂಬುದನ್ನು ಪ್ರತ್ಯೇಕವಾಗಿ ತಿಳಿಸಬೇಕಾಗಿಲ್ಲ. ನಾಗರೀಕವಾದ ಪಾಶ್ಚಾತ್ಯದೇಶಗಳಲ್ಲೆಲ್ಲಾ ಇದಕ್ಕೆ ವಿಶೇಷ ಸೌಕರ್ಯಗಳಿವೆ. ಆದರೆ ಭಾರತದಲ್ಲಿ ಈ ಸೌಲಭ್ಯವಿಲ್ಲದಿರುವುದು ದೊಡ್ಡ ಕೊರತೆ. ಇದರ ಪರಿಹಾರಕ್ಕಾಗಿಯೇ ವಾರಣಾಸಿಯಲ್ಲಿರುವ ಶ್ರೀಯುತ ಸತೀಶಚಂದ್ರ ಥಾಕೂರರವರು ೧೯೩೬ ರಲ್ಲಿ ‘ಇಂಡಿಯಾನ’ ಎಂಬ ಪ್ರಾಚ್ಯ ಲೇಖನಾವಳಿಗೆ ಸಂಬಂಧಪಟ್ಟ ಪತ್ರಿಕೆಯನ್ನು ಪ್ರಾರಂಭಿಸಿ ಮೂರು ವರ್ಷಗಳ ಕಾಲ ನಡಸಿಕೊಂಡು ಬಂದರು. ಕಾರಣಾಂತರಗಳಿಂದ ೧೯೪೧ ರಲ್ಲಿ ನಿಂತುಹೋಗಿದ್ದ ಈ ಪತ್ರಿಕೆಯು ಈಗ ಪುನಃ ಕಾಶಿಯಲ್ಲಿರುವ ಗಾಂಧಿಗ್ರಾಮದಿಂದ ಪ್ರಾರಂಭವಾಗಿದೆ. ಶ್ರೀ ಥಾಕೂರರವರೇ ಪ್ರಸಕ್ತ ಸಂಪಾದಕರು. ಈ ಪತ್ರಿಕೆಯ ಉದ್ದೇಶ ಬಹು ಹಿರಿದಾಗಿದೆ. ಭಾರತದಲ್ಲಿ ಪ್ರತಿವರ್ಷವೂ ಪ್ರಕಟವಾಗಬಹುದಾದ ಎಲ್ಲ ಲೇಖನಗಳ ಮತ್ತು ಗ್ರಂಥಗಳ ಅಕಾರಾದಿಯಾದ ಪಟ್ಟಿಯನ್ನು ಶಾಸ್ತ್ರರೀತ್ಯಾ ಸಂಗ್ರಹಿಸಿ ಪ್ರಚಾರಪಡಿಸುವುದು ಇದರ ಮುಖ್ಯಗುರಿ. ಭಾರತದ ಎಲ್ಲ ಭಾಷೆಯ ಎಲ್ಲ ವಿಷಯ

ಗಳೂ ಇದರ ವ್ಯಾಪ್ತಿಗೆ ಸೇರಿದುದು. ಮೊದಲನೆಯ ಭಾಗದಲ್ಲಿ ಪುಸ್ತಕ ಪರಿಚಯ ಶಾಸ್ತ್ರಕ್ಕೆ (Bibliography) ಸಂಬಂಧಪಟ್ಟ ಲೇಖನಗಳಿರುತ್ತವೆ. ಎರಡನೆಯ ಭಾಗವೇ ಲೇಖನಾವಳಿಗಳ ಮತ್ತು ಗ್ರಂಥಗಳ ಅಕಾರಾದಿ. ಸೂಚಿಯಲ್ಲಿ ಲೇಖನದ ಹೆಸರು, ಲೇಖಕರ ಹೆಸರು, ಪ್ರಕಟಸಿರುವ ಪತ್ರಿಕೆ, ಸಂಪುಟ, ಸಂಚಿಕೆ, ಪುಟ ಮೊದಲಾದ ವಿವರಗಳಿವೆ. ವರ್ಷಕ್ಕೆ ಅಯ್ದು ರೂಪಾಯಿಗಳ ಚಂದಾ ಹಣವನ್ನು ಕೊಟ್ಟೋ ಅಥವಾ ಪತ್ರಿಕಾಕಾರ್ಯದಲ್ಲಿ ಭಾಗವಹಿಸಿಯೋ (ಲೇಖನಗಳ ಮತ್ತು ಗ್ರಂಥಗಳ ಸೂಚಿಯನ್ನು ಸಂಗ್ರಹಮಾಡಿ ಕಳುಹಿಸುವುದರ ಮೂಲಕ) ಪತ್ರಿಕೆಯ ಸದಸ್ಯರಾಗಬಹುದು. ಈಗಿನ ನಾಲ್ಕನೆಯ ಸಂಪುಟವು ೧೯೫೦ ನೆಯ ವರ್ಷಕ್ಕೆ ಸಂಬಂಧಪಟ್ಟದು. ಸುಮಾರು ೧೨ ಪ್ರಸಿದ್ಧ ಭಾರತೀಯ ಪತ್ರಿಕೆಗಳ, ಆಧಾರದಮೇಲೆ ಈ ಸಂಪುಟ ಸಿದ್ಧವಾಗಿದೆ. ಅವುಗಳು ಇಂಗ್ಲಿಷ್, ಹಿಂದೀ, ಬಂಗಾಳಿ ಭಾಷೆಯವು. ಭಾರತದ ಇತರ ಭಾಷೆಯ ವಿದ್ವಾಂಸರು ಸಹಕರಿಸಿದಷ್ಟೂ ಪತ್ರಿಕೆಯ ಪ್ರಯೋಜನವು ಹೆಚ್ಚುತ್ತ ಹೋಗುವುದು. ಚಾಲಕರಾಗಲಿ, ಪ್ರಕಾಶಕರಾಗಲಿ, ಲೇಖಕ ಅಥವಾ ಗ್ರಂಥಕರ್ತರಾಗಲಿ, ತಮ್ಮ ಗ್ರಂಥಗಳ ಎರಡು ಪ್ರತಿಗಳನ್ನು 'ಇಂಡಿಯಾನ'ದ ಸಂಪಾದಕರಿಗೆ ಕಳುಹಿಸಿದ ಪಕ್ಷದಲ್ಲಿ ಒಂದು ಪ್ರತಿಯನ್ನು ವಿಮರ್ಶಕರಿಗೆ ಕಳುಹಿಸಿ ಮತ್ತೊಂದನ್ನು ಪತ್ರಿಕೆಯ ಭಂಡಾರಕ್ಕೆ ಸೇರಿಸಿ ಅದರಲ್ಲಿ ಅಡಕವಾಗಿರುವ ವಿಷಯಗಳನ್ನು ಸೂಚಿಯಲ್ಲಿ ಸೇರಿಸಲಾಗುವುದು. ಒಂದೇ ಪ್ರತಿಯನ್ನು ಕಳುಹಿಸಿದರೆ ವಿಮರ್ಶೆಗೆ ಅವಕಾಶವಿರುವುದಿಲ್ಲ. ಭಾರತದ ಎಲ್ಲ ಸಾಹಿತ್ಯಾಭಿಮಾನಿಗಳೂ ಈ ಕಾರ್ಯದಲ್ಲಿ ನೆರವಾಗಿ ಪತ್ರಿಕೆಯನ್ನು ಸುಪುಷ್ಟವನ್ನಾಗಿ ಮಾಡುತ್ತಾರೆಂದು ನಂಬುತ್ತೇವೆ.

***

ಶ್ರೀ ರಾಮಾನುಜಾಚಾರ್ಯರಿಂದ ರಚಿತವಾದ **ಗದ್ಯತ್ರಯ ಮತ್ತು ಅದರ ಕನ್ನಡ ಸರಳಾನುವಾದ**—ಪ್ರಕಾಶಕರು: ಸಂಸ್ಕೃತ ಸಾಹಿತ್ಯಸದನ, ೨೧೧, ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

ತ್ರಿಮತಾಚಾರ್ಯರಲ್ಲಿ ಕಾಲದೃಷ್ಟಿಯಿಂದ ಎರಡನೆಯವರಾದ ಶ್ರೀ ರಾಮಾನುಜಾಚಾರ್ಯರು ತಮಗೆ ಹಿಂದೆ ಇದ್ದ ಶಂಕರಭಗವತ್ಪಾದಾಚಾರ್ಯರ ಅದ್ವೈತಸಿದ್ಧಾಂತವನ್ನೇ ಪೂರ್ವಪಕ್ಷವಾಗಿಟ್ಟುಕೊಂಡು ಪ್ರಸ್ಥಾನತ್ರಯದ ಆಧಾರದ ಮೇಲೆ ತಮ್ಮ ವಿಶಿಷ್ಟಾದ್ವೈತಮತಸಿದ್ಧಾಂತವನ್ನು ಸ್ಥಾಪಿಸಿದರು. ಈ ಸಿದ್ಧಾಂತಕ್ಕೆ ಪರಂಪರಾದೃಷ್ಟಿಯಿಂದ ಪ್ರಾಚಾರ್ಯರಾದ ಪರಾಶರ, ಬೋಧಾಯನ, ಟಂಕ, ದ್ರಮಿಡ, ಗುಹದೇವ, ಭಾರುಚಿ ಮೊದಲಾದವರ ಗ್ರಂಥಗಳೂ ಸಾಕ್ಷಾತ್ತಾಗಿ

ನಾಥಮುನಿ, ಯಾಮುನಾಚಾರ್ಯ ಮೊದಲಾದವರ ನ್ಯಾಯತತ್ವ, ಯೋಗರಹಸ್ಯ, ಸಿದ್ಧಿತ್ರಯ ಮೊದಲಾದ ಸಂಸ್ಕೃತಗ್ರಂಥಗಳೂ ಆಳ್ವಾರ್‌ರವರ ದ್ರಾವಿಡಪ್ರಬಂಧಗಳೂ ಆಧಾರಭೂತವಾದುವು. ಪ್ರಧಾನವಾಗಿ ಬೋಧಾಯನಾಚಾರ್ಯರಿಂದ ಪ್ರಚಾರಮಾಡಲ್ಪಟ್ಟ ಸೇಶ್ವರಮೀಮಾಂಸಾಪಕ್ಷವೇ ವಿಶಿಷ್ಟಾದ್ವೈತಕ್ಕೆ ಮೂಲ. ಈ ಸಿದ್ಧಾಂತದ ಪ್ರಕಾರ ಸಕಲ ಜೀವಾತ್ಮವಸ್ತುಗಳಿಗೂ ಆವರಣವಾಗಿರುವ ಶರೀರಭೇದವೇ ವಿನಾ ಸ್ವರೂಪದಲ್ಲಿ ಪರಸ್ಪರ ಭೇದವೇನೂ ಇಲ್ಲ. ಸಕಲಾಂಶಗಳಲ್ಲಿಯೂ ಸಕಲಾತ್ಮವಸ್ತುಗಳೂ ಸಮಾನವಾಗಿರುವುವು. ಇಂತಹ ಆತ್ಮವಸ್ತುಗಳಿಗೂ ಪರಮಾತ್ಮನಿಗೂ ಕೆಲವು ವಿಷಯಗಳು ವಿನಾ ಉಳಿದ ವಿಷಯಗಳಲ್ಲೆಲ್ಲಾ ಸಾಮ್ಯವಿರುವುದು. (ಇದು ಸಾಮ್ಯದರ್ಶನದ ಪರಾಕಾಷ್ಠೆ). ಈ ಅಭಿಪ್ರಾಯದ ಪ್ರಕಾರ ಪ್ರತಿ ಜೀವಾತ್ಮನೂ ಪರಮಾತ್ಮಸಾಮ್ಯ(ಎಂದಮಾತ್ರಕ್ಕೆ ಪರಮಾತ್ಮಪದವಿಯನ್ನಾಗಲಿ ಸಮಾನಸ್ಕಂಧತೆಯನ್ನಾಗಲಿ ಅಪೇಕ್ಷಿಸುವುದಲ್ಲ)ವೆಂಬ ಪರಮಪುರುಷಾರ್ಥವನ್ನು ಹೊಂದಬಹುದು. ಇದಕ್ಕೆ ಪರಮಾತ್ಮನ ಪರಮಾನುಗ್ರಹವೇ ಮುಖ್ಯಕಾರಣ. ಇದಕ್ಕೆ ಅನೇಕ ಸಾಧನಗಳಿವೆ. ಈ ಸಾಧನಗಳಿಂದ ಜಾತಿ, ಕುಲ, ಗೋತ್ರ, ಪಶು, ಪಕ್ಷಿ, ಮೃಗ ಮೊದಲಾದ ಯಾವ ಭೇದವೂ ಇಲ್ಲದೆ ಸರ್ವರೂ ಮೋಕ್ಷವನ್ನು ಪಡೆಯಬಹುದು.

ಪರಮಾತ್ಮ ಲಕ್ಷ್ಮೀನಾರಾಯಣಸ್ವರೂಪ. ಈಶ್ವರತ್ವವು ಈ ಎರಡು ವಸ್ತುಗಳಲ್ಲಿಯೂ ಕೂಡಿರುತ್ತದೆ. ಈ ಪರಮಾತ್ಮ ಸಕಲತತ್ವಗಳಿಗೂ ಧಾರಕ, ನಿಯಾಮಕ, ಸ್ವಾಮಿ, ಶರೀರಿ, ಕಾರಣ, ದೋಷರಹಿತ, ಸರ್ವಜ್ಞ, ಸರ್ವಶಕ್ತ, ಪರಮಕಾರುಣಿಕ, ಸಕಲಕಲ್ಯಾಣಗುಣಪರಿಪೂರ್ಣ, ಸಮಸ್ತವಸ್ತುವಿಲಕ್ಷಣ, ಸರ್ವಶಬ್ದವಾಚ್ಯ, ಅಪ್ರಾಕೃತ ದಿವ್ಯಮಂಗಳವಿಗ್ರಹ, ಶಾಸ್ತ್ರವಿಹಿತ ಸರ್ವಕರ್ಮಸಮಾರಾಧ್ಯ, ಸಕಲ ಫಲಪ್ರದ, ಪರಮಾನಂದಸ್ವರೂಪ, ಅಪ್ರಾಕೃತ ದಿವ್ಯದೇಶವಾದ ವೈಕುಂಠದಲ್ಲಿ ಸಕಲವಿಧ ಪರಿಜನಪರಿಚ್ಛೇಧನಾಗಿ ಲಕ್ಷ್ಮೀದೇವಿಯೊಡನೆ ನಿತ್ಯಾನಂದದಲ್ಲಿರುವನು. ಇವನೊಡನಿರುವ ಲಕ್ಷ್ಮೀದೇವಿಗೂ ಇಂತಹ ಸ್ವರೂಪ ರೂಪಗುಣಗಳಿವೆ. ಆದರೆ ಪರಮಾತ್ಮನಿಗೆ ಸರ್ವಸ್ವಾತಂತ್ರ್ಯ. ಲಕ್ಷ್ಮೀದೇವಿಗೆ ಅವನ ಅಧೀನವಾದ ಸ್ವಾತಂತ್ರ್ಯ. ಉಳಿದ ವಿಷಯಗಳಲ್ಲಿ ಸರ್ವಸಾಮ್ಯ. ಆನಂದದ ವಿಷಯದಲ್ಲಿ ಇವರಿಗೂ ನಿತ್ಯಸೂರಿಗಳಿಗೂ ಮುಕ್ತರಿಗೂ ಯಾವ ವ್ಯತ್ಯಾಸವೂ ಇಲ್ಲದ ಸಾಮ್ಯ.

ಇತರ ಎಲ್ಲ ವಸ್ತುಗಳೂ ಪರಮಾತ್ಮನಿಗೆ ಅಧೀನವೂ ಶರೀರವೂ ವಿಭೂತಿಯೂ ಆಗಿರುವುದರಿಂದ, ಪರಮಾತ್ಮನೊಬ್ಬನೇ ಸ್ವತಃ ವಸ್ತು. ಮಿಕ್ಕವೆಲ್ಲ ಅವನ ವಿಶೇಷಣಗಳು.

ಇಂತಹ ಪರಮಾತ್ಮನು ಸರ್ವವಿಧದಲ್ಲಿಯೂ ತನಗೆ ಸಮಾನವಾದ ಆನಂದವನ್ನು ಅನುಭವಿಸುವ ಸಂಪೂರ್ಣಯೋಗ್ಯತೆಯುಳ್ಳ ಅನಂತಕೋಟಿ ಜೀವಾತ್ಮರು ಪ್ರಕೃತಿಮಂಡಲದಲ್ಲಿ ಅನಾದಿಕಾಲದಿಂದ ಸಂಕಟಪಡುತ್ತಿರುವುದನ್ನು ನೋಡಿ ಸರ್ವದಾ ಸರ್ವಪ್ರಕಾರದಿಂದಲೂ ಸಕಲ ಜೀವಾತ್ಮೋದ್ಧಾರಕ್ಕಾಗಿ ಕೃಷಿಮಾಡುತ್ತಿರುವನು. ಈ ಕೃಷಿಯು ಸೃಷ್ಟಿ, ಸ್ಥಿತಿ, ಸಂಹಾರ, ಅಂತಃಪ್ರವೇಶ, ನಿಯಮನವೆಂಬ ಅಯ್ದು ರೀತಿಯದು (ಸೃಷ್ಟಿಸಲ್ಪಟ್ಟ ವಸ್ತುಗಳ ಸರ್ವಶಕ್ತಿಪ್ರಕಾಶನ ಸಾಮರ್ಥ್ಯವನ್ನುಂಟುಮಾಡುವುದು ಅಂತಃಪ್ರವೇಶ. ಆಯಾ ಪದಾರ್ಥಗಳನ್ನು ಆಯಾ ಸ್ವಭಾವದಲ್ಲಿರಿಸುವುದು ನಿಯಮನ). ಸಾಧನಾನುಷ್ಠಾನದಿಂದ ಒಂದು ಜೀವ ಮುಕ್ತಿಯನ್ನು ಪಡೆದರೆ ತನ್ನ ಕೃಷಿ ಫಲಿಸಿತೆಂದು ಪರಮಾತ್ಮನು ಸಂತೋಷಪಡುವನು. ಇದೇ ತತ್ವ.

ನಿತ್ಯಾನಂದಸ್ವರೂಪವಾದ,—ಭಗವದನುಭವರೂಪವಾದ ಮೋಕ್ಷವನ್ನು ಪಡೆಯುವುದಕ್ಕೆ ಭಕ್ತಿಯೇ ಪ್ರಧಾನಸಾಧನ. ಶಾಸ್ತ್ರಾಭ್ಯಾಸಗಳಿಂದ ಪರಮಾತ್ಮನಲ್ಲಿ ಉಂಟಾಗುವ ನಿರಂತರಪ್ರೀತಿಗೆ—ಅವನನ್ನು ಸೇರಬೇಕೆಂಬ ತೀವ್ರಾಭಿಲಾಷೆಗೆ 'ಭಕ್ತಿ'ಯೆಂದು ಹೆಸರು. ಈ ಭಕ್ತಿಯೋಗವುಂಟಾಗಬೇಕಾದರೆ ಅದರ ಪೂರ್ವಭಾವಿಯಾಗಿ ಕರ್ಮಯೋಗದಿಂದ ಮನೋನೈರ್ಮಲ್ಯವನ್ನು ಹೊಂದಿ ಜ್ಞಾನಯೋಗದಿಂದ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಪುರುಷಾರ್ಥಚಿಂತೆಯಿಂದ ಪೂರ್ಣಾನಂದಪ್ರಾಪ್ತಿಯು ಪರಮಾತ್ಮಪ್ರಾಪ್ತಿಯಿಂದಲೇ ಎಂಬ ನಿರ್ಧಾರವುಂಟಾಗಬೇಕು. ಆದರೆ ಜೀವಾತ್ಮನಿಗೆ ಚೇತನತ್ವ, ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳ ಸ್ವಾತಂತ್ರ್ಯವಿರುವುದರಿಂದ ಸಂಕುಚಿತಸ್ಥಿತಿಯಲ್ಲಿ, ಸಂಸಾರದಶೆಯಲ್ಲಿ ಕರ್ಮಬಂಧಕ್ಕೆ ಸಿಕ್ಕಿ ತದನುಸಾರವಾದ ವಿವಿಧ ದೇಹಪರಿಗ್ರಹಕ್ಕೂ ಅನೇಕ ದುಃಖಾನುಭವಕ್ಕೂ ಈಡಾಗಿ ಪರಜ್ಞಾನಪರಮಭಕ್ತಿಗಳನ್ನು ಪಡೆಯಲು ಕಷ್ಟವಾಗುವುದು. ಆದುದರಿಂದ ಭಗವತ್ಪ್ರಾಪ್ತಿಯು ಇಚ್ಛೆ ಇದ್ದರೂ ಅದಕ್ಕೆ ಸಾಧನವಾದ ಭಕ್ತಿಯೋಗವನ್ನು ಮಾಡಲು ಅಶಕ್ತನಾದ ಜೀವನು ಕೃಪಾಮಯನಾದ ಭಗವಂತನೇ ಸಾಧನಸ್ಥಾನದಲ್ಲಿ ನಿಂತು ತನ್ನನ್ನು ಉದ್ಧಾರಮಾಡಿ ರಕ್ಷಣೆ ಮಾಡಬೇಕೆಂದು ಕೋರಿ ಅವನ ಪಾದಾರವಿಂದಗಳಲ್ಲಿ ತನ್ನನ್ನು ಅರ್ಪಣೆ ಮಾಡಿಕೊಳ್ಳಬಹುದು. ಇದಕ್ಕೆ 'ಪ್ರಪತ್ತಿ' 'ಶರಣಾಗತಿ' 'ಭರನ್ಯಾಸ' ಎಂದು ಹೆಸರು. ಇದು ಎಲ್ಲರಿಗೂ ಸಾಧ್ಯವಾದ ಸಾಧನ—ಪರಮಹಿತ.

ಭಕ್ತಿಯಿಂದಲೋ ಪ್ರಪತ್ತಿಯಿಂದಲೋ ಪ್ರಸನ್ನನಾದ ಪರಮಾತ್ಮನ ಅನುಗ್ರಹದಿಂದ ದೇಹಾವಸಾನ ಸಮಯದಲ್ಲಿ ಸಕಲವಿಧವಾದ ಶ್ರಮವನ್ನು ಪರಿಹರಿಸಿಕೊಂಡು

ನಿತ್ಯಸೂರಿಗಳಿಂದ ಸೇವೆಯನ್ನು ಪಡೆದು ಅಪ್ರಾಕೃತ ದಿವ್ಯದೇಹಧಾರಿಯಾಗಿ ವೈಕುಂಠದಲ್ಲಿ ಸಮಸ್ತ ವೈಭವದಿಂದಕೂಡಿರುವ ಭಗವಂತನ ಸಮೀಪವನ್ನು ಸೇರಿ ಸಾಯುಜ್ಯ, ಸಾಲೋಕ್ಯ, ಸಾರೂಪ್ಯ, ಸಾಮೀಪ್ಯವನ್ನು ಪಡೆದು ಆತನ ಕೈಂಕರ್ಯರೂಪವಾದ ನಿತ್ಯಾನಂದದಲ್ಲಿರುವುದು ಮೋಕ್ಷ. ಇದೇ ಪರಮಪುರುಷಾರ್ಥ.

ಶಾಂಕರಸಿದ್ಧಾಂತವು ವೈದಿಕಮತೋದ್ಧಾರಕ್ಕಾಗಿ ಶ್ರಮಿಸಿ ನಾಸ್ತಿಕತೆಯನ್ನು ಹೋಗಲಾಡಿಸಿ, ಆಸ್ತಿಕತ್ವವನ್ನು ಸ್ಥಾಪಿಸಿ ತರ್ಕಪರಿಶುದ್ಧವಾದ ದಾರ್ಶನಿಕ ವ್ಯವಸ್ಥೆಯನ್ನುಂಟುಮಾಡಿದುದು ನಿಜ. ಆದರೆ ಅದು ಸಾಮಾನ್ಯಜನದ ಅನುಭವಕ್ಕೆ ನಿಲುಕದಂತಾಯಿತು. ವಿಶಿಷ್ಟಾದ್ವೈತ ವಿಶುದ್ಧಾದ್ವೈತಕ್ಕೆ ಸಾಕ್ಷಾತ್ಪ್ರತಿಪಕ್ಷದಲ್ಲಿದೆ. ವಿಶುದ್ಧಾದ್ವೈತ ವ್ಯತಿರೇಕದೃಷ್ಟಿಯಿಂದ ಹೊರಟಿದೆ. ನಿಷೇಧಮಾರ್ಗ ಅದರದು. ಪ್ರಾಯೇಣ ವಿಶಿಷ್ಟಾದ್ವೈತ ವಿಧಿದೃಷ್ಟಿಯದಾಗಿದೆ. ಯಾವವಸ್ತುವೂ ಇಲ್ಲದೆ ಬ್ರಹ್ಮನೊಬ್ಬನೇ ಇರುವನೆಂಬುದು ವಿಶುದ್ಧಾದ್ವೈತ. ಎಲ್ಲವೂ ಒಟ್ಟಾಗಿಸೇರಿ ಒಂದಾಗಿದೆ ಎನ್ನುವುದು ವಿಶಿಷ್ಟಾದ್ವೈತ.

ಸಿದ್ಧಾಂತದೃಷ್ಟಿಯಿಂದ ಮೋಕ್ಷಸ್ವರೂಪವನ್ನು ವರ್ಣಿಸುವುದೂ ಶ್ರೀರಾಮಾನುಜ ಮತದಲ್ಲಿ ಬಹು ಸೊಗಸಾಗಿದೆ. ಮೋಕ್ಷವು ಪಾಷಾಣಕಲ್ಪ, ಶೂನ್ಯರೂಪವೆಂದು ಹೇಳಿದಾಗ ಅನೇಕರಿಗೆ ಅದರಲ್ಲಿ ಪ್ರವೃತ್ತಿಯೇ ಉಂಟಾಗದಿರಬಹುದು. ಅದು ಬಿಟ್ಟು ಮೋಕ್ಷವೆಂಬುದು ಸರ್ವದುಃಖನಿವೃತ್ತವಾದ ಅನಂತಾನಂದವನ್ನು ಪರಮಾತ್ಮಸಮನಾಗಿ ಅನಂತಕಾಲ ಅನುಭಸುವಿಕೆ ಎಂದು ನಿರೂಪಿಸಿದಾಗ ಅದರ ಸಾಧನೆಗೆ ಯಾರಿಗೆ ತಾನೆ ಆಸೆ ಪ್ರವೃತ್ತಿಯುಂಟಾಗುವುದಿಲ್ಲ? ಮೋಕ್ಷವನ್ನು ಸಾಧಿಸುವ ಉಪಾಯವೂ ಸ್ವರಸವಾಗಿದೆ. ಶರಣಾಗತಿ ಸರ್ವರಿಗೂ ಸಾಧ್ಯ. ಅತಿ ದುರ್ದಶೆಯಲ್ಲಿರುವವನು ತನ್ನ ಉದ್ಧಾರಕ್ಕಾಗಿ ಯಾಚನೆಮಾಡುವುದೂ ಕೃಪಾಮಯನಾಗಿ ಸರ್ವಶಕ್ತನಾಗಿರುವವನು ಅವನನ್ನು ಉದ್ಧಾರಮಾಡುವುದೂ ಸಹಜಪ್ರವೃತ್ತಿಗಳು. ಭಕ್ತನನ್ನು ಮುಕ್ತನನ್ನಾಗಿ ತನ್ನಲ್ಲಿಗೆ ಬರಮಾಡಿಕೊಳ್ಳಲು ಪರಮಾತ್ಮನು ಪುತ್ರನಿಂದ ಅಗಲಿ ಪುನರ್ಮಿಳನವನ್ನು ಬಯಸುವ ತಂದೆಯಂತೆ ಕಾತುರನಾಗಿದ್ದಾನೆ ಎಂದು ಸಿದ್ಧಾಂತದ ಪ್ರಕಾರ ಸೂಚಿಸುವುದು ಹೃದಯಂಗಮವಾಗಿಯೂ ಅನುಭವವೇದ್ಯವಾಗಿಯೂ ಇದೆ.

ಇಲ್ಲಿ ಉಕ್ತವಾಗಿರುವ ಶೇಷಶೇಷೀಭಾವ—ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ಸಂಬಂಧ—ಲೌಕಿಕದೃಷ್ಟಿಯಿಂದ ಬಹಳ ಉಪಯುಕ್ತವಾದ ವಿಷಯವನ್ನು ಸೂಚಿಸುತ್ತದೆ. ಪ್ರಪಂಚವು ಭಗವಂತನ ಶರೀರವಾಗಿರುವುದರಿಂದ ಅಲ್ಲಿರುವವರೆಲ್ಲರೂ ಅವನ ಅವಯವಗಳಂತೆ ಹೊಂದಿಕೊಂಡು ವರ್ತಿಸಬೇಕು. ಅವನನ್ನು ಸೇವಿಸೆ

ಬೇಕಾದರೂ ಪ್ರಪಂಚದ ಮೂಲಕವೆ—ಅಂದರೆ ಲೋಕಸೇವೆಯೇ ಈಶಸೇವೆ. ಈ ಜೀವನವೂ ಅವನಿಗೆ ಸಂಬಂಧಿಸಿರುವುದರಿಂದ ಇದನ್ನು ನಿಕೃಷ್ಟವೆಂದು ಭಾವಿಸ ಬೇಕಾದುದಿಲ್ಲ. ದೇಹದ ಆಸೆ ಆಕಾಂಕ್ಷೆಗಳನ್ನು ಸನ್ಮಾರ್ಗದಲ್ಲಿ ಈಡೇರಿಸಿ ವೈರಾಗ್ಯ ಹೊಂದಿ ಮುಕ್ತಿಯನ್ನು ಪಡೆಯಬಹುದು—ಅಂದರೆ ಲೌಕಿಕ ಸುಖಾನುಭವವು ಮೋಕ್ಷಪ್ರಾಪ್ತಿಗೆ ಕಠಿನಪ್ರತಿಬಂಧಕವಲ್ಲ. ಜೀವಾತ್ಮನಿಗೆ ತನ್ನ ದೇಹದಲ್ಲಿ ಅಭಿಮಾನ ವಿರುವಂತೆಯೇ ಪರಮಾತ್ಮನಿಗೂ ತನ್ನ ದೇಹವಾದ ಪ್ರಪಂಚದಲ್ಲಿ ವಿಶೇಷಾಭಿಮಾನ. ಭಗವಂತನಿಗೆ ಪ್ರಿಯವಾದ ಪ್ರಪಂಚದಲ್ಲಿ ಭಕ್ತರು ಎಚ್ಚರಿಕೆಯಿಂದ ಯಾವ ಅಂಗಕ್ಕೂ ಊನಬರದಂತೆ, ಹಿಂಸೆಯಾಗದಂತೆ, ಅನುರಾಗದಿಂದ ನಡೆದುಕೊಳ್ಳಬೇಕು. ಹಾಗೆ ಮಾಡದಿದ್ದರೆ ಅವನ ನಿಗ್ರಹಕ್ಕೆ ಪಾತ್ರರಾಗಬೇಕಾಗುವುದು. ಇದು ಪರಮರಹಸ್ಯ.

ಇಷ್ಟುದೃಷ್ಟಿವೈಶಾಲ್ಯದಿಂದ, ಉದಾರಮನೋಭಾವದಿಂದ ಸರ್ವಸಹಾನು ಭೂತಿಯಿಂದ ಕೂಡಿದ ಸಿದ್ಧಾಂತಸ್ಥಾಪನೆಗಾಗಿ ಶ್ರೀ ರಾಮಾನುಜಾಚಾರ್ಯರು ಶ್ರೀ ಭಾಷ್ಯ, ಗೀತಾಭಾಷ್ಯ, ವೇದಾಂತದೀಪ, ವೇದಾಂತಸಾರ, ವೇದಾರ್ಥಸಂಗ್ರಹ, ಗದ್ಯತ್ರಯ, ನಿತ್ಯ ಎಂಬ ಗ್ರಂಥಗಳನ್ನು ಅನುಗ್ರಹಿಸಿರುತ್ತಾರೆ. ಇವುಗಳಲ್ಲಿ ಮೊದಲನೆಯ ಅಯ್ದು ಗ್ರಂಥಗಳು ಸಿದ್ಧಾಂತಪ್ರತಿಪಾದಕವಾದವು. ಕೊನೆಯದು ದೈನಂದಿನ ಭಗವದಾರಾಧನಕ್ಕೆ ಸಂಬಧಪಟ್ಟುದು. ಗದ್ಯತ್ರಯಗಳು ಶರಣಾಗತಿಯ ಸ್ವಾನುಷ್ಠಾನರೂಪವಾದುವು.—ಶರಣಾಗತಿಗದ್ಯ, ಶ್ರೀರಂಗಗದ್ಯ, ವೈಕುಂಠಗದ್ಯ— ಇವು ಗದ್ಯತ್ರಯಗಳು.

ಗದ್ಯತ್ರಯಗಳು ಶ್ರೀ ವೈಷ್ಣವರೆಲ್ಲರೂ ಪ್ರತಿನಿತ್ಯವೂ ಅನುಸಂಧಾನಮಾಡಲು ಯೋಗ್ಯವಾದುವು. ಆ ಪಂಗಡದವರನೇಕರಲ್ಲಿ ಇದನ್ನು ಅನುದಿನವೂ ಪಾರಾಯಣ ಮಾಡುವ ಅಭ್ಯಾಸ ಇನ್ನೂ ಉಳಿದುಬಂದಿದೆ. ಅನುವಾದಕರು ಸರ್ವಜನಸೌಕರ್ಯ ಕ್ಕಾಗಿ ಈ ಗದ್ಯಗಳನ್ನು ಹೊಸ ರೀತಿಯಲ್ಲಿ ಮುದ್ರಿಸಿದ್ದಾರೆ. ಅಭ್ಯಾಸವಿಲ್ಲದವರು ಮೊದಲು ದೊಡ್ಡ ದೊಡ್ಡ ಸಂಸ್ಕೃತ ಶಬ್ದಗಳನ್ನು ಒಡೆದು ಓದಿಕೊಳ್ಳಲು ಅನುಕೂಲ ವಾಗುವಹಾಗೆ ಅವುಗಳನ್ನು ಬಿಡಿಸಿ ಮಧ್ಯೆ + — ಚಿಹ್ನೆಗಳನ್ನು ಹಾಕಿ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಪಂಡಿತರಲ್ಲದವರ ಉಪಯೋಗಕ್ಕಾಗಿ ಪಕ್ಕದಲ್ಲಿಯೇ ಕನ್ನಡ ಸರಳಾನು ವಾದವನ್ನೂ ಕೊಟ್ಟಿದ್ದಾರೆ. ಸರಿಯಾಗಿ ಓದಲು ಅಭ್ಯಾಸವಾದ ಮೇಲೆ ಅನುಸಂಧಾನ ಮಾಡುವುದಕ್ಕಾಗಿ ಗ್ರಂಥದ ಕೊನೆಯಲ್ಲಿ ದಂಡಾಕಾರವಾಗಿ ಗದ್ಯಗಳನ್ನು ಮುದ್ರಿಸಿ ದ್ದಾರೆ. ಇದರಲ್ಲಿ ಅಚ್ಚಿನ ತಪ್ಪಿಲ್ಲದಿರುವುದು ಮನಸ್ಸಿಗೆ ಬಹಳ ಸಂತೋಷವನ್ನುಂಟು ಮಾಡುತ್ತದೆ. ಮುದ್ರಣವೂ ಪುಸ್ತಕದ ಹೊರಮೈಯೂ ಅಂದವಾಗಿದೆ. ಅನುವಾದ ಕರು ಈ ಗ್ರಂಥವನ್ನು ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯ ತಿಲ್ಲಸ್ಥಾನಂ

ಶ್ರೀ ಶಠಗೋಪ ರಾಮಾನುಜಯತೀಂದ್ರಸ್ವಾಮಿಗಳವರಿಗೆ ಅರ್ಪಿಸಿದ್ದಾರೆ. ಗ್ರಂಥಾರಂಭದಲ್ಲಿ ಶ್ರೀ ಸ್ವಾಮಿಗಳ ದಿವ್ಯಚರಿತ್ರೆಯು ಸಂಗ್ರಹವಾಗಿ ಉಕ್ತವಾಗಿದೆ. ಕೈಂಕರ್ಯದೃಷ್ಟಿಯಿಂದ ಇದಕ್ಕೆ ಯಾವ ಬೆಲೆಯನ್ನೂ ಅಪೇಕ್ಷಿಸದೆ ಉಚಿತವಾಗಿ ಅರ್ಥಿಗಳಿಗೆ ಸಮರ್ಪಣೆಮಾಡುತ್ತೇವೆಂಬ ಅನುವಾದಕರ ಸಂಕಲ್ಪ ಸುವರ್ಣಕ್ಕೆ ಸೌರಭ ಬಂದಂತಾಗಿದೆ. ರಾಮಾನುಜೀಯರೆಲ್ಲರಿಗೂ ಪರಮಗ್ರಾಹ್ಯವಾದ ಈ ಗ್ರಂಥವನ್ನು ಎಲ್ಲರೂ ಬಳಮಾಡಿಕೊಂಡು ಅದರ ಪೂರ್ಣಫಲವನ್ನು ಪಡೆಯುತ್ತಾರೆಂದು ಆಶಿಸುತ್ತೇವೆ.

***

ನಿತ್ಯಾನುಸಂಧಾನಂ ಮತ್ತು ಶ್ರೀಗೋದಾದೇವಿ ಕರುಣಿಸಿ ರಚಿಸಿದ **ತಿರುಪ್ಪಾವೈ**—ಅನುವಾದಕರು : ಅ. ನ. ಶ್ರೀನಿವಾಸಯ್ಯಂಗಾರ್ ; ಶ್ರೀಶಾನುದಾಸ ಗ್ರಂಥಮಾಲೆಯ ಪ್ರಕಟಣೆಗಳು ; ಬೆಲೆ, ಕ್ರಮವಾಗಿ ರೂ. ೧-೦-೦ ಮತ್ತು ೦-೧೨-೦.

ಕನ್ನಡದ ಸೋದರೀಭಾಷೆಯಾದ ತಮಿಳು ಭಾಷೆಯ ಸಾಹಿತ್ಯಪರಿಚಯವು ಇತ್ತೀಚೆಗೆ ಅನುವಾದಗಳ ಮೂಲಕ ಕನ್ನಡಿಗರಿಗೆ ಯಥೋಚಿತವಾಗಿ ಆಗುತ್ತಿರುವುದು ಸಂತೋಷದ ವಿಷಯ. ಆದಿಕಾಲದ ತಮಿಳುಸಾಹಿತ್ಯದಲ್ಲಿ ಬಹುಭಾಗ ಭಕ್ತಿಸಾಹಿತ್ಯ. ಅದರಲ್ಲಿ ವೈಷ್ಣವಭಕ್ತರ ನಾಲಾಯಿರ ಪ್ರಬಂಧಗಳು ಮುಖ್ಯವಾದುವು. ಈ ವೈಷ್ಣವಭಕ್ತರು ಹನ್ನೆರಡುಜನ. ಇವರಿಗೆ ಆಳ್ವಾರ್ ಎಂದು ಹೆಸರು. ಆಳ್ವಾರೆಂದರೆ ಭಕ್ತಿಯಲ್ಲಿ ಮುಳುಗಿದವರು ಎಂದರ್ಥ. ಇವರೆಲ್ಲರೂ ಅನುಭಾವಿಗಳು. ಭಕ್ತಿಯ ಪಾರವಶ್ಯದಲ್ಲಿ ಭಗವಂತನನ್ನು ಕುರಿತು ಹಾಡಿದ ಭಾವಗೀತೆಗಳೇ ಮೇಲೆ ತಿಳಿಸಿದ ಪ್ರಬಂಧಗಳು. ಇವುಗಳು ಸಂಸ್ಕೃತದಲ್ಲಿರುವ ವೇದಾರ್ಥಗಳನ್ನು ತಮಿಳು ಭಾಷೆಯಲ್ಲಿ ಪ್ರತಿಪಾದಿಸತಕ್ಕವುಗಳು. ಇವುಗಳಲ್ಲಿ ಪ್ರತಿದಿವಸವು ಪಾರಾಯಣ ಮಾಡುವುದಕ್ಕೆ ಯೋಗ್ಯವಾದ ತಿರುಪ್ಪಲ್ಲಾಂಡು, ತಿರುಪ್ಪಳ್ಳಿಯೆಬುಚ್ಚಿ, ತಿರುಪ್ಪಾವೈ, ಕಣ್ಣಿನುಣ್ ಶಿರುತ್ತಾಂಬು, ನೀರಾಟ್ಟಮ್, ಪೂಚ್ಚೂಡಲ್, ಕಾಪ್ಪಿಡಲ್ ಶೆನ್ನಿಯೋಂಗು ಅಮಲನಾದಿಪಿರಾನ್ ಎಂಬ ಪ್ರಬಂಧಗಳ ರಾಶಿಗೆ, 'ನಿತ್ಯಾನುಸಂಧಾನಂ' ಎಂಬ ಹೆಸರು ರೂಢಿಯಾಗಿದೆ. ಇವು ಶ್ರೀವೈಷ್ಣವರಿಗೆ ಪರಮಪೂಜ್ಯವಾದುವು. ಇವುಗಳಲ್ಲಿ ತಿರುಪ್ಪಾವೈ ಎಂಬುದು ಆಳ್ವಾರ್ ವರ್ಗದಲ್ಲಿ ಒಬ್ಬಳಾದ ಆಂಡಾಳ್ (ಆಳ್ವಾರ್ ಎಂಬುದು ಸ್ತ್ರೀಲಿಂಗದಲ್ಲಿ ಆಂಡಾಳ್ ಎಂದಾಗುವುದು.) ಅಥವಾ ಗೋದಾದೇವಿಯೆಂಬ ಭಕ್ತೆಯಿಂದ ರಚಿತವಾದುದು. ಬಹುಸುಂದರವಾದ ಗೀತೆ. ವೈಷ್ಣವಭಕ್ತರ ವಿಷಯವಾಗಿ ಈಗಾಗಲೆ ಶ್ರೀ ಮಾಸ್ತಿಯವರೂ ಶ್ರೀ ಯಾಮುನಾಚಾರ್ಯರೂ ಲಘುಪರಿಚಯವನ್ನುಂಟುಮಾಡಿದ್ದಾರೆ. ಪ್ರಸಕ್ತ ಗ್ರಂಥಕಾರರು ವಾಚಕರ ಸೌಕರ್ಯಕ್ಕಾಗಿ ಮೇಲ್ಕಂಡ ಗೀತೆಗಳನ್ನು ಕನ್ನಡ ಅನುವಾದ

ದೊಡನೆ ಪ್ರಕಟಮಾಡಿದ್ದಾರೆ. ಅಲ್ಲಲ್ಲಿಯೇ ಸಾಂಪ್ರದಾಯಿಕವಾದ ರಹಸ್ಯಾರ್ಥಗಳನ್ನೂ ಕೊಟ್ಟಿದ್ದಾರೆ. ಪ್ರಾರಂಭದಲ್ಲಿ ಆಳ್ವಾರ್ರುಗಳ ಸಂಗ್ರಹವಾದ ಚರಿತ್ರೆಯಿದೆ. ತಮಿಳುಭಾಷೆಯ ಪರಿಚಯವಿಲ್ಲದವರಿಗೆ ಇದರಿಂದ ಉಪಕಾರವಾಗಿದೆ.

ಆದರೆ ಇದರಲ್ಲಿರುವ ಅಚ್ಚಿನ ತಪ್ಪುಗಳು ಎಂತಹವರಿಗೂ ಕಿರಿಕಿರಿಯನ್ನುಂಟು ಮಾಡುತ್ತದೆ. ತಮಿಳುಭಾಷೆಗೆ ಬಹಳ ಆವಶ್ಯಕವಾದ 'ೞ'ಕಾರವನ್ನು ಉಪಯೋಗಿಸದಿರುವುದು ಮೂಲವನ್ನು ಓದುವುದಕ್ಕೆ ಬಹಳ ತೊಡಕಾಗಿದೆ. ಭಾಷೆ ಅನೇಕೆಡೆ ಪೆಡಸಾಗಿ ಸಾಮಾನ್ಯಜನರಿಗೆ ಸುಲಭವಾಗಿ ಅರ್ಥವಾಗುವಂತಿಲ್ಲ. ಮುಂದಿನ ಭಾಗವನ್ನು ನೋಡಬಹುದು—"ಬಾಳುವೆಗೆ ಆಳ್ಪಟ್ಟು ನಿಂತವರಿದ್ದಲ್ಲಿ ಒಂದು ಮಣ್ಣನ್ನು ಕಂಪನ್ನು ಕೊಳ್ಳಿರಿ. (ಬ್ರಹ್ಮೋತ್ಸವದಲ್ಲಿ ಭಾಗವಹಿಸಿರಿ). ಕೂಳಿಗೆ ಆಳ್ಪಟ್ಟು ನಿಂತವರನ್ನು ನಮ್ಮ ಕುಲದಲ್ಲಿ ಸೇರಿಸಲೊಪ್ಪೆವು. ಏಳಾಳಿನ ಕಾಲದಿಂದ ಪಳಿಯಿಲ್ಲದೆ ನಾವು ರಾಕ್ಷಸರು ಬಾಳುವ ಲಂಕೆ ಹಾಳಾಗುವಂತೆ ಯುದ್ಧದಲ್ಲಿ ಹೋರಾಡಿದವನಿಗೆ ಶುಭವ ಕೋರುವೆವು." ಮುಂದಿನ ಮುದ್ರಣದಿಂದ ಅನುವಾದಕರು ಈ ಕೆಲವು ಕೊರತೆಗಳನ್ನು ಸರಿಪಡಿಸಿಕೊಂಡು ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾಡುತ್ತಾರೆಂದು ಆಶಿಸುತ್ತೇವೆ. ಶ್ರೀಶಾನುಗ್ರಂಥಮಾಲೆಯು ಸುಪುಷ್ಟವಾಗಿ ಅಭಿವೃದ್ಧಿಯಾಗಲಿ.

***

ಸುಬೋಧ ರಜತಮಹೋತ್ಸವ ಸಂಚಿಕೆ (ಸುಬೋಧ; ಸಂಪುಟ ೨೬, ಸಂಚಿಕೆ ೮-೯)—ಸಂಪಾದಕರು : ಯಂ. ರಾಮರಾಯರು; ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ನಗರ; ಬೆಲೆ, ೧ ರೂಪಾಯಿ.

೧೯೨೫ರಲ್ಲಿ ಸುಬೋಧ ಮಾಸಪತ್ರಿಕೆಯನ್ನು ಪ್ರಾರಂಭಿಸಿ ೨೫ ವರ್ಷಗಳ ಕಾಲ ಏಕಪ್ರಕಾರವಾಗಿ ಅವಿಚ್ಛಿನ್ನವಾಗಿ ಏಕೈಕ ಸಂಪಾದಕತ್ವದಲ್ಲಿ ಯಶಸ್ವಿಯಾಗಿ ನಡಸಿಕೊಂಡು ಬಂದು ಈಗ ರಜತಮಹೋತ್ಸವ ಜ್ಞಾಪಕಾರ್ಥವಾಗಿ ವಿಶೇಷ ಸಂಚಿಕೆಯನ್ನು ಪ್ರಕಟಿಸಿರುವ ಸಂಪಾದಕರಾದ ಶ್ರೀ ಎಂ. ರಾಮರಾಯರು ಅಭಿನಂದನಾರ್ಹರು. ಶ್ರೀಯುತರು ಕನ್ನಡವೆಂದರೆ ಜನರು ಮೂಗುಮುರಿಯುತ್ತಿದ್ದ ೧೯೧೫ನೆಯ ವರ್ಷದ ಸುಮಾರಿನಲ್ಲಿಯೇ 'ಸುಬೋಧ ಕುಸುಮಾಂಜಲಿ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ ಅದರ ನೇತೃತ್ವದಲ್ಲಿ ಸಾಮಾನ್ಯಜನರ ಉಪಯೋಗಕ್ಕಾಗಿ ಧಾರ್ಮಿಕ, ನೈತಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಐತಿಹಾಸಿಕ, ವಾಣಿಜ್ಯ, ಕಲಾ, ಸಂಗೀತಸಾಹಿತ್ಯಾದಿ ವಿವಿಧಕ್ಷೇತ್ರಗಳಲ್ಲಿ ದುಡಿದು ಭಾರತಕ್ಕೆ ಕೀರ್ತಿತಂದ ನೂರನಾಲ್ವತ್ತು ಮಹಾಪುರುಷರ ಜೀವನಚರಿತ್ರೆಗಳನ್ನು ಪುಟ್ಟ

ಪುಸ್ತಕರೂಪದಲ್ಲಿ ಅಂದವಾಗಿ ಪ್ರಕಟಿಸಿ ಬಹು ಸುಲಭಬೆಲೆಗೆ ಜನರಿಗೆ ದೊರಕಿಸಿದ್ದಾರೆ. ಸುಬೋಧ ಪತ್ರಿಕೆಯಲ್ಲಿ ಅನೇಕ ವಿಮರ್ಶಾತ್ಮಕವಾದ ಪ್ರೌಢಲೇಖನಗಳನ್ನೂ, ಇತಿಹಾಸ ಸಂಗ್ರಹಗಳನ್ನೂ, ಕಥೆ, ಕವನ, ನಾಟಕ, ಜೀವನವಿಮರ್ಶೆ ಧಾರ್ಮಿಕ ಜಿಜ್ಞಾಸೆ, ವೈಜ್ಞಾನಿಕ ಸಂಶೋಧನ ಮೊದಲಾದುವುಗಳನ್ನೂ ಪ್ರಕಟಿಸಿ ವಾಚಕವರ್ಗಕ್ಕೆ ಸವಿಯುಣಿಸನ್ನು ದೊರಕಿಸಿರುವುದಲ್ಲದೆ ತರುಣ ಲೇಖಕರನೇಕರಿಗೆ ಪ್ರೋತ್ಸಾಹವನ್ನಿತ್ತಿದ್ದಾರೆ. 'ಹರಿದಾಸಕೀರ್ತನತರಂಗಿಣಿ'ಯ ಮೂಲಕ ಸುಮಾರು ಎರಡುಸಾವಿರ ಪುಟಗಳಲ್ಲಿ ದಾಸಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ಜನತಾಸೇವೆಯ ಮನೋಭಾವದಿಂದ ಶಾಲೋಪಾಧ್ಯಾಯರಾಗಿದ್ದ ಇವರು ಬಹು ಹಿಂದೆಯೇ ತಮ್ಮ ವೃತ್ತಿಗೆ ರಾಜೀನಾಮೆ ಕೊಟ್ಟು ಈ ಪವಿತ್ರಕಾರ್ಯವನ್ನು ತಮ್ಮ ಬಾಳಬದುಕಾಗಿ ಅಂಗೀಕರಿಸಿ ದುಡಿದಿದ್ದಾರೆ. ಅವರ ತಪಸ್ಸಿನ ಫಲವಾಗಿ ಇಂದು ರಜತೋತ್ಸವ ಸಂಚಿಕೆಯನ್ನು ಪ್ರಕಟಿಸುವ ಸುಯೋಗವು ಅವರಿಗೆ ಲಭಿಸಿದೆ. ಕನ್ನಡ ನಾಡಿನ ಕೃತಜ್ಞತೆಗೆ ಶ್ರೀ ರಾಯರು ಅರ್ಹರು.

ರಜತೋತ್ಸವ ಸಂಚಿಕೆಯು ಸುಂದರವಾಗಿಯೂ ಸುಪುಷ್ಟವಾಗಿಯೂ ಸುಬೋಧವಾಗಿಯೂ ಇದೆ. ಹಿರಿಯ ಸಾಹಿತಿಗಳೂ ಕನ್ನಡದ ಪ್ರೇಮಿಗಳೂ ಆಗಿದ್ದ ದಿವಂಗತ ಕರ್ಪೂರ ಶ್ರೀನಿವಾಸರಾಯರಿಗೆ ಈ ಸಂಚಿಕೆಯು ಅರ್ಪಿತವಾಗಿದೆ. ಕೇಂದ್ರ ಸರ್ಕಾರದ ವಾರ್ತಾಸಚಿವರಾದ ಶ್ರೀ ಆರ್. ದಿವಾಕರರೇ ಮೊದಲಾದ ಮಾನ್ಯ ಸಚಿವರುಗಳನೇಕರು ಶುಭಾಶಯಗಳನ್ನು ಕಳುಹಿಸಿದ್ದಾರೆ. ಪ್ರಸಿದ್ಧ ಕನ್ನಡ ಸಾಹಿತಿಗಳಾದ ಡಿ. ವಿ. ಗುಂಡಪ್ಪ, ಸಿ. ಕೆ. ವೆಂಕಟರಾಮಯ್ಯ, ಎಂ. ಗೋವಿಂದ ಪೈ, ಮರಿಯಪ್ಪಭಟ್ಟ ವಿ. ಸೀತಾರಾಮಯ್ಯ ಮೊದಲಾದವರ ಉತ್ತಮ ಲೇಖನಗಳನ್ನೊಳಗೊಂಡಿದೆ. ಮಧ್ಯೆಮಧ್ಯೆ ರಮ್ಯವಾದ ಚಿತ್ರಗಳಿವೆ. ಸಾಹಿತ್ಯ ದೀಕ್ಷೆಯನ್ನು ತೊಟ್ಟಿರುವ ಶ್ರೀ ರಾಮರಾಯರಿಗೆ ಇತೋಪ್ಯತಿಶಯವಾದ ಸೇವೆಸಲ್ಲಿಸುವ ಭಾಗ್ಯವನ್ನು ಭಗವಂತನು ಅನುಗ್ರಹಿಸಲಿ.

***

ಜೀವನ ವಿಶಿಷ್ಟ ಸಂಚಿಕೆ (ಆಗಷ್ಟು ೧೫, ೧೯೫೧)—ಸಂಪಾದಕರು : ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ; ಬೆಲೆ, ರೂಪಾಯಿ ೧.

ಪತ್ರಿಕಾಪ್ರಪಂಚದಲ್ಲಿ ನಾನಾವಿಧ ಅಡ್ಡಿ ಆತಂಕಗಳೂ ತೊಂದರೆ ತಾಪತ್ರಯಗಳೂ ಹೆಚ್ಚಾಗಿ ಸಾಮಾನ್ಯ ಸಂಚಿಕೆಗಳನ್ನೇ ನಿರ್ದಿಷ್ಟವಾಗಿ ನಡೆಸಿಕೊಂಡು ಹೋಗಲು ಕಷ್ಟವಾಗಿರುವ ಈ ಕಾಲದಲ್ಲಿ ಕನ್ನಡ ಪತ್ರಿಕೆಗಳ ಕೆಲವು ವಿಶೇಷ ಸಂಚಿಕೆಗಳು ನಮ್ಮ ಕೈ ಸೇರಿರುವುದು ಬಹು ಸಂತೋಷದ ವಿಷಯ ; 'ಜೀವನ

ಪತ್ರಿಕೆಯ ಸಂಪಾದಕರಾದ ಶ್ರೀಯುತ ಮಾಸ್ತಿಯವರು ಕಳೆದ ೧-೨ ವರ್ಷಗಳಿಂದ ಆಗಸ್ಟು ಸಂಚಿಕೆಯನ್ನು ವಿಶೇಷಸಂಚಿಕೆಯನ್ನಾಗಿ ಭಾವಿಸಿ ಅದನ್ನು ಕೆಲವು ನಿರ್ದಿಷ್ಟ ವಿಷಯ ಪ್ರತಿಪಾದನೆಗೆ ಮೀಸಲಾಗಿಟ್ಟು ಆ ಪ್ರಯತ್ನದಲ್ಲಿ ಇದುವರೆಗೆ ಸ್ವಾತಂತ್ರ್ಯೋತ್ಸವ ಮತ್ತು ಭಾರತೀಯ ಸಂಸ್ಕೃತಿಯ ವಿಷಯವಾಗಿ ಎರಡು ವಿಶೇಷಸಂಚಿಕೆಗಳನ್ನು ಪ್ರಕಟಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅದೇಪ್ರಕಾರ ಈ ವರ್ಷದ ಆಗಸ್ಟು ಸಂಚಿಕೆಯನ್ನು ಭರತಮಾತೆಯ ಹೆಮ್ಮೆಯ ಪುತ್ರರೂ ಭರತ ವರ್ಷದ ಧೀಮಂತ ಕೀರ್ತಿವಂತ ನಾಯಕರಲ್ಲೊಬ್ಬರೂ ಆದ ಶ್ರೀ ಸರ್ ಮೋಕ್ಷಗೊಂಡಂ ವಿಶ್ವೇಶ್ವರಯ್ಯನವರ ಗೌರವಾರ್ಥವಾಗಿ ನಿವೇದಿಸಿದ್ದಾರೆ. ಶ್ರೀಯುತರಿಗೆ ಈ ವರ್ಷ ತೊಂಬತ್ತು ವರ್ಷ ತುಂಬಿತು. ಈಸಲದ ವರ್ಷವರ್ಧಂತಿಯ ಕಾಣಿಕೆಯಾಗಿ ಈ ಸಂಚಿಕೆಯನ್ನು ಒಪ್ಪಿಸಿದ್ದಾರೆ. ಶ್ರೀ ವಿಶ್ವೇಶ್ವರಯನವರನ್ನೂ ಅವರ ಕಾರ್ಯವನ್ನೂ ಕುರಿತು ಭಿನ್ನದೃಷ್ಟಿಯಿಂದ ಬರೆದ ಅನೇಕ ಲೇಖನಗಳು ಇದರಲ್ಲಿವೆ. ಅದನ್ನು ಬರೆದ ಮಹನೀಯರೆಲ್ಲ ವಿಶ್ವೇಶ್ವರಯ್ಯನವರಿಗೆ ಒಂದಲ್ಲ ಒಂದು ರೀತಿಯಲ್ಲಿ ಬಹಳ ಹತ್ತಿರದಲ್ಲಿದ್ದು ಅಧಿಕಾರಿಗಳಾಗಿಯೋ ಸ್ವತಂತ್ರವಾಗಿದ್ದುಕೊಂಡೋ ಸಹಾಯಕರಾಗಿ ದೇಶಸೇವೆ ಮಾಡಿದವರು. ಈ ಸಂದರ್ಭಕ್ಕಾಗಿಯೇ ಬರೆದ ಲೇಖನಗಳಲ್ಲಿ ಕೆಲವು ಇದರಲ್ಲಿ ಅಡಕವಾಗದೆ ಮುಂದಿನ ಸಂಚಿಕೆಗಳಲ್ಲಿಯೂ ಪ್ರಕಟವಾಗಿವೆ. ಇವುಗಳಲ್ಲೆಲ್ಲಾ ರಾಜಸೇವಾಸಕ್ತ ಶ್ರೀ ನವರತ್ನಂ ರಾಮರಾಯರವರ 'ಕೆಲವು ನೆನಪುಗಳು' ಎಂಬ ಲೇಖನ ಹೊಸ ಮಾದರಿಯದೇ ಅಲ್ಲದೆ ಹಾಸ್ಯಪೂರ್ಣವೂ ಆಗಿದೆ. ದೇಶದ ಮಹಾಪುರುಷರ ಚರಿತ್ರೆಯೇ ದೇಶದ ಚರಿತ್ರೆಯಾಗಿರುವುದರಿಂದ ಇಂತಹ ವಿಷಯಗಳು ಜನತೆಯ ಮುನ್ನಡೆಗೆ ಬಹು ಪ್ರಯೋಜನಕಾರಿಯಾಗಿವೆ.

ಸಂಪಾದಕರಾದ ಶ್ರೀ ಮಾಸ್ತಿಯವರ ಪ್ರಯತ್ನವು ಬಹು ಸ್ತುತ್ಯವಾದುದು. ಇಂತಹ ಅನೇಕ ವಿಶೇಷಸಂಚಿಕೆಗಳನ್ನು ಪ್ರಕಟಿಸುವ ಸೌಲಭ್ಯವು ಅವರಿಗೆ ದೊರೆಯಲೆಂದು ಆಶಿಸುತ್ತೇವೆ.

***

ಅಮೇರಿಕಾ ಸುದ್ದಿಸಂಗ್ರಹ—ಪ್ರಕಾಶಕರು: ಮದ್ರಾಸಿನಲ್ಲಿರುವ ಅಮೆರಿಕಾ ಸಂಯುಕ್ತಸಂಸ್ಥಾನದ ರಾಯಭಾರಿಯ ಪ್ರಕಟನಶಾಖೆ, ಮೌಂಟ್ ರೋಡ್, ಮದ್ರಾಸುನಗರ ೨.

ಈಗ ವಿಜ್ಞಾನದ ಪ್ರಭಾವದಿಂದ ವಿಸ್ತಾರವಾದ ಪ್ರಪಂಚವು ಸಂಕೋಚವಾಗುತ್ತದೆ. ಏರೋಪ್ಲೇನ್, ರೇಡಿಯೋಗಳ ಪ್ರಭಾವದಿಂದ ದೇಶದ ದೂರವು ಕಡಿಮೆಯಾಗುತ್ತಿದೆ. ಜನರ ಸಂಬಂಧವು ಪರಸ್ಪರ ನಿಕಟವಾಗುತ್ತಿದೆ. ಆಲೋಚನಾಮಾರ್ಗವೂ ಅಂತರರಾಷ್ಟ್ರೀಯ ಧೋರಣೆಯಲ್ಲಿಯೇ ಸಾಗುತ್ತಿದೆ. ದೇಶವಿದೇಶಗಳ

ಜೀವನ ಸಾಮಿಪ್ಯವು ಹೆಚ್ಚುತ್ತಿರುವ ಈ ಕಾಲದಲ್ಲಿ ತಾನೇತಾನಾಗಿ ಉಳಿದುಕೊಂಡು ಬಾಳಲು ಯಾವ ಜನಾಂಗಕ್ಕೂ ಆಗಲಾರದು. ಪ್ರತಿಯೊಂದು ದೇಶವೂ ಪ್ರಪಂಚದ ಇತರ ಭಾಗಗಳಲ್ಲಿ ನಡೆಯುವ ವಿಷಯಗಳನ್ನು ತಿಳಿದುಕೊಂಡು ಅದರೊಡನೆ ಸಹಕರಿಸಿ ಬಾಳಬೇಕು. ಈ ದೃಷ್ಟಿಯಿಂದ ಈಚೆಗೆ ಮದ್ರಾಸಿನಲ್ಲಿರುವ ಅಮೇರಿಕಾ ಸಂಯುಕ್ತ ಸಂಸ್ಥಾನದ ರಾಯಭಾರಿಯ ಪ್ರಕಟನಶಾಖೆಯವರು 'ಅಮೆರಿಕಾ ಸುದ್ದಿ ಸಂಗ್ರಹ' ಎಂಬ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಿದ್ದಾರೆ. ಇದರ ಮೊದಲನೆಯ ಸಂಚಿಕೆಯು ಈ ವರ್ಷದ ಆಗಸ್ಟು ೧೭ ನೆಯ ತಾರೀಖು ಹೊರಬಿದ್ದಿತು. ಈ ಪತ್ರಿಕೆಯು ವಾರಕ್ಕೆ ಮೂರುಸಲ ಪ್ರಕಟವಾಗುವುದು. ಇದರಲ್ಲಿ ಇಂಡಿಯಾ ಮತ್ತು ಅಮೆರಿಕಾಗಳಿಗೂ ಪ್ರಪಂಚದ ಇತರ ಭಾಗಗಳಿಗೂ ಸಂಬಂಧಪಟ್ಟ ಅನೇಕ ವಿಷಯಗಳು ವರದಿಯಾಗುವುವು. ಭಾಷೆ ತಿಳಿಯಾಗಿದೆ. ವಿಷಯ ಸಂಗ್ರಹವಾಗಿದೆ. ಪತ್ರಿಕೆಗೆ ಸುಸ್ವಾಗತವನ್ನು ನೀಡುತ್ತೇವೆ.

***

ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ವರದಿ—(ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ, ಬಸವನಗುಡಿ, ಬೆಂಗಳೂರು ನಗರ)

ಭಾರತಕ್ಕೆ ಈಗ ಲಭಿಸಿರುವ ಸ್ವಾತಂತ್ರ್ಯವೂ ಪ್ರಜಾರಾಜ್ಯವೂ ಸಮರ್ಪಕವಾಗಿ ನಿಂತು ಸಾರ್ಥಕವಾಗುವಂತೆ ಜನತೆಯಲ್ಲಿ ರಾಜಕೀಯ ವಿವೇಕವನ್ನೂ ರಾಷ್ಟ್ರಕ ಕರ್ತವ್ಯದ ಅಭ್ಯಾಸವನ್ನೂ ಹರಡುವುದಕ್ಕಾಗಿ ಹಿರಿಯಸಾಹಿತಿಗಳೂ ಉಚ್ಚರಾಜಕಾರಣಪಟುಗಳೂ ಆದ ಶ್ರೀ ಡಿ. ವಿ. ಗುಂಡಪ್ಪನವರು ಬೆಂಗಳೂರು ಬಸವನಗುಡಿಯಲ್ಲಿ 'ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ'ಯೆಂಬ ಒಂದು ಸಂಸ್ಥೆಯನ್ನು ಪ್ರಾರಂಭಿಸಿರುವುದು ಸರ್ವವಿದಿತ ವಿಷಯವಾಗಿದೆ. "ಈ ಸಂಸ್ಥೆಯು ಯಾವ ರಾಜಕೀಯಪಕ್ಷಕ್ಕೂ ಯಾವ ಜಾತಿಮತಗಳ ಪಂಗಡಕ್ಕೂ ಸಂಬಂಧಪಟ್ಟದ್ದಾಗದೆ ಎಲ್ಲ ದೇಶವಿಚಾರಗಳನ್ನೂ ಸರ್ವಜನೈಕ್ಯದೃಷ್ಟಿಯಿಂದಲೂ ಮತ್ತು ನಿಷ್ಪಕ್ಷಪಾತವಿಮರ್ಶನೆಯಿಂದಲೂ ನೋಡತಕ್ಕದ್ದು ; ಅಧಿಕಾರಪದವಿಗಳ ಸಂಧಾನದಲ್ಲಿಯೂ ಲಾಭೋದ್ಯಮಗಳಲ್ಲಿಯೂ ಚುನಾವಣೆಗಳ ಸ್ಪರ್ಧೆಯಲ್ಲಿಯೂ ಅದು ಭಾಗವಹಿಸತಕ್ಕದ್ದಲ್ಲ. ಮತ್ತು ಅದರ ವಿಚಾರಕ್ರಮದಲ್ಲಿ ಶಾಸ್ತ್ರಸಹಾಯವೂ ವೈಜ್ಞಾನಿಕರ ತತ್ತ್ವಶೋಧನನೀತಿಯೂ ಮುಖ್ಯಲಕ್ಷಣಗಳಾಗಿರುತ್ತವೆ" ಎಂಬದಾಗಿ ಸ್ಥಾಪಕರೇ ಅದರ ರೀತಿನೀತಿಗಳನ್ನು ಸ್ಪಷ್ಟಪಡಿಸಿದ್ದಾರೆ. ವಿದ್ಯಾರ್ಥಿಗಳೂಯುವಕರೂ ವೈಜ್ಞಾನಿಕ ಮತ್ತು ಸಾಹಿತ್ಯ ಗ್ರಂಥಗಳನ್ನು ಅಭ್ಯಾಸಮಾಡುವುದರ ಮೂಲಕವೂ ಪೌರಸಾಮಾಜಿಕ ಕಾರ್ಯಗಳನ್ನು ನಡೆಸುವುದರ ಮೂಲಕವೂ ರಾಷ್ಟ್ರಕತ್ವದ

ಹಕ್ಕುಬಾಧ್ಯತೆಗಳಿಗೂ ಸಾರ್ವಜನಿಕ ಜೀವನಕ್ಕೂ ಹೆಚ್ಚು ಅರ್ಹತೆಯನ್ನು ಪಡೆಯು ಲನುಕೂಲವಾಗಿ ಇದಕ್ಕೆ ಸೇರಿದ ಹಾಗೆ ಒಂದು ವ್ಯಾಸಂಗಗೋಷ್ಠಿ ಏರ್ಪಡಿಸಿದೆ. ಒಂದು ವಾಚನಾಲಯವೂ ಪುಸ್ತಕ ಭಂಡಾರವೂ ಈ ಕಾರ್ಯಕ್ಕೆ ಸಹಾಯಕವಾಗಿವೆ. ರಾಜಕೀಯ, ಆರ್ಥಿಕ, ವೈಜ್ಞಾನಿಕ, ಸಾಂಸ್ಕೃತಿಕ ವಿಚಾರಗಳ ಮೇಲೆ ದಕ್ಷರಾದ ಪಂಡಿತರಿಂದ ಉಪನ್ಯಾಸಗಳು ಆಗಾಗ ನಡೆಯುತ್ತಿವೆ. ಸಂಸ್ಥೆಯ ಅಂಗವಾಗಿ 'ಪಬ್ಲಿಕ್ ಅಫೇರ್ಸ್' ಎಂಬ ಇಂಗ್ಲೀಷ್ ಪತ್ರಿಕೆಯೂ 'ಸಾರ್ವಜನಿಕ' ಎಂಬ ಕನ್ನಡ ಪತ್ರಿಕೆಯೂ ಪ್ರತಿತಿಂಗಳಲ್ಲಿಯೂ ಪ್ರಕಟವಾಗುತ್ತಿವೆ. ಇವುಗಳಲ್ಲಿ ಪ್ರಕಟ ವಾಗುವ ಲೇಖನಗಳು ಬಹುಜನರ ಮೆಚ್ಚಿಗೆಗೆ ಪಾತ್ರವಾಗಿವೆ.

ಈ ಸಂಸ್ಥೆಯ ೧೮-೨-೪೫ ರಿಂದ ೩೧-೧೨-೪೯ ರ ಅವಧಿಯ ಕಾರ್ಯಕಲಾಪ ಗಳ ವರದಿಯು ನಮ್ಮ ಕೈಸೇರಿದೆ. ವರದಿಯ ಆಧಾರದಮೇಲೆ ಹೇಳುವುದಾದರೆ ಸಂಸ್ಥೆಯು ಭದ್ರವಾದ ತಳಹದಿಯಮೇಲೆ ಕ್ರಮವಾಗಿ ಬೆಳೆಯುತ್ತಿದೆ. ಹೆಚ್ಚು ಹೆಚ್ಚು ಜನರ ಆದರಾಭಿಮಾನಗಳಿಗೆ ಪಾತ್ರವಾಗುತ್ತಿದೆ. ವರದಿಯ ಅವಧಿಯಲ್ಲಿ ಸದಸ್ಯರ ಮತ್ತು ಅಭಿಮಾನಿಗಳ ಸಂಖ್ಯೆ ಬೆಳೆದಿದೆ. ವಾಚನಾಲಯವನ್ನು ಸುಮಾರು ೮೫ ಜನ ಪ್ರತಿದಿನ ಉಪಯೋಗಿಸುತ್ತಿದ್ದಾರೆ. ವ್ಯಾಸಂಗಗೋಷ್ಠಿಯಲ್ಲಿ ಇಂಗ್ಲೀಷ್, ಕನ್ನಡ, ಸಂಸ್ಕೃತದ ೧೪ ಗ್ರಂಥಗಳ ೧೪೪ ದಿನಗಳ ವ್ಯಾಸಂಗ ನಡೆದಿದೆ. ೯೮ ಉಪನ್ಯಾಸಗಳಾಗಿವೆ. ೯ ಗ್ರಂಥಗಳು ಪ್ರಕಟವಾಗಿವೆ. ಪುರಸ್ಥಿತಿಯನ್ನು ಪರಿಶೀಲನಮಾಡಿ ಸಂಬಂಧಪಟ್ಟವರಿಗೆ ವರದಿಗಳನ್ನು ಕಳುಹಿಸಲಾಗಿದೆ. ಒಟ್ಟಿನಲ್ಲಿ ಸಂಸ್ಥೆಯ ಕಾರ್ಯವು ತೃಪ್ತಿಕರವಾಗಿ ಸಾಗಿದೆ.

ಆದರೂ ವರದಿಯ ಪರಿಶೀಲನೆಯಿಂದ ಸಂಸ್ಥೆಗೆ ಹೆಚ್ಚಿನ ಧನಸಹಾಯವೂ ಸ್ವಂತ ಕಟ್ಟಡದ ಸೌಲಭ್ಯವೂ ಅತ್ಯಾವಶ್ಯಕವೆಂಬುದು ಸ್ಪಷ್ಟವಾಗಿದೆ. ನಿಸ್ವಾರ್ಥ ಬುದ್ಧಿಯಿಂದ ಲೋಕಕ್ಷೇಮಕ್ಕಾಗಿ ದುಡಿಯುವ ಈ ಸಂಸ್ಥೆಗೆ ಸಾರ್ವಜನಿಕರೂ ಸರ್ಕಾರವೂ ಕೊಡುಗೈಯಿಂದ ಸಹಾಯಮಾಡುವುದು ಆವಶ್ಯಕ.

'ಸಂ.'

ಸಂಪಾದಕೀಯ

ಶ್ರೀಮನ್ಮಹಾರಾಜರವರ ಉತ್ತರಕರ್ಣಾಟಕದ ಪ್ರವಾಸ

ಶ್ರೀಮನ್ಮಹಾರಾಜರವರು ಕಳೆದ ಸೆಪ್ಟೆಂಬರ್ ತಿಂಗಳಿನ ಮಧ್ಯಭಾಗದಲ್ಲಿ ನಡೆದ ಕರ್ಣಾಟಕ ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ದಯಮಾಡಿಸಿ ಅದೇ ಸಂದರ್ಭದಲ್ಲಿ ಉತ್ತರಕರ್ಣಾಟಕದ ಮೂರು ಜಿಲ್ಲೆಗಳಲ್ಲಿ ಸಂಚಾರಮಾಡಿ ಅಲ್ಲಿಯ ಪ್ರಧಾನನಗರಗಳ ವಿವಿಧಸಂಸ್ಥೆಗಳಿಗೂ ವಿದ್ಯಾಕೇಂದ್ರಗಳಿಗೂ ಸಂದರ್ಶನವಿತ್ತು ಅಭಿಪ್ರಾಯ ವಿನಿಮಯಮಾಡಿಕೊಂಡುದು ಕರ್ಣಾಟಕ ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಬಹು ಮುಖ್ಯವಾದ ಸಂಗತಿ. ಮೈಸೂರು ರತ್ನ ಸಿಂಹಾಸನವು ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಯಾಗಿ ಚಿಕ್ಕದೇವರಾಜ ಒಡೆಯರ ಕಾಲದಿಂದ ಇಲ್ಲಿಯ ವರೆಗೆ ಕರ್ಣಾಟಕ ಸಾಹಿತ್ಯ ಸಂಸ್ಕೃತಿಯನ್ನು ಸಂಪೂರ್ಣದೃಷ್ಟಿಯಿಂದ ಬೆಳೆಸುವ ಜವಾಬ್ದಾರಿಯನ್ನು ವಹಿಸಿ ಯಶಸ್ವಿಯಾಗಿ ನಡಸಿಕೊಂಡು ಬಂದಿದೆ. ಆದರೂ ಕನ್ನಡಿಗರ ದುರ್ದೈವದ ಫಲವಾಗಿ ಕರ್ಣಾಟಕವು ರಾಜಕೀಯದೃಷ್ಟಿಯಿಂದ ವಿವಿಧ ಸರ್ಕಾರಗಳ ಅಧೀನವಾಗಿ ಹರಿದು ಹಂಚಾಗಿಯೇ ಉಳಿದಿದೆ. ಏಕೀಕರಣಪ್ರಯತ್ನಗಳೆಲ್ಲ ಅನೇಕ ಕಾರಣಗಳಿಂದ ಸ್ತಂಭಿತವಾಗಿವೆ. ಶ್ರೀಮನ್ಮಹಾರಾಜರ ಸಂಚಾರವು ಈ ಸಮಸ್ಯೆಗೆ ಹೊಸ ಹೊಳಪನ್ನು ಕೊಟ್ಟು ಪರಿಹಾರವು ಸುಲಭಸಾಧ್ಯವೆಂಬುದನ್ನು ತೋರಿಸಿಕೊಟ್ಟಿದೆ.

ಪ್ರಭುಗಳು ತಮ್ಮ ಆಪ್ತಪರಿವಾರದೊಡನೆಯೂ ಪ್ರಮುಖಸಚಿವ ಅಧಿಕಾರಿಗಳೊಡನೆಯೂ ಲಕ್ಷ್ಮೇಶ್ವರದಿಂದ ಉತ್ತರಕರ್ಣಾಟಕದ ಸಂಚಾರವನ್ನು ಪ್ರಾರಂಭಿಸಿ ಧಾರವಾಡ, ಹುಬ್ಬಳ್ಳಿ, ಬಾಗಲಕೋಟೆ, ಬಾದಾಮಿ, ಬಾಗೆವಾಡಿ, ಬಿಜಾಪುರ ಮೊದಲಾದೆಡೆಗಳಲ್ಲಿ ಐದು ದಿನಗಳ ಕಾಲ ಸಂಚಾರಮಾಡಿ ಸಂತುಷ್ಟಚಿತ್ತರಾಗಿ ರಾಜಧಾನಿಗೆ ಹಿಂತಿರುಗಿದರು. ಉತ್ತರಕರ್ಣಾಟಕದ ಜನತೆ ಮಹಾರಾಜರಿಗೆ ತೋರಿದ ಅಭೂತಪೂರ್ವವಾದ ಸ್ವಾಗತವೂ ಪ್ರೀತಿವಿಶ್ವಾಸದ ಕಾಣಿಕೆಗಳೂ ಮಹಾರಾಜರು ಅವರಿಗಿತ್ತ ಅಭಿನಂದನ ಆಶ್ವಾಸನಗಳೂ ಚಿರಸ್ಮರಣೀಯವಾಗಿವೆ. ಮಹಾರಾಜರು ಸಂದರ್ಶಿಸಿದ ಸಂಘ ಸಂಸ್ಥೆಗಳೆಲ್ಲ ಮಹಾರಾಜರವರ ನೇತೃತ್ವದಲ್ಲಿ ಮೈಸೂರು ಸಹಿತವಾದ ಕರ್ಣಾಟಕ ಏಕೀಕರಣದಲ್ಲಿ ತಮಗಿರುವ ಉತ್ಕಟಾಪೇಕ್ಷೆಯನ್ನು ಶ್ರುತಪಡಿಸಿದವು. ಮಹಾ ಪ್ರಭುಗಳು ಎಲ್ಲೆಡೆಗಳಲ್ಲಿಯೂ ಏಕಪ್ರಕಾರವಾಗಿ "ಮೈಸೂರು ದೇಶಕ್ಕೂ ನಿಮ್ಮ ಪ್ರಾಂತಕ್ಕೂ ಇರುವ ಬಾಂಧವ್ಯವು ಸರ್ವತೋಮುಖವಾಗಿ ಬೆಳೆಯಲೆಂದು ಹಾರೈಸುತ್ತೇವೆ" ಎಂಬ ಉದಾರವಾಣಿಯ ಮೂಲಕ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಚಿರಕಾಂಕ್ಷಿತವಾದ ಈ ವಿಷಯವು ಈ ಸಂದರ್ಭದಿಂದ ಸ್ಪಷ್ಟ ರೂಪವನ್ನು ತಾಳಿ ಶೀಘ್ರವಾಗಿ ಸಿದ್ಧಿಸಲೆಂದು ಹಾರೈಸುತ್ತೇವೆ.

ಸಾದರ ಸ್ವೀಕಾರ

೧ **ಮಂಕುತಿಮ್ಮನ ಕಗ್ಗ**—ಗ್ರಂಥಕರ್ತರು: ಶ್ರೀ ಡಿ. ವಿ. ಜಿ.; ಪ್ರಕಾಶಕರು: ಕಾವ್ಯಾಲಯ, ಮೈಸೂರು; (ದ್ವಿತೀಯ ಮುದ್ರಣ).

೨ **ರಾಬಿನ್‌ಸನ್ ಕ್ರೂಸೋ ಕಥೆ**—ಬರೆದವರು: ಶ್ರೀ ಆನಂದ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕ್ರೌ ೯ ಅ. ಪು. ೧೫೪; ಬೆಲೆ, ರೂ. ೨-೪-೦.

೩ **ಇಂದ್ರವಜ್ರ**—ಬರೆದವರು: ಶ್ರೀ ಡಿ. ವಿ. ಗುಂಡಪ್ಪನವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕ್ರೌ ೯ ಅ. ಪು. ೬೫; ಬೆಲೆ, ರೂ. ೦-೧೪-೦.

೪ **ರಾಘವಾಂಕ ಕವಿಯ ಸಿದ್ಧರಾಮಚರಿತೆಯ ಸಂಗ್ರಹ**—ಸಂಪಾದಕ: ಶ್ರೀ ಡಿ. ಎಲ್. ನರಸಿಂಹಾಚಾರ್, ಎಂ.ಎ.; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕ್ರೌ ೯ ಅ. ಪು. ೯೫+lxiii; ಬೆಲೆ, ರೂ. ೨-೦-೦.

೫ **ಉಯ್ಯಾಲೆ**—ಬರೆದವರು: ಶ್ರೀ ಅಂಬಿಕಾತನಯದತ್ತ; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕ್ರೌ ೯ ಅ. ಪು. ೧೧೭; ಬೆಲೆ, ಸಾದಾ ರೂ. ೧-೧೨-೦; ಕ್ಯಾಲಿಕೋ ಪ್ರತಿ ರೂ. ೨-೧೨-೦.

೬ **ಬೆಕ್ಕೋಜಿ**—ಬರೆದವರು: ಶ್ರೀ ಡಿ. ವಿ. ಜಿ. ಅವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕ್ರೌ ೯ ಅ. ಪು. ೩೬; ಬೆಲೆ, ರೂ. ೦-೮-೦.

೭ **ಗದ್ಯತ್ರಯ ಮತ್ತು ಅದರ ಕನ್ನಡ ಸರಳಾನುವಾದ** (ಗದ್ಯತ್ರಯ—ಶ್ರೀ ರಾಮಾನುಜಾಚಾರ್ಯರಿಂದ ರಚಿತವಾದುದು); ಪ್ರಕಾಶಕರು: ಸಂಸ್ಕೃತ ಸಾಹಿತ್ಯಸದನ, ೨೧೧ ವಿಶ್ವೇಶ್ವರಪುರ, ಬೆಂಗಳೂರು ಸಿಟಿ; ೩೮೬ ಚೆಲುವಾಂಬ ಅಗ್ರಹಾರ, ಮೈಸೂರು; ಕ್ರೌ ೯ ಅ. ಪು. ೬೦; ಅರ್ಥಿಗಳಿಗೆ ಉಚಿತ.

೮ **ಕೈಲಾಸಂ-ದರ್ಶನ**—ಸಂಪಾದಕ: ಶ್ರೀ ಕೆ. ವಿ. ಸುಬ್ಬಣ್ಣ; ಪ್ರಕಾಶಕರು: ಶ್ರೀ ನೀಲಕಂಠೇಶ್ವರ ನಾಟ್ಯಸೇವಾಸಂಘ, ಹೆಗ್ಗೋಡು (ಸಾಗರ); ಕ್ರೌ ೯ ಅ. ಪು. ೧೨೫; ಬೆಲೆ, ರೂ. ೨-೦-೦.

೯ **ಮರ್ಯಾದೆ ಮಹಲು**—ಬರೆದವರು: ಶ್ರೀ "ಅಶ್ವತ್ಥ"; ಪ್ರಕಾಶಕರು: ಶ್ರೀ ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ; ಕ್ರೌ ೯ ಅ. ಪು. ೩೫೦; ಬೆಲೆ, ರೂ. ೩-೮-೦.

೧೦ **ಇಂದ್ರಚಾಪ**—ಅನುವಾದಕರು: ರಂಗರಾವ್ ತಲಚೇರಕರ, ಬಿ. ಎ., ಎಲ್‌ಎಲ್. ಬಿ.; ಪ್ರಕಾಶಕರು: ಶ್ರೀ ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ; ಕ್ರೌ ೯ ಅ. ಪು. ೧೮೮; ಬೆಲೆ, ರೂ. ೨-೮-೦.

೧೧ ಭಾಗ್ಯಶ್ರೀ (ಸಾಮಾಜಿಕ ಸಂಗೀತನಾಟಕ)—ಬರೆದವರು : ಶ್ರೀ ಬೇಂದ್ರೇ ಲಕ್ಷ್ಮಣ ರಾಯರು ; ಪ್ರಕಾಶಕರು : ಶ್ರೀ ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೭೮ ; ಬೆಲೆ, ರೂ. ೧-೦-೦.

೧೨ ಎರಡನೆಯ ಸಂಬಂಧ—ಬರೆದವರು : ಶ್ರೀ ಎಸ್ಕೆ ; ಪ್ರಕಾಶಕರು : ಶ್ರೀ ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೨೭೮ ; ಬೆಲೆ, ರೂ. ೩-೦-೦.

೧೩ ಗಂಗಾವತರಣ (ಕವನಸಂಗ್ರಹ)—ಬರೆದವರು : ಶ್ರೀ ಅಂಬಿಕಾತನಯದತ್ತ ; ಪ್ರಕಾಶಕರು : ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೧೧೮ ; ಬೆಲೆ, ಸುಂದರಪ್ರತಿ ರೂ. ೩-೮-೦ ; ಸಾದಾ. ರೂ. ೨-೦-೦.

೧೪ ಮಹಾಯುದ್ಧ (ಖಂಡಕಾವ್ಯ)—ಬರೆದವರು : ಶ್ರೀ ಕೆ. ಎಸ್. ರಾವ್ ; ಪ್ರಕಾಶಕರು ; ಶ್ರೀ ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೯೦ ; ಬೆಲೆ, ರೂ. ೧-೮-೦.

೧೫ ಗರಿ (ಕವನಸಂಗ್ರಹ)—ಬರೆದವರು : ಶ್ರೀ ಅಂಬಿಕಾತನಯದತ್ತ ; ಪ್ರಕಾಶಕರು : ಶ್ರೀ ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌನ್ ಅ. ಪು. ೧೨೮ ; ಬೆಲೆ, ರೂ. ೨-೦-೦ ; ಸುಂದರಪ್ರತಿ ರೂ. ೩-೮-೦.

೧೬ ಮಹಾನುಭಾವ ಶ್ರೀ ಸ್ವಾಮಿರಾಮತೀರ್ಥ (ಜೀವನಚರಿತ್ರೆ)—ಬರೆದವರು : ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೩೨+vii ; ಬೆಲೆ, ರೂ. ೧-೧೨-೧.

೧೭ ಕತ್ತಲಬೆಳಕು—ಬರೆದವರು : ಶ್ರೀ ಹ. ವೆಂ. ನಾಗರಾಜರಾಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೮೬+viii ; ಬೆಲೆ, ರೂ. ೧-೪-೦.

೧೮ ಬೃಂದಾವನ (ಕಿರಿಯರ ನಾಟಕ)—ಬರೆದವರು : ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೪೪ ; ಬೆಲೆ, ರೂ. ೦-೧೨-೦.

೧೯ ಸತಿ (ಐತಿಹಾಸಿಕ ಕಥೆ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೨೧೩+xvii+೧೨ ; ಬೆಲೆ, ರೂ. ೨-೧೫-೦.

೨೦ ಸರದಾರ ವಲ್ಲಭಭಾಯಿ—ಬರೆದವರು : ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ; ಪ್ರಕಾಶಕರು : ಶ್ರೀ ಚುಳಕಿ ಗೋವಿಂದರಾಯರು ; ಲಲಿತಸಾಹಿತ್ಯಮಾಲೆ, ಧಾರವಾಡ ; ಕ್ರೌನ್ ಅ. ಪು. ೧೦೦ ; ಬೆಲೆ, ರೂ. ೧-೮-೦.

೨೧ ನಾದಲೀಲೆ—ಬರೆದವರು : ಶ್ರೀ ಅಂಬಿಕಾತನಯದತ್ತ ; ಪ್ರಕಾಶಕರು : ಶ್ರೀ ಚುಳಕಿ ಗೋವಿಂದರಾಯರು, ಲಲಿತಸಾಹಿತ್ಯಮಾಲೆ, ಧಾರವಾಡ; ಕ್ರೌನ್ ಅ. ಪು. ೧೦೦ ; ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೮-೦.

೨೨ ರಕ್ತದ ರೂಪಾಯಿ—ಬರೆದವರು : ಶ್ರೀ ಸೇವನವಿರಾಜಮಲ್ಲ ; ಪ್ರಕಾಶಕರು : ಶ್ರೀ ಗೋ. ವೆಂ. ಚುಳಕಿ, ಲಲಿತಸಾಹಿತ್ಯಮಾಲೆ, ಧಾರವಾಡ ; ಕ್ರೌ೯ ಅ. ಪು. ೧೦೬ ; ಬೆಲೆ, ಉತ್ತಮ ರೂ. ೨-೪-೦ ; ಸಾದಾ ರೂ. ೧-೮-೦.

೨೩ ಬಾಳ-ಹೊಳೆ ಬರೆದವರು : ಶ್ರೀ ಅಶ್ವತ್ಥ ; ಪ್ರಕಾಶಕರು : ಜಿ. ಬಿ. ಜೋಶಿ, ಮನೋಹರಗ್ರಂಥಮಾಲಾ, ಧಾರವಾಡ ; ಕ್ರೌ೯ ಅ. ಪು. ೨೨೮ ; ಬೆಲೆ, ರೂ. ೨-೮-೦.

೨೪ ತುಂಬೆನ ಪದಗಳು—ಬರೆದವರು : ಶ್ರೀ ವಿ. ಜಿ. ಭಟ್ಟ ; ಪ್ರಕಾಶಕರು : ಪರ್ಣಕುಟಿ ಗ್ರಂಥಮಾಲೆ, ಧಾರವಾಡ ; ಕ್ರೌ೯ ಅ. ಪು. ೫೪ ; ಬೆಲೆ, ರೂ. ೧-೦-೦.

೨೫ ಕಾವ್ಯವೇದನೆ ಬರೆದವರು : ವಿ. ಜಿ. ಭಟ್ಟ ; ಪ್ರಕಾಶಕರು : ಪರ್ಣಕುಟಿ ಗ್ರಂಥಮಾಲೆ, ಧಾರವಾಡ ; ಕ್ರೌ೯ ಅ. ಪು. ೮೪ ; ಬೆಲೆ, ರೂ. ೧-೮-೦.

೨೬ ನೇಕಾರ ಮಾನಪ್ಪ—ಲೇಖಕರು : ಶ್ರೀ ಸಾನೇ ಗುರೂಜಿ ; ಅನುವಾದಕರು : ಶ್ರೀ ಭಾಸ್ಕರ ಗೋಖಲೆ ; ಪ್ರಕಾಶಕರು : ಭಾಸ್ಕರ ಗೋವಿಂದಗೋಖಲೆ, ವಕೀಲ, ಧಾರವಾಡ ; ಕ್ರೌನ್ ಅ. ಪು. ೮೦ ; ಬೆಲೆ, ರೂ ೧-೦-೦.

೨೭ ಸೌಭಾಗ್ಯವತಿ—ಲೇಖಕರು ಮತ್ತು ಪ್ರಕಾಶಕರು : ಶ್ರೀ ಎಂ. ವಿ. ಸೀತಾರಾಮಯ್ಯ, ಎಂ.ಎ. ೩ ನೆಯ ಕ್ರಾಸ್, ಗವೀಪುರಂ ಎಕ್ಸ್‌ಟೆನ್‌ಷನ್, ಬೆಂಗಳೂರು—೨ ; ಕ್ರೌನ್ ಅ. ಪು. ೧೩೮ ; ಬೆಲೆ, ರೂ ೧-೧೨-೦.

೨೮ ಸುಕುಮಾರ—ಸಂಪಾದಕ : ಶ್ರೀ ಉಮಾಪತಿ ಶಾಸ್ತ್ರಿ, ಬಿ.ಎ. ಶಿವಯೋಗಮಂದಿರ ; ಶ್ರೀ ಲಿಂ. ಹಾನಗಲ್ಲ ಕುಮಾರಸ್ವಾಮಿಗಳವರ ತತ್ವಗಳನ್ನು ಪ್ರಸಾರಮಾಡುವ ಉದ್ದೇಶದಿಂದ ಇದೀಗ ಪ್ರಾರಂಭವಾಗಿರುವ ಮಾಸಪತ್ರಿಕೆ ; ವಾರ್ಷಿಕ ಚಂದ ರೂ. ೫-೦-೦

೨೯ ಸತ್ಯಾರ್ಥಿ—ಮಾಸಪತ್ರಿಕೆ. ಸಂಪಾದಕರು : ಶ್ರೀ ಎಂ. ಬಿ. ಮುತ್ತಣ್ಣ, ಪೊನ್ನಂಪೇಟೆ, ಕೊಡಗು ; ವಾರ್ಷಿಕ ಚಂದ ರೂ. ೩-೪-೦.

೩೦ ಆತ್ಮವಿಚಾರ—ಸಂಪಾದಕರು : ಶ್ರೀ. ಎಂ. ಎಲ್ ನಾಗಣ್ಣನವರು, ಆತ್ಮವಿಚಾರ ಮಂದಿರ, ಮೈಸೂರು. ವೀರಶೈವ ತತ್ವಪ್ರತಿಪಾದನೆಗಾಗಿಯೇ ಈಗತಾನೆ ಪ್ರಾರಂಭವಾಗಿರುವ ಮಾಸಪತ್ರಿಕೆ, ವಾರ್ಷಿಕ ಚಂದ ರೂ ೫.

೩೧ ತಾವರೆ—ಉಸ್ಮಾನಿಯ ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ ಸಂಪುಟ ೧, ಸಂಚಿಕೆ ೧-೨ ; ಸಲಹೆಗಾರರು : ಪ್ರೊ. ಡಿ. ಕೆ. ಭೀಮಸೇನರಾಯರು ; ಸಂಪಾದಕ: ದತ್ತಾತ್ರೇಯ ದೇಸಾಯಿ: ದೊರೆಯುವಸ್ಥಳ—ಉಸ್ಮಾನಿಯ ಪತ್ರಿಕೆಯ ಕಾರ್ಯಾಲಯ, ಉಸ್ಮಾನಿಯ ವಿಶ್ವವಿದ್ಯಾನಿಲಯ, ಹೈದರಾಬಾದ್ (ದ) ; ಬೆಲೆ, ರೂ. ೧-೦-೦.

೩೨ ಮಹಾತ್ಮಗಾಂಧೀ ಸ್ಮಾರಕ ಪ್ರೌಢ ಶಾಲೆಯ ಪತ್ರಿಕೆ (ವಾರ್ಷಿಕ ಸಂಚಿಕೆ)—ಸಂಪಾದಕರು : ಎಚ್. ಸುಂದರರಾವ್, ಎಂ.ಎ. ಮತ್ತು ಕೆ. ಎಸ್. ಕಾಮತ್, ಎಂ.ಎ.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎ౯. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮.* ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨.* **ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩.* **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪.* **ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫.* **ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦.* **ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.

೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.

೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.

೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.

೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.

೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. *ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.

೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.

೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.

೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೪೬. *ರುಚಿ—ಎಸ್. ವಿ. ರಂಗಣ್ಣ, ಎಂ.ಎ.

೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.

೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.

೪೯. ಮುದ್ರಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).

೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.

೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.

೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.

೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.

೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ.,
ಎಲ್‌ಎಲ್. ಬಿ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟಿನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬ ೨/೩ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩ ೧/೩ ರಂತೆ ೨೦೦೦ ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೮, ೨೯, ೩೦, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯಸಂಚಿಕೆ ಒಂದಕ್ಕೆ ಏಳು ಆಣೆ ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ' ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು, 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧–೦–೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧–೮–೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧–೮–೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦–೧೨–೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, M.A.
Published by The University of Mysore, Mysore. Printed by J. Brown
at the Wesley Press and Publishing House, Mysore City